# ಎಸ್.ಎಸ್.ಎಲ್.ಸಿ ಪ್ರಥಮ ಭಾಷೆ ಕನ್ನಡ

## ಸಿರಿಕನ್ನಡ ವಿದ್ಯಾರ್ಥಿ ಮಾರ್ಗದರ್ಶಿ


ಕೆ. ಮುನಿಯಪ್ಪ

ಎಂ.ಎ, ಎಂ.ಇಡಿ, ಎಂ.ಫಿಲ್

ಕನ್ನಡ ಸಹ ಶಿಕ್ಷಕರು

ಧರ್ಮಸಾಗರ ಪ್ರೌಢಶಾಲೆ, ದೊಮ್ಮಸಂದ್ರ




# ಗದ್ಯ ಭಾಗ

# 1. ಯುದ್ಧ

**ಲೇಖಕರು: ಸಾ ರಾ ಅಬೂಬಕ್ಕರ್**
**ಆಕರ ಗ್ರಂಥ: ಚಪ್ಪಲಿಗಳು (ಕಥಾ ಸಂಕಲನ)**

**ಲೇಖಕರ ಕಿರು ಪರಿಚಯ:**

ಶ್ರೀಮತಿ ಸಾ ರಾ ಅಬೂಬಕ್ಕರ್ ಅವರು ಜೂನ್ 30, 1936 ರಂದು ಕಾಸರಗೋಡಿನಲ್ಲಿ ಜನಿಸಿದರು ಇವರು ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾರೆ. ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಮೊದಲಾದ ಕಥಾ ಸಂಕಲನಗಳನ್ನು ಬರೆದಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ ಪ್ರಶಸ್ತಿ' ಲಭಿಸಿದೆ.

ಇವರ 'ಚಪ್ಪಲಿಗಳು' ಎಂಬ ಕಥಾ ಸಂಕಲನದಿಂದ ಪ್ರಸ್ತುತ ಗದ್ಯಪಾಠವನ್ನು ಆರಿಸಿಕೊಳ್ಳಲಾಗಿದೆ.

**ಅ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

**1. ರಾಹಿಲನು ಯಾರು?**

ಉ:- ರಾಹಿಲನು ಸೈನ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಒಬ್ಬ ವೈದ್ಯ(ಡಾಕ್ಟರ್)

**2. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?**

ಉ:- ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಬೇಕಾದ ಔಷಧ ಹಾಗೂ ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

**3. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**

ಉ:- ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ಪಾಲಿಸಲಾಗುತ್ತದೆ.

**4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?**

ಉ:- ರಾಹಿಲನು ಮುದುಕಿಯ ಎದುರಿಗೆ "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ ಸಂಕಷ್ಟಕ್ಕಿಡಾದ ಮನುಷ್ಯರ ಕಡೆಯವನು" ಎಂಬ ಮಾತನ್ನು ನುಡಿದನು.

**5. ಯುದ್ಧದ ಬಗೆಗೆ ಮುದುಕಿ0ು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?**

ಉ:- "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ" ಎಂದು ಗೊಣಗಿಕೊಂಡು ಬಾಗಿಲು ತೆರೆದಳು.

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯದಲ್ಲಿ ಉತ್ತರಿಸಿ:**

**1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದರು?**

ಉ:- ಡಾಕ್ಟರ್‌ಗೆ ವಿಮಾನದ ಪೈಲಟ್ " ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಭೂಪ್ರದೇಶದೊಂದಿಗೆ ಸಂಪರ್ಕ ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣ ಎಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ" ಎಂದು ಹೇಳಿದರು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

ಉ:- ಮಹಿಳೆಯ ಆರ್ತನಾದ ಕೇಳಿ ರಾಹಿಲನು ಮನದಲ್ಲಿ "ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು? ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಈ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?" ಎಂಬ ಪ್ರಶ್ನೆಗಳು ಮೂಡಿದವು.

**3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**

ಉ:– ಮುದುಕಿಯು ರಾಹಿಲನ ಬಳಿ **"ನೋಡಪ್ಪ** ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ಮನಗೆ ಸಾಕಾಗುವಷ್ಟು ಇತ್ತು ಈಗಲೂ ಇದೆ. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ ಯುದ್ಧ ಎಂದು ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾಗಿವೆ.

**4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**

ಉ:– ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ "ಇಷ್ಟು ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೇವಲ್ಲ ದೇವರೇ ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?" ಎಂದು ನಿರಾಶೆಯಿಂದ ಹೇಳಿದಳು.

**ಇ. <u>ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ:</u>**

**1. "ದಯವಿಟ್ಟು ಬಾಗಿಲು ತೆರೆಯಿರಿ ನಾನು ಗಾಯಗೊಂಡಿದ್ದೇನೆ."**

ಉ:– **ಆಯ್ಕೆ:** ಈ ವಾಕ್ಯವನ್ನು ಸಾ ರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ರಾಹಿಲನು ಮುದುಕಿಗೆ ಹೇಳಿದ್ದಾನೆ. ಯುದ್ಧದಲ್ಲಿ ಗಾಯಗೊಂಡು ಸಮುದ್ರಕ್ಕೆ ಬಿದ್ದ ರಾಹಿಲನು ಈಜುತ್ತ ದಡವನ್ನು ಸೇರುತ್ತಾನೆ. ಆ ವೇಳೆಯಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು ಮಳೆಯಿಂದ ಮೊದಲು ರಕ್ಷಣೆ ಪಡೆಯಬೇಕೆಂದು ಯೋಚಿಸಿ ನಡೆಯುತ್ತಿದ್ದಾಗ ಅಲ್ಲೇ ದಡದಲ್ಲಿದ್ದ ಒಂದು ಮನೆಯೊಳಗಿಂದ ಆರ್ತನಾದ ಕೇಳಿಬರುತ್ತದೆ. ಆ ಮನೆಯೊಳಗೆ ಯಾವ ಕ್ರೌರ್ಯ ನಡೆಯುತ್ತಿರಬಹುದು ಎಂದು ಯೋಚಿಸಿದ ರಾಹಿಲನು ಅಲ್ಲಿಯೇ ಆಶ್ರಯ ಪಡೆಯುವ ಸಲುವಾಗಿ ಆ ಮನೆಯ ಮೆಟ್ಟಿಲು ಹತ್ತಿ ಬಾಗಿಲು ಬಡಿಯುವಾಗ ಈ ಮೇಲಿನ ಮಾತುಗಳನ್ನು ಹೇಳುತ್ತಾನೆ.

**ಸ್ವಾರಸ್ಯ:** ರಾಹಿಲನು ರಕ್ಷಣೆಗಾಗಿ ಇನ್ನೊಬ್ಬರ ಸಹಾಯವ ಬೇಡುವ ಸ್ಥಿತಿ ಇಲ್ಲಿ ಅಭಿವ್ಯಕ್ತಗೊಂಡಿದೆ.

**2. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ"**

ಉ:– **ಆಯ್ಕೆ :** ಈ ವಾಕ್ಯವನ್ನು ಸಾ ರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ರಾಹಿಲನು ಮುದುಕಿಗೆ ಹೇಳಿದನು. ಮನೆಯ ಒಳಗಡೆಗೆ ಹೋದ ರಾಹಿಲನಿಗೆ ಮುದುಕಿಯ ಸೊಸೆ ಹೆರಿಗೆಯ ನೋವು ತಿನ್ನುತ್ತಿದ್ದಾಳೆಂದು ಗೊತ್ತಾಗುತ್ತದೆ. ರಾಹಿಲನು ತಾನು ಡಾಕ್ಟರ್ ಎಂದು ಹೇಳಿದ ಮುದುಕಿಯು ಆತನನ್ನು ತನ್ನ ಸೊಸೆ ಇರುವ ಕೋಣೆಗೆ ಕರೆದುಕೊಂಡು ಹೋದಳು. ರಾಹಿಲನು ತನ್ನ ಕಾಲಿನ ನೋವನ್ನು ಮರೆತು ಆಕೆಯನ್ನು ಪರೀಕ್ಷಿಸಲು ಮುಂದಾಗುವಾಗ ಮುದುಕಿಗೆ ಮೇಲಿನ ಮಾತಿನಂತೆ ಹೇಳುತ್ತಾನೆ.

**ಸ್ವಾರಸ್ಯ:** ತಾನು ನೋವಿನಲ್ಲಿದ್ದರೂ ಇನ್ನೊಬ್ಬರ ನೋವಿಗೆ ಸ್ಪಂದಿಸುವ ಪರೋಪಕಾರ ಮಾನವೀಯ ಗುಣ ಹಾಗೂ ಅವನ ವೃತ್ತಿಧರ್ಮ ಬಹು ಸ್ವಾರಸ್ಯಪೂರ್ಣವಾಗಿದೆ.

**3. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ"**

ಉ:– **ಆಯ್ಕೆ :** ಈ ವಾಕ್ಯವನ್ನು ಸಾ ರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ತಮ್ಮ ಮನೆಯೊಳಗಿರುವ ರಾಹಿಲನು ತಮ್ಮ ದೇಶದವನಲ್ಲ ತಮ್ಮ ದೇಶಕ್ಕೆ ದ್ರೋಹ ಬಗೆವವನು ಎಂಬ ಸಂದೇಹ ಮೂಡಿ ಕ್ಷಣಕಾಲ ಕಣ್ಣನ್ನು ಕೆಂಪು ಮಾಡಿಕೊಂಡಳು. ಸಮೀಪದಲ್ಲಿದ್ದ ರಾಹಿಲನ ಮುಖ

ನೋಡಿದಳು. ಆತನ ಅಸಹಾಯಕತೆಯ ನೋಟವನ್ನು ನೋಡಿ 'ಮುದುಕಿ ತನ್ನ ಮನದಲ್ಲಿ ಈ ಮೇಲಿನ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾಳೆ.

**ಸ್ವಾರಸ್ಯ:** ರಾಹಿಲನು ತಮ್ಮ ವೈರಿ ದೇಶದವನು ಎಂದು ತಿಳಿದರೂ ಮುದುಕಿ ಅವನ ಮೇಲೆ ಮಾತೃವಾತ್ಸಲ್ಯ ತೋರಿಸಿದ ಗುಣ ಸ್ವಾರಸ್ಯಪೂರ್ಣವಾಗಿದೆ.

**4. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ: ಅದನ್ನೂ ನೋಡಿ!"**

ಉ:– **ಆ೦ಕ್ಕೆ :** ಈ ವಾಕ್ಯವನ್ನು ಸಾ ರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ರಾಹಿಲನು ಮುದುಕಿಯ ಮನೆಯಲ್ಲಿ ರಕ್ಷಣೆ ಪಡೆಯುತ್ತಿದ್ದ ಸಂದರ್ಭದಲ್ಲಿ ಸೈನಿಕ ಉಡುಪಿನಲ್ಲಿದ್ದ ನಾಲ್ಕೈದು ಜನರು ಮುದುಕಿಯ ಮನೆಗೆ ಬಂದು "ಈ ಕಡೆ ಯಾರಾದರೂ ಗಾಯಗೊಂಡ ಸೈನಿಕರು ಬಂದಿದ್ದಾರೆಯೇ? ಎಂದು ಕೇಳುತ್ತಾ ಒಳನುಗ್ಗಿದರು. ಮುದುಕಿ "ಇಲ್ಲವಲ್ಲಾ?" ಎಂದು ನುಡಿದಳು. "ಆದರೂ ಈ ಮನೆಯಲ್ಲೊಮ್ಮೆ ನೋಡಿಬಿಡಿ" ಎಂದು ಒಬ್ಬ ಅಪ್ಪಣೆ ಕೊಟ್ಟನು. ಉಳಿದವರು ಒಳಹೊಕ್ಕು ಶೋಧಿಸುವಾಗ ಮುದುಕಿ ಅಳುತ್ತ, ಹೂಂ ನೋಡಿ, "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ ಅದನ್ನೂ ನೋಡಿ!" ಎಂದು ತನ್ನ ದೇಶದ ಸೈನಿಕರಿಗೆ ಹೇಳಿದಳು.

**ಸ್ವಾರಸ್ಯ:** ಮುದುಕಿ ತನ್ನ ಮೊಮ್ಮಗುವನ್ನು ಕಳೆದುಕೊಂಡ ಅಸಹಾ೦ಯಕತೆ೦ಯನ್ನು, ರಾಹಿಲನನ್ನು ರಕ್ಷಿಸುವ ಮಾನವೀ೦ಯತೆ೦ಯನ್ನು ವ್ಯಕ್ತಪಡಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**ಈ. <u>ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ:</u>**

**1. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?**

ಉ:– ರಾಹಿಲ ಮತ್ತು ಮುದುಕಿಯ ನಡುವೆ ಪರಸ್ಪರ ವಿಶ್ವಾಸ ಬೆಳೆದು ಪರಸ್ಪರ ಮಾತಾಡುತ್ತಿದ್ದಾಗ ರಾಹಿಲನು ಮುದುಕಿಗೆ ನಿಮ್ಮ ಮಗ ಈಗ ಎಲ್ಲಿದ್ದಾನೆಂದು ಕೇಳಿದಾಗ ಮುದುಕಿಯು "ನನ್ನ ಮಗ ಯುದ್ಧಕ್ಕೆ ಹೋಗಿದ್ದಾನೆ. ನನ್ನ ಮಗ ಇನ್ನೂ ಚಿಕ್ಕ ಹುಡುಗನಾಗಿದ್ದಾಗ ಅವನ ತಂದೆಯನ್ನು ಯುದ್ಧಕ್ಕೆ ಕರೆದುಕೊಂಡು ಹೋಗಿದ್ದರು. ಆದರೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ. ನೋಡು ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲುಹಿದೆ, ಮದುವೆಯನ್ನು ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಎಂದು ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ವಿವರಿಸಿದಳು.

**2. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.**

ಉ:– ದೇಶದ ಗಡಿ ಭಾಗದಲ್ಲಿ ಸಮುದ್ರದ ಮೇಲಿನ ಆಕಾಶದಲ್ಲಿ ಹಾರುತ್ತಿದ್ದ ಯುದ್ಧ ವಿಮಾನದ ಮೇಲೆ ವೈರಿಗಳ ವೈಮಾನಿಕ ದಾಳಿಯಿಂದಾಗಿ ವಿಮಾನವು ನುಚ್ಚುನೂರಾಗಿ ಸಮುದ್ರದ ಮೇಲೆ ಬಿದ್ದಿತು. ಅದರಲ್ಲಿದ್ದ ವೈದ್ಯ ರಾಹಿಲನ ಕಾಲಿಗೆ ತೀವ್ರ ಪೆಟ್ಟಾಗಿದ್ದರೂ ಈಜಿ ದಡ ಸೇರುತ್ತಾನೆ. ಬಾಗಿಲು ತೆರೆದ ಮುದುಕಿಯ ಸೊಸೆಯು ಹೆರಿಗೆಯ ಬೇನೆಯಿಂದ ಬಳಲುತ್ತಿರುತ್ತಾಳೆ. ಆ ವೇಳೆಯಲ್ಲಿ ಆಸ್ಪತ್ರೆಗೆ ಕರೆದೊಯ್ಯುವ ಪರಿಸ್ಥಿತಿಯಲ್ಲಿ ಅವಳಿರಲಿಲ್ಲ. ವೈದ್ಯನಾಗಿದ್ದ ರಾಹಿಲನು ತನ್ನ ಕಾಲಿನ ನೋವನ್ನು ಮರೆತು ಮಗುವನ್ನು ರಕ್ಷಿಸಲು ಸಾಧ್ಯವಾಗದಿದ್ದರೂ ತಾಯಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೆ ನೆರವಾಗುತ್ತಾನೆ.

ಅದೇ ವೇಳೆಯಲ್ಲಿ ಅವನನ್ನು ಹುಡುಕುತ್ತ ತನ್ನದೇ ದೇಶದ ಸೈನಿಕರು ಮುದುಕಿಯ ಮನೆಗೆ ಬರುತ್ತಾರೆ. ಬಾಗಿಲು ತೆರೆಯಬೇಡಿ ಎಂದು ರಾಹಿಲನು ಅಸಹಾಯಕತೆಯ ನೋಟದಿಂದ ಕೈ ಸನ್ನೆ ಮಾಡಿದಾಗ ಮುದುಕಿಯು ಆ ನೋಟದಲ್ಲಿ ತನ್ನ ಮಗನನ್ನು ಕಾಣುತ್ತಾಳೆ. ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ ಎಂದು ಕೇಳುತ್ತಾ ಒಳ ನುಗ್ಗಿದಾಗ ಬಂದವರಿಗೆ ಅವಳು ಯಾರೂ ಬಂದಿಲ್ಲ ಎಂದು ಉತ್ತರಿಸಿ ರಾಹಿಲನನ್ನು ರಕ್ಷಿಸುತ್ತಾಳೆ. ಹೀಗೆ ತನಗೆ ಸಹಾಯ ಮಾಡಿದ ರಾಹಿಲನಿಗೆ ಮುದುಕಿಯು ಪ್ರತಿಯಾಗಿ ಅವನನ್ನು ಸೈನಿಕರ ದಾಳಿಗೆ ತುತ್ತಾಗುವುದರಿಂದ ರಕ್ಷಿಸಿ ಪ್ರತ್ಯುಪಕಾರ ಮಾಡುತ್ತಾಳೆ.

**3.** **ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾ0ಯವನ್ನು ವಿವರಿಸಿ.**

ಉ:– ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ. ಯುದ್ಧಕ್ಕೆ ಕಾರಣ ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಯುದ್ಧದ ಭೀಕರತೆಯು ಧರ್ಮ, ದೇಶಗಳ ಬೇಧವಿಲ್ಲದೇ ಭಾಗಿಯಾದ ಸೈನಿಕರಿಗೂ ಅವರ ಕುಟುಂಬ ವರ್ಗದವರಿಗೂ ಹಾಗೂ ದೇಶಕ್ಕೂ ನಾನಾ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಯುದ್ಧ ಒಂದು ಪೀಳಿಗೆಯ ಸುಖೀ ಜೀವನವನ್ನು ಕಸಿಯಬಲ್ಲದು. ದುಡಿಯುವ ತಂದೆ, ಮಗ, ಆಕೆಯ ಗಂಡನನ್ನು ಆಶ್ರಯಿಸಿದವರ ಬದುಕನ್ನೇ ಯುದ್ಧ ಕಸಿದುಕೊಂಡುಬಿಡುತ್ತದೆ. ಭೌತಸ್ವರೂಪದ ಹಾನಿ ಉಂಟಾಗಿ ಗತಿಚಕ್ರ ಹಿಂದಕ್ಕೆ ಓಡುತ್ತದೆ. ಯುದ್ಧವೆನ್ನುವುದು ಮಾನವ ನಿರ್ಮಿತ ಕೆಡುಕಿನ ಕಾರ್ಯ. ಯುದ್ಧದಲ್ಲಿ ಬಳಕೆಯಾಗುವ ಬಾಂಬ್‌ಗಳಿಂದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮಗಳುಂಟಾಗಿ ಮಾನವ ಮತ್ತು ಪ್ರಾಣಿ, ಸಸ್ಯವರ್ಗಗಳ ಮೇಲೆ ಅದು ದುಷ್ಪರಿಣಾಮವನ್ನು ಉಂಟು ಮಾಡುವುದು. ಯುದ್ಧದಿಂದ ಯಾರಿಗೂ ನೆಮ್ಮದಿ ಉಂಟಾಗಲು ಸಾಧ್ಯವಿಲ್ಲ. ಯುದ್ಧದಲ್ಲಿ ನೊಂದವರು ಧರ್ಮಭಿನ್ನತೆ, ದೇಶಭಿನ್ನತೆ, ವೈರಿ–ಮಿತ್ರ ಎಂಬುದನ್ನೆಲ್ಲ ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು.

**ಉ.** **ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. ರಾಹಿಲನ ದೇಹದಲ್ಲಿ ____________ ಸಂಚಾರವಾದಂತಾಯಿತು.
   ಅ). ಶಕ್ತಿ  ಆ). ವಿದ್ಯುತ್  ಇ). ಹೊಸರಕ್ತ  ಈ). ಮಿಂಚು

ಉ:– **ಹೊಸರಕ್ತ**

2. ನರಳಾಟದ ಬೆನ್ನಲ್ಲೇ ಹಿರಿಯ ಹೆಂಗಸೊಬ್ಬಳ___________ ಕೇಳಿ ಬಂತು.
   ಅ). ಆರ್ತನಾದ  ಆ). ಅಳು  ಇ). ಚೀರಾಟ  ಈ). ಸಾಂತ್ವನ

ಉ:– **ಆರ್ತನಾದ**

3. ಮುದುಕಿ ಮತ್ತು ಸೊಸೆಯ ___________ ಮನೆಯ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸಿತು.
   ಅ). ಸಂತಸ  ಆ). ಜಗಳ  ಇ). ರೋದನ  ಈ). ಸಂಗೀತ

ಉ:– **ರೋಧನ**

4. 0ಯಾರಾದರೂ ಗಾಯಗೊಂಡ __________ ಈ ಕಡೆ ಬಂದಿದ್ದಾರೆಯೇ?
   ಅ). ಜನರು  ಆ). ಸೈನಿಕರು  ಇ). ಗಂಡಸರು  ಈ). ಹೆಂಗಸರು

ಉ:– **ಸೈನಿಕರು**

5. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ____________ ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು.
   ಅ). ತಂದೆಯ  ಆ). ತಾಯಿಯ  ಇ). ಮಗಳು  ಈ). ಮಗನು

ಉ:– **ಮಗನು**

**ಊ.** **ಕೊಟ್ಟಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**
{ಕಾರ್ಯ, ಕತ್ತಲೆ, ಇಲ್ಲ, ಶಸ್ತ್ರ, ಸ್ಫೋಟಿಸು, ಎಚ್ಚರ, ಕಣ್ಣಿಗೆ, ಅದ್ಭುತ, ಡಾಕ್ಟರ್, ಬಟ್ಟೆ}

ಉ:– **ವಿಜಾತೀಯ ಸಂಯುಕ್ತಾಕ್ಷರಗಳು:** ಕಾರ್ಯ, ಶಸ್ತ್ರ, ಸ್ಫೋಟಿಸು, ಅದ್ಭುತ, ಡಾಕ್ಟರ್,[0ರ್ಯ,ಸ್ತ್ರ,ಸ್ಫೋ,ದ್ಭ,ಕ್ಟ]
**ಸಜಾತೀಯ ಸಂಯುಕ್ತಾಕ್ಷರಗಳು:** ಕತ್ತಲೆ, ಇಲ್ಲ, ಎಚ್ಚರ. ಕಣ್ಣಿಗೆ, ಬಟ್ಟೆ [ ತ್ತ, ಲ್ಲ, ಚ್ಚ, ಣ್ಣಿ, ಟ್ಟೆ]

**ಋ.** **ನೀಡಿರುವ ಪದಗಳಿಗೆ ಅವರ್ಗೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**
**{ಸಮನಾಗಿ, ದೇಶ, ಮನೆಯ, ರೋಧನ, ಬಳಿಕ, ನೆಲ, ಮದುವೆ, ಮನುಷ್ಯ, ಹೊತ್ತು, ಒಳಗೆ}**

ಉ:– ಸಮನಾಗಿ – ಸ  ಬಳಿಕ – ಳಿ  ಹೊತ್ತು – ಹೊ
ದೇಶ – ಶ  ನೆಲ – ಲ  ಒಳಗೆ – ಳ
ಮನೆಯ – ಯ  ಮದುವೆ – ವೆ  ರೋದನ – ರೋ
ಮಾನುಷ – ಷ

**ಎ** **ಈ ಪಾಠದಲ್ಲಿ ಬರುವ ಇಂಗ್ಲೀಷ್ ಪದಗಳನ್ನು ಪಟ್ಟಿ ಮಾಡಿ.**
ಡಾಕ್ಟರ್  ಗ್ರೌಂಡ್  ಬ್ಲಾಕ್‌ಔಟ್  ಬಾಂಬ್

ರೇಡಿಯೋ ಪೈಲಟ್ ಪ್ಲೀಸ್ ಸಾರ್

ಐ **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ನಾಲ್ಕನೆಯ ಪದವನ್ನು ಬರೆಯಿರಿ.**

1. ಕ್, ಗ್: ಅಲ್ಪ ಪ್ರಾಣಾಕ್ಷರಗಳು:: ಭ್, ಯ್ : ________

ಉ: **ಮಹಾಪ್ರಾಣಾಕ್ಷರಗಳು**

2. ವರ್ಗೀಯ ವ್ಯಂಜನಾಕ್ಷರಗಳು: 25:: ಅವರ್ಗೀಯ ವ್ಯಂಜನಾಕ್ಷರಗಳು : ________

ಉ: **9**

3. ಆ, ಈ, ಊ: ದೀರ್ಘಸ್ವರಗಳು:: ಅ, ಇ, ಉ, ಋ : ________

ಉ: **ಹ್ರಸ್ವ ಸ್ವರಗಳು**

4. ಸ್ವರಗಳು: 13:: ಯೋಗವಾಹಕಗಳು : ______

ಉ: **2**

## ಬಹು ಆಯ್ಕೆ ಪ್ರಶ್ನೆಗಳು

1. ಙ, ಞ, ಣ, ನ, ಮ ಅಕ್ಷರಗಳನ್ನು ಹೀಗೆಂದು ಕರೆಯುತ್ತಾರೆ.
ಅ). ಸ್ವರಾಕ್ಷರಗಳು ಆ). ವ್ಯಂಜನಾಕ್ಷರಗಳು
ಇ). ಅನುನಾಸಿಕ ಅಕ್ಷರಗಳು ಈ). ಯೋಗವಾಹಕಗಳು

ಉ: **ಅನುನಾಸಿಕ ಅಕ್ಷರಗಳು**

2. ಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಾಕ್ಷರಗಳು.
ಅ). ಐ ಓ ಆ). ಐ ಒ ಇ). ಔ ಓ ಈ). ಐ ಔ

ಉ: **ಐ. ಔ**

3. ಕನ್ನಡ ವರ್ಣಮಾಲೆಯಲ್ಲಿರುವ ದಂತ್ಯಾಕ್ಷರಗಳಿವು.
ಅ). 'ಕ' ವರ್ಗ ಆ). 'ತ' ವರ್ಗ ಇ). 'ಪ' ವರ್ಗ ಈ). 'ಚ' ವರ್ಗ

ಉ: **ಚ ವರ್ಗ**

4. ವಿಜಾತಿಯ ಸಂಯುಕ್ತಾಕ್ಷರ ಪದವಿದು.
ಅ). ಅಮ್ಮ ಆ). ಅಪ್ಪ ಇ). ಅಸ್ತ್ರ ಈ). ತಗ್ಗಿ

ಉ: **ಅಸ್ತ್ರ**

5. ಕಡಿಮೆ ಉಸಿರಿನೊಂದಿಗೆ ಉಚ್ಚರಿಸುವ ಅಕ್ಷರಗಳನ್ನು ಹೀಗೆನ್ನುವರು.
ಅ). ಅಲ್ಪ ಪ್ರಾಣ ಆ). ಮಹಾಪ್ರಾಣ ಇ). ಹ್ರಸ್ವ ಸ್ವರ ಈ). ದೀರ್ಘಸ್ವರ

ಉ: **ಅಲ್ಪಪ್ರಾಣ**

6. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳು.
ಅ). 13 ಆ). 25 ಇ). 06 ಈ). 07

ಉ: **7**

7. ನ್+ಅ+ಮ್+ಊ+ರ್+ಇ+ನ್+ಅ+ಶ್+ಆ+ಲ್+ಎ – ಇಲ್ಲಿರುವ ಪದವಿದು.
ಅ). ನಮ್ಮೂರಿನ ಶಾಲೆ ಆ). ನನ್ನೂರಿನ ಶಾಲೆ ಇ). ನಮ್ಮೂರ ಶಾಲೆ ಈ). ನಮ್ಮೂರೆ ಶಾಲೆ

ಉ: **ನಮ್ಮೂರಿನ ಶಾಲೆ**

8. ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರ.
ಅ). ಸ್ವರಗಳು ಆ). ಗುಣಿತಾಕ್ಷರಗಳು ಇ). ಯೋಗವಾಹಕಗಳು ಈ). ಸಂಯುಕ್ತಾಕ್ಷರಗಳು

ಉ: **ಗುಣಿತಾಕ್ಷರ**

9. ಸಜಾತೀಯ ಸಂಯುಕ್ತಾಕ್ಷರಗಳಿಗೆ ಇದು ಉದಾಹರಣೆಯಾಗಿದೆ.
ಅ). ಉಷ್ಣ ಆ). ಅಸ್ತ್ರ ಇ). ಅಜ್ಜ ಈ). ಅಕ್ಷರ

ಉ: **ಅಜ್ಜ**

10. ವರ್ಗೀಯ ವ್ಯಂಜನಗಳಲ್ಲಿ ಮೊದಲ ಮತ್ತು ಮೂರನೆಯ ಸಾಲಿನ ಅಕ್ಷರಗಳನ್ನು ಹೀಗೆನ್ನುವರು.
ಅ). ವಿಸರ್ಗ ಆ). ಅನುಸ್ವರ ಇ). ಅಲ್ಪಪ್ರಾಣ ಈ). ಮಹಾಪ್ರಾಣ
**ಉ: ಅಲ್ಪಪ್ರಾಣ**

11. 'ಪ' ವರ್ಗದ ಅನುನಾಸಿಕ ಅಕ್ಷರ.
ಅ). ಙ ಆ). ಞ ಇ). ಮ ಈ). ನ
**ಉ: ಮ**

12. ಎರಡು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷಗಳು
ಅ). ದೀರ್ಘಸ್ವರ ಆ). ಹ್ರಸ್ವಸ್ವರ ಇ). ಪ್ಲುತಸ್ವರ ಈ). ಅಪ್ತಸ್ವರ
**ಉ: ದೀರ್ಘಸ್ವರ**

13. ಫ, ಝ, ಢ, ಧ, ಭ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ.
ಅ) ದೀರ್ಘಸ್ವರಾಕ್ಷರಗಳು ಆ) ಅಲ್ಪ ಸ್ವರಾಕ್ಷರಗಳು
ಇ) ಮಹಾಪ್ರಾಣಾಕ್ಷರಗಳು ಈ) ಅನುನಾಸಿಕಾಕ್ಷರಗಳು
**ಉ: ಮಹಾಪ್ರಾಣಾಕ್ಷರಗಳು**

14. ಇವುಗಳನ್ನು ಕನ್ನಡ ಅಂಕಿಗಳೆಂದು ಕರೆಯುತ್ತೇವೆ.
ಅ). ಮುಕ್ಕಾಲು ಆ). ಗಂಟೆ ಇ). ತಾಸು ಈ). ಅವಧಿ
**ಉ: ಮುಕ್ಕಾಲು**

15. ಯೋಗವಾಹಕಗಳು ಇವಾಗಿವೆ.
ಅ). ಯ್ ರ್ ಆ). ಕ್ ಖ್ ಇ). ಃ ಂ ಈ). ಂ ಂ
**ಉ: ಃ ಂ(ವಿಸರ್ಗ ಮತ್ತು ಅನುಸ್ವರ)**

16. ಸ್ವರಾಕ್ಷರಗಳಲ್ಲಿನ ಪ್ಲುತಾಕ್ಷರಗಳು ಇವಾಗಿವೆ.
ಅ). ಅ, ಇ, ಉ ಆ). ಆ, ಈ, ಐ ಇ). ಕ್, ಗ್, ಚ್ ಈ). ಆss
**ಉ: ಆss**

17. ಸ್ಪರ್ಶ ಪದದ ತದ್ಭವ ರೂಪ
ಅ). ಪರುಷ ಆ). ಸ್ವಚ್ಛ ಇ). ಸವರುಶ ಈ). ಪರುಶ
**ಉ: ಪರುಶ**

18. ಎನಿತದಾರ ಪದವು ಈ ಸಂಧಿಗೆ ಉದಾಹರಣೆಯಾಗಿದೆ.
ಅ).ಆದೇಶಸಂಧಿ ಆ). ಆಗಮಸಂಧಿ ಇ). ಲೋಪಸಂಧಿ ಈ). ಗುಣಸಂಧಿ
**ಉ: ಲೋಪಸಂಧಿ**

19. 'ಸಿದ್ಧ' ಪದದ ಸಮನಾರ್ಥಕ ಪದವಿದು.
ಅ).ಸಿದ್ಧತೆ ಆ).ತಪಸ್ವಿ ಇ).ಋಷಿ ಈ). ಸನ್ಯಾಸಿ
**ಉ: ತಪಸ್ವಿ**

20. ಕನಸಿನಿರುಳು ಪದವನ್ನು ಬಿಡಿಸಿ ಬರೆದಾಗ.
ಅ).ಕನಸು+ಇರುಳು ಆ).ಕನಸಿನ+ಇರುಳು ಇ).ಕನಸಿನಲ್ಲಿ+ಇರುಳು ಈ). ಇರುಳಿನ+ಕನಸು
**ಉ: ಕನಸಿನ+ಇರುಳು**

21. 'ಪರೀಕ್ಷಿಸು' ಪದದ ಕನ್ನಡ ರೂಪ.
ಅ).ಪರೀಕ್ಷೆ ಆ).ಅವಲೋಕಿಸು ಇ).ಪರಿಕಿಸು ಈ). ಪರೀಕ್ಷಿಸಿ
**ಉ: ಪರಿಕಿಸು**

22. ಪ್ರಾಣಾಹುತಿ ಪದವು ಈ ಸಂಧಿಗೆ ಸೇರಿದೆ.
ಅ).ಲೋಪ ಆ). ಆಗಮ ಇ). ಆದೇಶ ಈ). ಸವರ್ಣದೀರ್ಘ
**ಉ: ಸವರ್ಣದೀರ್ಘ**

23. 'ಧೃತಿ' ಪದದ ಅರ್ಥ.
ಅ).ದೃಢ ಆ).ಧೈರ್ಯ ಇ).ಭಯ ಈ).ಸಂಕಲ್ಪ
**ಉ: ಧೈರ್ಯ**

24. ಚಂದ್ರ+ಆನನೆ – ಈ ಪದವನ್ನು ಕೂಡಿಸಿದಾಗ.

ಅ).ಚಂದ್ರಾನನೆ ಆ).ಚಂದ್ರನ ಆನೆ ಇ).ಚಂದ್ರಾನೆನೆ ಈ). ಚಂದ್ರಾಆನನೆ

**ಉ: ಚಂದ್ರಾನನೆ**

25. **‘**ತಪಸ್ವಿ**’** ಪದದ ತದ್ಭವ ರೂಪ.

ಅ).ತವಸಿ ಆ).ತಪಸ್ವಿನಿ ಇ).ತಪಸಿ ಈ). ತವಸಿ

**ಉ: ತವಸಿ**

KM

# ಘಟಕ ಪರೀಕ್ಷೆ – 1

**20–ಅಂಕಗಳು**

**I. ಬಹು ಆಯ್ಕೆ ಪ್ರಶ್ನೆಗಳು** **1*3=3**

**1. ಇವುಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳಿಂದ ಕೂಡಿದ ಪದ.**

ಅ). ಹವಳ ಆ).ಕಥನ ಇ).ಜನಕ ಈ).ಗಮನ

**2. ಇವುಗಳಲ್ಲಿ ಗುಂಪಿಗೆ ಸೇರದ ಪದವಿದು.**

ಅ). ಡಾಕ್ಟರ್ ಆ).ಗ್ರೌಂಡು ಇ).ಟಪಾಲು ಈ).ಪೆನ್ನು

**3. 'ಗೌತಮನು ಮುಂಜಾನೆ ಊರಿಗೆ ಹೋಗುತ್ತಿದ್ದಾನೆ' ಈ ವಾಕ್ಯದಲ್ಲಿನ ಸ್ವರಾಕ್ಷರದಿಂದ ಪ್ರಾರಂಭವಾಗುವ ಪದವಿದು.**

ಅ). ಗೌತಮನು ಆ).ಊರಿಗೆ ಇ).ಮುಂಜಾನೆ ಈ).ಹೋಗುತ್ತಿದ್ದಾನೆ

**II ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.** **1*3=3**

1. ಕ್, ಗ್ : ಅಲ್ಪ ಪ್ರಾಣಾಕ್ಷರಗಳು :: ಛ್, ಯ್ : ______________

2. ಸೇರಿಯಾಯಿತು : ಆಗಮಸಂಧಿ :: ತಲೆದೂಗು : ______________

3. ದೃಷ್ಟಿ : ದಿಟ್ಟ :: ಯುದ್ಧ : ______________

**III. ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **1*3=3**

1. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
2. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
3. ಮುದುಕಿಯು ಯುದ್ಧದ ಪರಿಯ ಬಗೆಗೆ ಏನೆಂದು ಹೇಳಿ ಗೊಣಗಿಕೊಳ್ಳುತ್ತಾ ಬಾಗಿಲು ತೆರೆದಳು?

**IV. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ:** **2*4=8**

1. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?
2. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
3. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
4. ಸಾ.ರಾ ಅಬೂಬಕ್ಕರ್‌ರವರ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ತಿಳಿಸಿ ಬರೆಯಿರಿ.

**V. ಈ ಹೇಳಿಕೆಯ ಸಂದರ್ಭ ತಿಳಿಸಿ, ಸ್ವಾರಸ್ಯವನ್ನು ಬರೆಯಿರಿ.** **1*3=3**

1 "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"

# ಘಟಕ ಪರೀಕ್ಷೆ – 2

**20–ಅಂಕಗಳು**

**I. ಒಂದು ವಾಕ್ಯದಲ್ಲಿ ಉತ್ತರಿಸಿ:** **1*4=4**

1. ರಾಹಿಲನು ಯಾರು?
2. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?
3. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
4. ಯಾರ ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆ ಯಾಕೆ ಆಗುತ್ತದೆ?

**II. ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ:** **2*3=6**

1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದರು?
3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
3. 'ಬ್ಲಾಕ್ ಔಟ್' ನಿಯಮ ಎಂದರೇನು?

**III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ:** **3*2=6**

1. "ದಯವಿಟ್ಟು ಬಾಗಿಲು ತೆರೆಯಿರಿ ನಾನು ಗಾಯಗೊಂಡಿದ್ದೇನೆ."
2. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ"

**IV. 8–10 ವಾಕ್ಯಗಳಲ್ಲಿ ಉತ್ತರಿಸಿ:** **1*4=4**

1. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

*******

# ಪದ್ಯಭಾಗ 1.
# ಸಂಕಲ್ಪ ಗೀತೆ

**ಕವಿ : ಶಿವರುದ್ರಪ್ಪ**
**ಆಕರ ಗ್ರಂಥ : ಎದೆತುಂಬಿ ಹಾಡಿದೆನು**

**ಕವಿ ಪರಿಚಯ:**

ರಾಷ್ಟ್ರಕವಿ ಜಿ.ಎಸ್ ಶಿವರುದ್ರಪ್ಪನವರು 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಇವರು ಕಾವ್ಯಾರ್ಥ ಚಿಂತನೆ ಸಾಮಗನ ಚೆಲುವು–ಒಲವು, ದೇವಶಿಲ್ಪ ದೀಪದ ಹೆಜ್ಜೆ, ಅನಾವರಣ ವಿಮರ್ಶೆಯ ಪೂರ್ವ ಪಶ್ಚಿಮ, ಮಾಸ್ಕೋದಲ್ಲಿ ಇಪ್ಪತ್ತೆರೆಡು ದಿನಗಳು ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ, ಪುರಸ್ಕಾರಗಳು ಮತ್ತು ರಾಷ್ಟ್ರಕವಿ ಅಭಿಧಾನಕ್ಕೆ ಪಾತ್ರರಾಗಿದ್ದಾರೆ.

ಈ ಪ್ರಸ್ತುತ ಪದ್ಯಭಾಗವನ್ನು ಜಿ.ಎಸ್.ಎಸ್ ಅವರ 'ಎದೆ ತುಂಬಿ ಹಾಡಿದೆನು' ಎಂಬ ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.

**ಭಾವಾರ್ಥ ಸಹಿತ ಪದ್ಯಗಳ ಸಾರಾಂಶ ವಿವರಣೆ**

**1**

ಪ್ರಸ್ತುತ ಪದ್ಯಭಾಗವಾದ ಸಂಕಲ್ಪ ಗೀತೆ ಪದ್ಯವನ್ನು ಜಿ.ಎಸ್. ಶಿವರುದ್ರಪ್ಪನವರ' ಎದೆ ತುಂಬಿ ಹಾಡಿದೆನು ಎಂಬ ಕವನ ಸಂಕಲನದಿಂದ ಆರಿಸಿ ಕೊಳ್ಳಲಾಗಿದೆ. ನಮ್ಮಸುತ್ತಲೂ ಹಬ್ಬಿರುವ ದ್ವೇಷ ಮತ್ತು ಅಂಧಕಾರದ ಕತ್ತಲೆಯನ್ನು ಕಳೆಯಲು, ಪ್ರೀತಿ ಮತ್ತು ಜ್ಞಾನದ ದೀಪವನ್ನು ಹಚ್ಚುವ ಮೂಲಕ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನೆಡೆಸುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನಾದರು ಧೈರ್ಯವಾಗಿ ಎದುರಿಸಬಹುದು. ಪರಸ್ಪರ ವಾತ್ಸಲ್ಯದಿಂದ ಪ್ರೀತಿಸಿ ನಮ್ಮ ಜೀವನವನ್ನು ಉತ್ತಮವಾಗಿ ಸಾಗಿಸ ಬೇಕೆಂಬ ಮೌಲ್ಯವೇ ಈ ಪದ್ಯ ಭಾಗದ ಆಶಯವಾಗಿದೆ.

2

ಮಾನವನ ದುರಾಸೆಗೆ ಸಿಲುಕಿ ಕಲುಷಿತವಾಗಿರುವ ನದೀ ಜಲಗಳನ್ನು ಶುದ್ಧೀಕರಿಸಲು ನಾವು ಮುಂಗಾರಿನ ಮಳೆಯಾಗಬೇಕು. ಅಂದರೆ ಪರಿಸರ ರಕ್ಷಿಸುವ ಪರಿಸರ ಪ್ರೇಮಿಗಳಾಗಬೇಕು. ಕಾಡು ಮೇಡುಗಳು ಬರಡಾಗಿದ್ದು ಅವುಗಳನ್ನು ಉಳಿಸಿ ಬೆಳೆಸ ಬೇಕು. ಅದಕ್ಕಾಗಿ ನಾವು ಹಚ್ಚ ಹಸಿರಿನಿಂದ ಕಂಗೊಳಿಸುವ, ಸಮೃದ್ಧವಾದ ವಸಂತ ಕಾಲವಾಗಬೇಕು. ಒಟ್ಟಾರೆ ನಾವೆಲ್ಲ ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡಬೇಕು. ನಾಗರೀಕತೆಯ ಭರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ, ಅಂತಹ ಹೃದಯದಲ್ಲಿ ಪ್ರೀತಿಯ ಬದುಕನ್ನು ಸಮೃದ್ಧವಾಗಿಸೋಣ ಎಂಬುದು ಕವಿಯ ಆಶಯ

3

ಅತ್ಯಾಚಾರ, ಅನಾಚಾರ ಭ್ರಷ್ಟಾಚಾರ ಅಸ್ಪೃಶ್ಯತೆ ಅಸಮಾನತೆಗಳಿಂದ ಅಧಃಪತನಗೊಂಡಿರುವ, ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತಬೇಕು ಭಾಷೆ, ಜಾತಿ, ಮತ, ಧರ್ಮಗಳ ಭೇದ ಭಾವದಿಂದ ಮನುಷ್ಯರ ನಡುವೆ ಉಂಟಾಗುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗಬೇಕು. ಒಟ್ಟಾರೆ ಸಮಾಜವನ್ನು ಉದ್ಧರಿಸುತ್ತಾ ಭಾವೈಕ್ಯತೆಯನ್ನು ಬೆಳೆಸ ಬೇಕೆಂಬುದು ಕವಿಯ ಆಶಯವಾಗಿದೆ. ವಿಶ್ವ ಕುಟುಂಬದ ಕಲ್ಪನೆಯನ್ನು ಕಾಣಬಹುದಾಗಿದೆ.

4

ಎಲ್ಲಾ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿ0ಯು ನೆಲೆಸುವಂತೆ ಮಾಡಬಹುದಾಗಿದೆ. ಭಯ ಹಾಗೂ ಸಂಶಯಗಳಿಂದ ಮಸುಕಾದವರ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಭರವಸೆಯನ್ನು ತುಂಬುವ ದೃಡ ಸಂಕಲ್ಪವನ್ನು ಕೈಗೊಳ್ಳಬೇಕು. ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ, ಸಮಾನತೆ ತತ್ವ ಮತ್ತು ಒಳ್ಳೆ ಬದುಕಿನ ಭರವಸೆಯ ಬಗ್ಗೆ ಕವಿ ಈ ಪದ್ಯದ ಮೂಲಕ ಅರಿವು ಮೂಡಿಸಿದ್ದಾರೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?**

ಉ:– ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು.

**2. ನದಿ ಜಲಗಳು ಏನಾಗಿವೆ?**

ಉ:– ನದಿಜಲಗಳು ಕಲುಷಿತವಾಗಿವೆ.

**3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?**

ಉ:– ಕಲುಷಿತವಾದ ನದಿ ಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

**4. ಕಾಡುಮೇಡುಗಳ ಸ್ಥಿತಿ ಹೇಗಿದೆ?**

ಉ:– ಕಾಡು ಮೇಡುಗಳು ಬರಡಾದ ಸ್ಥಿತಿ ತಲುಪಿವೆ.

**5. ಯಾವ ಎಚ್ಚರದೊಳು ಬದುಕ ಬೇಕಿದೆ?**

ಉ:– ಮತಗಳೆಲ್ಲವೂ ಷಡಗಳು ಎನ್ನುವ ಹೊಸ ಎಚ್ಚರದೊಳು ಬದುಕ ಬೇಕಿದೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸ ಬೇಕು?**

**ಉ:–** ನಮ್ಮ ಜೀವನದ ಅಂಧಕಾರವನ್ನು ಹೋಗಲಾಡಿಸಲು ದೀಪದ ಅವಶ್ಯಕತೆ ಇರುವಂತೆ ಬದುಕಿನಲ್ಲಿ ಕವಿದ ನಿರಾಶೆಯ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ಮತ್ತು ಪ್ರೀತಿಯ ಹಣತೆಯನ್ನು ಹಚ್ಚ ಬೇಕು. ಹಡಗನ್ನು ಎಚ್ಚರದಿಂದ ಮುನ್ನಡೆಸುವ ಹಾಗೆ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳನ್ನು ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿ ಕೊಳ್ಳುತ್ತಾ ಎಚ್ಚರದಿಂದ ಈ ಜೀವನದ ಹಡಗನ್ನು ಮುನ್ನಡೆಸಬೇಕು.

**2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**

**ಉ:–** ಕಲುಷಿತವಾದ ನದಿ ನೀರನ್ನು ಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವ ಹಾಗೆ ಭ್ರಷ್ಟವಾಗಿರುವ ಸಮಾಜದಲ್ಲಿ ತುಂಬಿರುವ ಭೇದ–ಭಾವ, ಅಸಹನೆ, ದ್ವೇಷ ಅಸೂಯೆ, ಹಿಂಸೆ, ಭಯ, ಸಂಶಯ ಮೊದಲಾದವುಗಳನ್ನು ಪ್ರೀತಿ–ವಿಶ್ವಾಸ ಭರವಸೆಗಳೆನ್ನುವ ಮುಂಗಾರಿನ ಮಳೆ ಸುರಿಸುವ ಮೂಲಕ ತೊಡೆದು ಹಾಕಲು ಪ್ರಯತ್ನ ಬೇಕಿದೆ. ಇಣಗಿ ಹೋಗಿರುವ ಗಿಡ ಮರಗಳು ಸಮೃದ್ಧವಾಗಿ ಚಿಗುರಿ ಪ್ರಕೃತಿಗೆ ನವ ಚೈತನ್ಯದ ರೀತಿಯಲ್ಲಿ ಮುಟ್ಟಬೇಕಾಗಿದೆ.

**3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗ ಬೇಕಿದೆ?**

**ಉ:–** ಶೋಷಣೆಗೊಳಗಾದ ಜನರಲ್ಲಿ ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತ ಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳ ನಿರ್ಮಾಣವಾಗಿವೆ. ಅವುಗಳನ್ನು ಕೆಡವಬೇಕು. ಮನುಷ್ಯ ಮನುಷ್ಯರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗ ಬೇಕಿದೆ.

**4. ನಾಳಿನ ಕನಸನ್ನು ಬಿತ್ತ ಬೇಕಾದರೆ ನಾವು ಹೇಗೆ ಬದುಕ ಬೇಕು?**

**ಉ:–** ನಾಳಿನ ಕನಸನ್ನು ಬಿತ್ತ ಬೇಕಾದರೆ ಮತ, ಧರ್ಮ ಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲವು. ಮುಕ್ತಿಯನ್ನು ನೀಡಬಲ್ಲವು. ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಿಂದ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮುಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತುತ್ತಾ ಬದುಕ ನಡೆಸಬೇಕು.

**ಇ) ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ.**

**1. "ಪ್ರೀತಿಯ ಹಣತೆಯ ಹಚ್ಚೋಣ"**

ಉ: **ಆಯ್ಕೆ:** ಈ ವಾಕ್ಯವನ್ನು ಜಿ.ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಬಿರುಗಾಳಿ ಬೀಸಿದಾಗ ಹಡಗನ್ನು ಎಚ್ಚರದಿಂದ ಮುನ್ನಡೆಸುವಾಗ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳೆನ್ನುವ ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿಕೊಳ್ಳುತ್ತ ಎಚ್ಚರದಿಂದ ಈ ಜೀವನವೆನ್ನುವ ಹಡಗನ್ನು ಮುನ್ನಡೆಸಬೇಕು. ಅಜ್ಞಾನ, ನಿರಾಶೆಗಳ ದಾರಿಯಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ಪ್ರೀತಿಯ ಹಣತೆಯ ಹಚ್ಚಿ ಜೀವನವನ್ನು ನಡೆಸಬೇಕೆಂದು ಕವಿ ಆಶಿಸಿದ್ದಾರೆ.

**ಸ್ವಾರಸ್ಯ :** ನಮ್ಮ ಜೀವನದ ಅಜ್ಞಾನದ ಅಂದಕಾರವನ್ನು ಹೋಗಲಾಡಿಸಲು ಪ್ರೀತಿಯ ದೀಪವನ್ನು ಬೆಳಗಿಸುವ ಸಂಕಲ್ಪ ಮಾಡಬೇಕೆಂಬುದನ್ನು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

2. **"ಮುಂಗಾರಿನ ಮಳೆಯಾಗೋಣ"**

ಉ: **ಆಯ್ಕೆ :** ಈ ವಾಕ್ಯವನ್ನು ಜಿ.ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಕಲುಷಿತವಾದ ನದಿ ನೀರನ್ನು ಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವಾಗ ಭ್ರಷ್ಟವಾಗಿರುವ ಸಮಾಜದಲ್ಲಿರುವ ಭೇದ ಭಾವ ದ್ವೇಷ, ಅಸೂಯೆ, ಹಿಂಸೆ, ಭಯ, ಸಂಶಯಗಳನ್ನು ಪ್ರೀತಿ, ವಿಶ್ವಾಸ ಭರವಸೆಗಳೆನ್ನುವ ಮುಂಗಾರಿನ ಮಳೆಯಂತಾಗಿ ಕಾಡು ಮೇಡುಗಳಿಗೆ ವಸಂತವಾಗಬೇಕೆಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ :** ಮುಂಗಾರಿನ ಮಳೆ ಕಲ್ಮಶಗಳನ್ನು ಕೊಚ್ಚಿಕೊಂಡು ಹೋದಂತೆ ಹೊಸ ಸಂಕಲ್ಪ ಜನರ ಮನದ ಕಲ್ಮಶಗಳನ್ನು ಕಳೆದು ಬದುಕನ್ನು ಸಮೃದ್ಧವಾಗಿಸಬೇಕೆಂಬುದು ಸ್ವಾರಸ್ಯವಾಗಿದೆ.

3. **"ಹೊಸ ಭರವಸೆಗಳ ಕಟ್ಟೋಣ"**

ಉ: **ಆಯ್ಕೆ :** ಈ ವಾಕ್ಯವನ್ನು ಜಿ.ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಪ್ರತಿಯೊಂದು ಧರ್ಮಕ್ಕೂ ಅದರದೇ ಆದ ದಾರಿಗಳಿವೆ ಎನ್ನುವ ಎಚ್ಚರದಲ್ಲಿ ಬದುಕಬೇಕು. ಎಲ್ಲಾ ಧರ್ಮಗಳನ್ನು ಎಲ್ಲಾ ಧರ್ಮಗಳ ಜನರನ್ನು ಪರಸ್ಪರ ಗೌರವಿಸುವ ಭಾವನೆ ಬೆಳೆಸಿಕೊಳ್ಳಬೇಕು. ವಿಭಿನ್ನತೆಗಳಿದ್ದರೂ ಸಹ ಒಂದೇ ಭಾವನೆ ಎಂಬ ಅರಿವು ಮೂಡಿಸಬೇಕೆಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ :** ಭರವಸೆಯೇ ಜೀವಿಗಳನ್ನು ಬದುಕುವಂತೆ ಮಾಡುವುದು ಬದುಕಿಗೆ ಭರವಸೆ ತುಂಬುವ ಸಂಕಲ್ಪ ಮಾಡಬೇಕೆಂಬುದನ್ನು ಸ್ವಾರಸ್ಯಪೂರ್ಣವಾಗಿ ಹೇಳಲಾಗಿದೆ.

4. **"ಹೊಸ ಎಚ್ಚರದೊಳು ಬದುಕೋಣ"**

ಉ: **ಆಯ್ಕೆ :** ಈ ವಾಕ್ಯವನ್ನು ಜಿ.ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಬೇರೆ ಬೇರೆ ಮತ ಧರ್ಮಗಳ ನಡುವಿನ ಸಂಘರ್ಷಗಳ ಪರಿಣಾಮದ ಬಗ್ಗೆ ಕವಿಯು ಪರಿಹಾರೋತ್ತರವಾಗಿ ಮತಗಳೆಲ್ಲವೂ ಸಾಧನೆಯ ದಾರಿಗಳು ನಮ್ಮ ಉತ್ತಮ ಜೀವನಕ್ಕೆ ಅವು ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ಬದುಕಬೇಕೆಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ :** ಸಮಾಜದಲ್ಲಿ ಸಮರಸದ ಬದುಕಿಗೆ ಪರಸ್ಪರ ಧಾರ್ಮಿಕ ಸಾಮರಸ್ಯ ಅತಿ ಮುಖ್ಯವಾದುದು ಎಂಬ ಮೌಲ್ಯವನ್ನು ಕವಿ ಸ್ವಾರಸ್ಯವಾಗಿ ಹೇಳಿದ್ದಾರೆ.

**ಈ) ಈ ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ**

1. **ನಾವು ಯಾವ ಸಂಕಲ್ಪ ಕೈಗೊಳ್ಳ ಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?**

ಉ:– ಜೀವನದಲ್ಲಿ ಧನಾತ್ಮಕ ಭಾವನೆಯನ್ನು ದೃಢ ಸಂಕಲ್ಪವನ್ನು ಹೊಂದಿರಬೇಕು. ಕಾರಣಾತರಗಳಿಂದ ನಮ್ಮಲ್ಲಿ ಮನೆ ಮಾಡಿರುವ ಅಜ್ಞಾನ, ನಿರಾಶೆ. ಭಯ, ಹಿಂಸೆಗಳನ್ನುವ ಕತ್ತಲನ್ನು ಹೋಗಲಾಡಿಸಲು ಪ್ರೀತಿಯ ಹಣತೆಯನ್ನು ಹಚ್ಚಬೇಕು. ಸಮಸ್ಯೆಗಳಿಂದ ನಿರಾಶೆಗಳಿಂದ ಹೊಯ್ದಾಡುತ್ತಿರುವ ಜೀವನವೆನ್ನುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ ಸಂಕಲ್ಪವನ್ನು ಮಾಡಬೇಕು. ಸುತ್ತಲಿನ ಸಮಾಜದಲ್ಲಿ ತುಂಬಿರುವ ಹಿಂಸೆ, ಭ್ರಷ್ಟಾಚಾರ, ಜಾತೀಯತೆ, ಶೋಷಣೆ ಮೊದಲಾದ ಅಸಹನೀಯವಾದ ಭಾವಗಳನ್ನು ತೊಡೆದು ಹಾಕಲು

ಸ್ವತಃ ನಮ್ಮಲ್ಲಿ ಮೊದಲು ಮೌಲ್ಯಗಳನ್ನು ರೂಡಿಸಿಕೊಂಡು ಆ ಮೂಲಕ ಸಮಾಜದಲ್ಲಿ ತುಂಬಿರುವ ಕೊಳಕು ತೊಳೆದು ಹಾಕಲು, ಸಮಾಜವೆನ್ನುವ ನದಿ ಜಲವನ್ನು ಪರಿಶುದ್ಧಗೊಳಿಸುವ ಮುಂಗಾರಿನ ಮಳೆಯಾಗುವ ಆಶಯವನ್ನು ಹೊಂದಬೇಕು.

ನಿರಾಶೆಯಿಂದ ತುಂಬಿರುವ ಸಮಾಜದ ಜನರಲ್ಲಿ ಹೊಸ ಕನಸುಗಳನ್ನು ಚಿಗುರಿಸಬೇಕಾಗಿದೆ, ಬಿದ್ದು ಹೋಗಿರುವ ಆಶಾ ಗೋಪುರವನ್ನು ಮತ್ತೆ ಮೇಲಕ್ಕೆತ್ತಿ ಹೊಸ ಭರವಸೆಗಳನ್ನು ಮೂಡಿಸಲು ಪ್ರಯತ್ನಿಸ ಬೇಕಾಗಿದೆ. ಅಸಮಾನತೆ, ಶೋಷಣೆ, ಮತಾಂಧತೆ ಮೊದಲಾದ ಭಾವನೆಗಳನ್ನು ಮನುಷ್ಯ ಮನುಷ್ಯರ ನಡುವೆ ನೆಲೆಸಿರುವ ಈ ಮನೋಭಾವನೆ ಹೋಗಲಾಡಿಸಿ ಎಲ್ಲರನ್ನೂ ಒಂದು ಗೂಡಿಸುವ ಅನೇಕತೆಯಲ್ಲಿ ಏಕತೆಯ ಸೇತುವೆಯಾಗಲು ಪ್ರತಿಯೊಬ್ಬರು ಪ್ರಯತ್ನಿಸ ಬೇಕೆಂದು ಕವಿ ಆಶಿಸುತ್ತಾರೆ ಎಲ್ಲಾ ಧರ್ಮಗಳೂ ಹೇಳುವ ನೀತಿ ಒಂದೇ ಎನ್ನುವ ಎಚ್ಚರವನ್ನು ಬೆಳೆಸಿಕೊಂಡು ಎಲ್ಲರೂ ಕೂಡಿ ಬಾಳಬೇಕು. ನಾಳೇ ಏನೋ ಹೇಗೋ ಎಂಬ ಭಯ, ಸಂಶಯಗಳನ್ನು ಹೋಗಲಾಡಿಸಿ ಹೊಸ ಕನಸುಗಳನ್ನು ಈಡೇರಿಸಿಕೊಳ್ಳುವ ಛಲವನ್ನು ಮೂಡಿಸಲು ಪ್ರಯತ್ನ ಬೇಕೆಂದು ಕವಿಯ ಆಶಯವಾಗಿದೆ.

**2. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

**ಉ:–** ಸಂಕಲ್ಪದಿಂದ ಧೃಡ ನಿರ್ಧಾರದಿಂದ ಕಾರ್ಯ ಶೀಲರಾದರೆ ಅಸಾಧ್ಯವಾದುದು ಯಾವುದು ಇಲ್ಲ. ಪ್ರತಿಫಲದ ಅಪೇಕ್ಷೆಯಿಲ್ಲದೇ ಕಾರ್ಯ ನಿರ್ವಹಿಸುವ ಮೂಲಕ ಸಮಾಜದಲ್ಲಿ ತುಂಬಿರುವ ಅಜ್ಞಾನ, ಹಿಂಸೆಗಳ ಕತ್ತಲೆಯನ್ನು ಪ್ರೀತಿಯ ಹಣತೆಯನ್ನು ಹಚ್ಚುವ ಮೂಲಕ ಹೋಗಲಾಡಿಸಿ ಹಲವು ತುಮುಲಗಳಿಂದ ಹೊ0ಯ್ದಾಡುವ ಬದುಕಿಗೆ ಭದ್ರತೆ ಕಲ್ಪಿಸುವತ್ತ ಕಾ0ರ್ಯೋನ್ಮುಖರಾಗಬೇಕು. ನಮ್ಮ ಸುತ್ತಮುತ್ತಲೂ ತುಂಬಿರುವ ಹಿಂಸೆ, ಅನಾಚಾರ ಶೋಷಣೆಗಳನ್ನು ತೊಡೆದು ಹಾಕಿ ಸ್ವಸ್ಥ ಮನಸ್ಸಿನ ಸುಂದರ ವಾತಾವರಣ ಕಲ್ಪಿಸಲು ಪ್ರಯತ್ನಿಸಬೇಕಿದೆ. ಏನೇ ಮಾಡಿದರು ನಿರರ್ಥಕ ಎಂಬ ಭಾವನೆಯಿಂದ ಹೊರ ತಂದು ಭರವಸೆಗಳನ್ನು ಮೂಡಿಸಿ ನಮ್ಮ ಮಧ್ಯೆ ಮೂಡಿರುವ ಪ್ರತ್ಯೇಕತೆಯನ್ನು ಇಲ್ಲವಾಗಿಸಿ ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಸಮಾಜದ ಜನರಲ್ಲಿ ಮೂಡಿಸಬೇಕಿದೆ. ಎಲ್ಲಾ ಧರ್ಮಗಳ ಉದ್ದೇಶವೂ ಜೀವನದ ಸನ್ಮಾರ್ಗವನ್ನು ತೋರಿಸುವುದೇ ಆಗಿದೆ. ಆದ್ದರಿಂದ ಎಲ್ಲಾ ಧರ್ಮಗಳನ್ನು ಗೌರವಿಸುವ, ಒಂದಾಗಿ ಬಾಳುವ ಸಂದೇಶವನ್ನು ರೂಪಿಸಬೇಕು. ನಾಳಿನ ಭವಿಷ್ಯದ ಭಯ, ಸಂಶಯ ಭಾವಗಳನ್ನು ಹೋಗಲಾಡಿಸಿ ಐಕ್ಯತೆಯಿಂದ ಎಲ್ಲರೂ ಪ್ರಯತ್ನ ಶೀಲರಾದಾಗ ಬಲ ನಿಷ್ಠೆಯಿಂದ ಒಳ್ಳೆಯ ಸಮಾಜ ನಿರ್ಮಾಣದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ. ಎಂಬುದು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯ ವಾಗಿದೆ

## ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ಸಂಕಲ್ಪ ಗೀತೆ ಪದ್ಯವನ್ನು.....................ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

**ಉ:– ಎದೆ ತುಂಬಿ ಹಾಡಿದೆನು**

2. ಕತ್ತಲೆಯೊಳಗೆ ಪ್ರೀತಿಯ.....................ಹಚ್ಚೋಣ

**ಉ:– ಹಣತೆಯ**

3. ಜಿ.ಎಸ್. ಶಿವರುದ್ರಪ್ಪನವರು..................ಯಲ್ಲಿ ಸಮಾವೇಶಗೊಂಡ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು

**ಉ:– ದಾವಣಗೆರೆ.**

4. ಮತಗಳೆಲ್ಲವೂ................ಎನ್ನುವ ಹೊಸ ಎಚ್ಚರದೊಳು ಬದುಕೋಣ

**ಉ:– ಪಥಗಳು**

5. ಮನುಜರ ನಡುವಣ..................ಕೆಡುವುತ ಸೇತುವೆಯಾಗೋಣ.

ಉ:– ಅಡ್ಡಗೋಡೆಗಳ

## ಭಾಷಾ ಚಟುವಟಿಕೆ

*** ಕೊಟ್ಟಿರುವ ಪದಗಳ ಧಾತುಗಳನ್ನು ಗುರುತಿಸಿ ಬರೆಯಿರಿ.**

**ನಿಲ್ಲಿಸು, ನಡೆಸು, ಹಚ್ಚುವುದು, ಮುಟ್ಟೋಣ, ಕಟ್ಟುವುದು, ಆಗೋಣ**

| ಉದಾ:– | ಪದ | ಧಾತು | ಪದ | ಧಾತು |
|---|---|---|---|---|
| | ನಿಲ್ಲಿಸು – | ನಿಲ್ಲು | ಮುಟ್ಟೋಣ – | ಮುಟ್ಟು |
| | ನಡೆಸು – | ನಡೆ | ಕಟ್ಟುವುದು – | ಕಟ್ಟು |
| | ಹಚ್ಚುವುದು – | ಹಚ್ಚು | ಆಗೋಣ – | ಆಗು |

*** ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆಯಿರಿ.**

**ಪ್ರೀತಿಯ, ಬಿರುಗಾಳಿಗೆ, ಜಲಕ್ಕೆ, ಬಿದ್ದುದನ್ನು, ಭರವಸೆಗಳ**

| ಉ:– | ಪದಗಳು | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು |
|---|---|---|---|
| | ಪ್ರೀತಿಯ | ಅ | ಷಷ್ಠಿ |
| | ಬಿರುಗಾಳಿಗೆ | ಗೆ | ಚತುರ್ಥಿ |
| | ಜಲಕ್ಕೆ | ಕ್ಕೆ | ಚತುರ್ಥಿ |
| | ಬಿದ್ದುದನ್ನು | ಅನ್ನು | ದ್ವಿತೀಯಾ |
| | ಭರವಸೆಗಳ | ಅ | ಷಷ್ಠಿ |

*** ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿಯನ್ನು ಹೆಸರಿಸಿ.**

**ಸಂಶಯದೊಳ್, ಜಲದಿಂ, ಮರದತ್ತಣಿಂ, ರಾಯಂಗೆ**

| ಉ:– | ಪದಗಳು | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು |
|---|---|---|---|
| | ಸಂಶಯದೊಳ್ | ಒಳ್ | ಸಪ್ತಮಿ |
| | ಜಲದಿಂ | ಇಂ | ತೃತೀಯಾ |
| | ಮರದತ್ತಣಿಂ | ಅತ್ತಣಿಂ | ಪಂಚಮಿ |
| | ರಾಯಂಗೆ | ಗೆ | ಚತುರ್ಥಿ |

*** ಕೊಟ್ಟಿರುವ ಧಾತುಗಳಿಗೆ ವಿಧ್ಯರ್ಥಕ, ನಿಷೇಧಾರ್ಥಕ ಮತ್ತು ಸಂಭಾವನಾರ್ಥಕ ರೂಪಗಳನ್ನು ಬರೆಯಿರಿ.**

ಹಾಡು, ನೋಡು, ಕಟ್ಟು, ಕೇಳು, ಓಡು, ಓದು, ಬರೆ.

| ಉದಾ:– | ಧಾತು | ವಿಧ್ಯರ್ಥಕರೂಪ | ನಿಷೇಧಾರ್ಥಕರೂಪ | ಸಂಭನಾರ್ಥಕರೂಪ |
|---|---|---|---|---|
| | ಹಾಡು | ಹಾಡಲಿ/ಹಾಡಿರಿ | ಹಾಡನು/ಹಾಡಳು | ಹಾಡಿಯಾನು/ಹಾಡುಯಾರು |
| | | | ಹಾಡರು/ಹಾಡದು | ಹಾಡೀತು |
| | ನೋಡು | ನೋಡಲಿ/ನೋಡಿರಿ | ನೋಡನು/ನೋಡಳು | ನೋಡಿಯಾನು/ನೋಡಿಯಾಳು |
| | | | ನೋಡರು/ನೋಡದು | ನೋಡಿಯಾರು/ನೋಡಿತು |
| | ಕಟ್ಟು | ಕಟ್ಟಲಿ/ಕಟ್ಟರಿ | ಕಟ್ಟನು/ಕಟ್ಟಳು | ಕಟ್ಟಿಯಾನು/ಕಟ್ಟಿಯಾಳು |
| | | | ಕಟ್ಟರು/ಕಟ್ಟದು | ಕಟ್ಟಿಯಾರು/ಕಟ್ಟೀತು |
| | ಕೇಳು | ಕೇಳಲಿ/ಕೇಳಿರಿ | ಕೇಳನು/ಕೇಳಳು | ಕೇಳಿಯಾನು/ಕೇಳಿಯಾಳು |
| | | | ಕೇಳರು/ಕೇಳದು | ಕೇಳಿಯಾರು/ಕೇಳೀತು |
| | ಓಡು | ಓಡಲಿ/ಓಡಿರಿ | ಓಡನು/ಓಡಳು | ಓಡಿಯಾನು/ಓದಿಯಾಳು |
| | | | ಓಡರು/ಓಡದು | ಓದಿಯಾರು/ಓದೀತು |
| | ಬರೆ | ಬರೆಯಲಿ | ಬರೆಯನು/ಬರೆಯಳು | ಬರೆದಾನು/ಬರೆದಾಳು |
| | | ಬರೆಯಿರಿ | ಬರೆಯರು/ಬರೆಯದು | ಬರೆದಾರು/ಬರೆದೀತು |

### ಚಟುವಟಿಕೆ

**ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.**

ಕಲುಷಿತವಾದೀ ನದೀ ಜಲಗಳಗೆ
ಮುಂಗಾರಿನ ಮಳೆಯಗೋಣ
ಬರಡಾಗಿರವೀ ಕಾಡು ಮೇಡುಗಳ
ವಸಂತವಾಗುವ ಮುಟ್ಟೋಣ

ಮತಗಳೆಲ್ಲಪ್ಪ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

# ಬಹು ಆಯ್ಕೆಯ ಪ್ರಶ್ನೆಗಳು

1. 'ಮುಂಗಾರು' ಈ ಪದದ ಸಮಾಸ
ಅ) ತತ್ಪುರುಷ ಆ) ಕರ್ಮಧಾರೆಯ ಇ) ದ್ವಂದ ಈ).ಅಂಶಿ
**ಉ:– ಅಂಶಿ**

2. 'ಕಾಡುಮೇಡು' ಈ ಪದದ ವ್ಯಾಕರಣ ವಿಶೇಷ
ಅ). ದ್ವಿರುಕ್ತಿ ಆ) ಜೋಡಿಪದ ಇ) ಅನುಕರಣಾವ್ಯಯ ಈ) ನುಡಿಗಟ್ಟು
**ಉ:– ಜೋಡಿಪದ**

3. 'ಪಥ' ಪದದ ಅರ್ಥ
ಅ)ರಥ ಆ)ಶಪಥ ಇ)ದಾರಿ ಈ)ಪಂಥ
**ಉ:– ದಾರಿ**

4. 'ಭಯ' ಪದದ ವಿರುದ್ಧ ಪದ
ಅ)ನಿರ್ಭಯ ಆ)ಅಭಯ ಇ)ಭಯಾನಕ ಈ)ಭಾಯ
**ಉ:– ನಿರ್ಭಯ**

5. 'ಹಣತೆ' ಪದದ ಅರ್ಥ
ಅ) ಹಣ ಆ) ದೀಪ ಇ) ಒರತೆ) ಈ) ಅಣು
**ಉ:– ದೀಪ**

6. 'ಕ್ರಿಯಾ' ಪದದ ಮೂಲ ರೂಪ
ಅ)ನಾಪ್ರಕೃತಿ ಆ)ಸಕರ್ಮಕ ಇ)ಧಾತು ಈ)ಅವ್ಯಯ
**ಉ:– ಧಾತು**

7. 'ಓದಲಿ' ಎಂಬುದು
ಅ) ಸಂಭಾವನಾರ್ಥಕ ಆ)ನಿಷೇಧಾತ್ಮಕ ಇ)ವಿಧ್ಯರ್ಥಕ ಈ) ಅವ್ಯಯ
**ಉ:– ವಿಧ್ಯರ್ಥಕ**

8. 'ಹಡಗು' ಪದದ ಅರ್ಥ
ಅ) ಗುಡುಗು ಆ)ಬಚ್ಚಿಡು ಇ)ನಾವೆ ಈ)ನಾವು
**ಉ:–ನಾವೆ**

9. 'ಬೆಟ್ಟವನ್ನು' ಪದವನ್ನು ಚತುರ್ಥೀ ವಿಭಕ್ತಿಯಲ್ಲಿ ಬರೆದಾಗ
ಅ)ಬೆಟ್ಟಕ್ಕೆ ಆ)ಬೆಟ್ಟದ ಇ)ಬೆಟ್ಟದಿಂದ ಈ)ಬೆಟ್ಟವು
**ಉ:– ಬೆಟ್ಟಕ್ಕೆ**

10. ಕಟ್ಟಾವುದು ಪದದಲ್ಲಿನ ಧಾತು
ಅ) ಬಿಗಿಯುವುದು ಆ) ಉದು ಇ)ಕಟ್ಟೆ ಈ)ಕಟ್ಟು
**ಉ:–ಕಟ್ಟು**

11. ಅಂಕಿತನಾಮ ಪದಕ್ಕೆ ಉದಾಹರಣೆ
ಅ) ವಸಂತ ಆ)ಕುರುಡ ಇ)ಕುಂಟ ಈ)ವಿಜ್ಞಾನಿ
**ಉ:– ವಸಂತ**

12. 'ವಸಂತ' ಪದದ ಅರ್ಥ
ಅ)ಸಂಮೃದ್ಧಿ ಆ)ಹೊಸದು ಇ) ಸಂತ ಈ)ವಂತ
**ಉ:ಹೊಸತು**

13. ಸೇತುವೆ+ಆಗೋಣ ಇಲ್ಲಿರುವ ಸಂಧಿ
ಅ)ಆದೇಶ ಆ) ಆಗಮ ಇ) ಗುಣ ಈ)ಯಣ್ ಸಂಧಿ
**ಉ:– ಆಗಮಸಂಧಿ**

14. ಇಲ್ಲಿರುವ ಕ್ರಿಯಾಪದ

ಅ)ಕಟ್ಟುವುದು ಆ)ಬಿರುಗಾಳಿ ಇ)ಸಪ್ತಮಿ ಈ)ಪಂಚಮಿ

**ಉ:– ಕಟ್ಟುವುದು**

15 ಬಿರುಗಾಳಿಯಲ್ಲಿ ಇದರ ವಿಭಕ್ತಿ

ಅ)ಪ್ರಥಮ ಆ)ಷಷ್ಠಿ ಇ)ಸಪ್ತಮಿ ಈ) ಪಂಚಮಿ

**ಉ:– ಸಪ್ತಮಿ**

16. ದ್ವಿತೀಯ ವಿಭಕ್ತಿ ಕಾರಕಾರ್ಥ

ಅ)ಕಾರಣಾರ್ಥ ಆ)ಸಂಪ್ರದಾಯ ಇ)ಕರ್ಮಾರ್ಥ ಈ)ಅಧಿಕರಣ

**ಉ:–ಕರ್ಮಾರ್ಥ**

17. ಪರೀಕ್ಷೆಯಲ್ಲಿ ಪ್ರಶ್ನೆ ಸುಲಭವಾಗಿ ಬಂದೀತು. ಈ ವಾಕ್ಯದಲ್ಲಿನ ಬಂದೀತು ಎಂಬುದು

ಅ) ಸಂಭವಾನಾರ್ಥಕ ಆ) ವಿದ್ಯರ್ಥಕ ಇ) ಭಾವಾರ್ಥಕ ಈ)ನಿಷೇಧಾರ್ಥಕ

**ಉ: ಸಂಭವಾನಾರ್ಥಕ**

18) ಹಳಗನ್ನಡದ ಪಂಚಮಿ ವಿಭಕ್ತಿ ಪ್ರತ್ಯಯ

ಅ)ಮ್ ಆ)ಳ್ ಇ)ಅಂ ಈ)ಅತ್ತಣಿಂ

**ಉತ್ತರ:– ಅತ್ತಣಿಂ**

19. ಬಿರುಗಾಳಿ ಈ ಪದದಲ್ಲಿರುವ ಸಂಧಿ

ಅ)ಲೋಪ ಆ) ಆಗಮ ಇ)ಆದೇಶ ಈ)ಗುಣ

**ಉ:– ಆದೇಶಸಂಧಿ**

20. **'**ಬಿಡು' **'**ಮಣ್ಣು' ಪದಗಳ ವ್ಯಾಕರಣ ವಿಶೇಷ

ಅ) ಅಕರ್ಮಕ ಆ)ಸಕರ್ಮಕ ಇ)ಧಾತು ಈ) ಅವ್ಯಯ

**ಉ:– ಸಕರ್ಮಕ**

21. ನೋಡು ಧಾತುವಿನ ಸಂಭಾವನಾರ್ಥಕ ರೂಪ

ಅ)ನೋಡಲಿ ಆ) ನೋಡಿಯಾನು ಇ) ನೋಡನು) ಈ)ನೋಡುವುದು

**ಉ:– ನೋಡಿಯಾನು**

22. **'**ಷಷ್ಠಿ' ವಿಭಕ್ತಿಯ ಕಾರಕರ್ಥ

ಅ) ಕರ್ತೃ ಆ)ಕರ್ಮ ಇ)ಅಧಿಕರಣ ಈ)ಸಂಬಂಧ

**ಉ:–ಸಂಬಂಧ**

23. **'**ವಸಂತವಾಗುತ್ತ**'** ಪದವನ್ನು ಬಿಡಿಸಿ ಬರೆದಾಗ

ಅ) ವಸಂತ+ವಾಗುತ್ತಾ ಆ) ವಸಂತ+ಆಗುತ್ತಾ ಇ)ವಸಂತ+ಆಗುತ್ತ ಈ) ವಸಂತ+ವಾಗುವಂತೆ

**ಉ:– ವಸಂತ+ಆಗುತ್ತಾ**

24. **'**ನಿಲ್ಲಿಸು**'** ಇದರ ಧಾತು ರೂಪ

ಅ) ನಿಂತ್ಕೋ ಆ) ನಿಲ್ಲಿ ಇ)ನಿಲ್ಲು ಈ)ಸಲ್ಲು

**ಉ:– ನಿಲ್ಲು**

25. ಹಳಗನ್ನಡ ವಿಭಕ್ತಿ ಪ್ರತ್ಯಯವಿದು

ಅ)ಅಂ ಆ)ಅಲ್ಲಿ ಇ)ಗೆ.ಕ್ಕೆ ಈ)ಇಂದ

**ಉ:–ಅಂ**

# ಘಟಕ ಪರೀಕ್ಷೆ–1

**20–ಅಂಕಗಳು**

**ಅ) ಬಹು ಆಯ್ಕೆಯ ಪ್ರಶ್ನೆಗಳು.** **1*3=3**

1. 'ಮುಂಗಾಲು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಅ) ತತ್ಪುರುಷ ಆ) ಕರ್ಮಧಾರೆಯ ಇ) ಅಂಶಿ ಈ) ದ್ವಂದ
2. 'ಮಾಡಲಿ' ಪದವು ಈ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ
   ಅ) ವಿಧ್ಯರ್ಥಕ ಆ) ಸಂಭಾವನಾರ್ಥಕ ಇ)ನಿಷೇಧಾರ್ಥಕ ಈ) ಪ್ರಶ್ನಾರ್ಥಕ
3. 'ಸೇತುವೆಯಾಗೋಣ' ಪದದಲ್ಲಿ ಆಗಿರುವ ಸಂಧಿ
   ಅ)ಲೋಪ ಆ) ಆಗಮ ಇ) ಆದೇಶ ಈ) ಗುಣ

**ಆ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ**

**1*3=3**

1. ಹಣತೆ : ದೀಪ : ಹಡಗು :......................................
2. ಪ್ರೀತಿಯ : ಷಷ್ಠಿ : ವಿಭಕ್ತಿ :.......................................
3. ನಟ್ಟ ನಡುವೆ : ದ್ವಿರುಕ್ತಿ : ಕಾಡುಮೇಡು :............................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1*3=3**

1. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು ಎಂದು ಕವಿ ಹೇಳಿದ್ದಾರೆ?
2. ಯಾವುದಕ್ಕೆ ಮುಂಗಾರಿನ ಮಳೆಯಾಗ ಬೇಕು ಎಂದು ಕವಿ ಹೇಳುತ್ತಾರೆ?
3. ಯಾವ ಎಚ್ಚರದಲ್ಲಿ ಬದುಕಬೇಕು ಎಂದು ಕವಿ ಹೇಳುತ್ತಾರೆ?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯದಲ್ಲಿ ಉತ್ತರಿಸಿ.** **2*3=6**

1. ಜಿ.ಎಸ್. ಶಿವರುದ್ರಪ್ಪನವರ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ತಿಳಿಸಿ ಬರೆಯಿರಿ?
2. ಹಡಗನ್ನು ಯಾವ ಬೆಳಕಿನಲ್ಲಿ ಮುನ್ನಡೆಸಬೇಕಿದೆ ಎಂದು ಕವಿ ಹೇಳುತ್ತಾರೆ?
3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗ ಬೇಕಿದೆ ಎಂದು ಕವಿ ಹೇಳಿದ್ದಾರೆ?

**ಉ). ಈ ಪದ್ಯ ಭಾಗವನ್ನು ಪೂರ್ಣಗೊಳಿಸಿ?** **1*2=2**

ಮತಗಳೆಲ್ಲವೂ.................................
.........................................ಬಿತ್ತೋಣ

**ಊ) ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ.** **1*3=3**

5) "ಪ್ರೀತಿಯ ಹಣತೆಯ ಹಚ್ಚೋಣ"

# ಘಟಕ ಪರೀಕ್ಷೆ– 2

**20–ಅಂಕಗಳು**

**ಅ) ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **1*3=3**

1. ಕಾಡುಗಳು ಹೇಗೆ ಮುಟ್ಟ ಬೇಕಿದೆ?
2. ನದಿ ಜಲಗಳು ಏನಾಗಿವೆ?
3. ಯಾವುದಕ್ಕೆ ಮುಂಗಾರಿನ ಮಳೆಯಾಗ ಬೇಕು?

**ಆ) ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.** **2*2=4**

1. ಕಾಡುಗಳು ಹೇಗೆ ಮುಟ್ಟ ಬೇಕಿದೆ?
2. ನಾಳಿನ ಕನಸನ್ನು ಬಿತ್ತ ಬೇಕಾದರೆ ನಾವು ಹೇಗೆ ಬದುಕಬೇಕು?

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **3*3=9**

1. "ಮುಂಗಾರಿನ ಮಳೆಯಾಗೋಣ"
2. "ಹೊಸ ಭರವಸೆಗಳ ಕಟ್ಟೋಣ"
3. "ಹೊಸ ಎಚ್ಚರದೊಳು ಬದುಕೋಣ"

**ಈ) ಈ ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.** **1*4=4**

1. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವ ರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

KM

# ಗದ್ಯಪಾಠ 2
# ಶಬರಿ (ಗೀತ ನಾಟಕ)

**ಲೇಖಕರು : ಪು.ತಿ.ನರಸಿಂಹಚಾರ್**
**ಆಕರ ಗ್ರಂಥ : ಏಕಾಂತ ನಾಟಕಗಳು**

**ಲೇಖಕರ ಪರಿಚಯ:**
ಪು.ತಿ.ನ ಎಂದು ಪ್ರಸಿದ್ದರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ ನರಸಿಂಹಾಚಾರ್ ರವರು ಮಂಡ್ಯ ಜಿಲ್ಲೆಯ ಮೇಲುಕೋಟೆ ಎಂಬ ಗ್ರಾಮದಲ್ಲಿ ಜನಿಸಿದ್ದಾರೆ. ಇವರು ಶಬರಿ ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿಜಯ, ಹಂಸ ದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸ ಸರಸ್ವತಿ ಶ್ರೀ ಹರಿಚರಿತೆ, ರಥ ಸಪ್ತಮಿ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿಗಳನ್ನು ಪಡೆದಿದ್ದಾರೆ. (ಮೈ.ವಿ.ವಿ.ದಿಂದ ಡಿ.ಲಿಟ್ ಪದವಿ ದೊರೆತಿದೆ)
ಈ ಗದ್ಯಪಾಠವನ್ನು ಪು.ತಿ.ನ ಅವರ 'ಶಬರಿ' ಗೀತೆ ನಾಟಕದಿಂದ ಆಯ್ದ ಶಬರಿ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಅ) ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಶ್ರೀರಾಮನ ತಂದೆಯ ಹೆಸರೇನು?**
ಉ:– ಶ್ರೀರಾಮನ ತಂದೆಯ ಹೆಸರು ದಶರಥ.

**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**
ಉ:– ಶ್ರೀ ರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂವು, ರುಚಿಕರವಾದ ಹಣ್ಣು ಹಂಪಲುಗಳನ್ನು ಮತ್ತು ಮಧುಪರ್ಕ ಎಂಬ ಪಾನೀಯಗಳನ್ನು ಸಂಗ್ರಹಿಸಿದ್ದಳು.

**3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**
ಉ:– ಮತಂಗಾಶ್ರಮದಲ್ಲಿವಾಸವಿದ್ದ ತಪಸ್ವಿನಿ ಶಬರಿ.

**4. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**
ಉ:– ರಾಮಲಕ್ಷ್ಮಣರಿಗೆ ಮತಂಗಾಶಮಕ್ಕೆ ಹೋಗಲು ಸೂಚಿಸಿದವರು ದನು ಮಹರ್ಷಿ.

**5. ಶಬರಿ ಗೀತ ನಾಟಕದ ಕರ್ತೃ ಯಾರು?**
ಉ:– ಶಬರಿ ಗೀತ ನಾಟಕದ ಕರ್ತೃ ಪು.ತಿ.ನರಸಿಂಹಾಚಾರ್ಯರು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**
ಉ:– ರಾಮನು ಎಲ್ಲೈ ಗಿರಿ ವನವೇ ನಾನು ನಿಮ್ಮನ್ನು ಬೇಡಿ ಕೊಳ್ಳುತ್ತಿದ್ದೇನೆ. ಹೇಳಿರಿ ನನ್ನ ಪ್ರೀತಿಯ ರಾಣಿ ಸೀತೆಯ ದೊರೆಯುವಳೇ? ದೊರೆಯುವುದಿಲ್ಲವೋ? ಅವಳು ಇರುವ ನೆಲ ಯಾರಾದರೂ ತಿಳಿದಿರುವಿರಾ. ನನ್ನ ಹೃದಯ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಗಿರಿ ವನಗಳನ್ನು ಪ್ರಾರ್ಥಿಸುತ್ತಾನೆ.

**2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ?**
ಉ:– ಲಕ್ಷ್ಮಣನು ತಾಳಿಕೋ ಅಣ್ಣ ತಾಳಿಕೋ ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು 0ಯಾರು? ಎಂದು ಅಣ್ಣನನ್ನು ಸಂತೈಸಿದನು.

**3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**
ಉ:– ರಾಮನ ಸ್ವಾಗತಕ್ಕಾಗಿ ಶಬರಿ ಕಡುಸವಿಯಾದ ಬಗೆ ಬಗೆಯ ಹಣ್ಣು–ಹಂಪಲುಗಳನ್ನು ಜೇನು ತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ತಳಿರು, ಸುವಾಸನೆಯಿಂದ ಕೂಡಿದ ಹೂವುಗಳನ್ನು ಸಂಗ್ರಹಿಸಿ ಸಿದ್ಧತೆ ಮಾಡಿಕೊಂಡಿದ್ದಳು.

**4. ಶಬರಿ0ಯು ರಾಮ ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ?**

ಉ:– ರಾಮ–ಲಕ್ಷ್ಮಣರನ್ನು ನೋಡಿದ ಶಬರಿಯು ಕ್ಷಣ ಹೊತ್ತು ಬೆರಗಾದಳು ಬೆರಗು ಕಳೆದು ಬಳಿಕ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಸ್ಪರ್ಶಿಸಿ ಪಾದಕ್ಕೆ ಬಿದ್ದು ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದಿಂದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ರಾಮನನ್ನು ಉಪಚರಿಸಲು ಮಾಡಿದ ಸಿದ್ಧತೆ ಸಾಲದೆಂದು ಮರುಗಿದಳು. ಪರಿಮಳವನ್ನು ಸೂಸುವ ವಿವಿಧ ಹೂವುಗಳಿಂದ ಕಟ್ಟಲಾದ ವನ ಮಾಲೆ0ಯನ್ನು ಕೊರಳಿಗೆ ಹಾಕಿ ಹಿಗ್ಗಿದಳು. ನಾನು ರಾಮನಿಗೆಂದು ತಂದಿರುವ ಹಣ್ಣುಗಳನ್ನು ತಾನೇ ರಾಮ ಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ ನಿಮಗಾಗಿಯೇ ತಂದಿರುವೆ ಎಂದು ತಿನ್ನಲು ಹೇಳಿ ಮಧು ಪರ್ಕವನ್ನು ಕೊಟ್ಟು ಉಪಚಾರ ಮಾಡಿದಳು

**5. ಅತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ ಏನು ಹೇಳೀದರು?**

ಉ: ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ ಕಾಡಿನಲ್ಲಿ ಈ ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರ ಋಣಿಗಳಾಗಿದ್ದೇವೆ. ನಿಮ್ಮ ಅತಿಥ್ಯದಲ್ಲಿ ಸ್ವಲ್ಪವು ಕೊರತೆ ಕಾಣಲಿಲ್ಲ. ನಮ್ಮ ಆಯೋಧ್ಯೆಯ ಅರಮನೆಯಲ್ಲು ಕೂಡ ಇದಕ್ಕಿಂತ ಹಿತವಾದುದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆ0ಯಂದೆ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದು ತಿಳಿದೆವು. ಎಂದು ರಾಮ ಲಕ್ಷ್ಮಣರು ಆತಿಥ್ಯ ಸ್ವೀಕರಿಸಿ ಶಬರಿಗೆ ಹೇಳಿದರು.

**ಇ) ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ**

**1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು"**

**ಆ0ಯ್ಕೆ–** ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಗೀತ ನಾಟಕ ದಿಂದ ಆ0ಯ್ದ 'ಶಬರಿ' ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಮತಂಗಾಶ್ರಮದಲ್ಲಿ ರಾಮನ ದರ್ಶನಕ್ಕಾಗಿ ಶಬರಿ ಕಾಯುತ್ತಿರುತ್ತಾಳೆ ಅದೇ ಸಮಯದಲ್ಲಿ ಸೀತೆಯನ್ನು ಕಳೆದುಕೊಂಡಿದ್ದ ರಾಮನು ಲಕ್ಷ್ಮಣನೊಂದಿಗೆ ಅವಳನ್ನು ಅರಸುತ್ತ ಆಶ್ರಮದ ಸಮೀಪಕ್ಕೆ ಬರುತ್ತಾನೆ. ರಾಮನು ಸೀತೆಗಾಗಿ ಹಂಬಲಿಸುತ್ತ ಶೋಕಿಸುತ್ತಿರುವಾಗ ಲಕ್ಷ್ಮಣನು ಅಣ್ಣನನ್ನು ಸಮಾಧಾನಿಸುತ್ತಾನೆ. ತನ್ನಿಂದಲೇ ಸೀತೆಗೆ ಈ ದುರ್ಗತಿ ಬಂತೆಂದು ತಾನು ದುಃಖಿಸುತ್ತಾನೆ. ಆಗ ರಾಮನು ಲಕ್ಷ್ಮಣನ್ನು ಸಮೀಪಿಸಿ ಧನು ಹೇಳಿದ ದಾರಿಯಲ್ಲಿಯೇ ನಾವು ಬಂದಿರುವೆವೋ ಇಲ್ಲವೋ ಇದು ಶ್ರಮಣಿಯಾಶ್ರಮವೇ ಎಂದು ಆಲೋಚಿಸುತ್ತಿರುವಾಗ ತಮ್ಮೆಡೆಗೆ ಬರುತ್ತಿರುವ ಶಬರಿಯನ್ನು ನೋಡಿ ರಾಮನು ಲಕ್ಷ್ಮಣನಿಗೆ ಈ ಮೇಲಿನಂತೆ ಹೇಳುತ್ತಾನೆ.

**ಸ್ವಾರಸ್ಯ:–** ಶ್ರೀ ರಾಮನ ದರ್ಶನಕ್ಕಾಗಿ ಕಾತರಿಸಿದ್ದ ಶಬರಿಯ ಸ್ಥಿತಿಯನ್ನು ದೂರದಿಂದ ಗಮನಿಸಿದ ರಾಮನ ಕೂತೂಹಲದ ಪ್ರಶ್ನೆ ಸ್ವಾರಸ್ಯ ಪೂರ್ಣವಾಗಿದೆ.

**2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ"**

**ಆ0ಯ್ಕೆ–** ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಗೀತ ನಾಟಕ ದಿಂದ ಆ0ಯ್ದ 'ಶಬರಿ' ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ಮತಂಗಾಶ್ರಮದಲ್ಲಿ ಶಬರಿ ರಾಮನ ಆಗಮನಕ್ಕಾಗಿ ಕಾಯುತ್ತಿರುತ್ತಾಳೆ ಹೂ ಹಣ್ಣು ಹಂಪಲುಗಳನ್ನು ತಂದು ರಾಮನನ್ನು ಸತ್ಕರಿಸ ಬೇಕೆಂಬ ಅಪೇಕ್ಷೆಯಲ್ಲಿ ಶಬರಿ ಕಾತರಿಸುತ್ತಿದ್ದ ಸಂದರ್ಭದಲ್ಲಿಯೇ ಧನುವಿನ ಹೇಳಿಕೆಯಂತೆ ಸೀತೆಯನ್ನು ಅರಸುತ್ತ ರಾಮಲಕ್ಷ್ಮಣರು ಆಶ್ರಮದ ಸಮೀಪ ಬರುತ್ತಾರೆ. ಶಬರಿ ರಾಮನನ್ನು ಉಪಚರಿಸುವ ಉತ್ಸುಕತೆಯಿಂದ ಕಾದಿರುವುದನ್ನು ನೋಡಿ ರಾಮನು ಲಕ್ಷ್ಮಣನಿಗೆ ಧನುವು ಹೇಳಿದ ಶಬರಿ ಇವಳೇ ಇರಬಹುದೆಂದು ಈಕೆಗೆ ನನ್ನಿಂದ ಯಾವುದೇ ಉಪಕಾರವಿಲ್ಲದಿದ್ದರೂ ನನ್ನನ್ನು ನೆನೆಯುತಿಹಳೆಂದು, ಇವಳ ಪ್ರೀತಿಗೆ ನಾಚುತಿಹನೆಂದು, ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ.

**ಸ್ವಾರಸ್ಯ:–** ಕಾಡಿನ ಮಧ್ಯೆ ರಾಮ ಲಕ್ಷ್ಮಣರನ್ನು ಉಪಚರಿಸಿದ ಶಬರಿಯ ಭಕ್ತಿ ಭಾವ ನೋಡಿ ಸಂತೋಷ ತಾಳುವ ರಾಮನ ಮನಸ್ಥಿತಿ ಸ್ವಾರಸ್ಯ ಪೂರ್ಣವಾಗಿದೆ.

3. **"ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆವುದೇ?**

**ಆಯ್ಕೆ:– ಆ0ಯ್ಕೆ–** ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ **'ಶಬರಿ'** ಗೀತ ನಾಟಕ ದಿಂದ ಆ0ಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಮತಂಗ ಋಷಿಯ ಆಶ್ರಮದಲ್ಲಿ ರಾಮನ ದರ್ಶನಕ್ಕಾಗಿ ಹಂಬಲಿಸುತ್ತ ಶಬರಿ ರಾಮನಿಗೆ ಕೊಡಲು ತಂದಿರಿಸಿದ ಹೂ ಹಣ್ಣುಗಳು ಅವನನ್ನು ತಲುಪದೇ ಹೋದುದಕ್ಕೆ ಬೇಸರಿಸುತ್ತ ಪುನಃ ಪುನಃ ಹೊಸತನ್ನು ಆರಿಸಿ ತಂದು ರಾಮನಿಗೆ ಕೊಡಲು ಕಾತರಿಸುತ್ತಿರುತ್ತಾಳೆ, ರಾಮನ ಗುಣಗಾನ ಮಾಡುತ್ತ ಅವನಿಗಾಗಿ ಕಟ್ಟಿದ ಹೂ ಮಾಲೆಗೆ ಮುತ್ತಿಡುವ ಸಂದರ್ಭದಲ್ಲಿ ಅಲ್ಲಿಗೆ ಆಗಮಿಸುವ ರಾಮನು ಶಬರಿಯನ್ನು ಕುರಿತು ಈ ಮೇಲಿನಂತೆ ಪ್ರಶ್ನಿಸುವನು.

**ಸ್ವಾರಸ್ಯ:–** ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನ ವಿನಯದಿಂದ ಕೂಡಿದ ನಡುವಳಿಕೆ ಬಹು ಸ್ವಾರಸ್ಯ ಪೂರ್ಣವಾಗಿದೆ.

4. **"ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"**

**ಆ0ಯ್ಕೆ–** ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ **'ಶಬರಿ'** ಗೀತ ನಾಟಕ ದಿಂದ ಆ0ಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ರಾಮನ ದರ್ಶನಕ್ಕಾಗಿ ಕಾಯುತ್ತಿದ್ದ ಶಬರಿಯು ರಾಮನಿಂದ ಮೋಕ್ಷವನ್ನು ಪಡೆದು ಧನ್ಯಳಾದಳು ಶಬರಿಯನ್ನು ಕುರಿತು ಲಕ್ಷ್ಮಣನು ಶಬರಿಯ ಮಗುವಿನ ರೀತಿಯ ಪ್ರೀತಿ ನಿನ್ನನ್ನು ನೋಡಿ ನಲಿಯುತ್ತ ಕೊನೆಗೆ ನಮ್ಮನ್ನೇ ಮರೆತಳು. ಎಂದು ರಾಮನಿಗೆ ಹೇಳಿದಾಗ ಬೆಳಕಿನ ನಿರೀಕ್ಷೆ ಇರುವವರಿಗೆ ಬತ್ತಿ ತಾನು ಉರಿದು ಕಪ್ಪಾಗಿ ಲೋಕಕ್ಕೆ ಬೆಳಕು ನೀಡುವುದು ಅರ್ಥ ವಾಗುವುದಿಲ್ಲ. ಆದರೆ ಬೆಳಕು ನೀಡುವವರು ಶಬರಿಯ ರೀತಿ ಇರುವವರು ಎಂದು ರಾಮನು ಶಬರಿಯನ್ನು ಕುರಿತು ಲಕ್ಷ್ಮಣನಿಗೆ ಹೇಳುತ್ತಾನೆ.

**ಸ್ವಾರಸ್ಯ:–** ದೀಪದ ಬೆಳಕನ್ನು ಪಡೆದು ಕೊಳ್ಳುವವರು ಬತ್ತಿಯ ತ್ಯಾಗವನ್ನು ಅರಿಯಲಾರರು ಶಬರಿಯ ರಾಮ ಭಕ್ತಿಯ ಶ್ರೇಷ್ಠತೆಯನ್ನು ಬಹು ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

5. **"ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"**

ಆಯ್ಕೆ:– ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ರವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ:– ಈ ಮಾತನ್ನು ಶಬರಿಯು ರಾಮನಿಗೆ ಹೇಳುತ್ತಾಳೆ. ಶಬರಿಯ ಆತಿಥ್ಯ ಸ್ವೀಕರಿಸಿದ ರಾಮನು **"**ನಮ್ಮ ಆಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಎಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೇ ತಿಳಿದೆವು**"** ಎಂದು ಶಬರಿಗೆ ಹೇಳಿದಾಗ ಶಬರಿ, **"ನಿನ್ನ ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"** ನಾನು ಇಂದು ಧನ್ಯಳಾಗಿದ್ದೇನೆ ಎಂದು ರಾಮನಿಗೆ ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ:– **"ರಾಮ ನಿನ್ನ ರೂಪದಂತೆ ಮಾತು ಕೂಡ ಎಷ್ಟೊಂದು ಧಾರಾಳವಾಗಿದೆ"** ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾಳೆ.

**ಈ) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಉ:– ಮತಂಗ ಮಹರ್ಷಿಗಳಿಂದ ರಾಮನ ದರ್ಶನದಿಂದಲೇ ಮೋಕ್ಷ ಸಿದ್ಧಿ ಎಂಬ ವರವನ್ನು ಪಡೆದಿದ್ದ ಶಬರಿ ರಾಮನ ಬರುವಿಕೆಗಾಗಿ ಕಾದಿದ್ದಳು. ಶಬರಿಯ ಎಷ್ಟೋ ವರ್ಷಗಳ ಕಾಯುವಿಕೆಯ ತಪಸ್ಸು ಕೊನೆಗೂ ಈಡೇರುವಂತೆ ರಾಮನ ದರ್ಶನದ ದಿನ ಸಮೀಪಿಸಿತು. ರಾಮ ಬರುವನೆಂದು ಶಬರಿ ಹೂ ಹಣ್ಣುಗಳನ್ನು ತಂದು ದಿನವೂ ಕಾಯುತ್ತಿದ್ದಳು. ಅಂತೂ ಶಬರಿಯ ಆಸೆ ಪೂರೈಸಲೋ, ಎಂಬಂತೆ ಸೀತೆಯನ್ನು ಅರಸುತ್ತ ರಾಮ ಲಕ್ಷ್ಮಣ ಸಮೇತವಾಗಿ ಮತಂಗಾಶ್ರಮಕ್ಕೆ ಬಂದನು. ಅಲ್ಲಿ ತನಗಾಗಿ ಕಾದಿದ್ದ ಶಬರಿಯು ನೀಡಿದ

ಹೂ ಹಣ್ಣುಗಳ ಸೇವೆ ಉಪಚಾರದಿಂದ ರಾಮ ಸಂತಸ ಭರಿತನಾದನು. ರಾಮನ ದರ್ಶನದಿಂದ ಶಬರಿಗೆ ಪರಮಾನಂದವಾಯಿತು. ನಾನು ಸುಖಿ ಪರಮ ಸುಖಿ, ಇಂದೆನಗೆ ಬಲು ಸಂತಸವಾಗಿದೆ ಎಂದು ಹಿಗ್ಗಿ ಹಾಡುವಳು. ರಾಮನ ದಿವ್ಯ ದರ್ಶನ. ವಿನಯಾದರ ತುಂಬಿದ ಮಾತುಗಳನ್ನು ಕೇಳಿ ಶಬರಿ ತಾನು ಧನ್ಯಳಾದೆನೆಂದು ರಾಮನ ದರ್ಶನದ ಪುಣ್ಯ ಲಭಿಸಿ ತನ್ನ ಚಿಂತೆಯಲ್ಲ ಹಿಂಗಿ ಹೋಯಿತೆಂದು ಧನ್ಯತಾಭಾವವನ್ನು ತಾಳಿದಳು.

**2. ಶಬರಿಯ ಸಡಗರ, ಸಂತೋಷವು ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?**

ಉ:– ಸೀತೆಯನ್ನು ಅರಸುತ್ತಾ ರಾಮಲಕ್ಷ್ಮಣರು ಮತಂಗಾಶ್ರಮದ ಬಳಿ ಶಬರಿ ಇರುವಲ್ಲಿಗೆ ಬರುತ್ತಾರೆ. ರಾಮ ಬಂದು ಎದುರಿಗೆ ನಿಂತಿರುವುದನ್ನು ನೋಡಿದ ಶಬರಿ ಬೆರಗಾದಳು. ಬಳಿಕ ಸಾವರಿಸಿಕೊಂಡು ಅವನ ಸನಿಹ ಬಂದು ಅವನ ಮೈಯನ್ನು ಸ್ಪರ್ಶಿಸಿದಳು. ಅವನ ಕಾಲಿಗೆ ಬಿದ್ದು ನಮಸ್ಕರಿಸಿದಳು ರಾಮನ ಕೈಗಳನ್ನು ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಬಳಿ ಕರೆದು ಆದರಿಸಿದಳು. ಅಯ್ಯೋ ಏನು ಸಿದ್ಧತೆಯೆ ಇಲ್ಲ. ನಿನ್ನೆಯಷ್ಟು ಚೆನ್ನಾಗಿರುವ ಹೂ ಹಣ್ಣುಗಳು ದೊರೆತೇ ಇಲ್ಲ ಎಂದು ತಳಮಳಿಸಿದಳು. ತನ್ನ ಮನದ ಬಯಕೆಯಂತೆ ಸುಮಧುರ ಪರಿಮಳ ಬೀರುವ ಹೂಗಳ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ನಲಿದಳು ಇಷ್ಟು ರುಚಿಯಾಗಿರುವ ಹಣ್ಣು ಜಗತ್ತಿನಲ್ಲಿಯೇ ಇಲ್ಲ ಎಂದು ನಿಮಗೋಸ್ಕರವಾಗಿಯೆ ತಂದೆನೆಂದು ಅವರ ಕೈಯೊಳಗಿಟ್ಟು ಆದರಿಸಿದಳು. ರಾಮ ಲಕ್ಷ್ಮಣರು ಶಬರಿಯ ಆತಿಥ್ಯದಿಂದ ಸಂತೃಪ್ತರಾದಾಗ ಶಬರಿಯಲ್ಲಿ ಧನ್ಯತಾಭಾವ ಮೂಡುವುದು ಹೀಗೆ ಶಬರಿ0ಯ ಸಡಗರ, ಸಂತೋಷವನ್ನು ಮೇಳದವರು ಹಾಡಿನಲ್ಲಿ ವರ್ಣಿಸುತ್ತಾರೆ.

**3. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?**

ಉ:– ಶಬರಿ ಬೇಡರಾಜನ ಮಗಳು. ಆಕೆ ಮತಂಗಾಶ್ರಮದಲ್ಲಿ ಬಂದು ಇದ್ದಳು. ಮತಂಗ ಋಷಿಗಳಿಗೆ ನಿಷ್ಠೆಯಿಂದ ಸಲ್ಲಿಸಿದ ಸೇವೆಯ ಫಲವಾಗಿ ಶ್ರೀ ರಾಮನ ದರ್ಶನದಿಂದ ಅವಳಿಗೆ ಮುಕ್ತಿ ಎಂಬ ವರವನ್ನು ಅವರಿಂದ ಪಡೆದಿದ್ದಳು. ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಇವಳೂ ಒಬ್ಬಳಾಗಿದ್ದಳು. ಮತಂಗ ಋಷಿಗಳು ದಿವ್ಯ ಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು. ಪ್ರತಿದಿನವೂ ಹೊಸ ಹೂ ಹಣ್ಣುಗಳನ್ನು ತಂದು ರಾಮನು ಬಂದಾಗ ಅವನಿಗೆ ಅರ್ಪಿಸ ಬೇಕೆಂದು ಕಾಯುತ್ತಿದ್ದಳು, ರಾಮ ಬಾರದೇ ತನಗೇನೂ ತೋರದೆಂದು ಅವನು ಸವಿದಲ್ಲದೇ ಈ ಹಣ್ಣುಗಳು ಸವಿಯಾಗದೆಂದು ಪರಿತಪಿಸುತ್ತಿದ್ದಳು. ಸೀತಾಪಹರಣವಾದ ನಂತರ ಶೋಕತಪ್ತರಾದ ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಗಳಾದ ಧನು ಎಂಬುವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತಿದ್ದ ಶಬರಿಯನ್ನು ದರ್ಶಿಸುತ್ತಾರೆ. ತನ್ನ ಆರಾಧ್ಯ ದೈವ ಶ್ರೀರಾಮನನ್ನು ಕಂಡು ಆನಂದಿಸಿ ಧನ್ಯತೆಯ ಭಾವನೆಯಿಂದ ಮುಕ್ತಿ0ಯನ್ನು ಬ0ಯಸಿದ ಶಬರಿಗೆ ಶ್ರೀರಾಮನು ಮುಕ್ತಿ0ಯನ್ನು ಕರುಣಿಸಿದನು. ಹಾಗೆ ತಾಳುವಿಕೆಗಿಂತ ತಪವಿಲ್ಲ ಎನ್ನುವ ಹಾಗೆ ಶಬರಿ ಶ್ರೀರಾಮನಿಗೋಸ್ಕರ ಕಾದು ಕೆಡಲಿಲ್ಲ. ಆದ್ದರಿಂದ ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿ ಪರಿಣಮಿಸಿತು.

**ಉ) ಹೊಂದಿಸಿ ಬರೆಯಿರಿ**

| | **'ಅ' ಪಟ್ಟಿ** | **'ಬ'ಪಟ್ಟಿ** | **ಉತ್ತರಗಳು** |
|---|---|---|---|
| 1. | ಮತಂಗ | ಸೀತೆ | **ಆಶ್ರಮ** |
| 2. | ಪು.ತಿ.ನ | ಆಶ್ರಮ | **ಮೇಲುಕೋಟೆ** |
| 3. | ದಶರಥ | ಮೇಲುಕೋಟೆ | **ರಾಮ** |
| 4. | ಚಿತ್ರಕೂಟ | ಪರ್ವತ | **ಪರ್ವತ** |
| 5. | ಭೂಮಿಜಾತೆ | ರಾಮ | **ಸೀತೆ** |
| | | ಅರಣ್ಯ | |

## ಭಾಷಾ ಚಟುವಟಿಕೆ

**1.** ಕನ್ನಡ ಸಂಧಿಗಳನ್ನು ಹೆಸರಿಸಿ, ಉದಾಹರಣೆಗಳನ್ನು ಬರೆಯಿರಿ.

ಉ ಕನ್ನಡ ಸಂಧಿಗಳು– 1. ಲೋಪಸಂಧಿ 2. ಆಗಮ ಸಂಧಿ 3. ಆದೇಶ ಸಂಧಿ

| | | | | | |
|---|---|---|---|---|---|
| **ಲೋಪ ಸಂಧಿಗೆ ಉದಾ:** | ನಮ್ಮ | + | ಎಡೆಗೆ | = | ನಮ್ಮೆಡೆಗೆ |
| | ಬನದ | + | ಒಳಕ್ಕೆ | = | ಬನದೊಳಕ್ಕೆ |
| | ಊರು | + | ಊರು | = | ಊರೂರು |
| | ಬಲ್ಲೆನು | + | ಎಂದು | = | ಬಲ್ಲೆನೆಂದು |
| | ಮಾತು | + | ಅಂತ | = | ಮಾತಂತು |
| | ಸಂಪನ್ನರು | + | ಆದ | = | ಸಂಪನ್ನರಾದ |
| **ಆಗಮ ಸಂಧಿಗೆ ಉದಾ:** | ಕೈ | + | ಅಲ್ಲಿ | = | ಕೈಯಲ್ಲಿ |
| | ರಕ್ಷೆ | + | ಇಡಲಿ | = | ರಕ್ಷೆಯಿಡಲಿ |
| | ಮಳೆ | + | ಇಂದ | = | ಮಳೆಯಿಂದ |
| | ಶಾಲೆ | + | ಅಲ್ಲಿ | = | ಶಾಲೆಯಲ್ಲಿ |
| | ಗೋ | + | ಅದು | = | ಗೋವದು |
| | ಮಗು | + | ಇಗೆ | = | ಮಗುವಿಗೆ |
| | ಮರ | + | ಅನ್ನು | = | ಮರವನ್ನು |
| **ಆದೇಶ ಸಂಧಿಗೆ ಉದಾ:** | ಕಣ್ | + | ಪನಿ | = | ಕಂಬನಿ |
| | ತೇಜ | + | ಕಡೆ | = | ತೇಜಗೆಡೆ |
| | ಮಳೆ | + | ಕಾಲ | = | ಮಳೆಗಾಲ |
| | ಮೈ | + | ತೋರು | = | ಮೈದೋರು |
| | ಹೂ | + | ತೋಟ | = | ಹೂದೋಟ |
| | ಬೆನ್ | + | ಪತ್ತು | = | ಬೆಂಬತ್ತು |
| | ಕಡು | + | ಬೆಳ್ಪು | = | ಕಡುಬೆಳ್ಪು |

**2.** **ಸಂಸ್ಕೃತ ಸಂಧಿಗಳ ಹೆಸರುಗಳನ್ನು ಸ್ವರ ಮತ್ತು ವ್ಯಂಜನ ಸಂಧಿಗಳಾಗಿ ವಿಂಗಡಿಸಿ ಬರೆಯಿರಿ.**

ಉ: ಸಂಸ್ಕೃತ ಸ್ವರ ಸಂಧಿಗಳು – 1. ಸವರ್ಣದೀರ್ಘ ಸಂಧಿ
2. ಗುಣ ಸಂಧಿ
3. ವೃದ್ಧಿ ಸಂಧಿ
4. 0ಯಣ್ ಸಂಧಿ

ಸಂಸ್ಕೃತದ ವ್ಯಂಜನ ಸಂಧಿಗಳು 1. ಜಶ್ತ್ವ ಸಂಧಿ
2. ಶ್ಚುತ್ವ ಸಂಧಿ
3. ಅನುನಾಸಿಕ ಸಂಧಿ

**3.** **ಕೊಟ್ಟಿರುವ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿ.**

| | | | | |
|---|---|---|---|---|
| ಸುರ್ | + | ಅಸುರ | = ಸುರಾಸುರ | –ಸವರ್ಣದೀರ್ಘ ಸಂಧಿ |
| ಬಲ್ಲೆನು | + | ಎಂದು | = ಬಲ್ಲೆನೆಂದು | – ಲೋಪ ಸಂಧಿ |
| ಸೂ0ರ್ಯ | + | ಉದಯ | = ಸೂರ್ಯೋದಯ | – ಗುಣ ಸಂಧಿ |
| ಮಳೆ | + | ಕಾಲ | = ಮಳೆಗಾಲ | – ಆದೇಶ ಸಂಧಿ |
| ಅಷ್ಟ | + | ಐಶ್ವರ್ಯ | = ಅಷ್ಟೈಶ್ವರ್ಯ | – ವೃದ್ಧಿ ಸಂಧಿ |
| ವೇದಿ | + | ಅಲ್ಲಿ | = ವೇದಿ0ಯಲ್ಲಿ | – ಆಗಮಸಂಧಿ |

**ಆ) ಮೊದಲೆರಡು ಪದಗಳಿಗಿರುವ ಸಂಬಂದಂತೆ ಮೂರನೇ0ು ಪದಕ್ಕೆ ಸರಿ0ಯಾದ ನಾಲ್ಕನೆ0ು ಪದ ಬರೆಯಿರಿ:**

1. ನಮೋ ನಮೋ : ದ್ವಿರುಕ್ತಿ : : ಧೀರಶೂರ : ________ **ಉ: ಜೋಡುನುಡಿ**
2. ಲೋಪಸಂಧಿ : ಸ್ವರಸಂಧಿ : : ಆದೇಶ ಸಂಧಿ : ________ **ಉ: ವ್ಯಂಜನ ಸಂಧಿ**
3. ಕಟ್ಟಕಡೆಗೆ : ಕಡೆಕಡೆಗೆ : : ಮೊತ್ತಮೊದಲು : ________ **ಉ: ಜಶ್ತ್ವ ಸಂಧಿ**
4. ಶರಶ್ಚಂದ್ರ : ಶ್ಚುತ್ವ ಸಂಧಿ : : ದಿಗಂತ : ________ **ಉ: ಜಶ್ತ್ವ ಸಂಧಿ**

## ಬಹು ಆ0ುಕ್ಕೆ ಪ್ರಶ್ನೆಗಳು

**1.** **‘ಶ್ರಮಣಿ’** ಪದದ ಅರ್ಥ
ಅ)ಋಷಿ ಆ) ತಪಸ್ವಿನಿ ಇ) ತಪಸ್ಸು ಈ) ರಾಜ
**ಉ: ಆ) ತಪಸ್ವಿನಿ**

2. **‘ಸನ್ಮಂಗಳ’** ಈ ಪದ ಬಿಡಿಸಿ ಬರೆದಾಗ ಆಗುವ ರುಪ
ಅ) ಪ್ರೀತಿ ಆ) ಸತ್ + ಮಂಗಳ ಇ) ಸನು + ಮಂಗಳ ಈ) ಸ + ಮಂಗಳ
**ಉ: ಆ) ಸತ್ + ಮಂಗಳ**

3. **‘ಅರ್ತಿ’** ಪದದ ವಿರುದ್ಧ ಪದ
ಅ) ಪ್ರೀತಿ ಆ) ಅತಿ0ುಾದ ಇ) ದ್ವೇಷ ಈ) ಸ್ನೇಹ
**ಉ: ಇ) ದ್ವೇಷ**

4. **‘ಮತಂಗಾಶ್ರಮ’** ಈ ಪದದಲ್ಲಿನ ಸಂಧಿ
ಅ) ಲೋಪ ಸಂಧಿ ಅ) ಸವರ್ಣದೀರ್ಘ ಸಂಧಿಇ) ಗುಣ ಸಂಧಿ ಈ) ಆದೇಶ ಸಂಧಿ
**ಉ: ಆ) ಸವರ್ಣದೀರ್ಘ ಸಂಧಿ**

5. **‘ಪೇಳ್’** ಪದದ ಹೊಸಗನ್ನಡ ರೂಪ
ಅ) ಕೇಳಿ ಆ) ಏಳಿ ಇ) ಹೇಳಿ ಈ) 0ುೇಳಿ
**ಉ: ಇ) ಹೇಳಿ**

6. **‘ಹೂ ಹಣ್ಣು ತಳಿರು’** ಪದವು ಈ ಸಮಾಸಕ್ಕೆ ಉದಾಹರಣೆ0ುಾಗಿದೆ
ಅ) ದ್ವಂದ್ವ ಆ) ಕರ್ಮಧಾರೆ0ು ಇ) ಅಂಶಿ ಈ) ದ್ವಿಗು
**ಉ: ಅ) ದ್ವಂದ್ವ**

7. **‘ನಿತ್ಯ’** ಇದರ ತದ್ಭವ ರೂಪ
ಅ) ನೆಚ್ಚ ಆ) ನಿತ್ತ ಇ) ನಿಚ್ಚ ಈ) ಸತ್ಯ
**ಉ: ಇ) ನಿಚ್ಚ**

8. **‘ಚಂದ್ರಾಂಗನೇ, ಶೋಕದುಲ್ಕೆ’** – ಈ ಅಲಂಕಾರಕ್ಕೆ ಉದಾಹರಣೆ
ಅ) ರೂಪಕ ಆ) ಉಪಮಾ ಇ) ಉತ್ಪ್ರೇಕ್ಷೆ ಈ) ದೃಷ್ಟಾಂತ
**ಉ: ಅ) ರೂಪಕ**

9. **‘ಅನುಜ’** ಇದರ ಅನ್ಯಲಿಂಗ ರೂಪ
ಅ)ಸುತೆ ಆ)ತಮ್ಮ ಇ)ಅನುಜೆ ಈ)ವತ್ಸ
**ಉ: ಇ)ಅನುಜೆ**

10. **‘ಉದರಮುಖ’** ಇದು ಈ ನಾಮಪದಕ್ಕೆ ಉದಾಹರಣೆ
ಅ) ಅಂಕಿತನಾಮ ಆ) ಭಾವನಾಮ ಇ)ಅನ್ವರ್ಥನಾಮ ಈ)ರೂಢನಾಮ
**ಉ:– ಇ) ಅನ್ವರ್ಥನಾಮ**

11. **‘ಧನು ಪೇಳ್ದದಾರಿಯೊಳೆ ನಾವು ಬಂದಿಹೆವೆ’**–ಈ ವಾಕ್ಯದ ಕೊನೆಯಲ್ಲಿ ಬರಬೇಕಾದ ಲೇಖನ ಚಿಹ್ನೆ
ಅ) ಪೂರ್ಣವಿರಾಮ ಆ) ಭಾವಸೂಚಕ ಈ) ಉದ್ಧರಣ ಈ) ಪ್ರಶ್ನಾರ್ಥಕ
**ಉ:– ಇ) ಉದ್ಧರಣ**

12 ‘ರಾಮಲಕ್ಷ್ಮಣ’ರು ಪದವು ಈ ಸಮಾಸಕ್ಕೆ ಸೇರಿಸಿ
ಅ) ಕರ್ಮಧಾರೆ ಆ) ತತ್ಪುರುಷ ಇ)ದ್ವಂದ್ವ ಈ)ದ್ವಿಗು
**ಉ:– ಇ) ದ್ವಂದ್ವ**

13. **'ಶೋಕದುಲ್ಕೆ'** ಈ ಸಂಧಿಗೆ ಸೇರಿದೆ

ಅ) ಆದೇಶ ಆ) ಲೋಪಸಂಧಿ ಇ) ಆದೇಶ ಈ)ಯಣ್‌ಸಂಧಿ

ಉ: ' **ಆ) ಲೋಪಸಂಧಿ**

14. **'ದಿಟ್ಟಿ'** ಪದದ ತತ್ಸಮ ರೂಪ

ಅ) ದಿಟ್ಟಿ ಆ) ದಿಟ್ಟ ಇ)ದೃಷ್ಠಿ ಈ) ಮುಷ್ಠಿ

ಉ: **ಇ)ದೃಷ್ಠಿ**

15. **'ತಪಸ್ವಿ'** ಪದದ ತತ್ಸಮ ರೂಪ

ಅ)ತಪಸಿ ಆ)ತಪಸ್ವಿನಿ ಇ) ತವನಿ ಈ)ತವಸ

ಉ: **ಇ)ತವಸಿ**

16. **'ಐದಿ'** ಪದದ ಅರ್ಥ

ಅ) ಕಾಡು ಆ) ಆಸರೆ ಇ)ಹೋಗಿ ಈ) ವೇದಿ

ಉ: **ಇ)ಹೋಗಿ**

17. **'ಬಾ ಬಾ'** ಇದು ಈ ವ್ಯಾಕರಣಾಂಶವಾಗಿದೆ

ಅ) ಕ್ರಿಯೆ ಆ)ಅನುಕರಣಾವ್ಯಯ ಇ) ದ್ವಿರುಕ್ತಿ ಈ)ಜೋಡಿನುಡಿ

ಉ: **ಇ) ದ್ವಿರುಕ್ತಿ**

18. **'ಉಪಕಾರ'** ಇದರ ವಿರುದ್ಧಾರ್ಥಕ ಪದ

ಅ) ಪರೋಪಕಾರ ಆ)ಪ್ರತ್ಯುಪಕಾರ ಇ)ಪ್ರತೀಕಾರ ಈ)ಅಪಕಾರ

ಉ: **ಈ)ಅಪಕಾರ**

19. **'ನಾನಾರ್ಗೀವೆ'** ಪದವನ್ನು ಹೊಸಗನ್ನಡದಲ್ಲಿ ಬರೆದಾಗ

ಅ)ನಾನು ಯಾರಿಗೆ ಆ) ನಾನು ಯಾರಿಗೆ ನೀಡಲಿ ಇ)ನಾನು ಯಾರು ಈ) ನಾನು ಯಾರಿಗೆ ಇವೆ

ಉ:– **ಆ) ನಾನು ಯಾರಿಗೆ ನೀಡಲಿ**

20. **'ಮಿಗಿಲಾತ್ಮ'** ಈ ಪದದಲ್ಲಿನ ಸಂಧಿ

ಅ)ಆದೇಶ ಆ)ಲೋಪ ಇ)ಆಗಮ ಈ)ಗುಣ

ಉ: **ಆ)ಲೋಪ**

21. **'ಪರ್ಣ'** ಪದಕ್ಕೆ ತದ್ಭವ ರೂಪ ಇದು

ಅ)ವರ್ಣ ಆ)ಪ್ರಾಣ ಇ)ಪ್ರಣ ಈ)ಪರಾಣ

ಉ: **ಈ)ಪರಾಣ**

22. **'ಪರಿಕಿಸು'** ಪದದ ತತ್ಸಮ ರೂಪ

ಅ)ಪರೀಕ್ಷೆ ಆ)ಪರೀಕ್ಷಾ ಇ)ಪರೀಕ್ಷಿಸು ಈ)ಪರೀಷೆ

ಉ: **ಇ)ಪರೀಕ್ಷಿಸು**

23. **'ಪ್ರೀತಿಗೆ'** ಸಮಾನಾರ್ಥ ಪದ

ಅ)ಹಾದರ ಆ)ಆದರ ಇ)ಅದರ ಈ)ಹದರ

ಉ: **ಆ)ಆದರ**

24. **'ಗುಣಿತಾಕ್ಷರ'** ಪದ ಇದು

ಅ) ಕೈಯೊಳು ಆ)ತಮ್ಮ ಇ)ಎನ್ನ ಈ) ಪ್ರವೇಶ

ಉ: **ಅ) ಕೈಯೊಳು**

25. **'ಉಷ್ಣ'** ಇದು ಈ ಕೆಳಗಿನ ಪದವಾಗಿದೆ

ಅ) ಸಜಾತಿ ಪದ ಆ)ವಿರುದ್ಧ ಪದ ಇ) ವಿಜಾತಿ ಪದ ಈ) ಗುಣಿತಾಕ್ಷರ

ಉ: **ಇ) ವಿಜಾತಿ ಪದ**

# ಘಟಕ ಪರೀಕ್ಷೆ –1

**20–ಅಂಕಗಳು**

**ಅ) ಬಹು ಆಯ್ಕೆಯ ಪ್ರಶ್ನೆಗಳು** 1 x 3 = 3

1. ಇವುಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳಿಂದ ಕೂಡಿದ ಪದ
   ಅ) ಹವಳ ಆ) ಕಥನ ಇ)ಜನಕ ಈ)ಗಮನ
2. ಇವುಗಳಲ್ಲಿ ಸಜಾತಿಯ ಸಂಯುಕ್ತಾಕ್ಷರದಿಂದ ಕೂಡಿದ ಪದ
   ಅ) ಉಷ್ಣತೆ ಆ) ಅಕ್ಷರ ಇ)ಕಜ್ಜಾಯ ಈ)ಶಸ್ತ್ರಾಸ್ತ್ರ
3. ತೇಜಗೆಡೆ ಪದದಲ್ಲಿ ಆಗಿರುವ ಸಂಧಿ
   ಅ) ಲೋಪ ಆ)ಆಗಮ ಇ)ಆದೇಶ ಈ)ಪ್ರಕೃತಿಭಾವ

**ಆ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1 x 3 = 3

1. ದೃಷ್ಟಿ : ದಿಟ್ಟಿ :: ತಪಸ್ವಿ :................
2. ಹಸುಳೆ : ಮಗು :: ಹಳುವು :........................
3. ಮತಂಗಾಶ್ರಮ : ಸವರ್ಣ ದೀರ್ಘಸಂಧಿ :: ಸನ್ಮಂಗಳ :.................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** 1 x 3 = 3

1. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
3. ಭೂಮಿಜಾತೆ ಎಂದರೆ ಯಾರು?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯದಲ್ಲಿ ಉತ್ತರಿಸಿ.** 2 x 4 = 8

1. ಪು.ತಿ.ನ ಅವರ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ತಿಳಿಸಿ ಟಿಪ್ಪಣಿ ಬರೆಯಿರಿ?
2. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
3. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
4. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

**ಉ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ** 1 x 3 = 3

"ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"

# ಘಟಕ ಪರೀಕ್ಷೆ–2

**20 ಅಂಕಗಳು**

**ಅ). ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 1 x 4 = 4

1. ಯಾರೊಡನೆ ಕಾಡಿಗೆ ಬರಲು ಶ್ರೀರಾಮನಿಗೆ ಭಯವಿಲ್ಲ?
2. ಶಬರಿಯ ಪುಣ್ಯ ಏನಾಗಿತ್ತು?
3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
4. ಶಬರಿಗೆ ಯಾರ ವರ ಫಲಿಸಿತು?

**ಆ). ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ** 2 x 3 = 6

1. ಶಬರಿಯು ರಾಮ ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
2. ಆತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ ಏನು ಹೇಳಿದರು?
3. ಶಬರಿ ರಾಮನಿಗೋಸ್ಕರ ತಂದಿರುವ ಹೂ ಹಣ್ಣು ತಳಿರುಗಳನ್ನು ಉದ್ದೇಶಿಸಿ ಯಾವ ತೆರನಾಗಿ ಹಾಡುತ್ತಾಳೆ?

**ಇ). ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ** 3 x 2 = 6

1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು"
2. "ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆವುದೇ"

**ಈ) 8–10 ವಾಕ್ಯಗಳಲ್ಲಿ ಉತ್ತರಿಸಿ** 4 x 1 = 4

1. ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

**ಅಥವಾ**

2. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

********

# ಪದ್ಯ ಪಾಠ 2
# ಹಕ್ಕಿ ಹಾರುತಿದೆ ನೋಡಿದಿರಾ

ಕವಿ : ದ. ರಾ. ಬೇಂದ್ರೆ
ಆಕರ ಗ್ರಂಥ : ಗರಿ (ಕವನ ಸಂಕಲನ)

**ಕವಿ ಪರಿಚಯ:–**

ಅಂಬಿಕಾತನಯದತ್ತ ಕಾವ್ಯನಾಮದಿಂದ ಪ್ರಸಿದ್ಧವಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು (ದ.ರಾ. ಬೇಂದ್ರೆ) 1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರು ಗರಿ ಉಯ್ಯಾಲೆ, ಸಖೀಗೀತ ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯಹೊಗೆ, ಅರಳು ಮರಳು, ನಾಕುತಂತಿ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಪ್ರಸ್ತುತ ಪದ್ಯಭಾಗವನ್ನು 'ಗರಿ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

### ಭಾವಾರ್ಥ ಸಹಿತ ಪದ್ಯಗಳ ಸಾರಾಂಶ ವಿವರಣೆ

**1**

ಈ ಪದ್ಯದಲ್ಲಿ ಬೇಂದ್ರೆಯವರು ಕಾಲವನ್ನು ಹಾರುವ ಹಕ್ಕಿಗೆ ಹೋಲಿಸಿದ್ದಾರೆ. ಕಾಲದ ಚಲನೆ–ವೇಗ ವಿಸ್ತಾರವನ್ನು ಚಿತ್ರಿಸಿದ್ದಾರೆ. ಕಾಲ ನಿಂತ ನೀರಲ್ಲ ಅದು ಸದಾ ಹರಿಯುತ್ತಿರುವ ನದಿ ಇದ್ದಂತೆ. ಕಾಲದ ಹಕ್ಕಿಯು ಅಗಣಿತ ಇವುಗಳನ್ನು ಕಳೆದು ಅಪರಿಮಿತ ದಿನಗಳನ್ನು ಬೆಳಗುತ್ತಾ ಸುತ್ತಮುತ್ತ ಮೇಲೆ ಕೆಳಗೆ ಹೀಗೆ ವಿಶ್ವವ್ಯಾಪಿಯೂ ಅನಂತವೂ ಆಗಿ ಗಾವುದ ಗಾವುದ (ಮುಂದೆ ಮುಂದೆ) ಸಾಗುತ್ತಿರುತ್ತದೆ. ಯಾರ ಯಾವ ನಿಯಂತ್ರಣಕ್ಕೂ ಸಿಕ್ಕದೆ ಕಣ್ಣುರೆಪ್ಪೆ ಮಿಟುಕಿಸುವಷ್ಟರಲ್ಲಿ ಕಾಲ ಸಾಗಿರುತ್ತದೆ. ಹೀಗೆಯೇ ದಿನ ರಾತ್ರಿಗಳು ಕಳೆಯುತ್ತವೆ. ಕಾಲದ ಹಕ್ಕಿ ನಿರಂತರವಾಗಿ ಹಾರುತ್ತಿರುತ್ತದೆ. ಇಲ್ಲಿ ಕಾಲದ ಚಲನಾಶೀಲ ಗುಣವನ್ನು ತಿಳಿಸಿದ್ದಾರೆ.

2

ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ಗುರುತುಗಳನ್ನು ಹಕ್ಕಿಯ ಭೌತಿಕ ಅಂಗಗಳಾದ ಪುಚ್ಚ, ಗರಿ ರೆಕ್ಕೆಗಳ ಬಣ್ಣಗಳಿಗೆ ಹೋಲಿಸುತ್ತಾರೆ. ಹಕ್ಕಿಯ ಕತ್ತಲು (ಕರಿ) ಬೆಳಕು (ನೆರೆ) ಎಂಬ ಪುಚ್ಚ (ಹಕ್ಕಿಯ ಹಿಂಬದಿಯಲ್ಲಿರುವ ಬಾಲದಂತೆ ಗರಿಗಳ ಗುಚ್ಚ) ವನ್ನು ಹೊಂದಿದೆ. ವರ್ತಮಾನವೆಂಬ ಬಿಳಿಬಣ್ಣದ ಹೊಳಪಿನ ಗರಿಯು ಕಾಲದ ಹಕ್ಕಿಯಲ್ಲಿ ಗರಿಗರಿಯಾಗಿ ಕಂಗೊಳಿಸುತ್ತದೆ. ವರ್ತಮಾನವಾದ್ದರಿಂದ ಅದು ಬೆಳಕಿನಲ್ಲಿದೆ ಎಂದೇ ಬಿಳಿ–ಹೊಳೆ ಬಣ್ಣ ವರ್ತಮಾನಕ್ಕೆ ಹೊಳೆವ ಬಣ್ಣ ವರ್ತಮಾನವು ಹರಿಯುತ್ತಿರುವ ಹೊಳೆಯೂ ಹೌದು. ಕೆಂಪಾಗಿ ಹೊನ್ನಿನ ಬಣ್ಣಗಳ ರೆಕ್ಕೆಗಳು ಭವಿಷ್ಯತ್ ಕಾಲದ ಗುರುತುಗಳು ಕಾಲವೆಂಬ ಹಕ್ಕಿ ಭೂತ ವರ್ತಮಾನ ಭವಷ್ಯತ್ ಕಾಲಗಳೆಂಬ ಗುರುತುಗಳನ್ನು ಮೂಡಿಸುತ್ತಾ ಹಾರಿ ಹೋಗುತ್ತಿದೆ ಎಂದು ಅರ್ಥೈಸುತ್ತಾರೆ.

3

ಬೇಂದ್ರೆಯವರು ಪದ್ಯದಲ್ಲಿ ಕಾಲದ ವಿಶಾಲತೆ ಮತ್ತು ವ್ಯಾಪ್ತಿಯನ್ನು ವಿವರಿಸಿದ್ದಾರೆ. ಕಾಲದ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಬೇದವನ್ನು ಎಣಿಸದೆ ಸಮಾನತೆಯನ್ನು ಕಾಣುತ್ತಿದೆ. ಆಕಾಶಕ್ಕೆ ರೆಕ್ಕೆಗಳು ಮೂಡಿ ಆಕಾಶವೇ ಹಾರುತ್ತ ಸಾಗಿದಂತೆ ಕಾಲದ ಹಕ್ಕಿಯ ಹಾರಾಟ ಅಂಥದ್ದು (ಶ್ಲೇಷೆಯನ್ನು ಗಮನಿಸಿ). ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು ಆಕಾಶವನ್ನು ಬೆಳಗುತ್ತಿರುವ ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗಿದೆ ಎಂದು ಕಾಲವೆಂಬ ಹಕ್ಕಿಯ ಅಂಗಾಂಗಗಳನ್ನು ವರ್ಣಿಸಿದ್ದಾರೆ.

4

ದ.ರಾ ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ಸಾರ್ವಭೌಮತ್ವವನ್ನು ವಿವರಿಸಿದ್ದಾರೆ. ಕಾಲದ ಶಕ್ತಿ ಸಾಮರ್ಥ್ಯಗಳ ಮುಂದೆ ಎಲ್ಲವೂ ನಶ್ವರ ನಗಣ್ಯ ಎಂಬುದನ್ನು ತಿಳಿಸಿದ್ದಾರೆ. ರಾಜ್ಯ ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು, ಹಾಗೆಯೇ ಅವುಗಳ ನಡುವೆ ಯುದ್ಧಗಳನ್ನು ಮಾಡಿಸಿ ತೆನೆಯಲ್ಲಿನ ಕಾಳುಗಳನ್ನು ಬೇರ್ಪಡಿಸುವಂತೆ ಬೇರೆ ಬೇರೆ ಮಾಡಿದ್ದು ಇದೇ ಕಾಲವೆಂಬ ಹಕ್ಕಿ ಹಾಗಾಗಿ ಕಾಲ ಸಾರ್ವಭೌಮತ್ವವನ್ನು ಹೊಂದಿದೆ. ರಾಜ ಮಹಾರಾಜರ ಸಣ್ಣ ದೊಡ್ಡ ಕೋಟೆ ಕೊತ್ತಲೆಗಳನ್ನು ಗಬಕ್ಕನೆ ನಾಶಮಾಡಿದ್ದು ಕಾಲವೇ ಜಗತ್ತಿನ ಎಲ್ಲಾ ಭಾಗಗಳನ್ನು ಒಂದು ಸಲ ವೈಭವದಿಂದ ಮೆರೆಯುವಂತೆ ಮಾಡಿದ್ದು ಮತ್ತೊಂದು ಸಲ ಮುಳುಗುವಂತೆ ಮಾಡಿದೆ. ಒಟ್ಟಿನಲ್ಲಿ ಇಲ್ಲಿ ಯಾವುದೂ ಯಾರು ಶಾಶ್ವತವಲ್ಲ ಎಂಬುದನ್ನು ಸಾರುತ್ತಾ ಹಾರುತ್ತಿದೆಂದು ಹೇಳುತ್ತಾರೆ.

**5**

ಈ ಪದ್ಯದಲ್ಲಿ ಬೇಂದ್ರೆಯವರು ಕಾಲದ ಪರಿವರ್ತನಾ ಶೀಲತೆ ಹಾಗೂ ವಿವರಿಸಿದಂತೆ ಕಾಲದ ಹಕ್ಕಿಯು ಯುಗ ಯುಗಗಳ ನವೀನ ಶೀಲತೆಯನ್ನು ಆಗುಹೋಗುಗಳನ್ನು, ಹಣೆಬರಹವನ್ನು ಚರಿತ್ರೆಯನ್ನು ಅಳಿಸಿ ಹಾಕಿ ಹೊಸತನವನ್ನು ಹೊಸ ಹಣೆಬರಹವನ್ನು ಬರೆದು ಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬೀಸುತ್ತ ಮೇಲಕ್ಕೆ ಹಾರುತ, ಹಾರುತ ಈ ಹೊಸಗಾಲದ ಹಸು ಮಕ್ಕಳಿಗೆ ಹೊಸ ಚೈತನ್ಯವನ್ನು ನೀಡುತ್ತಾ ಉತ್ತಮ ಭವಿಷ್ಯಕ್ಕಾಗಿ ಹರಸಿ ಬದಲಾವಣೆ೦ಯ ಹಾದಿಯನ್ನು ಹಿಡಿದು ಹಕ್ಕಿ ಹಾರಿ ಹೋಗುತ್ತಿದೆ ಇಲ್ಲಿ ಪರಿವರ್ತನೆ ನಿಯಮವನ್ನುಕವಿ ವಿವರಿಸಿದ್ದಾರೆ

6

ಈ ಪದ್ಯದಲ್ಲಿ ಬೇಂದ್ರೆಯವರು ಶುಕ್ರ, ಚಂದ್ರ, ಮಂಗಳ ಲೋಕ ಸಂಚಾರ ಕಾಲದ ಭೌತಿಕ ಲಕ್ಷಣವನ್ನು ವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ. ಕಾಲಗತಿಯಲ್ಲಿ ಮಾನವನು ವೈಜ್ಞಾನಿಕವಾಗಿ ಆಕಾಶದೆತ್ತರೆಕ್ಕೆ ಬೆಳೆದಿದ್ದಾನೆ. ಅವನ ಅನ್ವೇಷಣೆ ಕೇವಲ ಭೂಮಂಡಲಕ್ಕೆ ಮಾತ್ರ ಸೀಮಿತವಾಗಿಲ್ಲ. ಬೆಳ್ಳಿಯ ಅಂದರೆ ಶುಕ್ರಗ್ರಹದ ವಾಯು ಮಂಡಲವನ್ನು ಪ್ರವೇಶಿಸಿದ್ದನ್ನು ತಿಂಗಳೂರು ಅಂದರೆ ಚಂದ್ರಲೋಕಕ್ಕೆ ಏರಿ ನೀರಿನ ಶಿಲೆಯನ್ನು ಹುಡುಕಿ ಅದನ್ನು ಹೀರುತ್ತಾ ಸಂತೋಷವಾಗಿ ಹಾಡುತ್ತದೆ. ಹಾಗೆ೦ಯೇ ಮುಂದೆ ಹಾರಾಡುತ್ತ ಮಂಗಳಗ್ರಹದ ಅಂಗಳವನ್ನು ತಲುಪಿದ್ದಾನೆ. ಹೀಗೆ ವೈಜ್ಞಾನಿಕ ರೆಕ್ಕೆಗಳನ್ನು ಹೊಂದಿದ ಹಕ್ಕಿ ಹಾರುತ್ತಿದೆ, ಕಾಲಾಂತರದಲ್ಲಿ ವೈಜ್ಞಾನಿಕವಾಗಿ ಮಾನವನ ಸಾಧನೆ೦ಯನ್ನು ಕವಿ ಸಾಂಕೇತಿಕವಾಗಿ ವರ್ಣಿಸಿದ್ದಾರೆ

**7**

ಈ ಪದ್ಯದಲ್ಲಿ ಬೇಂದ್ರೆಯವರು ಕಾಲವೆಂಬ ಹಕ್ಕಿಯನ್ನು ತನ್ನ ಬಾಹುದಿಂದ ಜಗತ್ತಿನ ರಹಸ್ಯವನ್ನು ಭೇಧಿಸುವ ತಂತ್ರವನ್ನು ಹೇಳಿದ್ದಾರೆ. ಕಾಲವೆಂಬ ಹಕ್ಕಿ ದಶದಿಕ್ಕುಗಳ ತುತ್ತ ತುದಿಗೆ ಮುಟ್ಟಿದೆ. ಜಗತ್ತಿನ ಮೂಲವನ್ನು ಓಡೆಯುತ್ತದೆಯೇ ಅಥವಾ ಈ ವಿಶ್ವವನ್ನೆ ಹೋಳು ಮಾಡುತ್ತದೆಯೇ ಬಲ್ಲವರು ಯಾರು? ಸೃಷ್ಟಿಕರ್ತನೋ, ಅಥವಾ ಈ ವಿಶ್ವದ ಇನ್ನಾವುದೋ ಶಕ್ತಿಯೋ? ಯಾರು ಬಲ್ಲರು? ಈ ಬ್ರಹ್ಮಾಂಡದ ವಿಸ್ಮಯವನ್ನು ಭೇಧಿಸಲು ಕಾಲವೆಂಬ ಹಕ್ಕಿ ಹಾರುತ್ತಿದೆ. ಕಾಲಗತಿಯಲ್ಲಿ ಮಾನವನು ತನ್ನ ಪ್ರಗತಿ ಶೀಲತೆಯನ್ನು ದಿಕ್ಕು ದಿಕ್ಕುಗಳೆಡೆ ಹರಿಸಿದ್ದಾನೆ. ಗತಿಶೀಲ ನಾಗಿದ್ದಾನೆ ಎಂಬುದನ್ನು ಕವಿ ಅಭಿವ್ಯಕ್ತ ಪಡಿಸಿದ್ದಾರೆ. ನಮ್ಮ ಬ್ರಹ್ಮಾಂಡದ ರಹಸ್ಯವನ್ನು ಆಧ್ಯಾತ್ಮದ ನೆಲೆಯಲ್ಲಿ ಋಷಿ ಮುನಿಗಳು ತಿಳಿದಿದ್ದಾರೆ ಎಂಬುದನ್ನು ಪರೋಕ್ಷವಾಗಿ ಹೇಳಿದ್ದಾರೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?**

ಉ:– ಹಕ್ಕಿ ಕಣ್ಣು ತೆರೆದು ರೆಪ್ಪೆ, ಮುಚ್ಚುವುದರೊಳಗೆ ಗಾವುದ ರೀತಿಯಲ್ಲಿ ವೇಗವಾಗಿ ಹಾರುತ್ತಿದೆ.

**2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?**

ಉ: ಹಕ್ಕಿಯ ಗರಿಯಲ್ಲಿ ಬಿಳಿಹೊಳೆ ಬಣ್ಣಗಳಿವೆ.

**3. ಹಕ್ಕಿಯ ಕಣ್ಣುಗಳು ಯಾವುವು?**

ಉ:– ಹಕ್ಕಿಯ ಕಣ್ಣುಗಳು ಸೂರ್ಯ ಚಂದ್ರರು.

**4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**

ಉ:– ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

**5. ಹಕ್ಕಿ ಯಾರನ್ನು ಹರಸಿದೆ?**

ಉ:– ಹಕ್ಕಿ ಹೊಸಗಾಲದ ಹಸು ಮಕ್ಕಳನ್ನು ಹರಸಿದೆ.

**6. ಹಕ್ಕಿಯು ಯಾವುದರ ಸಂಕೇತವಾಗಿದೆ?**

ಉ:– ಹಕ್ಕಿಯು ಕಾಲ ಸಂಕೇತವಾಗಿದೆ.

**7. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿತೆ?**

ಉ:– ಹಕ್ಕಿಯ ಚುಂಚಗಳು ದಗ್ಮಂಡಲಗಳ ಆಚೆಯವರೆಗೂ ಚಾಚಿವೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

1. ಹಕ್ಕಿ0ು ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

ಕಾಲದ ಹಕ್ಕಿಯು ಆಕಾಶ ಮೋಡ ಭೂಮಂಡಲಗಳು ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ. ಆಕಾಶದ ಮುಗಿಲಿಗೆ ರೆಕ್ಕೆಗಳು ಮೂಡಿ ಆಕಾಶವೇ ಹಾರುತ್ತ ಸಾಗಿದಂತೆ, ಆಕಾಶದಲ್ಲಿನ ನಕ್ಷತ್ರ ಮೂಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಆಕಾಶದಲ್ಲಿ ಬೆಳಗುತ್ತಿರುವ ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಹಕ್ಕಿ ಹಾರಿ ಹೋಗುತ್ತಿದೆ ಎಂದು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

**2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

ಉ:– ಕಾಲವು ಯುಗ ಯುಗಗಳ ಹಣೆ ಬರಹವನ್ನು ಅಳಿಸಿ ಹಾಕಿ ಹೊಸತನವನ್ನು ಹೊಸ ಹಣೆಬರಹವನ್ನು ಬರೆದು ಎಲ್ಲಾರಿಗೂ ಬದಲಾಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬೀಸುತ ಮೇಲಕ್ಕೆ ಹಾರುತ್ತ, ಹಾರುವ ಈ ಹೊಸಗಾಲದ ಹಸು ಮಕ್ಕಳಿಗೆ ಹೊಸ ಚೈತನ್ಯವನ್ನು ನಿಡುತ್ತಾ ಉತ್ತಮ ಭವಿಷ್ಯಕ್ಕೆ ಶುಭ ಹಾರೈಸಿದೆ.

**3. ಹಕ್ಕಿಯು ಯಾವ ಮೇರೆ ಮೀರಿ, ನೀರನ್ನು ಹೀರಿದೆ?**

ಉ:– ಕಾಲದ ಹಕ್ಕಿಯು ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರ ಗ್ರಹವೆಂಬ ಹಳ್ಳಿಯ ಮೇರೆಯನ್ನು ಮೀರಿ ಹಾರಿ ಹೋಗುತ್ತಿದೆ. ತಿಂಗಳೂರಿನ ಅಂದರೆ ಚಂದ್ರಲೋಕಕ್ಕೆ ಹಕ್ಕಿ ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಸಂತೋಷವಾಗಿ ಆಡುತ್ತಿದೆ.

**ಇ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**1. " ರೆಕ್ಕೆಗಳೆರಡು ಪಕ್ಕದಲ್ಲುಂಟು"**

**ಆ0ಯ್ಕೆ :** ದ.ರಾ. ಬೇಂದ್ರೆ ರವರ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯಭಾಗದಿಂದ ಆಯ್ದ ಕೊಳ್ಳಲಾಗಿದೆ.

**ಸಂದರ್ಭ:–** ಕವಿ ಕಾಲದ ಗುರುತನ್ನು ಹಕ್ಕಿಯ ರೆಕ್ಕೆಗಳ ಬಣ್ಣದ ರೂಪಗಳಿಗೆ ಹೋಲಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಹಕ್ಕಿಗೆ ಕರಿನೆರೆ ಬಣ್ಣದ ಪುಚ್ಚಗಳಿವೆ ಬಿಳಿಹೊಳೆ ಬಣ್ಣದ ಗರಿಗಳಿವೆ. ಹಾಗೆಯೇ ಕೆನ್ನನ ಹೊನ್ನನ ಬಣ್ಣ ಬಣ್ಣಗಳ ಹಕ್ಕಿಯ ರೆಕ್ಕೆಗಳು ಪಕ್ಷಿಯಲ್ಲಿವೆ ಎಂದು ವರ್ಣಿಸುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:–** ಕಾಲವೆಂಬ ಹಕ್ಕಿಯ ರೆಕ್ಕೆಗಳಿಗಿರುವ ಬಣ್ಣಗಳ ಭೌತಿಕ ರೂಪವನ್ನು ಕಾಲದ ಗುರುತಾಗಿ ಅಭಿವ್ಯಕ್ತ ಪಡಿಸಿರುವುದು ಬಹು ಸ್ವಾರಸ್ಯ ಪೂರ್ಣವಾಗಿದೆ.

**2. "ಸಾರ್ವಭೌಮರಾ ನೆತ್ತಿಯ ಕುಕ್ಕಿ"**

ಉ:– **ಆ0ಯ್ಕೆ :** ದ.ರಾ. ಬೇಂದ್ರೆ ರವರ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯಭಾಗದಿಂದ ಆಯ್ದ ಕೊಳ್ಳಲಾಗಿದೆ.

**ಸಂದರ್ಭ:–** ಇಲ್ಲಿ ಕಾಲದ ಸಾರ್ವಭೌಮತ್ವವನ್ನು ವರ್ಣಿಸುವಾಗ ಈ ಮಾತು ಬಂದಿದೆ. ಧರಣಿ ಮಂಡಲದಲ್ಲಿರುವ ಏಳು ಖಂಡಗಳನ್ನು ಈ ಹಕ್ಕಿ ತೇಲಿಸುತ್ತದೆ ಹಾಗೂ ಮುಳುಗಿಸುತ್ತದೆ. ಈ ಖಂಡಗಳಿಗೆ ತಾವೇ ಸಾರ್ವಭೌಮರೆಂದು ಬೀಗುವವರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಕಾಲಪಕ್ಷಿ ಮೆಟ್ಟಿ ನಿಲ್ಲುವುದು ಕಾಲ ಪಕ್ಷಿಯ ಮುಂದೆ ಯಾರ ಆಟವೂ ನಡೆಯದು ರಾಜ–ಮಹಾರಾಜರ ಕೋಟೆ–ಕೊತ್ತಲಗಳನ್ನು ನಾಶ ಮಾಡುತ್ತದೆ. ಎಂಬುದನ್ನು ಹೇಳಿದ್ದಾರೆ.

**ಸ್ವಾರಸ್ಯ:–** ಕಾಲದ ಗತಿಯಲ್ಲಿ ವೈಭವದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಶವಾಗಿದ್ದಾರೆ ಎಂಬುದು ಬಹು ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

3. **"ಬಲ್ಲರು ಯಾರು ಹಾಕಿದ ಹೊಂಚ"**

ಉ:– **ಆಯ್ಕೆ:–** : ದ.ರಾ. ಬೇಂದ್ರೆ ರವರ 'ಗರಿ' ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಪದ್ಯಭಾಗದಿಂದ ಆಯ್ದ ಕೊಳ್ಳಲಾಗಿದೆ.

**ಸಂದರ್ಭ:** ಕಾಲವೆಂಬ ಹಕ್ಕಿಯು ತನ್ನ ಬಾಹುವಿನಿಂದ ಜಗತ್ತಿನ ರಹಸ್ಯವನ್ನು ಭೇಧಿಸುವ ತಂತ್ರವನ್ನು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ. ವಿಶ್ವಗಳು ಅನೇಕವಿರಬಹುದು. ಈ ವಿಶ್ವಗಳ ದಿಕ್ಕುಗಳು ಅನಂತವಾಗಿರಬಹುದು ಆದರೆ ಈ ಕಾಲ ಪಕ್ಷಿಯ ಈ ಎಲ್ಲಾ ಮಂಡಲಗಳ ಅಂಚನ್ನು ಮುಟ್ಟಿದೆ. ಇಷ್ಟೇ ಅಲ್ಲ ಈ ಅನಂತತೆಯ ಆಚೆಗೂ ಸಹ ಇದು ತನ್ನ ಚುಂಚನ್ನು ಚಾಚಿದೆ. ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:–** ಕಾಲ ಪಕ್ಷಿಯ ಮನೋಗತ ಅರ್ಥವಾಗಬಹುದೆ? ಇದು ಅಸಾಧ್ಯ ಎನ್ನುವ ಹೊಳಹನ್ನು ಕವಿ ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

4. **"ಹೊಸಗಾಲದ ಹಸುಮಕ್ಕಳನ್ನು ಹರಸಿ"**

**ಆಯ್ಕೆ:–** : ದ.ರಾ. ಬೇಂದ್ರೆ ರವರ 'ಗರಿ' ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಪದ್ಯಭಾಗದಿಂದ ಆಯ್ದ ಕೊಳ್ಳಲಾಗಿದೆ.

**ಸಂದರ್ಭ:–** ಕಾಲವೆನ್ನುವ ಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಪ್ರಾಣ ವಾಯುವನ್ನು ಕೊಟ್ಟು ಈ ನಿರ್ಜೀವ ಮನ್ವಂತರಗಳಿಗೆ ಚೈತನ್ಯ ನಿಡುವುದು. ನಮ್ಮ ಭೂಮಂಡಲದಲ್ಲಿ ನಡೆದ ಸಾಂಸ್ಕೃತಿಕ ಬದಲಾವಣೆಗಳು ಈ ಕಾಲ ಪಕ್ಷಿಯ ಮಹಿಮೆಯೇ. ಹೊಸಕಾಲದ ಎಳೆಯ ಮಕ್ಕಳಿಗೆ ಶುಭ ಹಾರೈಸಿ ಬೆಳಸುವುದು ಈ ಕಾಲ ಪಕ್ಷಿಯೇ. ಯುವ ಜನಾಂಗದ ಉತ್ತಮ ಭವಿಷ್ಯಕ್ಕಾಗಿ ಕಾಲದ ಶುಭ ಹಾರೈಕೆಯನ್ನು ಕವಿ ಹೇಳುತ್ತಾರೆ.

**ಸ್ವಾರಸ್ಯ:–** ಇಂದಿನ ಲೋಕಕ್ಕೆ ಕಣ್ಣು ತೆರೆದಿರುವವರನ್ನು ಮುನ್ನಡೆಸುವುದು ಕಾಲ ಪಕ್ಷಿಯ ಕಾರ್ಯ ಎಂಬುದು ಸ್ವಾರಸ್ಯ ಪೂರ್ಣವಾಗಿ ಹೇಳಲಾಗಿದೆ.

5. **"ಮಂಗಳ ಲೋಕದ ಅಂಗಳಕೇರಿ"**

**ಆಯ್ಕೆ:–** : ದ.ರಾ. ಬೇಂದ್ರೆ ರವರ 'ಗರಿ' ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಪದ್ಯಭಾಗದಿಂದ ಆಯ್ದ ಕೊಳ್ಳಲಾಗಿದೆ.

**ಸಂದರ್ಭ:–** ಕಾಲದ ಓಟದಲ್ಲಿ ಬೆಳ್ಳಿ ಚುಕ್ಕಿ (ಶುಕ್ರ ಗ್ರಹವು) ಎಂಬ ಹಳ್ಳಿಯು ಮೇರೆಯನ್ನು ದಾಟಿ, ತಿಂಗಳಿನೂರಿಗೆ (ಚಂದ್ರ ಲೋಕ) ಹಾರಿ ನೀರನ್ನು ಹೀರಿ ಹಾಗೆಯೇ, ಮುಂದೆ ಹಾರಾಡುತ್ತ ಹಾರಾಡುತ್ತ ಮಂಗಳ ಲೋಕದ ಅಂಗಳಕ್ಕೆ ಏರಿ ಹೋಗುತ್ತಿದೆ. ಕಾಲದ ವೈಜ್ಞಾನಿಕ ಗತಿಯನ್ನು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:–** ಮಾನವನು ಭೂಮಿಯಿಂದ ಶುಕ್ರ, ಚಂದ್ರ ಮಂಗಳ ಗ್ರಹಗಳಿಗೆ ಸಂಚರಿಸಬಹುದಾದ ವೈಜ್ಞಾನಿಕ ಸಂಶೋಧನೆಯನ್ನು ಬಹು ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

**ಈ) ಈ ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

1. **'ಹಕ್ಕಿ ಹಾರುತ್ತಿದೆ ನೋಡಿದಿರಾ" ಪದ್ಯದ ಸಾರಾಂಶವನ್ನು ಬರೆಯಿರಿ.**

**ಅಥವಾ**

**ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?**

ಉ:– ಚಲನ ಶೀಲತೆ ಜೀವಂತಿಕೆಯ ಗುಣ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಅದಕ್ಕೆ ತಡೆ ಎಂಬುದೆಲ್ಲಿ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು. ಕಾಲದ ಗತಿಯನ್ನು ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ.

ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜ ಕ್ರಿಯೆ. ಕಾಲ ರಾತ್ರಿ ಕಳೆದು ದಿನ ಬೆಳಕಾಗಿ ಹೀಗೆ ಪುನರಾವರ್ತನೆಯಾಗಿ ಮೇಲೆ ಕೆಳಗೆ ಸುತ್ತಮುತ್ತ ಕಣ್ಣು ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ರೀತಿಯಲ್ಲಿ ವೇಗವಾಗಿ ಹಾರಿ ಹೋಗುತ್ತಿದೆ. ಇಂತಹ ಹಕ್ಕಿ ಹಾರಿ ಹೋಗುವುದಕ್ಕೆ ತಡೆಯಿಲ್ಲ. ಹಕ್ಕಿಯ ಉಚ್ಚಗರಿ, ರೆಕ್ಕೆಗಳನ್ನು ಭೂತ ವರ್ತಮಾನ, ಭವಿಷ್ಯತ್ ಕಾಲಗಳಿಗೆ ಹೋಲಿಸಿದ್ದಾರೆ. ನೀಲ ಮೇಘ ಮಂಡಲಗಳ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡು ಸಮಾನತೆಯನ್ನು ಕಾಣುತ್ತಿದೆ. ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ ಅನಂತವಾಗಿ ಹಾರಿ ಹೋಗುತ್ತಿದೆ. ಚುಕ್ಕಿಗಳ ಮೂಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗಿದೆ.

ರಾಜ್ಯ ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು ರಾಜ-ಮಹಾರಾಜರ ಸಣ್ಣ ದೊಡ್ಡ, ಕೋಟೆ ಕೊತ್ತಲಗಳನ್ನು ನಾಶ ಮಾಡಿದ್ದು ಕಾಲವೇ. ಕಾಲವೂ ಯುಗಯುಗಗಳ ಹಣೆ ಬರಹವನ್ನು ಅಳಿಸಿ ಹಾಕಿ ಹೊಸತನದ ಭವ್ಯತೆಯನ್ನು ತೆರೆದು ಕೊಟ್ಟಿದೆ, ಹೊಸಗಾಲದ ಹಸು ಮಕ್ಕಳಿಗೆ ಹೊಸ ಚೈತನ್ಯವನ್ನು ನೀಡಿ ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸಿದೆ. ಶುಕ್ರಗ್ರಹವೆಂಬ ಹಳ್ಳಿಯ ಮೇರೆಯನ್ನು ಮೀರಿ ಚಂದ್ರಲೋಕಕ್ಕೆ ಏರಿ ನೀರನ್ನು ಹುಡುಕಿ ಹೀರಿದೆ. ಮಂಗಳ ಗ್ರಹದ ಅಂಗಳಕ್ಕೆ ಏರಿ ಹೋಗಿದೆ. ದಶದಿಕ್ಕುಗಳ ತುತ್ತತುದಿಗೆ ಮುಟ್ಟಿ ಅದರ ಆಚೆಗೆ ತನ್ನಯ ಚುಂಚವನ್ನು ಚಾಚಿದೆ. ಜಗತ್ತಿನ ಮೂಲವನ್ನು ಒಡೆಯಲು ಪ್ರಪಂಚದ ವಿಸ್ಮಯವನ್ನು ಬೇಧಿಸಲೋ ಎಂಬಂತೆ ಹೊಂಚು ಹಾಕಿದೆ ಎಂದು ಕವಿ ಹೇಳುತ್ತಾರೆ.

**ಹೊಂದಿಸಿ ಬರೆಯಿರಿ**

| 'ಅ'ಪಟ್ಟಿ | 'ಬ'ಪಟ್ಟಿ | ಉತ್ತರಗಳು |
|---|---|---|
| 1. ಹಕ್ಕಿ | ಜ್ಞಾನಪೀಠ ಪಶಸ್ತಿ | ಪಕ್ಷಿ |
| 2. ನಾಕುತಂತಿ | ಪಕ್ಷಿ | ಜ್ಞಾನಪೀಠ ಪ್ರಶಸ್ತಿ |
| 3. ನೀಲಮೇಘ ಮಂಡಲ | ಖಂಡ-ಖಂಡಗಳ | ಸಮ ಬಣ್ಣ |
| 4. ರಾಜ್ಯದ ಸಾಮ್ರಾಜ್ಯದ | ತೆನೆ ಒಕ್ಕಿ | ತೆನೆ ಒಕ್ಕಿ |
| 5. ತೇಲಿಸಿ ಮುಳುಗಿಸಿ | ಸಮಬಣ್ಣ | ಖಂಡ-ಖಂಡಗಳ |
| 6. ಮಂಗಳ | ಅಂಗಳಕೇರಿ | ಅಂಗಳಕೇರಿ |

**ಭಾಷಾ ಚಟುವಟಿಕೆ**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ.

ಸೂರ್ಯ, ಮೇಘ, ಗಡ, ಹರಸು, ಒಕ್ಕ, ಕೆನ್ನ.

ಉ:- ಸೂರ್ಯ = ರವಿ, ಭಾನು, ಆರ್ಕ, ನೇಸರ, ಭಾಸ್ಕರ, ಉದಯ, ದಿನಕರ
ಗಡ = ಸಣ್ಣಕೋಟೆ
ಒಕ್ಕ = ಬೇರ್ಪಡಿಸಿ
ಮೇಘ = ಮೋಡ, ಮುಗಿಲು
ಹರಸು = ಆಶೀರ್ವದಿಸು, ಹಾರೈಸು
ಕೆನ್ನ = ಕೆಂಪು, ಕೆಂಬಣ್ಣ

**ಆ) ಕೊಟ್ಟಿರುವ ಪದಗಳಿಗೆ ತತ್ಸಮ-ತದ್ಭವ ಬರೆಯಿರಿ**

ಬಣ್ಣ, ಬ್ರಹ್ಮ, ಚಂದ್ರ, ಯುಗ, ಅಂಗಳ

ಉ:

| ತತ್ಸಮ | ತದ್ಭವ |
|---|---|
| ವರ್ಣ | ಬಣ್ಣ |
| ಬ್ರಹ್ಮ | ಬೊಮ್ಮ |
| ಚಂದ್ರ | ಚಂದಿರ |
| ಯುಗ | ಜುಗ |
| ಅಂಕಣ | ಅಂಗಳ |

**ಇ) ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**

ಇರುಳಳಿದು, ತೆರೆದಿಕ್ಕುವ, ಹೊಸಗಾಲ, ದಿಗ್ಮಂಡಲ, ತಿಂಗಳಿನೂರು

ಉ:

| | | |
|---|---|---|
| ಇರುಳಳಿದು | = ಇರುಳು+ಅಳಿದು | – ಲೋಪಸಂಧಿ |
| ತೆರೆದಿಕ್ಕುವ | = ತೆರೆದು+ಇಕ್ಕುವ | – ಲೋಪಸಂಧಿ |
| ಹೊಸಗಾಲ | = ಹೊಸ+ಕಾಲ | – ಆದೇಶಸಂಧಿ |
| ದಿಗ್ಮಂಡಲ | = ದಿಕ್+ಮಂಡಲ | – ಜಶ್ತ್ವ ಸಂಧಿ |
| ತಿಂಗಳಿನೂರು | = ತಿಂಗಳಿನ+ಊರು | – ಲೋಪಸಂಧಿ |

**ಈ) ಈ ಪದ್ಯದಲ್ಲಿ ಬರುವ ದ್ವಿರುಕ್ತಿ ಪದಗಳನ್ನು ಪಟ್ಟಿ ಮಾಡಿರಿ.**

ಉ:–

| | | |
|---|---|---|
| ಇರುಳಿರುಳು | ಗಾವುದ ಗಾವುದ | ಖಂಡಖಂಡ |
| ದಿನದಿನ | ಬಣ್ಣ ಬಣ್ಣ | ಯುಗಯುಗ |

**ಉ) ಕೊಟ್ಟಿರುವ ಅವ್ಯಯ ಪದಗಳು ಯಾವ ಯಾವ ಅವ್ಯಯಕ್ಕೆ ಸೇರಿವೆ ಎಂಬುದನ್ನು ಗುರುತಿಸಿ.**

ಅದುವೇ, ಆದ್ದರಿಂದ, ಅಯ್ಯೋ, ಬೇಗನೆ ಧಗಧಗ, ಸಾಕು,ಓಹೋ,ಹೌದು
ನೀನೆ ರೊಯ್ಯನೆ, ಮೆಲ್ಲಗೆ, ಅಲ್ಲದೆ.

ಉ:–

| | | |
|---|---|---|
| ಸಾಮನ್ಯವ್ಯಯ | = | ಬೇಗನೆ, ರೊಯ್ಯನೆ, ಮೆಲ್ಲಗೆ |
| ಭಾವಸೂಚಕಾವ್ಯಯ | = | ಅಯ್ಯೋ, ಓಹೋ |
| ಅನುಕರಣಾವ್ಯಯ | = | ಧಗಧಗ |
| ಕ್ರಿಯಾರ್ಥಕಾವ್ಯಯ | = | ಸಾಕು, ಹೌದು |
| ಸಂಬಂಧಾರ್ಥಕಾವ್ಯಯ | = | ಅದ್ದರಿಂದ, ಅಲ್ಲದೆ |
| ಅವಧಾರಣಾರ್ಥಕಾವ್ಯಯ | = | ಅದುವೇ, ನೀನೇ |

**ಊ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

ನೀಲ ಮೇಘ ಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೂ ಅಣ್ಣಾ
ಚಿಕ್ಕೆಯ ಮೂಲೆಯ ಸಿಕ್ಕಿಸಿಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಯುಗ ಯುಗಗಳ ಹಣೆ ಬರೆಹವ ಬರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸು ಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

# ಘಟಕ ಪರೀಕ್ಷೆ–1

**20–ಅಂಕಗಳು**

**ಅ) ಬಹು ಆಯ್ಕೆಯ ಪ್ರಶ್ನೆಗಳು** 1 x 3 = 3

1. ಸೂರ್ಯ, ಚಂದ್ರ, ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ ಯಾಗಿದೆ?
   ಅ) ತತ್ಪುರುಷ ಆ) ಕರ್ಮಧಾರೆಯ ಇ) ಅಂಶಿ ಈ) ದ್ವಂದ್ವ
2. ರಾಮನು ಮೆಲ್ಲಗೆ ನಡೆಯುತ್ತಾ ಬಂದು–ಈ ವಾಕ್ಯದಲ್ಲಿ ಬಂದಿರುವ ಸಾಮಾನ್ಯವ್ಯ0ಯ ಪದವಿದು.
   ಅ)ರಾಮನು ಆ)ಮೆಲ್ಲಗೆ ಇ)ನಡೆಯುತ್ತಾ ಈ)ಬಂದನು
3 ಮನ್ವಂತರ ಪದದಲ್ಲಿ ಆಗಿರುವ ಸಂಧಿ
   ಅ) ಸುವರ್ಣದೀರ್ಘ ಆ) ಗುಣ ಇ)ಯಣ್ ಈ) ವೃದ್ಧಿ

**ಆ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.** 1 x 3 = 3

1. ದಿನದಿಂದ : ದ್ವಿರುಕ್ತಿ :: ಮಂಡಲಗಿಂಡಲ :......................
2. ಬ್ರಹ್ಮ : ಬೊಮ್ಮ :: ಯುಗ :.................
3. ಅದ್ದರಿಂದ : ಸಂಬಂಧಾರ್ಥಕಾವ್ಯಯ :: ಧಗಧಗ :...................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** 1 x 3 = 3

1. ಹಕ್ಕಿಯ ಕಣ್ಣುಗಳು ಯಾವುವು?
2. ಹಕ್ಕಿಯ ಯಾವುದರ ಸಂಕೇತವಾಗಿದೆ?
3. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ** 2 x 3 = 6

1. ದ.ರಾ. ಬೆಂದ್ರೆ ಯವರ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ತಿಳಿಸಿ ಟಿಪ್ಪಣಿ ಬರೆಯಿರಿ.
2. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
3. ಹೊಸಗಾಲದ ಹಸು ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

**ಉ). ಪದ್ಯಭಾಗವನ್ನು ಪೂರ್ಣಗೊಳಿಸಿ :** 2 x 1 = 2

ಯುಗಯುಗಗಳ . .ಹಕ್ಕಿ ಹಾರುತಿದೆ ನೋಡಿದಿರಾ

**ಊ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ:** 3 x 1 = 3

1. "ಮಂಗಳ ಲೋಕದ ಅಂಗಳಕೇರಿ"

# ಘಟಕ ಪರೀಕ್ಷೆ – 2

**20–ಅಂಕಗಳು**

**ಅ) ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** 1 x 4 = 4

1. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?
3. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?
4. ಹಕ್ಕಿ0ಯು ಏನನ್ನು ಒಡೆಯಲು ಹೊಂಚು ಹಾಕಿದೆ?

**ಆ). ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.** 2 x 3 = 6

1. ಹಕ್ಕಿಯ ಯಾವ ಮೇರೆ ಮೀರಿ ನೀರನ್ನು ಹೀರಿದೆ?
2. ಕಾಲದ ಹಕ್ಕಿಯ ರೆಕ್ಕೆ ಪುಚ್ಚ ಗರಿಗಳನ್ನು ಯಾವ ಯಾವ ಬಣ್ಣಗಳಿಗೆ ಹೋಲಿಸಿದ್ದಾರೆ
3. ಹೊಸಕಾಲದ ಹಸು ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** 3 x 2 = 6

1. "ಬಲ್ಲರು ಯಾರಾ ಹಾಕಿದ ಹೊಂಚು"
2. "ರೆಕ್ಕೆಗಳೆರಡೂ ಪಕ್ಕದಲ್ಲುಂಟು"

**ಈ) ಈ ಕೆಳಗಿನ ಪ್ರಶ್ನೆಗಳಿಗೆ. 8–10 ವಾಕ್ಯಗಳಲ್ಲಿ ಉತ್ತರಿಸಿ.** 4 x 1 = 4

1. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು?

**ಅಥವಾ**

'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯದ ಸಾರಾಂಶವನ್ನು ಬರೆಯಿರಿ.

# ಬಹು ಆಯ್ಕೆಯ ಪ್ರಶ್ನೆಗಳು.

1. **'ಇರುಳಿರುಳಳಿದು'** ಈ ಪದದ ವ್ಯಾಕರಣಾಂಶ
ಅ)ದ್ವಿರುಕ್ತಿ ಆ)ಜೋಡುನುಡಿ ಇ)ಅನುಕರಣಾವ್ಯಯ ಈ)ನುಡಿಗಟ್ಟು
**ಉ: ಅ)ದ್ವಿರುಕ್ತಿ**

2. **'ಗಾವುದ'** ಪದದ ಅರ್ಥ
ಅ) 6ಮೈಲಿ ಆ)10ಮೈಲಿ ಇ) 12ಮೈಲಿ ಈ)20ಮೈಲಿ
**ಉ: ಅ) 6ಮೈಲಿ**

3. **'ಮನ್ವಂತರ'** ಈ ಪದದ ಅರ್ಥ ವ್ಯಾಕರಣ ವಿಶೇಷ
ಅ) ಲೋಪಸಂಧಿ ಆ) ಗುಣಸಂಧಿ ಇ)ಯಣ್‌ಸಂಧಿ ಈ) ಜಶ್ವಸಂಧಿ
**ಉ:, ಇ)ಯಣ್‌ಸಂಧಿ**

4. **'ಹಸುಮಕ್ಕಳು'** ಇಲ್ಲಿರುವ ಅಲಂಕಾರ
ಅ)ರೂಪಕ ಆ)ಉಪಮಾ ಇ)ಉತ್ಪ್ರೇಕ್ಷ ಈ)ದೃಷ್ಟಾಂತ
**ಉ: ಅ)ರೂಪಕ**

5. ನೀನು ಸೊಗಸಾಗಿ ಕಾಣುತ್ತಿದ್ದೀಯಾ :ಸೊಗಸಾಗಿ ಎಂಬ ಪದವು
ಅ)ರೂಪಕ ಆ)ಸಾಮನ್ಯಾವ್ಯಯ ಇ)ನಾಮಪದ ಈ) ಅನುಕರಣವ್ಯಾಯ
**ಉ: ಆ)ಸಾಮನ್ಯಾವ್ಯಯ**

6. **'ಕೆನ್ನೆದೆ'** ಪದದ ಅರ್ಥ
ಅ)ಎಣೆ ಆ)ಕೋಲಾಟ ಇ)ಕೆಂಪು ಈ) ಬಯಲಾಟ
**ಉ: ಇ)ಕೆಂಪು**

7. **'ಹೊಸಗಾಲ'** ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಅ) ಲೋಪಸಂಧಿ ಆ) ಆಗಮಸಂಧಿ ಇ)ಆದೇಶಸಂಧಿ ಈ) ಗುಣಸಂಧಿ
**ಉ: ಇ)ಆದೇಶಸಂಧಿ**

8. **'ಸೂರ್ಯ ಚಂದ್ರ ನಕ್ಷತ್ರಗಳು'** ಈ ಸಮಾಸಕ್ಕೆ ಉದಾಹರಣೆ
ಅ)ದ್ವಿಗು ಆ)ದ್ವಂದ್ವ ಇ)ಅಂಶಿ ಈ)ಬಹುವ್ರೀಹಿ
**ಉ: ಆ)ದ್ವಂದ್ವ**

9. **'ದಿನದಿನ'** ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ?
ಅ)ಜೋಡುನುಡಿ ಆ)ಅನುಕರಣಾವ್ಯಯ ಇ)ನುಡಿಗಟ್ಟು ಈ) ದ್ವಿರುಕ್ತಿ
**ಉ: ಈ) ದ್ವಿರುಕ್ತಿ**

10. **'ಹಾರುತಿದೆ'** ಇದರ ಕಾಲ
ಅ) ಭೂತಕಾಲ ಆ)ವರ್ತಮಾನಕಾಲ ಇ)ಭವಿಷತ್‌ಕಾಲ ಈ)ಮಳೆಗಾಲ
**ಉ: ಆ)ವರ್ತಮಾನಕಾಲ**

11. **'ತೇಲಿಸು'** ಪದದ ವಿರುದ್ದಾರ್ಥಕ ಪದ
ಅ)ಸೋಲಿಸು ಆ)ಪಾಲಿಸು ಇ)ಮುಳುಗಿಸು ಈ)ಹಾಳುಮಾಡು
**ಉ: ಇ)ಮುಳುಗಿಸು**

12. **'ಮಂಡಲಗಿಂಡಲ'** ಈ ಪದವು

ಅ) ದ್ವಿರುಕ್ತಿ ಆ)ಅನುಕರಣಾವ್ಯಯ ಇ)ಜೋಡಿಪದ ಈ)ನುಡಿಗಟ್ಟು

ಉ: **ಇ)ಜೋಡಿಪದ**

13. **'ಮುಗಿಲಿಗೆ'** ಈ ಪದದಲ್ಲಿರುವ ವಿಭಕ್ತಿ

ಅ) ಪ್ರಥಮ ಆ) ಚತುರ್ಥಿ ಇ)ದ್ವಿತೀಯ ಈ)ತೃತೀಯ

ಉ: **ಆ) ಚತುರ್ಥಿ**

14. **'ಒಕ್ಕಿ'** ಪದದ ಅರ್ಥ

ಅ) ಹೊಕ್ಕಿ ಆ)ಹಕ್ಕಿ ಇ)ಹಸನುಗೊಳಿಸಿ ಈ)ಹಸನ್ಮುಖಿ

ಉ: **ಇ)ಹಸನುಗೊಳಿಸಿ**

15. **'ನೀನೇ'** ಇದರ ವ್ಯಾಕರಣ ವಿಶೇಷ

ಅ) ಸಾಮನ್ಯಾವ್ಯಯ ಆ)ಅನುಕರಣಾವ್ಯಯ ಇ)ಅವಧಾರಣಾರ್ಥಕಾವ್ಯಯ ಈ)ನಾಮಪದ

ಉ: **ಇ)ಅವಧಾರಣಾರ್ಥಕಾವ್ಯಯ**

16. **'ತೆರೆದಿಕ್ಕು'** ಪದವು ಈ ಸಂಧಿಗೆ ಸೇರಿದೆ

ಅ)ಲೋಪಸಂಧಿ ಆ)ಆಗಮಸಂಧಿ ಇ)ಆದೇಶಸಂಧಿ ಈ)ಗುಣಸಂಧಿ

ಉ: **ಅ)ಲೋಪಸಂಧಿ**

17. **'ಚಂದ್ರ'** ಪದದ ತದ್ಭವ ರೂಪ

ಅ)ಚುಕ್ಕಿ ಆ) ಸುಂದರ ಇ)ಚಂದಿರ ಈ)ಚಂದ್ರರು

ಉ: **ಇ)ಚಂದಿರ**

18. **'ಚಣ'** ಪದದ ಸಂಸ್ಕೃತ ರೂಪ

ಅ)ಕ್ಷಣ ಆ)ಋಣ ಇ)ಕಾಂಚಣ ಈ) ಹಣ

ಉ: **ಅ)ಕ್ಷಣ**

19. **'ಢಣ ಡಣ' 'ಚಟಚಟ'**–ಪದಗಳ ವ್ಯಾಕರಣ ವಿಶೇಷ

ಅ)ಜೋಡುನುಡಿ ಆ)ದ್ವಿರುಕ್ತಿ ಇ)ಅನುಕರಣಾವ್ಯಯ ಈ)ನುಡಿಗಟ್ಟು

ಉ: **ಇ)ಅನುಕರಣಾವ್ಯಯ**

20. **'ಸುತ್ತಮುತ್ತ' 'ಬಿಳಿಹೊಳೆ'** ಪದಗಳು ಈ ವ್ಯಾಕರಣಾಂಶಕ್ಕೆ ಉದಾಹರಣೆ.

ಅ)ಅನುಕರಣಾವ್ಯಯ ಆ)ಜೋಡಿಪದ ಇ) ದ್ವಿರುಕ್ತಿ ಈ)ನುಡಿಗಟ್ಟು

ಉ: **ಆ)ಜೋಡಿಪದ**

21 **'ಯುಗ'** ಪದದ ಕನ್ನಡ ರೂಪದ ಪದ

ಅ)ಜುಗ ಆ)ಪ್ರಪಂಚ ಇ)ವಿಶ್ವ ಈ)ಜಾಗ

ಉ: **ಅ)ಜುಗ**

22. **''ಅ0ಯ್ಯೋ','ಅಬ್ಬಾ'** ಪದಗಳು

ಅ)ಅನುಕರಣಾವ್ಯಯ ಆ)ಸಾಮಾನ್ಯವ್ಯಯ ಇ)ಭಾವಸೂಚಕ ಈ)ನಾಮಪದ

ಉ: **ಇ)ಭಾವಸೂಚಕ**

23.’ **ಚೆನ್ನಾಗಿ, ಮೆಲ್ಲಗೆ’ ತಟ್ಟನೆ** ಇವು

ಅ)ಭಾವಸೂಚಕ ಆ)ಸಾಮಾನ್ಯವ್ಯ0ಯ ಇ)ಕೃದಂತಾವ್ಯಯ ಈ)ಆನುಕರಣಾವ್ಯಯ

**ಉ: ಆ)ಸಾಮಾನ್ಯವ್ಯ0ಯ**

24. **‘ಎವೆ’** ಅದದ ಅರ್ಥ

ಅ)ಎಲ್ಲೆ ಆ)ಕಣ್ಣು ಇ)ಕಣ್ಣರೆಪ್ಪೆ ಈ)ಪೊರೆ.

**ಉ: ಇ)ಕಣ್ಣರೆಪ್ಪೆ**

25. **ಊ,ಮತ್ತು, ಅಥವಾ**–ಇವು ಈ ವ್ಯಾಕರಣಾಂಶಕ್ಕೆ ಸೇರಿದೆ

ಅ)ಸಾಮಾನ್ಯಾವ್ಯಯ ಆ)ಸಂಬಂಧಾರ್ಥಕಾವ್ಯಯ

ಇ)ಭಾವಸೂಚಕಾವ್ಯಯ ಈ)ಅನುಕರಣಾವ್ಯಯ

**ಉ: ಆ)ಸಂಬಂಧಾರ್ಥಕಾವ್ಯಯ**

# ಪಠ್ಯ ಪೂರಕ ಅಧ್ಯಯನ – 1
# ಸ್ವಾಮಿ ವಿವೇಕಾನಂದರ ಚಿಂತನೆಗಳು–ಸಮಿತಿ ರಚನೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ**

**1. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ?**

ಉ. ವಿವೇಕಾನಂದರೆಂದರೆ ಸಾಮಾಜಿಕ ಸಂಕಟ, ಸಿಟ್ಟು, ಸ್ಫೋಟ, ಸ್ಪಷ್ಟತೆಗಳ ರೂಪಕವಾಗಿದ್ದಾರೆ.

**2. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?**

ಉ. ವಿವೇಕಾನಂದರು ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸುತ್ತಾರೆ.

**3. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿರುವವರು ಯಾರು?**

ಉ. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿರುವವರು ಶೂದ್ರರು ಅಸ್ಪೃಶ್ಯರು.

**4. ಸರ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು?**

ಉ. ಸರ್ವಧರ್ಮ ಸಮ್ಮೇಳನವು 11–09–1893 ರಲ್ಲಿ ಅಮೇರಿಕಾದ ಚಿಕಾಗೋದಲ್ಲಿ ನಡೆಯಿತು.

**5. ವಿವೇಕಾನಂದರನ್ನು "ಮಾನವತಾಮಿತ್ರ" ರೆಂದು ಕರೆದವರಾರು?**

ಉ. ಕುವೆಂಪು ಅವರು ವಿವೇಕಾನಂದರನ್ನು 'ಮಾನವತಾಮಿತ್ರ' ಎಂದು ಕರೆದಿದ್ದಾರೆ.

**II. ಕೊಟ್ಟಿರುವ ಪ್ರಶ್ನಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ**

**1. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಆಭಿಪ್ರಾಯವೇನು?**

ಉ. ಹಿಂದುಳಿದ ಹಾಗೂ ದಲಿತ ಜಾತಿಗಳ ಬಗ್ಗೆ ವಿವೇಕಾನಂದರಿಗೆ ಸಹಜವಾದ ಸಾಮಾಜಿಕ ಕಳಕಳಿಯಿತ್ತು ಹೀಗಾಗಿಯೇ ಅವರು ಸಂಶಯಕ್ಕೆಡೆಯಿಲ್ಲದಂತೆ ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸಿದರು. ಜಾತಿ ಎಂಬುದು ಸಮಾಜದ ಒಂದು ಅಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿ ಶೂದ್ರರು ಅಸ್ಪೃಶ್ಯರು ಸ್ವಾತಂತ್ರ್ಯ ಹೀನರಾಗಿ ಗುಲಾಮತನ ಅನುಭವಿಸುವುದನ್ನು ಟೀಕಿಸಿ ಶೂದ್ರವರ್ಗ ತನ್ನ ಉಳಿಗ ಸ್ವಭಾವವನ್ನು ಬಿಟ್ಟು ಹೊರ ಬರಬೇಕೆಂದು, ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದ ಜಾತಿವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವಾಗಿದೆ.

**2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಏಕೆ ?**

ಉ. ವಿವೇಕಾನಂದರು ಏಕ ಸಂಸ್ಕೃತಿ ಮತ್ತು ಏಕ ಧರ್ಮ ವಿಸ್ತರಣೆಗಳ ಪರವಾಗಿರಲಿಲ್ಲ, ಅದು ಹಿಂದೂ ಧರ್ಮವಿರಲಿ, ಕ್ರೈಸ್ತ ಧರ್ಮವಿರಲಿ, ಇಸ್ಲಾಂ ಧರ್ಮವಿರಲಿ ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆಯು ಜೀವ ವಿರೋಧಿವೆಂದು ಅವರು ಭಾವಿಸಿದ್ದರು. ಹೀಗಾಗಿ ವಿವೇಕಾನಂದರು ಕೋಮುವಾದದ ಕಟ್ಟ ವಿರೋಧಿಯಾಗಿದ್ದರು.

**3. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?**

ಉ. ಸ್ವಮತಾಭಿಮಾನ, ಅನ್ಯಮತ ದ್ವೇಷಗಳಿಂದ ಉತ್ಪನ್ನವಾದ ಘೋರ ಧಾರ್ಮಿಕದುರಾಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿದೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತ್ತಿತ್ತು, ಎಂದು ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದರು.

## ಮಾದರಿ ಪ್ರಶ್ನೆ ಪತ್ರಿಕೆ – 1 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 1) (FA-1)

**10ನೇ ತರಗತಿ** **ಪ್ರಥಮ ಭಾಷೆ ಸಿರಿಕನ್ನಡ** **ಗರಿಷ್ಠ ಅಂಕಗಳು–20**

---

### ವಿಭಾಗ – ಎ

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **1x2=2**

1. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿ0ಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?
2. ಸರ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ:** **2x2=4**

3. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
4. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ:** **3x1=3**

5. "ಮುಂಗಾರಿನ ಮಳೆ0ಯಾಗೋಣ"

**ಈ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ:** **4x1=4**

6. ನೀಲಮೇಘಮಂಡಲ ------------------- ಮಾಡಿದೆ ಕಣ್ಣಾ

**ಉ) ಕೊಟ್ಟಿರುವ ಪ್ರಶ್ನೆಗೆ ಎಂಟು– ಹತ್ತು ವಾಕ್ಯದಲ್ಲಿ ಉತ್ತರಿಸಿ:** **4x1=4**

7. ಎ) ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿ0ಯ ಪಾಲಿಗೆ ಹೇಗೆ ನಿಜವಾಗಿದೆ?

   ಅಥವಾ

   ಬಿ) ಶಬರಿ0ಯ ಚಿಂತೆ ಹಿಂಗಿ ಹೋದ ಸ್ವಾರಸ್ಯವನ್ನು ವಿವರಿಸಿ.

### <u>ವಿಭಾಗ –ಬಿ ( ವ್ಯಾಕರಣ)</u>

**ಊ) ಕೆಳಗಿನ ಹೇಳಿಕೆಗಳಿಗೆ ಸರಿ0ಯಾದ ಉತ್ತರವನ್ನು ಆರಿಸಿ ಬರೆಯಿರಿ:** **1x3=3**

8. ಕನ್ನಡ ವರ್ಣಮಾಲೆ0ಯಲ್ಲಿರುವ ಮಹಾ ಪ್ರಾಣಾಕ್ಷರಗಳ ಸಂಖ್ಯೆ

   ಎ) ಎರಡು ಬಿ) ಹದಿಮೂರು ಸಿ) ಹತ್ತು ಡಿ) ಐದು
9. ಸಪ್ತಮೀ ವಿಭಕ್ತಿ0ಯ ಕಾರಕಾರ್ಥ ರೂಪ ಇದಾಗಿದೆ.

   ಎ) ಸಂಬಂಧ ಬಿ) ಅಧಿಕರಣ ಸಿ) ಸಂಪ್ರಧಾನ ಡಿ) ಅಪಾದನ
10. ಇದು ಅಕರ್ಮಕ ಧಾತುವಿಗೆ ಉದಾಹರಣೆ0ಯಾಗಿದೆ.

    ಎ) ಮಲಗು ಬಿ) ತಿನ್ನು ಸಿ) ಉಜ್ಜು ಡಿ) ಬಿಡು

*********

# ಮಾದರಿ ಪ್ರಶ್ನೆ ಪತ್ರಿಕೆ – 2 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 1) (FA-1)

**10ನೇ ತರಗತಿ** | **ಪ್ರಥಮ ಭಾಷೆ ಸಿರಿಕನ್ನಡ** | **ಗರಿಷ್ಠ ಅಂಕಗಳು–20**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** 1x2=2

1. ರಾಹಿಲನು ಯಾರು?
2. ನದೀಜಲಗಳು ಏನಾಗಿವೆ?

**ಆ) ಕೆಳಗಿನ ಪ್ರಶ್ನೆಗಳಲ್ಲಿ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ** **2**x2=4

3. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
4. ವಿವೇಕಾನಂದರು ಯಾವತ್ತೂ ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ ಕಾರಣವೇನು ?

**ಇ) ಕೆಳಗಿನ ಹೇಳಿಕೆಯನ್ನು ಸಂದರ್ಭದೊಡನೆ ಸ್ವಾರಸ್ಯ ವಿವರಿಸಿ** 1x3=3

5. "ಸಾರ್ವಭೌಮರ ನೆತ್ತಿಯ ಕುಕ್ಕಿ "

**6. ಪದ್ಯಪೂರ್ಣಗೊಳಿಸಿ ಬರೆಯಿರಿ** 1x4=4

ಕಲುಷಿತವಾದಿ ______________
______________________
______________________
______________ಮುಟ್ಟೋಣ

**ಅಥವಾ**

ಮತಗಳೆಲ್ಲವೂ______________
______________________
______________________
______________ ಬಿತ್ತೋಣ

**ಈ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎಂಟು–ಹತ್ತು ವಾಕ್ಯಗಳಲ್ಲಿ ವಿವರಿಸಿ** 1x4=4

7. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

**ಋ) ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರ ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ** 1x3=3

8. ಕನ್ನಡ ವರ್ಣಮಾಲೆ0ಯಲ್ಲಿನ ಅನುನಾಸಿಕ ಸಂಖ್ಯೆ:
   ಅ) 9 ಆ) 5 ಇ) 13 ಈ) 2
9. ಸೂ0ರ್ಯೋದ0ಯ ಪದ ಈ ಸಂಧಿಗೆ ಉದಾಹರಣೆ:
   ಅ) ವೃದ್ಧಿಸಂಧಿ ಆ) ಗುಣ ಸಂಧಿ ಇ) ಲೋಪಸಂಧಿ ಈ) ಸವರ್ಣದೀರ್ಘ ಸಂಧಿ
10. ನಮೋ ನಮೋ: ದ್ವಿರುಕ್ತಿ:: ಧೀರ ಶೂರ :__________
    ಅ) ಜೋಡುನುಡಿ ಆ) ಅನ್ವರ್ಥನಾಮ ಇ) ಅನುಕರಣಾವ್ಯ0ಯ ಈ) ಅಂಕಿತನಾಮ

********

# ಗದ್ಯಪಾಠ 03 – ಲಂಡನ್ ನಗರ

**ಲೇಖಕರು– ವಿ.ಕೃ.ಗೋಕಾಕ್**
**ಆಕರ ಗ್ರಂಥ – ಸಮುದ್ರದಾಚೆಯಿಂದ (ಪ್ರವಾಸ ಕಥನ)**

**ಲೇಖಕರ ಪರಿಚಯ :**

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ.ವಿನಾಯಕ ಕೃಷ್ಣ ಗೋಕಾಕ ರವರು 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರು ಎಂಬ ಗ್ರಾಮದಲ್ಲಿ ಜನಿಸಿದರು ಇವರು ಸಮುದ್ರ ಗೀತೆಗಳು ಸಮುದ್ರದಾಚೆಯಿಂದ ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ ಇನ್ನು ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಪದ್ಮಶ್ರೀ ಪುರಸ್ಕಾರಗಳು ದೊರಕಿದೆ. ಪ್ರಸ್ತುತ ಗದ್ಯ ಭಾಗವನ್ನು ಸಮುದ್ರದಾಚೆಯಿಂದ ಎಂಬ ಪ್ರವಾಸ ಕಥನದಿಂದ ಆಯ್ದು ಕೊಳ್ಳಲಾಗಿದೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ**

**1. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?**

ಉ. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡುನಡುವೆ ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ (ಅಂಡರ್ ಗ್ರೌಂಡ್) ಓಡಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ.

**2. ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರೇನು?**

ಉ ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವೇರ್

**3. 'ವೆಸ್ಟ್ ಮಿನ್ ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?**

ಉ. ವೆಸ್ಟ್ ಮಿನ್ ಸ್ಟರ್ ಅಬೆ ಎಂಬ ಪ್ರಾರ್ಥನಾ ಮಂದಿರ ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿ ಪುಂಗವರ ಸ್ಮಾರಕವಾಗಿದೆ.

**4. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿಯಾವುದು?**

ಉ. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ 'ಚೇರಿಂಗ್ ಕ್ರಾಸ್'

**5. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?**

ಉ. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು ವೂಲವರ್ಥ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ**

**1. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**

ಉ: ವೂಲವರ್ಥ ಎಂಬ ಸ್ಟೇಷನರಿ ಅಂಗಡಿಯಲ್ಲಿ ಎಲ್ಲತರದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ, ಬೂಟು, ಕಾಲುಚೀಲ, ಚೆಣ್ಣ, ಸಾಬೂನು, ಔಷದ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾಗ್ರಿ ಎಲ್ಲವು ಇಲ್ಲಿ ದೊರೆಯುತ್ತವೆ.

**2. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**

ಉ: ಲಂಡನ್ನಿನ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಗೃಹಗಳಲ್ಲಿ ಅಮ್ಮಣ್ಣಿಗಳಿರುತ್ತಾರೆ. ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ ಒಬ್ಬ ಹೆಣ್ಣುಮಗಳು ಸಿನಿಮಾ ಗೃಹದಲ್ಲಿ ಬಂದವರಿಗೆ ಜಾಗ ಹುಡುಕಿಕೊಡುವವರೂ ಹೆಣ್ಣು ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ.

3. **ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**

ಉ: ಲಂಡನ್ನಿನ ಹೆಣ್ಣು ಮಕ್ಕಳ ಟೊಪ್ಪಿಗೆಯನ್ನು ಲೇಖಕರು ಕುತೂಹಲದಿಂದ ನೋಡಿದರು. ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಛವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂದು ಲೇಖಕರು ಟೊಪ್ಪಿಗೆಯ ವಿಶೇಷತೆಯ ಕುರಿತು ಹೇಳಿದ್ದಾರೆ.

4. **ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?**

ಉ: ಲೇಖಕರು ಪೊಯೆಟ್ ಕಾರ್ನರ್ ಕವಿಗಳ ಮೂಲೆಗೆ ಹೋಗಿದ್ದರು. ಅಲ್ಲಿ ಕಿಪ್ಲಿಂಗ್ ಕವಿಯ ಮೇಲೆ ಹಾಕಿದ್ದ ಕಲ್ಲು ಅವರ ಕಣ್ಣಿಗೆ ಬಿತ್ತು, ಮ್ಯಾಕಲೆ ಜಾನ್ಸನ್, ಗೋಲ್ಡ್ ಸ್ಮಿತ್, ಡ್ರಾಯ್‌ಡನ್ ಎಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ಕೊಡುವಂತೆ ಒಂದೊಂದು ಕಲ್ಲನ್ನು ಕೊಟ್ಟಿದ್ದರು. ಒಂದು ಸಣ್ಣ ಕಲ್ಲಿನ ಮೇಲೆ ಓ ಅಪರೂಪದ ಬೆಬ್ ಜಾನ್ಸನ್ ಎಂದೂ ಸಹ ಇತ್ತು ವರ್ಡ್ಸ್‌ವರ್ತನೂ ತಪಶ್ಚರ್ಯಕ್ಕೆ ಕುಳಿತಂತಹ ಶಿಲಾಮೂರ್ತಿಯೂ ಅಲ್ಲಿತ್ತು.

5. **ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?**

ಉ: ಸಾಮ್ರಾಟರ ರಾಜ್ಯಾಭಿಷೇಕವಾಗುವ ಅವರ ಸಿಂಹಾಸನದ ಮೇಲೆ ಒಂದು ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾದಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ ಮಿನಿಸ್ಟರ್ ಮಂದಿರದಲ್ಲಿಯೆ ಒಂದು ಭಾಗದಲ್ಲಿದೆ. 3ನೇ ಎಡ್ವರ್ಡ್‌ನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಅದರಲ್ಲಿ ಯಾವ ಸಿದ್ಧಿಯಿದೆಯೋ ಯಾವ ಮಂತ್ರವಿದೆಯೋ ಇಂಗ್ಲೇಂಡಿನ ಅತುಲ ವೈಭವವನ್ನು ನೋಡಿದರೆ ಇದದೊಂದು ವಿಶೇಃಷವಾದರೂ ಅದರಲ್ಲಿ ಇರಬಹುದು ಎನ್ನಿಸುತ್ತದೆ.

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ**

1. **"ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"**

**ಆಯ್ಕೆ:** ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್ ನಗರ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಲೇಖಕರು ಲಂಡನ್ ನಗರದ ಬೀದಿಗಳಲ್ಲಿ ಸಂಚರಿಸುತ್ತಿದ್ದಾಗ ತಮಗಾದ ಅನುಭವವನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ ಲಂಡನ್ನಿನ ಬೀದಿಬೀದಿಯ ಮೂಲೆ ಮೂಲೆಗೂ ಇತಿಹಾಸ ಪ್ರಸಿದ್ದ ಪುರುಷರ ಪ್ರತಿಮೆಗಳನ್ನು ನಿಲ್ಲಿಸಲಾಗಿದೆ. ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈಯೆತ್ತಿ "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ" ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಲೇಖಕರು ಹೇಳಿದ್ದಾರೆ.

**ಸ್ವಾರಸ್ಯ:** ತಮ್ಮ ದೇಶದ ಸಾಧಕರ ಮಹನೀಯರ ಬಗ್ಗೆ ಅಲ್ಲಿನ ಜನತೆ ಹೊಂದಿರುವ ಅಭಿಮಾನ, ದೇಶದ ಗೌರವವನ್ನು ಲೇಖಕರು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

2. **"ಹೊತ್ತು! ಹೊತ್ತು ! ಹೊತ್ತೇ ಹಣ"**

**ಆಯ್ಕೆ:** ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್ ನಗರ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಲಂಡನ್ ನಗರದ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ತಿರುಗಾಡುತ್ತಾರೆ, ಅವಸರದಿಂದ ಓಡುತ್ತಾರೆ. ವಿದೇಶಿಯರು ಹಣಗಳಿಸಲು ಅವಸರ ಪಡುತ್ತಾರೆ, ಅವರಿಗೆ ಸಮಯವೇ ಹಣ. ಇದು ಅಕ್ಷರಶಃ ವಿದೇಶದಲ್ಲಿ ನಿಜವಾಗಿದೆ ಎಂದು ಹೇಳಿದ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:** ವಿದೇಶಗಳ ಜನರು ಹಣಗಳಿಸಲೆ ಅತಿ ಸಮಯವನ್ನು ನೀಡುತ್ತಾರೆ. ಸಮಯವೇ ಅವರಿಗೆ ಹಣ ಅವರು ಸಮಯಕ್ಕೆ ಕೊಡುವ ಮಹತ್ವವನ್ನು ಸ್ವಾರಸ್ಯವಾಗಿ ಹೇಳಲಾಗಿದೆ.

3. **"ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"**

**ಆಯ್ಕೆ:** ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್ ನಗರ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಲೇಖಕರು ವೆಸ್ಟ್ ಮಿನಿಸ್ಟರ್ ಅಬೆಯಲ್ಲಿರುವ ಪೊಯೆಟ್ಸ್ ಕಾರ್ನರ್‌ಗೆ ಹೋಗಿದ್ದರು. ಅಲ್ಲಿ ಸತ್ತವರಿಗೆ ನಾವು ಒಂದೊಂದು ಹಿಡಿಮಣ್ಣನ್ನು ಕೊಡುವಂತೆ ಒಂದೊಂದು ಕಲ್ಲನ್ನು ಕೊಟ್ಟಿದ್ದರು. ಲೇಖಕರಿಗೆ ಆ ಕವಿಗಳ ಮೂಲೆಯಲ್ಲಿ ನಡೆದಾಗ ಒಂದು ಭವ್ಯತೆಯು ಬಂದು ಕಣ್ಣೆದುರು ನಿಲ್ಲುತ್ತದೆ. ಹೃದಯ ಕಂಪಿಸುತ್ತದೆ. ತಪ್ಪು ಹೆಜ್ಜೆ ಹಾಕಬಹುದೆಂಬ ಹೆದರಿಕೆ ಹಿಡಿದು ನಿಲ್ಲಿಸುತ್ತದೆ. ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:** ಜೀವನದ ನಶ್ವರತೆಯನ್ನು ಎಲ್ಲರೂ ಒಂದು ದಿನ ಮಣ್ಣು ಸೇರಲೇ ಬೇಕಾದ ಅನಿವಾರ್ಯತೆಯನ್ನು ಬಹು ಸ್ವಾರಸ್ಯ ಪೂರ್ಣವಾಗಿ ಹೇಳಲಾಗಿದೆ.

4. **"ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"**

**ಆಯ್ಕೆ:** ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರ "ಸಮುದ್ರದಾಚೆಯಿಂದ" ಎಂಬ ಪ್ರವಾಸ ಕಥನದಿಂದ ಆಯ್ದ "ಲಂಡನ್ ನಗರ" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಲಂಡನ್ ನಗರಕ್ಕೆ ಪ್ರವಾಸ ಹೋಗಿದ್ದ ಲೇಖಕರು ಅಲ್ಲೆ ಸ್ವಲ್ಪ ದಿನಗಳಲ್ಲೆ ತನ್ನ ಮನಸ್ಸು ವಿಕಾಸ ಹೊಂದಿತೆಂದೂ, ವಿಶಾಲ ದೃಷ್ಟಿ ಹೊಂದಿದೆನೆಂದೂ ಹೇಳಿದ್ದಾರೆ. ತನ್ನ ಸಂಸ್ಕೃತಿಯ ಎಂತಹ ಓರೆಗಲ್ಲಿನ ಮೇಲೆ ನಿಂತಿದೆ ಇದನ್ನೆಲ್ಲ ನೆನಪಿಸಿದಾಗ ಪ್ರವಾಸವು ಶಿಕ್ಷಣದ ಒಂದು ಭಾಗವಾಗಿ ಎಂದು ಬೇತನ್ನೆನು ಹೇಳಿದ ಮಾತು ನೆನಪಾಗುತ್ತದೆ ಎಂದು ಹೇಳಿದ್ದಾರೆ

**ಸ್ವಾರಸ್ಯ :** ಜೀವನದ ವಿಕಾಸದಲ್ಲಿ ಪ್ರವಾಸದ ಮಹತ್ವವನ್ನು ಶಿಕ್ಷಣದ ವ್ಯಾಪಕತೆಯನ್ನು ಹಾಗೂ ಪ್ರವಾಸವು ನಮ್ಮ ಅನುಭವವನ್ನು ಹೆಚ್ಚಿಸುವುದು ಎಂಬುದನ್ನು ಸ್ವಾರಸ್ಯವಾಗಿ ಹೇಳಲಾಗಿದೆ.

ಈ) **8–10 ವಾಕ್ಯಗಳಳಲ್ಲಿ ಉತ್ತರಿಸಿ**

1. **ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?**

**ಉ:** ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ್ಯ ಜಗತ್ತು. ಅಲ್ಲಿನ ರಸ್ತೆಗಳಲ್ಲಿ ವ್ಯಾಪಾರವು ತುಂಬಿ ಟ್ರಾಮ್ ಬಸ್ಸುಗಳಿಗೆ ಸಕಾಲಕ್ಕೆ ಹೋಗಲು ಸಾಧ್ಯವಿಲ್ಲದ ಕಾರಣ ಅದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಯನ್ನು ಓಡಿಸುವ ವ್ಯವಸ್ಥೆಯಿದೆ. ವೂಲವರ್ಥ ಎಂಬ ಸ್ಟೇಷನರಿ ಅಂಗಡಿಯಲ್ಲಿ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡ ತಕ್ಕಂತಹುದು ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾದ ಇಲ್ಲಿ ಸಣ್ಣ ಸಣ್ಣ ವಸ್ತುಗಳಿಂದ ಹಿಡಿದು ಯುದ್ಧ ಸಾಮಗ್ರಿಯವರೆಗೆ ಎಲ್ಲವೂ ಸಿಗುತ್ತದೆ. ಲಂಡನ್ ನಗರದಲ್ಲಿ ಗಂಡಿಗಿಂತ ಹೆಣ್ಣು ಹೆಚ್ಚಿದ್ದ ಹಾಗೆ ಕಾಣುತ್ತದೆ. ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಇಲ್ಲಿಯ ಇಂಡಿಯಾ ಆಫೀಸು ನೋಡುವ ಆಗಿದೆ. ವಾಚನಾಲಯದಲ್ಲಿ ಆನೇಕ ಮಹತ್ವದ ಪುಸ್ತಕಗಳಿದ್ದು ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ಮಾತುಗಳು ಇಲ್ಲಿ ಗೊತ್ತಾಗಬಹುದು ಎಂದು ಕಾಣುತ್ತದೆ.

ಚೇರಿಂಗ್ ಕ್ರಾಸ್ ಎಂಬ ಓಣಿಯಲ್ಲಿ ಆಂಗ್ಲ ಸಾಮ್ರಾಜ್ಯದ ವೈಭವವು ಕಂಡು ಬರುವುದು ಇಂಡಿಯಾ ಆಫೀಸಿನ ಹತ್ತಿರ ಆಫ್ರಿಕನ್ ಕಛೇರಿ ಇನ್ನೊಂದು ವಸಾಹತಿನ ಕಛೇರಿ, ನೂರೆಂಟು ಬ್ಯಾಂಕ್‌ಗಳು ದೊಡ್ಡ ಕಂಪನಿಗಳ ಕಛೇರಿಗಳು ಎಲ್ಲಾವು ದಂಗು ಬಡಿಸುವಂತೆ ನೆರೆದಿವೆ, ನಗರದ ಪ್ರತಿಯೊಂದು ಕೂಟಕ್ಕೆ ಒಂದು ಹೆಸರೇನಾದರೂ ಇದ್ದೆ ಇರುತ್ತದೆ. ಬೀದಿ ಬೀದಿಗೆ ಮೂಲೆ ಮೂಲೆಗೆ ಇತಿಹಾಸ ಪ್ರಸಿದ್ದ ಮಹಾಪುರುಷರ ಸ್ಮಾರಕಗಳಿವೆ. ಲಂಡನ್ ನಗರದಲ್ಲಿ 'ವೆಸ್ಟ್ ಮಿನಿಸ್ಟರ್ ಅಬೆ' ಎಂಬ ಪುರಾತನವಾದ ಪ್ರಾರ್ಥನಾ ಮಂದಿರವಿದೆ. ಸತ್ತವರ ಸ್ಮಾರಕವೆಂದು ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲೆ ಇನ್ನೆಲ್ಲಿಯೂ ಇರಲಾರದು. ಪೊಯೆಟ್ಸ್ ಕಾರ್ನರ್, ವಿಜ್ಞಾನಿಗಳ ಮೂಲೆ, ಅರಸರ ಅರಮನೆ ಇವೆಲ್ಲವೂ ಇಲ್ಲಿನ ವಿಶೇಷವಾಗಿವೆ ಎಂದು ಲೇಖಕರು ವಿವರಿಸಿದ್ದಾರೆ.

**2. "ವೆಸ್ಟ್ ಮಿನ್ ಸ್ಟರ್ ಅಬೆ" ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.**

ಉ: ವೆಸ್ಟ್ ಮಿನಿಸ್ಟರ್ ಅಬೆ' ಎಂಬ ಪ್ರಾರ್ಥನಾಮಂದಿರ ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ ಕೆಲವೊಂದು ಭಾಗಗಳ ದುರಸ್ಥಿ0ಯನ್ನು ಬಿಟ್ಟರೆ ಇಂದಿಗೂ ಅಚ್ಚಳಿಯದೆ ಉಳಿದಿದೆ. ಇಲ್ಲಿ ಸಂತ, ಸಾರ್ವಭೌಮರು ಮಲಗಿರುವರು ಕವಿ ಪುಂಗವರು ಒರಗಿರುವರು, ಸತ್ತವರ ಸ್ಮಾರಕವೆಂದು ಇದಕ್ಕಿಂತ ಶ್ರೇಷ್ಠವಾದ ಮಂದಿರವು ಜಗತ್ತನಲ್ಲಿ ಇನ್ನೆಲ್ಲಿಯೂ ಇರಲಾರದು. 300 ವರ್ಷಗಳ ಹಿಂದೆ ಬ್ಯೂಮಾಂಟ್ ಎಂಬ ಕವಿಯ ಈ ಗೋರಿಯನ್ನು ನೋಡಿ ಮರ್ತ್ಯತ್ವವೇ ಎಷ್ಟು ಗೋರಿ ಗುಂಪುಗಳು ಇಲ್ಲಿವೆ ನೋಡಿ ಅಂಜು ಎಂಬ ಹಾಡನ್ನು ಬರೆದಿದ್ದಾನೆ. ಗೋಲ್ಡ್‌ಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು 'ವೆಸ್ಟ್‌ಮಿನಸ್ಟರ್ ಅಬೆಯ ಸಂದರ್ಶನ' ಎಂಬ ವಿಷಯದ ಮೇಲೆ ಉತ್ತಮವಾದ ನಿಬಂಧನೆಗಳನ್ನು ಬರೆದಿದ್ದಾರೆ. ಇಂದಿಗೂ ಇದು ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿದೆ.

ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲೀಷ್ ಲೇಖಕರಾದ ಕಿಪ್ಲಿಂಗ್ ಹಾರ್ಡಿ, ಮ್ಯಾಕಲ್, ಜಾನ್ಸನ್, ಗೋಲ್ಡ್‌ಸ್ಮಿತ್, ವರ್ಡ್ಸ್‌ವರ್ತ್, ಬೆನ್ ಜಾನ್ಸನ್ ಮೊದಲಾದವರ ಸಮಾಧಿಗಳಿವೆ, ವೈಜ್ಞಾನಿಕರ ಮೂಲೆಯಲ್ಲಿ ನ್ಯೂಟನ್‌ನ ದೊಡ್ಡದಾದ ಶಿಲಾ ಮೂರ್ತಿಯನ್ನು ನಿಲ್ಲಿಸಿದ್ದಾರೆ. ಇಲ್ಲಿಯ ಕೆತ್ತನೆಯ ಕೆಲಸವೆಲ್ಲ ಬಂಗಾರದ ಬಣ್ಣದಲ್ಲಿಯೇ ಆಗಿವೆ ಮಂದಿರದ ಮುಂದೆ ಭವ್ಯವಾಗಿ 7 ನೇಯ ಹೆನ್ರಿಯ ಗೋರಿಯು ನಿಂತಿದೆ. ಇದೊಂದು ಪ್ರಾರ್ಥನಾ ಮಂದಿರವಾಗಿದ್ದರೂ ಬ್ರಿಟೀಷ್ ಸಾಮ್ರಾಜ್ಯದ ಇತಿಹಾಸ, ಕಲೆ, ಸಾಹಿತ್ಯ, ವಿಜ್ಞಾನದ ಗುರುತುಗಳನ್ನು ಸ್ಮರಿಸುವ ಒಂದು ವಿಶೇಷ ಸ್ಮಾರಕವಾಗಿದೆ.

**ಉ) ಇಲ್ಲಿ ಬಿಟ್ಟಿರುವ ಪದಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಲಂಡನ್ ಪಟ್ಟಣವೆಂದರೆ ಒಂದು____________ಜಗತ್ತು. ಉ:– ಸ್ವತಂತ್ರ
2. ವೂಲವರ್ಥ ಎಂಬುದು ______________ಅಂಗಡಿ. ಉ:– ಸ್ಟೇಷನರಿ
3. ಮನೆ ಹಿಡಿದು ಇರುವ____________ಬುದ್ಧಿ ಮನೆಯ ಮಟ್ಟದೇ. ಉ:– ತರುಣನ
4. ಅಬೆಯಲ್ಲಿರುವ ಸಿಂಹಾಸನಕ್ಕೆ__________ಎಂದು ಹೆಸರು. ಉ:–ಸ್ಟೋನ್‌ಆಫ್ ಸ್ಕೋನ್
5. ವೆಸ್ಟ್ ಮಿನಸ್ಟರ್ ಅಬೆ ಎಂಬುದು____________ ಉ:–ಪ್ರಾರ್ಥನಾ ಮಂದಿಲ್ರು

**ಊ) ಈ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ**

{ಒಮ್ಮೊಮ್ಮೆ, ಜಾಗವನ್ನು, ಅತ್ಯಾದರ, ವಾಚನಾಲಯ, ಸಂಗ್ರಹಾಲಯ ಓಣಿಯಲ್ಲಿ}

| | | | | | | |
|---|---|---|---|---|---|---|
| ***ಉ: ಒಮ್ಮೆ*** | ***+*** | ***ಒಮ್ಮೆ*** | ***=*** | ***ಒಮ್ಮೊಮ್ಮೆ*** | ***=*** | ***ಲೋಪಸಂಧಿ*** |
| ಜಾಗ | + | ಅನ್ನು | = | ಜಾಗವನ್ನು | – | ಆಗಮಸಂಧಿ |
| ಅತಿ | + | ಆದರ | = | ಅತ್ಯಾದರ | – | ಯಣ್ ಸಂಧಿ |
| ವಾಚನ | + | ಆಲಯ | = | ವಾಚನಾಲಯ | – | ಸವರ್ಣದೀರ್ಘಸಂಧಿ |
| ಸಂಗ್ರಹ | + | ಆಲಯ | = | ಸಂಗ್ರಹಾಲಯ | – | ಸವರ್ಣದೀರ್ಘಸಂಧಿ |
| ಓಣಿ | + | ಅಲ್ಲಿ | = | ಓಣಿಯಲ್ಲಿ | – | ಆಗಮಸಂಧಿ |

**VII. ಈ ಪದಗಳ ಅರ್ಥ ಬರೆದು ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ**

| ಪದ | | ಅರ್ಥ | ಪದ | | ಅರ್ಥ |
|---|---|---|---|---|---|
| ದಂಗುಬಡಿ | – | ಅಶ್ಚಯಪಡು | ನಿಟ್ಟಿಸಿನೋಡು | – | ದೃಷ್ಟಿಸಿನೋಡು |
| ಮನಗಾಣು | – | ತಿಳಿದು ಕೊಳ್ಳು | ಘನತರ | – | ಶ್ರೇಷ್ಠವಾದ |
| ಅಚ್ಚಳಿ | – | ಅಂದಗೆಡು | ಮೂಲೆಹೊತ್ತು | – | ಅಲಕ್ಷಿಸು |
| ದುರಸ್ಥಿ | – | ಸರಿಪಡಿಸುವಿಕೆ | ದಿಕ್ಕುತಪ್ಪು | – | ದಾರಿಕಾಣದಂತಾಗು |

**ವಾಕ್ಯ ಪ್ರಯೋಗ:**

ಚೇರಿಂಗ್ ಕ್ರಾಸ್ ಓಣಿಯಲ್ಲಿ ಇಂಡಿಯಾ ಆಫೀಸ್, ಆಫ್ರಿಕನ್ ಕಛೇರಿ, ಇನ್ನೊಂದು ವಸಾಹತಿನ ಕಛೇರಿಗಳ ನೂರೆಂಟು ಬ್ಯಾಂಕ್‌ಗಳ ದೊಡ್ಡ ಕಂಪನಿಗಳ ಕಛೇರಿಗಳು ಎಲ್ಲಾವು ದಂಗುಬಡಿಸುವಂತೆ ನೆರದಿವೆ.

[ಇನ್ನುಳಿದ ಪದಗಳಿಗೆ ವಿದ್ಯಾರ್ಥಿಗಳೇ ಪಠ್ಯಪುಸ್ತಕದಲ್ಲಿ ಹುಡುಕಿ ಇಲ್ಲವೇ ನಿಮ್ಮ ಸ್ವಂತಿಕೆಯಿಂದ ವಾಕ್ಯರಚನೆ ಮಾಡಿ ಶಿಕ್ಷಕರಿಗೆ ತೋರಿಸುವುದು]

**VIII ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ:**

**1. ವೆಸ್ಟ್ ಮಿನಸ್ಟರ್ ಅಬೆ ನೋಡಿಕೊಂಡು ಬಂದೆವು. (ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ)**

ಉ:– ವೆಸ್ಟ್ ಮಿನಸ್ಟರ್ ಅಬೆ ನೋಡಿಕೊಂಡು ಬರುವೆವು.

**2. ಶೈಕ್ಷಣಿಕ ಅಧ್ಯಯನ ದೃಷ್ಟಿಯಿಂದ ಶೈಕ್ಷಣಿಕ ಪ್ರವಾಸ ಮಾಡುವರು. (ವರ್ತಮಾನ ಕಾಲಕ್ಕೆಪರಿವರ್ತಿಸಿ)**

ಉ:– ಶೈಕ್ಷಣಿಕ ಅಧ್ಯಯನ ದೃಷ್ಟಿಯಿಂದ ಶೈಕ್ಷಣಿಕ ಪ್ರವಾಸ ಮಾಡುತ್ತಾರೆ.

**3. ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತದೆ. (ಭೂತಕಾಲಕ್ಕೆ ಪರಿವರ್ತಿಸಿ)**

ಉ:– ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆತವು.

## ಬಹು ಆಯ್ಕೆಯ ಪ್ರಶ್ನೆಗಳು

1. 'ಪುಸ್ತಕ' ಪದದ ತದ್ಭವ ರೂಪ
   ಅ) ಬುಕ್ ಆ) ಗ್ರಂಥ ಇ) ಹೊತ್ತಿಗೆ ಈ) ಕೃತಿ
   **ಉ:– ಹೊತ್ತಿಗೆ**
2. 'ಕಛೇರಿ' ಎಂಬ ಪದ ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಅ) ಹಿಂದೂಸ್ಥಾನಿ ಆ) ಅರಬ್ಬೀ ಇ) ಪೋರ್ಚುಗೀಸ್ ಈ) ಉರ್ದು
   **ಉ:– ಹಿಂದೂಸ್ಥಾನಿ**
3. 'ತುಸು' ಪದದ ಅರ್ಥವಿದು
   ಅ) ತಾಸು ಆ) ಸ್ವಲ್ಪ ಇ) ಗಂಟೆ ಈ) ಕೂಸು
   **ಉ:– ಸ್ವಲ್ಪ**
4. ಬೀದಿ ಬೀದಿ, ಹೆಜ್ಜೆಹೆಜ್ಜೆ ಹೌದುದು– ಈ ಪದಗಳ ವ್ಯಾಕರಣ ವಿಶೇಷ
   ಅ) ದ್ವಿರುಕ್ತಿ ಆ) ಜೋಡಿಪದ ಇ) ಅನುಕರಣಾವ್ಯಯ ಈ) ನುಡಿಗಟ್ಟು
   **ಉ:– ದ್ವಿರುಕ್ತಿ**
5. 'ಕೈಯೆತ್ತಿ'– ಈ ಪದವು
   ಅ) ಲೋಪಸಂಧಿ ಆ) ಆಗಮಸಂಧಿ ಇ) ಆದೇಶಸಂಧಿ ಈ) ಗುಣಸಂಧಿ
   **ಉ:– ಆಗಮಸಂಧಿ**
6. 'ದೊರೆಯುತ್ತವೆ' ಈ ಪದದ ಭವಿಷ್ಯತ್ ಕಾಲದ ರೂಪ ಇದು.
   ಅ) ದೊರೆಯದು ಆ) ದೊರೆಯಿತು ಇ) ದೊರೆಯುವುವು ಈ) ದೊರೆಯುತ್ತವೆ
   **ಉ:– ಆ0ಯಾಸ**
7. 'ಅನಾಯಾಸ' ಈ ಪದದ ವಿರುದ್ಧ ಪದ
   ಅ) ಯಾಸ ಆ) ನಾಯಾಸ ಇ) ಆಯಾಸ ಈ) ಹಾಯಾಸ
   **ಉ:– ದೊರೆಯುವುದು**
8. 'ಬೂಟು' ಈ ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ
   ಅ) ಪೋರ್ಚುಗೀಸ್ ಆ) ಅರಬ್ಬಿ ಇ) ಇಂಗ್ಲೀಷ್ ಈ) ಹಿಂದಿ
   **ಉ:– ಇಂಗ್ಲೀಷ್**
9. 'ಮರ್ತ್ಯ' ಪದದ ಅರ್ಥ ಇದು
   ಅ) ಭೂಮಿ ಆ) ಮಾತು ಇ) ಮತ್ತು ಈ) ತಾಯಿ
   **ಉ:– ಭೂಮಿ**
10. 'ಕಬ್ಬಿಗ' ಪದದ ಸಂಸ್ಕೃತ ರೂಪ
    ಅ) ಕಬ್ಬ ಆ) ಕಾವ್ಯ ಇ) ಕಾವ ಈ) ಕವಿ
    **ಉ:– ಕವಿ**
11. 'ನೂರಾರು' ಪದದ ಸಂಧಿ
    ಅ) ಸವರ್ಣದೀರ್ಘ ಆ) ಲೋಪ ಇ) ಆಗಮ ಈ) ಆದೇಶ
    **ಉ:– ಲೋಪಸಂಧಿ**

12. 'ಎಷ್ಟು' ಎಂಬ ಪದವು
ಅ) ಸಂಖ್ಯಾವಾಚಕ ಆ) ಪ್ರಶ್ನಾರ್ಥಕ ಇ) ಪರಿಮಾಣವಾಚಕ ಈ) ದಿಗ್ವಾಚಕ
**ಉ:– ಪರಿಮಾಣವಾಚಕ**

13. 'ತಪಶ್ಚರ್ಯೆ' ಎಂಬ ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಅ) ಜಸ್ತ್ವಸಂಧಿ ಆ) ಅನುನಾಸಿಕಸಂಧಿ ಇ) ಶ್ಚುತ್ವಸಂಧಿ ಈ) ಯಣ್‌ಸಂಧಿ
**ಉ: ಶ್ಚುತ್ವಸಂಧಿ**

14. 'ಮೂರ್ತಿ' ಎಂಬ ಪದದ ತದ್ಭವ ರೂಪ
ಅ) ವಿಗ್ರಹ ಆ) ದೇವರು ಇ) ಮೂರ್ತಿ ಈ) ಮೂರುತಿ
**ಉ:– ಮೂರುತಿ**

15. 'ಪೆನ್ನಿ' ಎಂಬ ಪದವು ಅರ್ಥ
ಅ) ಪೆನ್ನು ಆ) ಕುನ್ನಿ ಇ) ನಾಣ್ಯ ಈ) ಬನ್ನಿ
**ಉ:– ನಾಣ್ಯ**

16. 'ಸಂಸ್ಕೃತ' ಎಂಬ ಪದದ ತದ್ಭವ ರೂಪ
ಅ) ಸಮಸ್ಕೃತ ಆ) ಸಗ್ಗದ ಇ) ಸಕ್ಕದ ಈ) ಸಾಂಸ್ಕೃತಿಕ
**ಉ:–ಸಕ್ಕದ**

17. 'ನೆರೆಹೊರೆ' ಎಂಬ ಪದದ ವ್ಯಾಕರಣ ವಿಶೇಷ
ಅ) ದ್ವಿರುಕ್ತಿ ಆ) ಜೋಡಿಪದ ಇ) ಅನುಕರಣಾವ್ಯಯ ಈ) ಪಡೆನುಡಿ
**ಉ:– ಜೋಡಿಪದ**

18. 'ಗೃಹಸ್ಥಾಶ್ರಮ' ಎಂಬ ಪದದವನ್ನು ಬಿಡಿಸಿ ಬರೆದಾಗ
ಅ) ಗ್ರಹ+ಆಶ್ರಮ ಆ) ಗೃಹಸ್ಥ+ಆಶ್ರಮ ಇ) ಗೃಹಸ್ಥ+ ಶ್ರಮ ಈ) ಗೃಹಾ+ಆಶ್ರಮ
**ಉ:–ಗೃಹಸ್ಥ+ಆಶ್ರಮ**

19. 'ಒಳಗಣ್ಣು' ಈ ಸಮಾಸಕ್ಕೆ ಉದಾಹರಣೆಯಾಗಿದೆ
ಅ) ತತ್ಪುರುಷ ಆ) ಅಂಶಿಸಮಾಸ ಇ) ಕರ್ಮಧಾರೆಯ ಈ) ದ್ವಿಗುಸಮಾಸ
**ಉ:–ಅಂಶಿಸಮಾಸ**

20. 'ಗತ್ಯಂತರ' ಇದರ ಸಂಧಿ
ಅ) ಗುಣಸಂಧಿ ಆ) ಸವರ್ಣದೀರ್ಘ ಇ) ಯಣ್‌ಸಂಧಿ ಈ) ಆಗಮಸಂಧಿ
**ಉ:–ಯಣ್‌ಸಂಧಿ**

21. 'ಅಗ್ನಿದಿವ್ಯ' ಇದು ಈ ಅಲಂಕಾರಕ್ಕೆ ಉದಾಹರಣೆಯಾಗಿದೆ
ಅ) ರೂಪಕ ಆ) ದೃಷ್ಟಾಂತ ಇ) ಉಪಮಾ ಈ) ಅರ್ಥಾಂತರನ್ಯಾಸ
**ಉ:–ರೂಪಕ**

22. 'ಅವನು' ಇದು ಈ ನಾಮಪದವಾಗಿದೆ
ಅ) ಅಂಕಿತನಾಮು ಆ) ರೂಢನಾಮ ಇ) ಅನ್ವರ್ಥಕನಾಮ ಈ) ಸರ್ವನಾಮ
**ಉ:–ಸರ್ವನಾಮ**

23. 'ಅವಳು ಬರುತ್ತಾಳೆ' ಇದು ಭೂತ ಕಾಲದಲ್ಲಿ ಬರೆದಾಗ
ಅ) ಬರುವಳು ಆ) ಬರ್ತಾಳೆ ಇ) ಬಾರಳು ಈ) ಬಂದಳು
**ಉ:–ಬಂದಳು**

24. 'ಹಾಡುತ್ತೇನೆ' ಎಂಬುದು
ಅ) ಪ್ರಥಮ ಪುರುಷ ಆ) ಉತ್ತಮ ಪುರುಷ ಇ) ಮಧ್ಯಮಪುರುಷ ಈ) ಆರ್ತ್ಮಾಥಕ
**ಉ:–ಉತ್ತಮ ಪುರುಷ**

25. 'ಬಗ್ಗಾಲಿ' ಪದದ ಸಮಾಸ
ಅ) ತತ್ಪುರುಷ ಆ) ಅಂಶಿಸಮಾಸ ಇ) ದ್ವಿಗುಸಮಾಸ ಈ) ದ್ವಂದ್ವಸಮಾಸ
**ಉ:–ದ್ವಿಗುಸಮಾಸ**

# ಘಟಕ ಪರೀಕ್ಷೆ – 1

**20–ಅಂಕಗಳು**

**ಅ) ಬಹು ಆಯ್ಕೆಯ ಪ್ರಶ್ನೆಗಳು:** **3x1=3**

1. ಭೂತಕಾಲ ಸೂಚಕ ಪ್ರತ್ಯಯವಿದು
   ಅ) ದ ಆ) ಉತ್ತ ಇ) ವ ಈ) ಉವ
2. 'ಓದುತ್ತಾನೆ' ಕ್ರಿಯಾಪದವು ಈ ಕಾಲರೂಪದಲ್ಲಿದೆ
   ಅ) ಭೂತ ಆ) ವರ್ತಮಾನ ಇ) ಭವಿಷ್ಯ ಈ) ಭೂತನ್ಯೂನ
3. 'ಕಾಲೇಜು' ಪದವು ಈ ಭಾಷಯಿಂದ ಕನ್ನಡಕ್ಕೆ ಬಂದಿದೆ
   ಅ) ಉರ್ದು ಆ) ಇಂಗ್ಲೀಷ್ ಇ) ಪರ್ಷಿಯನ್ ಈ) ಹಿಂದೂಸ್ಥಾನಿ

**ಆ) ಕೊಟ್ಟಿರುವ ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ:**

**3x1=3**

1. ನಡುನಡುವೆ : ದ್ವಿರುಕ್ತಿ : : ಧಡಧಡ : ______________
2. ವಾಚನಾಲಯ : ಸವರ್ಣದೀರ್ಘಸಂಧಿ : : ಅತ್ಯಾದರ : ______________
3. ಕಾರಕೂನ : ಗುಮಾಸ್ತ : : ಕಬ್ಬಿಗ : ______________

**ಇ) ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **3x1=3**

1. ನೆಲ್ಸನ್ ಅವರ ಮೂರ್ತಿ ಇರುವ ಸ್ಥಳದ ಹೆಸರೇನು?
2. 'ವೆಸ್ಟ್ ಮಿನಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?
3. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?

**ಉ) ಕೊಟ್ಟಿರುವ ಪ್ರತಿಪ್ರಶ್ನೆಗೂ 3–4 ವಾಕ್ಯದಲ್ಲಿ ಉತ್ತರಿಸಿ:** **2x4=8**

1. ವಿ.ಕೃ.ಗೋಕಾಕ್ ರವರ ಕಾಲ, ಸ್ಥಳ, ಕೃತಿಗಳ ಪ್ರಶಸ್ತಿಗಳನ್ನು ತಿಳಿಸಿ ಟಿಪ್ಪಣಿ ಬರೆಯಿರಿ ?
2. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು? ವಿವರಿಸಿ
3. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
4. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?

**ಊ) ಈ ಕೆಳಗಿನ ಹೇಳಿಕೆಯ ಸಂದರ್ಭ ತಿಳಿಸಿ ಸ್ವಾರಸ್ಯ ಬರೆಯಿರಿ:** **1x3=3**

**1. 'ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ'**

# <u>ಘಟಕ ಪರೀಕ್ಷೆ – 2</u>

**20–ಅಂಕಗಳು**

**ಅ) ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **1x4=4**

1. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳ ಬಹಳ ಹೊತ್ತು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?
2. ಇಂದಿಗೂ ಕಬ್ಬಗರ ಸ್ಫೂರ್ತಿಯ ತವರು ಮನೆಯಾಗಿರುವುದು ಯಾವುದು?
3. ಲಂಡನ್ ನಗರದಲ್ಲಿ ಇಂಡಿಯಾ ಆಫೀಸು ಯಾವ ಓಣಿಯಲ್ಲಿದೆ?
4. ಆಂಗ್ಲರ ಕೀರ್ತಿ ಧ್ವಜವನ್ನು ನಿಲ್ಲಿಸಿದವರು ಯಾರು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:** **2x3=6**

1. ಪೊಯೆಟ್ ಕಾರ್ನರ್ ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?
2. ಚೇರಿಂಗ್ ಕ್ರಾಸ್ ಓಣಿಯ ವಿಶೇಷತೆಯೇನು?
3. ರಾಜಮಂದಿರದಲ್ಲಿರುವ ಮೂರ್ತಿಗಳ ಹೆಸರನ್ನು ತಿಳಿಸಿ?

**ಇ) ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ:** **2x3=6**

1. "ನಿಮ್ಮ ದೇಶದ ಗೌರವವನ್ನು ಕಾಯಿರಿ ! ಇದು ದೊಡ್ಡದಾದ ರಾಷ್ಟ್ರ"
2. "ಯಾರನ್ನು ತುಳಿದರೇನು ! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ ! ಮಣ್ಣು ! ಮಣ್ಣು!

**ಈ) 8–10 ವಾಕ್ಯಗಳಲ್ಲಿ ಉತ್ತರಿಸಿ :** **1x4=4**

1. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಯೇನು?

**ಅಥವಾ**

ವೆಸ್ಟ್ ಮಿನಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ

*********

# ಪದ್ಯ ಪಾಠ 03
# ಹಲಗಲಿ ಬೇಡರು

ಜನಪದ ಲಾವಣಿ (ಸಂಗ್ರಹ)
ಆಕರ ಗ್ರಂಥ: ಡಾ॥ ಬಿ.ಎಸ್.ಗದ್ದಗಿಮಠ–
ಕನ್ನಡ ಜನಪದ ಗೀತೆಗಳು

**ಕೃತಿಕಾರರ ಪರಿಚಯ :**

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ ವೀರತನ ಸಾಹಸವನ್ನು ವರ್ಣಿಸುವುದರಿಂದ ಲಾವಣಿ ಎಂದರೆ 'ವೀರಗೀತೆ' ಎಂದು ಕರೆಯುವುದು ವಾಡಿಕೆ. ಏಕ ಘಟನೆಯನ್ನಾಧರಿಸಿದ್ದು ಕಥನಾತ್ಮಕವಾಗಿರುವ ಲಾವಣಿಗಳ ಹಾಡಿನ ರೂಪದಲ್ಲಿ ಕಟ್ಟಿದ ಕತೆ. ಜನ ಸಾಮನ್ಯರು ರಚಿಸಿರುವ ಲಾವಣಿಗಳು ವಸ್ತು ನಿಷ್ಠವಾಗಿರುತ್ತದೆ ಹಿಂದಿನಿಂದ ವಾಕ್‌ಪರಂಪರೆಯಲ್ಲಿ ಉಳಿದು ಬಂದಿದ್ದು ಐತಿಹಾಸಿಕ ಮಹತ್ವ ಪಡೆದಿವೆ ಗದ್ಯದ ಹೊಳಹನ್ನು ಭಾವಗೀತದ ಸತ್ವವನ್ನು ಹೊಂದಿರುವ ಲಾವಣಿಗಳು ಧ್ವನಿ ರಮ್ಯತೆಯನ್ನು ಅರ್ಥ ಸೌಂದರ್ಯವನ್ನು ಹೊಂದಿವೆ.
ಪ್ರಸ್ತುತ ಲಾವಣಿಯನ್ನು ಡಾ॥ ಬಿ.ಎಸ್. ಗದ್ದಗಿಮಠ ಅವರ "ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದು ನೀಡಲಾಗಿದೆ.

**ಪದ್ಯಗಳ ಸಾರಾಂಶ ವಿವರಣೆ**

**1**

ಕತ್ತಿ ಹಿಡಿದು ಹೋರಾಡುವ ಶೂರರಾದ ಹಲಗಲಿ ಬೇಡರಿಗೆ ಕತ್ತಿ ಹಿಡಿಯುವ ಸಮಯ ಬಂಧಿತು. ಇಂತಹ ಹಲಗಲಿ ಬೇಡರ ಬಂಡಾಯವು ನಿರೀಕ್ಷಿತ ಯಶಸ್ಸು ಪಡೆಯಲು ಸಾಧ್ಯವಾಗಲಿಲ್ಲ.

**2**

ಬ್ರಿಟಿಷ್ ಸರಕಾರವು 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದಿತು. ಅದರಂತೆ ಬ್ರೀಟೀಷ್ ಈಸ್ಟ್ ಇಂಡಿಯಾ ಕಂಪನಿ ಎಲ್ಲಾ ಭಾರತೀ0ಯರನ್ನು ಒಪ್ಪಿಸಿ ಅಥವಾ ಬೆದರಿಸಿಯಾದರೂ ಅವರ ಬಳಿಯಿರುವ ಆಯುಧಗಳನ್ನು ಕಸಿದು ಕೊಳ್ಳಬೇಕೆಂದು ಕಂಪನಿಯ ಸರ್ಕಾರ ಆದೇಶಿಸಿತು. ಆಗ ಮುಧೋಳದ ಬಳಿಯಲ್ಲಿ ಹಲಗಲಿ ಬೇಡರು ಸೇರಿದರು, ಪೂಜಾರಿ ಹನುಮ, ಬೇಡರ ಬಾಲ, ಜಡೆಗ, ರಾಮ ಮೊದಲಾದವರು ಸೇರಿ ನಾವು ನಾಲ್ವರೂ ಜೊತೆಗಿರೋಣ ಯಾವುದೇ ಕಾರಣಕ್ಕೂ ನಮ್ಮ ಬಳಿಯಿರುವ ಆಯುಧಗಳನ್ನು ಕೊಡಬಾರದು. ಆಯುಧಗಳು ಹೋದರೆ ನಮ್ಮ ಜೀವವೇ ಸತ್ತು ಹೋಗುತ್ತದೆ. ಎಂದು ತೀರ್ಮಾನಿಸಿದರು. ಬೇಡರೆಲ್ಲರೂ ಕಲೆತು ನಾವೆಲ್ಲರೂ ನಿಮ್ಮ ಜೊತೆಯಾಗಿದ್ದೇವೆ. ನೀವು ಮುಂದಾಗಿ ಯುದ್ಧ ಮಾಡಿರಿ ನಿಮ್ಮ ಬೆಂಬಲಕ್ಕೆ ನಾವಿದ್ದೇವೆ, ಎಂದು ತಮ್ಮ ಮುಖಂಡರಿಗೆ ಮಾತು ಕೊಟ್ಟರು ಆಯುದಗಳನ್ನು ಕಸಿದು ಕೊಳ್ಳಲು ಬಂದ ಗುಮಾಸ್ತನ ಕಪಾಳಕ್ಕೆ ಹೊಡೆದರು ಇದಕ್ಕೆ ಪ್ರತಿರೋದ ತೋರಿದ ಸಿಪಾಯಿಯನ್ನು ಸಾಯಿಸಿ ನೆಲಕ್ಕೆ ಬೀಳುವಂತೆ ಮಾಡಿದರು. ಇದರಿಂದ ದುಃಖಿತನಾದ ಗುಮಾಸ್ತನು ಈ ವಿಷಯವನ್ನು ತನ್ನ ಸಾಹೇಬನಿಗೆ(ಜಿ.ಬಿ ಸೆಟೆನ್ಕರ್) ತಿಳಿಸಿದನು.

**3**

ಈ ವಿಷಯದ ಭೀಕರತೆ ತಿಳಿದ ಸಾಹೇಬನು ಸಿಟ್ಟಿನಲ್ಲಿ ಕೈಗಳನ್ನು ಕಿವುಚಿಕೊಂಡು ತನ್ನ ಸೈನಿಕರಿಗೆ ಆದೇಶವನ್ನು ನೀಡಿದನು. ಆಗ ಕೆಲವು ಅಶ್ವದಳ, ಕಾಲ್ದಳದ ಜನರನ್ನು ಹಲಗಲಿಗೆ ಕಳುಹಿಸಿ ಕೊಡುತ್ತಾನೆ. ಆಗ ಹಲಗಲಿಯ ಜನ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಊರೊಳಗೆಲ್ಲ ಗುಂಪಿನ ಮಳೆಗರೆಯುತ್ತಾರೆ. ಇದರಿಂದ ಬ್ರಿಟೀಷ್ ಸೈನಿಕರು ಬೇಡರ ದಾಳಿಗೆ ಹೆದರಿ ಗಾಯಗೊಂಡು ದಂಗಾಗಿ ಹಿಮ್ಮೆಟ್ಟುತ್ತಾರೆ. ಸಾಹೇಬ ವಿಧಿಯಿದೆ ತನ್ನ ಮೇಲಾಧಿಕಾರಿಗೆ (ಹೆನ್ರಿ ಹ್ಯಾವ್ ಲಾಕ್) ಕಾಗದ ಬರೆದು ದಂಡನ್ನು ಕಳಿಸುವಂತೆ ಕೋರಿದಾಗ ತರಾತುರಿಯಿಂದ (ವೇಗವಾಗಿ) ಹಲಗಲಿಗೆ ದಂಡು ಆಗಮಿಸಿತು.

**4**

ಅಲ್ಲಿಗೆ ಬಂದ ದಂಡು ಬೇಡರನ್ನು ಕಂಡ ಕಂಡಲ್ಲಿ ಹತ್ಯೆಗೈಯ್ಯಲಾಯಿತು. ಕರುಣೆಯಿಲ್ಲದೇ ಸಿಕ್ಕ ಸಿಕ್ಕಲ್ಲಿ ಗುಂಡು ಹೊಡೆದು ಸಾಯಿಸಲಾಯಿತು. ಚಟಕಾರ (ಜೆ.ಬಿ. ಸೆನರ್‌ಕರ್ ಭಾರತೀಯ ಬ್ರಿಟೀಷರು) ಜಾಯಿತ ಸಾಹೇಬ ಕಾವಲು ಕಾ0ಯುತ್ತ ಬೇಡರ ಬಿಡಾರಗಳಿಗೆ ನುಗ್ಗಿ ಬೇಡರ ತೊಂದರೆ ನೀಡಿದರು. ಹೆನ್ರಿ ಹೆಬಲಾಕ್ ಸಾಹೇಬ ಊರಿನ ಮುಖ್ಯ ದ್ವಾರಕ್ಕೆ ಬಂದು ಬೇಡರಿಗೆ ಅನ್ಯಥಾ ಸಾಯದೇ ಆಯುಧಗಳನ್ನು ಮರಳಿಸುವಂತೆ ಬುದ್ಧಿ ಮಾತನ್ನು ಹೇಳುತ್ತಾನೆ. ಆದರೆ ಬೇಡರ ಹನುಮನಿಗೆ ಹೆಬಲಿಕ್ ಸಾಹೇಬನ ಮಾತಿನಲ್ಲಿ ನಂಬಿಕೆ ಮೂಡದೆ ಅವನು ಮುಂದೆ ಬಂದು ನಿಂತನು.

**5**

ಬ್ರಿಟೀಷರು ಘಾತಕರು, ವಿಶ್ವಾಸಘಾತ ಮಾಡಿರುವರು ಇವರ ಮೇಲೆ ನಮಗೆ ನಂಬಿಕೆ ಇಲ್ಲ. ಇವರು ಪಿತೂರಿ ಮಾಡಿ ಮೋಸದಿಂದ ನಮ್ಮ ದೇಶ ಗೆಲ್ಲುವವರ ಮುಂದೆ ನಮಗೆ ಘೋರ ವಿಪತ್ತು ಇವರಿಂದ ಕಾದಿದೆ. ಎಂದು ಹೇಳಿದ ಜಿಡಗ ಬುದ್ಧಿವಾದ ಹೇಳಲು ಬಂದ ಅಧಿಕಾರಿ (ಹೆನ್ರಿ ಹೆಬಲಕ್) ಮೇಲೆ ಗುಂಡು ಹಾರಿಸಿ ಸಾಯಿಸುತ್ತಾನೆ. ಇದರಿಂದ ಸಿಟ್ಟಾದ ಬ್ರಿಟೀಷರ ಇನ್ನೊಬ್ಬ ಅಧಿಕಾರಿ (ಅಲೆಗ್ಸಾಂಡರ್ ವಿಲಿಯಂ ಕೆರೆ) ಬೇಡರ ಊರನ್ನೆ ಲೂಟಿ ಮಾಡುವಂತೆ ತನ್ನ ಸೈನಿಕರಿಗೆ ಆದೇಶ ನೀಡುತ್ತಾನೆ. ಸಿಟ್ಟಿನಿಂದ

ಬ್ರಿಟೀಷರು ಒಂದೇ ಸಮನೆ ಗುಂಡಿನ ಮಳೆ ಸುರಿಸಿದರು. ಆಗ ಹನುಮ ಹೇಳುತ್ತಾನೆ ಗುಂಡು ಹೊಡೆದ ಕೇಸಿ ಅಷ್ವರನ್ನು ಕೆಡವಿ ಹಾಕೋಣ ಬನ್ನಿರಿ ಎಂದಾಗ ಮುನ್ನೂರುಜನ ಸೈನಿಕರು ಹನುಮನ ಮೈ ಮೇಲೆ ಎರಗಿದರು. ಕದನ ಜೋರಾಯ್ತು, ಭೀಮನು ಎದುರಿಗೆ ನಿಂತ ಐನ್ನೂರು ಮಂದಿಯನ್ನು, ಬಾಲನು ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದರು. ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೇ ಹರಿಯಿತು. ಸಾವಿರ ಜನರಿಗೆ ಒಬ್ಬ ಕೂಗಿ ಹೇಳುತ್ತಾರೆ ಮತ್ತೆ ಮತ್ತೆ ಕಡಿದು ಹಾಕಿರೋ ಎಂದು ಹೀಗೆ ನಾಲ್ಕು ಮಂದಿ ಕಡಿದು ಸತ್ತು ಹೋದರು. ಹನುಮ, ಬಾಲ, ಜಡಗ, ರಾಮರ ಹೋರಾಟ ವ್ಯರ್ಥವಾಯಿತು. ನಾಲ್ಕು ಮಂದಿ ಬೇಡರ ಮುಖಂಡರು ವೀರ ಮರಣವನ್ನು ಹೊಂದಿದರು.

**6**

ಕೊಡಲಿ ಕುಡಗೋಲು, ಕಬ್ಬಿಣ, ಮೊಸರು , ಬೆಣ್ಣೆ, ಹಾಲು, ಉಪ್ಪು, ಎಣ್ಣೆ ಅರಿಶಿನ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳ ಸೂತ್ರ, ಬೀಸುವ ಕಲ್ಲು ಹೀಗೆ ಬೇಡರ ಕೃಷಿ ಉಪಕರಣಗಳು, ಆಹಾರ ಪದಾರ್ಥಗಳು ಎಲ್ಲವನ್ನು ಬ್ರೀಟಿಷರು ತೆಗೆದುಕೊಂಡು ಹೋದರು, ಕೊನೆಗೆ ಇಡೀ ಊರಿಗೆ ಬೆಂಕಿ ಇಟ್ಟರು ಹಲಗಲಿ ಬೇಡರ ಊರು ಸುಟ್ಟು ಬೂದಿಯಾಯಿತು. ಗುರುತೆ ಸಿಗದಂತೆ ನಾಶವಾಯಿತು. ಕುರ್ತಕೋಟಿ ಕಲ್ಲೇಶನ ದಯದಿಂದ ಲಾವಣಿಕಾರ ಈ ಎಲ್ಲಾ ವಿಷಯಗಳನ್ನು ತಾನು ಕಂಡಷ್ಟು ವರ್ಣಿಸಿರುವುದಾಗಿ ಹೇಳಿದ್ದಾನೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊದು ವಾಕ್ಯಗಳಲ್ಲಿ ಉತ್ತರಿಸಿ.**

**1. ಕುಂಪಣಿ ಸರಕಾರ ಹೊರಡಿಸಿ ಆದೇಶ ಏನು?**

ಉ:– ಬ್ರೀಟಿಷರ ಅನುಮತಿಯಿಲ್ಲದೇ ಭಾರತೀಯರು ಯಾವುದೇ ಬಗೆಯ ಶಸ್ತ್ರಾಸ್ತ್ರಗಳನ್ನು (ನಿಶ್ಯಸ್ತ್ರೀಕರಣ ಕಾಯಿದೆ) ಹೊಂದುವ ಹಾಗಿಲ್ಲ. ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ಕುಂಪಣಿ ಸರಕಾರ ಹೊರಡಿಸಿತು.

**2. ಹಲಗಲಿಯ ನಾಲ್ವರು ಪ್ರಮುಖರು ಯಾರು?**

ಉ:– ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ರಾಮರು ಹಲಗಲಿಯ ನಾಲ್ವರು ಪ್ರಮುಖರಾಗಿದ್ದರು.

**3. ಹಲಗಲಿ ಗುರುತು ಉಳಿಯದಂತಾದುದು ಏಕೆ?**

ಉ:– ಕುಂಪಣಿ ಸರಕಾರದ ದಂಡು ಹಲಗಲಿ ಊರಿಗೆ ಬೆಂಕಿ ಹಚ್ಚಿದ್ದರಿಂದ ಅದು ಸುಟ್ಟು ಬೂದಿಯಾಗಿ ಅದರ ಗುರುತು ಉಳಿಯದಂತಾಯಿತು.

**4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**

ಉ:– ಹಲಗಲಿ ಬೇಡರ ದಂಗೆ, ಹಲಗಲಿ ಬೇಡರ ಮೇಲೆ ಕುಂಪಣಿ ಸರ್ಕಾರ ನಡೆಸಿದ ದೌರ್ಜನ್ಯ ಹಲಗಲಿ ಬೇಡರ ಲಾವಣಿಗೆ ಕಾರಣವಾಗಿದೆ.

**5. ಹಲಗಲಿ ಗ್ರಾಮ ಎಲ್ಲಿದೆ?**

ಉ:– ಹಲಗಲಿ ಗ್ರಾಮವು ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿದೆ. ಮುಧೋಳ ಸಂಸ್ಥಾನದಲ್ಲಿದ್ದು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

ಉ:– 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ನಿಶ್ಯಸ್ತ್ರೀಕರಣ ಕಾಯ್ದೆ ಜಾರಿಗೆ ತಂದ ಬ್ರಿಟೀಷ್ ಸರ್ಕಾರ ಎಲ್ಲ ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿದು ಕೊಳ್ಳುವಂತೆ ಆದೇಶ ನೀಡಿತು. ಹಲಗಲಿ ಬೇಡರು ಇದನ್ನು ವಿರೋಧಿಸಿದರು. ಆಯುಧಗಳು ಹೋದರೆ ತಮ್ಮ ಜೀವವೇ ಹೋದಂತೆ ಎಂದು ತಿಳಿದ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರ್ಕಾರದ ವಿರುದ್ಧ ದಂಗೆ ಎದ್ದರು.

**2. ಹಲಗಲಿಗೆ ದಂಡು ಬರಲು ಕಾರಣವೇನು?**

ಉ:– ಬ್ರಿಟಿಷರ ನಿಶ್ಯಸ್ತ್ರೀಕರಣ ಕಾ0ಯ್ದೆ ಆದೇಶವನ್ನು ವಿರೋಧಿಸಿದ ಹಲಗಲಿ ಬೇಡರು ಆಯುಧಗಳನ್ನು ಕೊಡದೆ ಮುಂಗಾರಿನ ಸಿಡಿಲು ಸಿಡಿ0ಯುವ ಹಾಗೆ ಗುಂಡು ಹೊಡೆದು ಕಂಪನಿ ಸರ್ಕಾರದ ವಿರುದ್ಧ ದಂಗೆ ಎದ್ದರು ಆಯುಧ ಕೇಳಲು ಬಂದ ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ವಿಷ0ಯ ತಿಳಿದ ಕಂಪನಿ ಅಧಿಕಾರಿಯು ಕೆಲವು ಜನರನ್ನು ಕಳಿಸಿದಾಗ ಅವರನ್ನು ಬೇಡರು ಹಿಮ್ಮೆಟ್ಟಿಸಿದರು. ಆದ್ದರಿಂದ ಬೇಡರನ್ನು ಹತ್ತಿಕ್ಕಲು ದೊಡ್ಡ ದಂಡು ಹಲಗಲಿಗೆ ಆಗಮಿಸಿತು.

**3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**

ಉ:– ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಯಸ್ತ್ರಿಕರಣ ಆದೇಶವನ್ನು ವಿರೋಧಿಸಿ ತಮ್ಮಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿ ಬೇಡರನ್ನು ಬಗ್ಗು ಬಡಿಯಲು ಬ್ರಿಟೀಷರ ದಂಡು ಹಲಗಲಿಗೆ ಬಂದಿತು. ಬ್ರಿಟೀಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಕ್ಕಿದ್ದನ್ನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿ ಮಾಡಿ ಹೋದರು.

**4. ಲಾವಣಿಗಳನ್ನು ಏಕೆ ವೀರಗೀತೆಗಳನ್ನು ಎನ್ನಲಾಗಿದೆ?**

ಉ:– ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಷೇಶ ಪ್ರಕಾರ. ವೀರ ಕವಿಗಳ ವೀರಸಾಹಸ. ವೀರರ ಉಜ್ವಲ ಜೀವನದ ಘಟನೆಗಳನ್ನು ಆಧರಿಸಿದ ಕಥನ್ಮಾತಕ ಕಾವ್ಯಗಳಾಗಿದ್ದು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನಲಾಗಿದೆ.

**ಇ) ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ.**

**1. "ಎಲ್ಲಾ ಜನರಿಗೆ ಜೋರು ಮಾಡಿ ಕಸಿದು ಕೊಳ್ಳಿರಿ ಹತಾರ"**

ಉ:– **ಆ0ಯ್ಕೆ:** ಈವಾಕ್ಯವನ್ನು ಡಾ.ಬಿ.ಎಸ್. ಗದಗಿ ಮಠ ಅವರ ಸಂಪಾದನೆಯ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆ0ಯ್ದು ಹಲಗಲಿ ಬೇಡರು ಎಂಬ ಜನಪದ ಲಾವಣಿಯಿಂದ ಆರಿಸಿ ಕೊಳ್ಳಲಾಗಿದೆ

**ಸಂದರ್ಭ:**–1857 ರ ಸಿಪಾಯಿದಂಗೆಯ ನಂತರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಜಾರಿಗೊಳಿಸಿದ ಬ್ರಿಟೀಷ್ ಸರ್ಕಾರವು ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿದು ಕೊಳ್ಳುವಂತೆ ಭಾರತಲ್ಲಿರುವ ಕಂಪನಿ ಸರ್ಕಾರಕ್ಕೆ ಆದೇಶ ಹೊರಡಿಸಿದ ಸಂದರ್ಭದಲ್ಲಿ ಈ ಮೇಲಿನ ಮಾತುಗಳು ಬಂದಿದೆ.

**ಸ್ವಾರಸ್ಯ:**– ಭಾರತೀಯರನ್ನು ಕಾಯ್ದೆಯ ಮೂಲಕ ಬಲವಂತವಾಗಿಯಾದರು ನಿಶ್ಯಸ್ತ್ರೀಕರಣ ಗೊಳಿಸಬೇಕೆಂಬ ಕುಂಪಣಿ ಸರ್ಕಾರದ ದರ್ಪ, ಧೋರಣೆಯನ್ನು ಬಹು ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತ ಪಡಿಸಲಾಗಿದೆ.

**2. "ಜೀವ ಸತ್ತು ಹೋಗುವುದು ಗೊತ್ತೆ"**

ಉ:– ಆಯ್ಕೆ:– ಈವಾಕ್ಯವನ್ನು ಡಾ.ಬಿ.ಎಸ್. ಗದಗಿ ಮಠ ಅವರ ಸಂಪಾದನೆಯ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದು ಹಲಗಲಿ ಬೇಡರು ಎಂಬಜನಪದ ಲಾವಣಿಯಿಂದ ಆರಿಸಿ ಕೊಳ್ಳಲಾಗಿದೆ.

**ಸಂದರ್ಭ:** ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿಯಲು ಕುಂಪಣ ಸರ್ಕಾರ ಮುಂದಾದಾಗ ಹಲಗಲಿ ಬೇಡರು ತಮ್ಮ ಬಳಿ ಇರುವ ಆಯುಧಗಳನ್ನು ಮರಳಿಸದಿರಲು ತೀರ್ಮಾನಿಸುತ್ತಾರೆ ಆ ಗುಂಪಿನ ಪ್ರಮುಖರು ಹನುಮ ಬಾಲ, ಜಡಗ, ಆಯುಧಗಳು ಹೋದರೆ ನಮ್ಮ ಜೀವವೇ ಹೋದ ಹಾಗೆ ಅದರಿಂದ ಆಯುಧಗಳನ್ನು ಮರಳಿಸಬಾರದು ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:–** ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದವು ಅವು ಹೋದರೆ ನಮ್ಮ ಪ್ರಾಣಕ್ಕೆ ಸಂಚಕಾರ ಎಂಬ ಭಾವನೆ ಹಲಗಲಿಯ ಬೇಡರ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತ ಗೊಂಡಿದೆ.

3. **"ಹೊಡೆದರೊ ಗುಂಡ ಕರಣೆ ಇಲ್ಲದಂಗ"**

ಉ:– **ಆಯ್ಕೆ:–** ಈ ವಾಕ್ಯವನ್ನು ಡಾ.ಬಿ.ಎಸ್. ಗದಗಿ ಮಠ ಅವರ ಸಂಪಾದನೆಯ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದು ಹಲಗಲಿ ಬೇಡರು ಎಂಬ ಜನಪದ ಲಾವಣಿಯಿಂದ ಆರಿಸಿ ಕೊಳ್ಳಲಾಗಿದೆ

**ಸಂದರ್ಭ:–** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಯಸ್ತ್ರೀಕರಣ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿ೦ಯ ಬೇಡರನ್ನು ಬಗ್ಗು ಬಡಿ೦ಯಲು ಬ್ರಿಟಿಷರ ದಂಡು ಹಲಗಲಿಗೆ ಬಂದಿತ್ತು. ಬ್ರಿಟೀಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಹತ್ತಿ ಕೊಂದು ಹಾಕಿದರು. ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ ಗುಂಡು ಹೊಡೆದು ಸಾಯಿಸಿದರು. ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:–** ಹಲಗಲಿಯ ಬೇಡರ ಮೇಲೆ ಗುಂಡು ಹಾರಿಸಿ ಕೊಲ್ಲುವ ಬ್ರಿಟೀಷ್ ಸೈನಿಕರ ನಿಷ್ಕರುಣ ಭಾವ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

4. **"ಕೆಟ್ಟು ವರ್ಣಿಸಿ ಹೇಳಿದ ಕಂಡಷ್ಟು"**

**ಆಯ್ಕೆ:–** ಈವಾಕ್ಯವನ್ನು ಡಾ.ಬಿ.ಎಸ್. ಗದಗಿ ಮಠ ಅವರ ಸಂಪಾದನೆಯ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದು ಹಲಗಲಿ ಬೇಡರು ಎಂಬಜನಪದ ಲಾವಣಿಯಿಂದ ಆರಿಸಿ ಕೊಳ್ಳಲಾಗಿದೆ

**ಸಂದರ್ಭ:–** ಬ್ರಿಟಿಷರು ಜಾರಿಗೆ ತಂದ ನಿಶ್ಯಸ್ತ್ರೀಕರಣ ಕಾಯ್ದೆ ವಿರೋಧಿಸಿದ ಹಲಗಲಿ ಬೇಡರು ದಂಗೆಯಲ್ಲಿ ಜೀವದ ಹಂಗು ತೊರೆದು ಕಾದಾಡಿದರು. ಅವರ ದಂಗೆಯ ನಾಯಕತ್ವ ವಹಿಸಿದವರು ವೀರ ಮರಣ ಹೊಂದಿದರು. ಹಲಗಲಿ ಬೇಡರ ಊರನ್ನು ಲೂಟಿ ಮಾಡಿ ಊರಿಗೆ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಿದ್ದರಿಂದ ಹಲಗಲಿಯ ಎಳ್ಳಷ್ಟು ಗುರುತು ಉಳಿಯದೆ ಹಾಳಾಗಿ ಹೋಯಿತು. ಅದರ ಕುರಿತು ತನಗೆ ಹೊಳೆದಷ್ಟು ವರ್ಣಿಸಿರುವುದಾಗಿ ಜನಪದ ರಚನೆಕಾರ ಮೇಲಿನಂತೆ ಹೇಳಿದ್ದಾರೆ.

**ಸ್ವಾರಸ್ಯ:–** ಬ್ರಿಟಿಷ್ ಸರ್ಕಾರದ ದೌರ್ಜನ್ಯ. ಅವರ ಕಾರ್ಯವನ್ನು ನೋಡಿದ ಲಾವಣಿಕಾರ ಅಸಹಾಯಕನಾಗಿ ಘಟನೆಯನ್ನು ವಿವರಿಸುವುದು ಸ್ವಾರಸ್ಯವಾಗಿದೆ.

**ಈ) ಈ ವಾಕ್ಯಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

1. **ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?**

1857 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರ್ಕಾರ ನಿಶ್ಯಸ್ತ್ರೀಕರಣ ಕಾಯ್ದೆ ಪ್ರಕಾರ ಎಲ್ಲಾ ಭಾರತೀಯರು ಆಯುಧಗಳನ್ನು ಹೊಂದುವುದು ಅಪರಾಧ ಅದನ್ನು ಕಸಿದು ಕೊಳ್ಳಿರಿ ಎಂದು ಆದೇಶ ಹೊರಡಿಸಿತು. ಈ ಕಾಯ್ದೆಯ ಪ್ರಕಾರ ಹಲಗಲಿಗೆ ಬಂದು ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಮುಂದಾಗುತ್ತಾರೆ. ಆಗ ಇದನ್ನು ವಿರೋಧಿಸಿದ ರಾಮ, ಬಾಲ,ಹನುಮ, ಜಡಗ, ಮೊದಲಾದ ಹಲಗಲಿ೦ಯ ಬೇಡರು ತಮ್ಮಲ್ಲಿರುವ ಆ೦ಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದು ಒಳಗಿನಿಂದ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಗುಂಡು ಹೊಡೆದರು. ಇದರಿಂದ ಬ್ರಿಟಿಷ್ ಸೈನಿಕರು ದಂಗು ಬಡಿದು ದೂರ ಸರಿದು ನಿಂತರು, ಆಗ ಇನ್ನು ಹೆಚ್ಚಿನ ದಂಡು ಬರಲಿ ಎಂದು ಸಾಹೇಬ ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳುಸಿದನು. ಆಗ ಬ್ರಿಟಿಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಹತ್ತಿ ಕೊಂದು ಹಾಕಿದರು. ಬೇಡರನ್ನು ದಂಡಿನ

ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಡಿಲು ಸಿಡಿಯುವ ಹಾಗೆ ಸಿಟ್ಟಲ್ಲೆ ಭರಪೂರವಾಗಿ ಗುಂಡನ್ನು ಸುರಿಸಿದರು. ಇದರಿಂದ ಹಲಗಲಿ ಬಂಟರು ಹೋರಾಡಿ ವೀರ ಮರಣವನ್ನಪ್ಪಿದರು. ಸಿಕ್ಕಿದ್ದನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿ ಮಾಡಿ ಹಲಗಲಿಯ ದಂಗೆಯನ್ನು ನಿಯಂತ್ರಿಸಿದರು.

**2. ಹಲಗಲಿ ದಂಗೆಯ ಪರಿಣಾಮವೇನು?**

**ಉ:–** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಯಸ್ತ್ರೀಕರಣ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟೀಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟೀಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಹತ್ತಿ ಕೊಂದರು, ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ ಗುಂಡು ಹೊಡೆದು ಸಾಯಿಸಿದರು. ಕೆಲವು ಬೇಡರು ತಪ್ಪಿಸಿಕೊಂಡು ಗುಡ್ಡದ ಕಡೆ ಓಡಿದರು. ಅಗಸಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಿದ್ದ ಸಾಹೇಬನನ್ನು ಜಡಗ ಗುಂಡು ಹೊಡೆದು ಕೊಂದು ಹಾಕಿದನು. ಇದರಿಂದ ಸಿಟ್ಟಿಗೆದ್ದ ಕಾರ ಸಾಹೇಬ ಊರನ್ನು ಲೂಟಿ ಮಾಡಲು ಆದೇಶಿಸಿದನು. ಬ್ರಿಟೀಷ್ ಸೈನಿಕರು ಸಿಡಿಲು ಸಿಡಿಯುವ ಹಾಗೆ ಸಿಟ್ಟಲ್ಲೆ ಭರಪೂರವಾಗಿ ಗುಂಡನ್ನು ಸುರಿಸಿದರು. ಬಾಲನು ಕಸರತ್ತಿನಿಂದ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದನು. ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆ ಹರಿಯಿತು. ಹೀಗೆ ಹಲಗಲಿ ಬಂಟರಾದ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ, ಭೀಮ ಮೊದಲಾದವರು ಹೋರಾಡಿ ವೀರ ಮರಣವನ್ನಪ್ಪಿದರು. ಹಲಗಲಿಗೆ ಮುತ್ತಿಗೆ ಹಾಕಿ ಬೇಡರನ್ನು ಬಗ್ಗು ಬಡಿದ ಬ್ರಿಟೀಷ್ ದಂಡು ಕೊಡಲಿ, ಕುಡಗೋಲು, ಕುಳ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಶಿಣ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ ಬೀಸುವಕಲ್ಲು ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು, ಊರಿಗೆ ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿ ಗುರುತು ಉಳಿಯದಂತೆ ಮಾಡಿ ಹೋಗಿದ್ದರಿಂದ ಹಾಳಾಗಿ ಹೋಯಿತು.

**ಉ) ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಹಲಗಲಿ ಬಂಟರ ಕದನ ವೀರರಸ ಪ್ರಧಾನವಾದ.............. **ಉ:–ಲಾವಣಿ**
   (ಕತೆ, ಗಾದೆ, ಒಗಟು, ಲಾವಣಿ)
2. ಹಲಗಲಿಯು ಈಗ ಈ ಜಿಲ್ಲೆಗೆ ಸೇರಿದೆ:................... **ಉ:–ಬಾಗಲಕೋಟೆ**
   (ಬಾಗಲಕೊಟೆ, ಕಲಾದಗಿ, ಮುಧೋಳ, ಹೆಬಲಕ)
3. ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ:.................. **ಉ:– ನಿಶ್ಯಸ್ತ್ರೀಕರಣ**
   (ಯುದ್ಧಶಾಸನ, ನಿಶ್ಯಸ್ತ್ರೀಕರಣ, ಕಬುಲುಶಾಸನ, ಕುರ್ತುಕೋಟೆಶಾಸನ)
4. ಲಾವಣಿಕಾರ ಅಂಕಿತಗೊಳಿಸಿರುವ ದೈವ:.................. **ಉ:–ಕಲ್ಮೇಶ**
   (ಕಲ್ಮೇಶ, ಹನುಮ, ರಾಮ, ಲಕ್ಷ್ಮೇಶ)
5. ವಿಲಾತಿ ಪದದ ಸರಿಯಾದ ರೂಪ:................ **ಉ:–ವಿಲಾಯಿತಿ**
   (ಆಯುಧ, ವಿಹಾರ, ವಿಲಂತಿ, ವಿಲಾಯಿತಿ)

# ಭಾಷಾ ಚಟುವಟಿಕೆ.

**1. ಕೊಟ್ಟಿರುವ ಪದಗಳನ್ನು ನಿಗ್ರಹಿಸಿ ಸಮಾಸವನ್ನು ಹೆಸರಿಸಿ.**

{ಮುಂಗೈ. ನಡುರಾತ್ರಿ, ಹನುಮ ಭೀಮ ರಾಮ, ಮೋಸಮಾಡು}

| | | | | | | | |
|---|---|---|---|---|---|---|---|
| ಉ:– ಮುಂಗೈ | = | ಕೈಯ | + | ಮುಂದು | – | ಅಂಶಿಸಮಾಸ |
| ನಡುರಾತ್ರಿ | = | ರಾತ್ರಿಯ | + | ನಡು | – | ಅಂಶಿಸಮಾಸ |
| ಹನುಮ ಭೀಮರಾಮ | = | ಹನುಮನೂ +ಭೀಮನೂ + ರಾಮನೂ | | | – | ದ್ವಂದ್ವಸಮಾಸ |
| ಮೋಸಮಾಡು | = | ಮೋಸವನ್ನು | + | ಮಾಡು | – | ಕ್ರಿಯಾಸಮಾಸ |

**2. ಕೊಟ್ಟಿರುವ ಗ್ರಾಮ್ಯ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.**

{ಹೀಂಗ ಮ್ಯಾಗ, ಕಳೂವ್ಯಾರೆ, ಇಲ್ಲದ್ದಂಗ, ಇಸವಾಸ, ಸಕ್ಕಾರಿ}

ಉ:– ಹೀಂಗ – ಹೀಗೆ
ಮ್ಯಾಗ – ಮೇಲೆ
ಕಳುವ್ಯಾರೆ – ಕಳುಹಿಸಿದ್ದಾರೆ.
ಇಲ್ಲದಂಗೆ – ಇಲ್ಲದಹಾಗೆ
ಸಕ್ಕಾರಿ – ಸಕ್ಕರೆ.
ಇಸವಾಸ – ವಿಶ್ವಾಸ

**3. ಅಲಂಕಾರವನ್ನು ಹೆಸರಿಸಿ, ಸಮನ್ವಯಿಸಿ.**

ಅ. **"**ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲು ಸಿಡಿದ್ಹಾಂಗ**"**

ಅಲಂಕಾರ : ಉಪಮಾಲಂಕಾರ.
ಉಪಮೇಯ : ಒಳಗಿನ ಮಂದಿ ಗುಂಡು ಹೊಡೆಯುವುದು
ಉಪಮಾನ : ಮುಂಗಾರಿನ ಸಿಡಿಲು ಸಿಡಿಯುವುದು
ಉಪಮವಾಚಕ : ಹಾಂಗ
ಸಮಾನಧರ್ಮ : ಸ್ಪಷ್ಟವಾಗಿಲ್ಲ (ಸಿಡಿಯುವುದು)
ಸಮನ್ವಯ : ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.
**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

**ಆ) 'ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ'**

ಅಲಂಕಾರ : ಉಪಮಾಲಂಕಾರ
ಉಪಮೇಯ : ಗುಂಡು ಸುರಿಯುವುದು
ಉಪಮಾನ : ಸಿಡಿಲು ಸಿಡಿಯುವುದು
ಉಪಮಾವಾಚಕ : ಹಾಂಗ
ಸಮಾನಧರ್ಮ : ಸ್ಪಷ್ಟವಾಗಿಲ್ಲ (ಸುರಿಯುವುದು)
ಸಮನ್ವಯ : ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

ಇ) **ಸ್ವಂತ ವಾಕ್ಯದಲ್ಲಿ ಬಳಸಿ.**

ಒಳಗಿಂದೊಳಗೆ : ಹಲಗಲಿ ಬೇಡರೆಲ್ಲ ಒಂದೆಡೆ ಸೇರಿಕೊಂಡು ಒಳಗಿಂದೊಳಗೆ ಮಾತು ಕೊಟ್ಟರು.

ಸುದ್ದಿ : ಕಾರಕೂನನ ಕಪಾಳಕ್ಕೆ ಹೊಡೆದು, ಸಿಪಾಯಿಯನ್ನು ಸಾಯಿಸಿ ನೆಲಕ್ಕೆ ಬೀಳುವಂತೆ ಮಾಡಿದ ದುಃಖದ ಸುದ್ದಿ ಸಾಹೇಬನಿಗೆ ಮುಟ್ಟಿತು.

ಮಂದಿ : ಒಳಗಿನ ಮಂದಿ ಮುಂಗಾರಿನ ಸಿಡಿಲು ಸಿಡಿದ್ಹಾಂಗ ಗುಂಡು ಹೊಡಿದರು.

ಕಸರತ್ತು : ಬಾಲನು ಕಸರತ್ತು ಮಾಡಿ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದನು.

ಈ) **ದೇಶ್ಯ-ಅನ್ಯದೇಶ್ಯ ಪದಗಳನ್ನು ಆರಿಸಿ ಬರೆಯಿರಿ.**

{ಹೊತ್ತು, ಹತಾರ, ಮಸಲತ್ತ, ಬಂಟರು, ಹುಕುಮ, ಮುಂಗೈ, ಸಾಹೇಬ, ಕಾರಕೂನ, ಸಿಪಾಯಿ, ಮುಂಗಾರು, ಕಬುಲ.}

ಉ:- **ದೇಶೀಯ ಪದಗಳು:-** ಹೊತ್ತು, ಬಂಟರು, ಮುಂಗೈ, ಮುಂಗಾರು

**ಅನ್ಯದೇಶಿಯ ಪದಗಳು :** ಹತಾರ, ಮಸಲತ್ತ, ಹುಕುಮ, ಸಾಹೇಬ, ಕಾರಕೂನ, ಸಿಪಾಯಿ, ಕಬಲು

ಉ) **ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

1. ಕೊಡಲಿ, ಕೋರೆ, ಕುಳ ಕಬ್ಬಿಣ ಮೊಸರು ಬೆಣ್ಣೆ ಹಾಲು
ಉಪ್ಪು ಎಣ್ಣೆ ಅರಿಶಿಣ ಜೀರಗಿ ಅಕ್ಕಿ ಸಕ್ಕಾರಿ ಬೆಲ್ಲಾ
ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೇಷ್ಟ.

2. ಸಿಕ್ಕಿದ್ದು ತಗೊಂಡು ಸರದ ನಿಂತಿರೊ ಊರಿಗೆ ಕೊಳ್ಳೀ ಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲ್ಲಿಲ್ಲೆಳ್ಳಷ್ಟು
ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದ ಕಂಡಷ್ಟು
ಕುರ್ತುಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ.

# ಬಹು ಆಯ್ಕೆಯ ಪ್ರಶ್ನೆಗಳು.

1. **ಕುರುಡ, ಕುಂಟ, ವಿಜ್ಞಾನಿ**–ಪದಗಳು ಈ ನಾಮಪದಕ್ಕೆ ಉದಾಹರಣೆಯಾಗಿದೆ.
   ಅ) ರೂಡ ಆ) ಅಂಕಿತ, ಇ) ಅನ್ವರ್ಥಕ ಈ) ಸರ್ವನಾಮ
   **ಉ:– ಇ) ಅನ್ವರ್ಥಕನಾಮ**
2. **'ವಸಂತ'** ಪದದ ಅರ್ಥ
   ಅ) ಹೊಸದು ಆ) ಸಮೃದ್ಧಿ ಇ) ಸಂತ ಈ) ಮತ
   **ಉ: ಆ) ಸಮೃದ್ಧಿ**
3. **'ಕತ್ತಲೆಯೊಳಗೆ'** ಪದವನ್ನು ಬಿಡಿಸಿ ಬರೆದಾಗ
   ಅ) ಕತ್ತಲೆ+ಒಳಗೆ ಆ) ಕತ್ತಲೆಯ+ಒಳಗೆ ಇ)ರಾತಿ+ಒಳಗೆ ಈ)ಕತ್ತಲೆಯಿಂದ+ಒಳಗೆ
   **ಉ:– ಅ) ಕತ್ತಲೆ+ಒಳಗೆ**
4. 'ಕಾಡುಮೇಡು' ಈ ವ್ಯಾಕರಣಾಂಶಕ್ಕೆ ಉದಾಹರಣೆ.
   ಅ) ದ್ವಿರುಕ್ತಿ ಆ) ನುಡಿಗಟ್ಟು ಇ) ಜೋಡಿಪದ ಈ)ಅನುಕರಣಾವ್ಯಯ
   **ಉ:– ಇ) ಜೋಡಿಪದ**
5. 'ಹಚ್ಚುವುದು' ಈ ಕ್ರಿಯಾಪದದ ಧಾತು.
   ಅ) ಹಚ್ಚು ಆ) ಉವುದು ಇ) ಹಚ್ಚಿ ಈ) ಅಚ್ಚಿ
   **ಉ:–ಅ) ಹಚ್ಚು**
6. **'ಭರವಸೆಗಳ'** ಪದವು ಈ ವಿಭಕ್ತಿಯಾಗಿದೆ.
   ಅ) ಪ್ರಥಮ ಆ) ತೃತೀಯಾ ಇ) ಷಷ್ಠಿ ಈ)ಸಪ್ತಮೀ
   **ಉ:– ಇ) ಷಷ್ಠಿ**
7. **'ಮೂಡಲಿ'** ಇಲ್ಲಿರುವ ಕ್ರಿಯಾರೂಪ
   ಅ) ನಿಷೇಧಾರ್ಥಕ ಆ) ಸಂಭವನಾರ್ಥಕ ಇ) ಧಾತು ಈ)ವಿಧ್ಯರ್ಥಕ
   **ಉ:– ಈ) ವಿಧ್ಯರ್ಥಕ**
8. **'ನನ್ನ ಬಳಿ ಅವನ ಆಟ ನಡೆಯದು'** ಈ ವಾಕ್ಯದಲ್ಲಿ ಗೆರೆ ಎಳೆದ ಪದದ ಸಂಭವನಾರ್ಥಕ ರೂಪ
   ಅ) ನಡೆ0ಯುತ್ತದೆ ಆ) ನಡೆಯಲಿ ಇ) ನಡೆದೀತು ಈ) ನಡೆಯಲಿಲ್ಲ
   **ಉ: ಇ) ನಡೆದೀತು**
9. **'ಗಂಗಳ'** ಪದದ ಅರ್ಥ.
   ಅ)ಗಂಗೆ ಆ) ನಡೆಯಲಿ ಇ) ಊಟದ ತಟ್ಟೆ ಈ) ಗಂಜಲ
   **ಉ:– ಇ) ಊಟದ ತಟ್ಟೆ.**
10. **'ಶಸ್ತ್ರಾಸ್ತ್ರ'** ಈ ಪದವು ಈ ಸಂಧಿಗೆ ಸೇರಿದೆ.
   ಅ) ಗುಣ ಆ) ಆದೇಶ ಇ) ಜಶ್ತ್ವ ಈ)ಸವರ್ಣದೀರ್ಘ
   **ಉ:– ಈ) ಸವರ್ಣದೀರ್ಘ**
11. **'ಕಾಲೇಜು'** ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ
   ಅ) ಉರ್ದು ಆ) ಇಂಗ್ಲಿಷ್ ಇ)ಹಿಂದುಸ್ಥಾನಿ ಈ)ಪೋರ್ಚುಗೀಸ್
   **ಉ: ಆ) ಇಂಗ್ಲಿಷ್**
12. **'ಹಾಕೊಂಡು'** ಪದದ ಗ್ರಾಂಥಿಕ ರೂಪ
   ಅ) ಹೊತ್ತುಕೊಂಡು ಆ)ಹಾರಿಕೊಂಡು ಇ)ಹಾಕಿಕೊಂಡು ಈ)ಹಾಕ್ಕೊಂಡು
   **ಉ: ಇ) ಹಾಕಿಕೊಂಡು**

13. **'ಕುದುರೆ'** ಪದದ ಗ್ರಾಮ್ಯಪದ

ಅ) ಕುದುರೆ ಆ) ಕುದುರಿ ಇ) ಕುದ್ರಿ ಈ)ಕುದ್ರೆ

**ಉ:–ಆ) ಕುದುರಿ**

14. **'ದವಖಾನಿ'** ಪದ ಈ ಭಾಷೆಯಿಂದ ಬಂದಿದೆ

ಅ) ಉರ್ದು ಆ) ಇಂಗ್ಲೀಷ್ ಇ) ಹಿಂದೂಸ್ಥಾನಿ ಈ) ಪಾರ್ಸಿ

**ಉ: ಈ) ಪಾರ್ಸಿ**

15. **'ತಿರಿ ತಿರ್ವಿ'** ಪದದ ವ್ಯಾಕರಣಾಂಶ

ಅ) ದ್ವಿರುಕ್ತಿ ಆ) ಜೋಡಿನುಡಿ ಇ) ನುಡಿಗಟ್ಟು ಈ) ಅನುಕರಣಾವ್ಯಯ

**ಉ: ಅ) ದ್ವಿರುಕ್ತಿ**

16. ಅನ್ಯದೇಶಿಯ ಪದವಿದು

ಅ) ಕೈ ಆ) ಅಜ್ಜ ಇ) ಎಮ್ಮೆ ಈ) ಕಿಮ್ಮತ್ತು

**ಉ: ಈ) ಕಿಮ್ಮತ್ತು**

17. **'ಇಲ್ಲದ್ವಾಂಗ'** ಪದದ ಗ್ರಾಂಥಿಕ ರೂಪ

ಅ) ಇಲ್ಲದೆ ಹೇಗೆ ಆ) ಇಲ್ಲದಂಗೆ ಇ) ಇಲ್ಲಿದೆ ಹೀಗೆ ಈ) ಇಲ್ಲದೆ ಹಾಗೆ

**ಉ: ಈ) ಇಲ್ಲದೆ ಹಾಗೆ**

18. **ನಡುವೆ ಹಾಕ್ಕೊಂಡು ಹೊಡೆದರೊ ಗುಂಡು ಕರುಣೆ ಇಲ್ಲದ್ದಂಗೆ** ಇದು ಈ ಅಲಂಕಾರ

ಅ) ದೃಷ್ಟಾಂತ ಆ) ಉಪಮಾ ಇ) ರೂಪಕ ಈ) ಶ್ಲೇಷಾ

**ಉ: ಆ) ಉಪಮಾ**

19. **'ಮಸಲತ್ತು'** ಪದದ ಅರ್ಥ

ಅ) ಚರ್‍ರಿ ಆ) ಪಿತೂರಿ ಇ) ಗ್ಲಾಸು ಈ) ಚೇರು

**ಉ: ಆ) ಪಿತೂರಿ**

20. **'ರಕ್ತ'** ಪದದ ತದ್ಭವ ರೂಪ

ಅ) ರಕುತ ಆ)ರಾಕ್ತ ಇ) ಬೆತ್ತ ಈ) ತಕ್ತ

**ಉ: ಅ) ರಕುತ**

21. **'ಮುಂಗೈ'** ಇದು ಈ ಸಮಾಸ

ಅ) ತತ್ಪುರುಷ ಆ)ದ್ವಿಗು ಇ) ಅಂಶಿ ಈ) ದ್ವಂದ್ವ

**ಉ: ಇ) ಅಂಶಿ**

22. **'ಮೇಜು'** ಇದು ಈ ಭಾಷೆಯ ಪದ

ಅ) ಇಂಗ್ಲೀಷ್ ಆ) ಹಿಂದಿ ಇ) ಪೋರ್ಚುಗೀಸ್ ಈ) ಕನ್ನಡ

**ಉ: ಇ) ಪೋರ್ಚುಗೀಸ್**

23. **'ಇಲಾಖೆ'** ಈ ಪದವು

ಅ) ಉರ್ದು ಆ) ಇಂಗ್ಲೀಷ್ ಇ) ಕನ್ನಡ ಈ) ಹಿಂದೂಸ್ಥಾನಿ

**ಉ: ಅ) ಉರ್ದು**

24. **'ಹುಕುಂ'** ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.

ಅ)ಪರ್ಷಿಯಾ ಆ) ಹಿಂದೂಸ್ತಾನಿ ಇ) ಇಂಗ್ಲೀಷ್ ಈ) ಉರ್ದು

**ಉ: ಆ) ಹಿಂದೂಸ್ತಾನಿ**

25. ಪಾರ್ಸಿ ಭಾಷೆಯಿಂದ ಕನ್ನಡಕ್ಕೆ ಬಂದ ಪದವಿದು

ಅ) ರಸ್ತೆ, ಆ) ನದಲಿ ಇ) ಇಸ್ತ್ರಿ ಈ) ಇಲಾಖೆ

**ಉ: ಅ) ರಸ್ತೆ,**

# ಘಟಕ ಪರೀಕ್ಷೆ–1

**20–ಅಂಕಗಳು**

**ಅ). ಬಹು ಆಯ್ಕೆಯ ಪ್ರಶ್ನೆಗಳು.** **1 x 3 = 3**

1. **'ನಡುರಾತ್ರಿ'** ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಅ) ತತ್ಪುರುಷ ಆ) ಕರ್ಮಧಾರೆಯ ಇ) ಅಂಶಿ ಈ) ದ್ವಂದ್ವ
2. **'ಇಸವಾಸ'** ಪದದ ಗ್ರಾಂಥಿಕ ರೂಪವಿದು.
   ಅ) ವಿಶ್ವಾಸ ಆ) ವಿಸ್ವಾಸ ಇ) ವಿಸುವಾಸ ಈ) ವಿಷಯವಾಸ
3. **'ಅವನು'** ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
   ಅ)ಅಂಕಿತನಾಮ ಆ) ರೂಢನಾಮ ಇ) ಅನ್ವರ್ಥನಾಮ ಈ) ಸರ್ವನಾಮ

**ಆ). ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂದದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.** **1 x 3 = 3**

1. ತತ್ಸಮ : ವೈಶಾಖ :: ತದ್ಭವ :..................
2. ಅಬಕಾರಿ : ಪರ್ಷಿಯನ್ :: ಕಾಲೇಜು :..................
3. ಹುಕುಮ : ಆಜ್ಞೆ :: ಕಾರಕೂನ :..................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1 x 3 = 3**

1. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?
2. ಹಲಗಲಿಯ ನಾಲ್ವರು ಪ್ರಮುಖರು ಯಾರು ಯಾರು?
3. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?

**ಈ). ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ.** **2 x 4 = 8**

1. ಹಲಗಲಿ ಬೇಡರು ದಂಗೆ ಏಳಲು ಕಾರಣವೇನು? ವಿವರಿಸಿ.
2. ಹಲಗಲಿಗೆ ದಂಡು ಬರಲು ಕಾರಣವೇನು? ವಿವರಿಸಿ.
3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು? ವಿವರಿಸಿ.
4. ಈ ಪದ್ಯ ಭಾಗವನ್ನು ಪೂರ್ಣಗೊಳಿಸಿ.
   ಕೊಡಲಿ....................................
   ....................................ನಾನೆಷ್ಟಾ

**ಉ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.** **1 x 3 = 3**

1. "ಹೊಡೆದರೂ ಗುಂಡ ಕರುಣ ಇಲ್ಲದ್ಹಂಗ"

# ಘಟಕ ಪರೀಕ್ಷೆ – 2

**20–ಅಂಕಗಳು**

**ಅ) ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1 x 4 = 4**

1. ಹಲಗಲಿ ಗುರುತು ಉಳಿಯದಂತಾದುದು ಏಕೆ?
2. ಹಲಗಲಿ ಗ್ರಾಮ ಎಲ್ಲಿದೆ?
3. ಒಳಗಿನ ಮಂದಿ ದಂಡನ್ನು ಹೇಗೆ ಹೊಡೆದರು?
4. ಅಗಸಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿಮಾತು ಹೇಳಿದವರು ಯಾರು?

**ಆ) ಪ್ರತಿ ಪ್ರಶ್ನೆಗೂ 2–3 ವಾಕ್ಯಗಳಲ್ಲಿ ಉತ್ತರಿಸಿ.** **2 x 3 = 6**

1. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
2. ಬ್ರಿಟೀಷರು ಹೊರಡಿಸಿದ ನಿಶ್ಯಸ್ತ್ರೀಕರಣ ಆದೇಶ ವಿವರಣೆ ಏನು?
3. ಹೆಬಲಕ ಸಾಹೇಬನ ಬುದ್ಧಿ ಮಾತಿಗೆ ವಿರೋಧವಾಗಿ ಜಡಗ ಏನು ಹೇಳುತ್ತಾನೆ?

**ಇ). ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **3 x 2 = 6**

1. " ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳೀರಿ ಹತಾರ"
2. "ಕೆಟ್ಟು ವರ್ಣಿಸಿ ಹೇಳಿದ ಕಂಡಷ್ಟು?"

**ಈ). 8–10 ವಾಕ್ಯಗಳಲ್ಲಿ ಉತ್ತರಿಸಿ.** **4 x 1 = 4**

1. ಹಲಗಲಿಯ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

   ಅಥವಾ

   ಹಲಗಲಿ ದಂಗೆಯ ಪರಿಣಾಮವೇನು?

*******

# ಗದ್ಯಪಾಠ 04
# ಭಾಗ್ಯಶಿಲ್ಪಿಗಳು

**1. ನಾಲ್ವಡಿ ಕೃಷ್ಣರಾಯ ಒಡೆಯರು– ಸಮಿತಿ ಸಂಗ್ರಹ**
**2. ಸರ್.ಎಂ.ವಿಶೇಶ್ವರಯ್ಯ – ಡಿ.ಎಸ್.ಜಯಪ್ಪಗೌಡ**

**ಲೇಖಕರ ಪರಿಚಯ :**

ಡಿ.ಎಸ್.ಜಯಪ್ಪಗೌಡರು 1947 ರಲ್ಲಿ ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿಯಲ್ಲಿ ಜನಿಸಿದರು. ಇವರು ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಮೈಸೂರು ಒಡೆಯರು, ಜನಪದ ಆಟಗಳು, ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ ಗೌರವ ಬಂದಿದೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ**

**1. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?**
ಉ: ನಾಲ್ವಡಿ ಕೃಷ್ಣರಾಜ ಒಡೆಯರು 1895ರಲ್ಲಿ ತಮ್ಮ 10ನೇ ವಯಸ್ಸಿನಲ್ಲಿ ಪಟ್ಟಾಭಿಷಿಕ್ತರಾದರು.

**2. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣ ಬದ್ದರಾದರು?**
ಉ: ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ದಿಗೆ ಕಂಕಣಬದ್ಧರಾದರು.

**3. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು ?**
ಉ: 1900 ರಲ್ಲಿ ಶಿವನ ಸಮುದ್ರದ ಕಾವೇರಿ ನದಿಯ ಬಳಿ ಸ್ಥಾಪಿಸಿದ ಜಲ ವಿದ್ಯುತ್ ಉತ್ಪಾದನಾ ಕೇಂದ್ರ ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ.

**4. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**
ಉ: ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

**5. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**
ಉ: ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು.

**6. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**
ಉ: ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜಿನಿಯರ್ ದಿನಾಚರಣೆ'ಯನ್ನು ಮಾಡಲಾಗುತ್ತದೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ :**

**1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?**
ಉ: ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು ನಗರ ಪಾಲಿಕೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಕಾರ್ಯ ನಿರ್ವಹಿಸಲು ಆರಂಭ ಮಾಡಿದವು ಇವರ ಕಾಲದಲ್ಲಿ 1) ಗ್ರಾಮ ನಿರ್ಮಲೀಕರಣ 2) ವೈದ್ಯಸಹಾಯ 3) ವಿದ್ಯಾಪ್ರಚಾರ 4) ನೀರಿನ ಸೌಕರ್ಯ 5) ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

**2. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?**
ಉ: ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1900ರಲ್ಲಿ ಶಿವನ ಸಮುದ್ರದ ಬಳಿ ಕಾವೇರಿ ನದಿ ನೀರಿನಿಂದ ಪ್ರಾರಂಭಿಸಿದ ಶಿವನ ಸಮುದ್ರ ಜಲವಿದ್ಯುತ್ ಯೋಜನೆ, 1907 ರಲ್ಲಿ ವಾಣಿವಿಲಾಸ ಸಾಗರ ಅಣೆಕಟ್ಟು

(ಮಾರಿ ಕಣಿವೆ) ಮತ್ತು 1911 ರಲ್ಲಿ ಕಾವೇರಿನದಿಗೆ ಅಡ್ಡಲಾಗಿ ಕನ್ನಂಬಾಡಿಯಲ್ಲಿ ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣ ಮುಂತಾದ ವಿದ್ಯುತ್ ಮತ್ತು ನೀರಾವರಿ 0ಯೋಜನೆಗಳು ಕಾರ್ಯರೂಪಕ್ಕೆ ಬಂದವು.

**3. ನೆಹರೂ ಅವರು ಸರ್.ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದರು?**

ಉ: "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೋಷಣೆಗೆ ಒಳಗಾಗಿದ್ದೇವೆ ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚುಕೆಲಸ ಮಾಡಿದ್ದೀರಿ ಅದನ್ನು ನಾವು ತಮ್ಮಿಂದ ಕಲಿಯೋಣ ಎಂದು ನೆಹರೂ ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಂದರ್ಭದಲ್ಲಿ ಹೇಳಿದ್ದರು.

**4. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದರು?**

ಉ: ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣವು ಸಂಜೀವಿನಿ ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇ ಜನರ ಸೊತ್ತಾಗದೇ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು' ಎಂಬುದನ್ನು ಹೇಳಿದ್ದಾರೆ.

**5. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ಉ: ವಿಶ್ವೇಶ್ವರಯ್ಯನವರು ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಲು 1913ರಲ್ಲಿ ಮೈಸೂರು ಬ್ಯಾಂಕ್‌ನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿಗೆ ನಿಧಿಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರು ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರವನ್ನು ಬಲವರ್ಧನೆಗೊಳಿಸಿದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

**ಇ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ಸಾಮಾಜಿಕ ಕಾನೂನುಗಳ ಹರಿಕಾರ"**

**ಉ:** **ಆ0ಯ್ಕೆ :** ಈ ವಾಕ್ಯವನ್ನು "ಭಾಗ್ಯಶಿಲ್ಪಿಗಳು' ಪಾಠದಲ್ಲಿನ 'ನಾಲ್ವಡಿ ಕೃಷ್ಣರಾಜ ಒಡೆಯರ್' ಎಂಬ ಪಾಠಭಾಗದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ಸಂಸ್ಥಾನವು ಮಾದರಿ ಮೈಸೂರು ಎಂದು ಹೆಸರಾಗಿತ್ತು. ಇವರು ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ಕಂಕಣ ಬದ್ಧರಾಗಿದ್ದವರು ಇವರು ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಲು ದಿಟ್ಟ ಕಾನೂನುಗಳನ್ನು ಜಾರಿಗೆ ತಂದು "ಸಾಮಾಜಿಕ ಕಾನೂನುಗಳ ಹರಿಕಾರ" ಎಂದು ಹೆಸರಾಗಿದ್ದರು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಸ್ವಾಸ್ಥ್ಯ ಸಮಾಜಕ್ಕಾಗಿ ಮತ್ತು ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ತಂದ ಕಾನೂನುಗಳು ಅವರನ್ನು "ಸಾಮಾಜಿಕ ಕಾನೂನುಗಳ ಹರಿಕಾರ" ರನ್ನಾಗಿಸಿದ್ದು ಹೆಮ್ಮೆಯ ವಿಷಯವಾಗಿದೆ.

**2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತ್ತು"**

**ಉ:** **ಆಯ್ಕೆ** : ಈ ವಾಕ್ಯವನ್ನು "ಭಾಗ್ಯಶಿಲ್ಪಿಗಳು' ಪಾಠದಲ್ಲಿನ 'ಸರ್.ಎಂ.ವಿಶ್ವೇಶ್ವರಯ್ಯ' ಎಂಬ ಪಾಠಭಾಗದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :**ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರು ಮುಂಬೈ ಪ್ರಾಂತ್ಯದಲ್ಲಿ ಸಹಾಯಕ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದಾಗ ಖಾನ್‌ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ವಿಯಾದರು. ಹಾಗೆಯೇ ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪಾ ಜಲಾಶಯಕ್ಕೆ ಸ್ವಯಂ ಚಾಲಿತ

ಬಾಗಿಲುಗಳನ್ನು ಅಳವಡಿಸಿದರು. ಸ್ವಯಂ ಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು ಎಂದು ಅವರ ಸಾಧನೆಗಳನ್ನು ಹೊಗಳಿದ್ದಾರೆ.

**ಸ್ವಾರಸ್ಯ :** ವಿಶ್ವೇಶ್ವರಯ್ಯನವರ ದೂರದರ್ಶಿತ್ವ ಶಕ್ತಿ ಅವರಲ್ಲಿತ್ತು. ಸದಾ ಹೊಸತನ್ನು ಅನ್ವೇಷಿಸುವ ಮೂಲಕ ಸಮಾಜಕ್ಕೆ ಒಳಿತು ಮಾಡುವ ಮನೋಭಾವ ಅವರದಾಗಿತ್ತು ಎಂಬುದನ್ನು ಸ್ವಾರಸ್ಯ ಪೂರ್ಣವಾಗಿ ಹೇಳಲಾಗಿದೆ.

**3. "ಮೈಸೂರು ಸಂಸ್ಥಾನಕ್ಕೆ ಮಾದರಿ ಮೈಸೂರು" ಎಂಬ ಕೀರ್ತಿ ಪ್ರಾಪ್ತವಾಯಿತು.**

ಉ: **ಆಯ್ಕೆ :** ಈ ವಾಕ್ಯವನ್ನು 'ಭಾಗ್ಯಶಿಲ್ಪಿಗಳು' ಪಾಠದಲ್ಲಿನ 'ನಾಲ್ವಡಿ ಕೃಷ್ಣರಾಜ ಒಡೆಯರ್' ಎಂಬ ಪಾಠ ಭಾಗದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ವಹಿಸಿಕೊಂಡ ನಂತರ ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿ ದುಡಿದರು. ಇವರು ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಲು ದಿಟ್ಟ ಕಾನೂನುಗಳನ್ನು ಜಾರಿಗೆ ತಂದರು. ಇದೇ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡಿತು. ಆದ್ದರಿಂದಲೇ ಮೈಸೂರು ಸಂಸ್ಥಾನ ಮಾದರಿ ಮೈಸೂರು ಆಯಿತು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತ ಸಾಮರ್ಥ್ಯ, ಸ್ವಾಸ್ಥ್ಯ ಸಮಾಜ ನಿರ್ಮಾಣ ಮತ್ತು ಸರ್ವತೋಮುಖ ಅಭಿವೃದ್ಧಿಯ ಆದರ್ಶ ದೊರೆಯೆಂಬುದು ತಿಳಿಯುತ್ತದೆ.

**4 "ತಾವು ಕಡಿಮೆ ಮಾತನಾಡಿದ್ದಿರೀ; ಹೆಚ್ಚು ಕೆಲಸ ಮಾಡಿದ್ದೀರ"**

ಉ: **ಆಯ್ಕೆ :** ಈ ವಾಕ್ಯವನ್ನು "ಭಾಗ್ಯಶಿಲ್ಪಿಗಳು" ಪಾಠದಲ್ಲಿನ ದಿವಾನ್ ಸರ್.ಎಂ.ವಿ.ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು ಪಾಠಭಾಗದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಅಂದಿನ ಭಾರತದ ಮಾನ್ಯ ಪ್ರಧಾನಮಂತ್ರಿಗಳಾದ ಜವಹರಲಾಲ್ ನೆಹರೂ ಅವರು ಸರ್.ಎಂ.ವಿ.ವಿಶ್ವೇಶ್ವರಯ್ಯನವರ ಬಗ್ಗೆ ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ, ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ವಿಶ್ವೇಶ್ವರಯ್ಯನವರ ವಾಸ್ತವ ಚಿಂತನೆ, ಕಾರ್ಯ ತತ್ಪರತೆ ನಿಸ್ವಾರ್ಥ ಸೇವೆ ಮತ್ತು ನಡತೆಯನ್ನು ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

**ಈ) ಈ ಕೆಳಗಿನ ಪ್ರಶ್ನೆಗಳೀಗೆ8–10 ವಾಕ್ಯಗಳಲ್ಲಿ ಉತ್ತರಿಸಿ**

**1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಮಾದರಿ ಮೈಸೂರು ರಾಜ್ಯ ಹೇಗಾಯಿತು?**

ಉ: ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ಕಂಕಣ ಬದ್ಧರಾಗಿದ್ದರು. ಇವರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯು ನೂತನ ರೂಪವನ್ನು ಪಡೆದು ನಿಜವಾದ ಜನಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. 1923 ರಲ್ಲಿ ಇವರು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯಾಗಿ ಮಾರ್ಪಡಿಸಿ ಪ್ರಜಾತಂತ್ರ ದೃಷ್ಠಿಯಿಂದ ಭಾರತದಲ್ಲಿ ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವಂತೆ ಮಾಡಿದರು. 1907ರಲ್ಲಿ ಇವರು ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದರು. ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರಿಕರಣಕ್ಕೆ ಅನುವು ಮಾಡಿಕೊಟ್ಟರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಇವರ ಆಡಳಿತಾವಧಿಯಲ್ಲಿ ಏಷ್ಯಾದ ಮೊದಲ ಜಲವಿದ್ಯುತ್ 0ಯೋಜನೆ ಶಿವನ ಸಮುದ್ರ ಕಾವೇರಿ ನದಿಯ ಬಳಿ ಪ್ರಾರಂಭವಾಯಿತು. ನಾಡಿನ ಮೊದಲ ವಿಶ್ವವಿದ್ಯಾಲಯ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಹೀಗೆ

ಹತ್ತು ಹಲವು ಸಾಮಾಜಿಕ ಸುಧಾರಣೆಗಳ ಮೂಲಕ "ಸಾಮಾಜಿಕ ಕಾನೂನುಗಳ ಹರಿಕಾರ" ಎಂದು ಹೆಸರಾಗಿದ್ದ ಇವರು ಮೈಸೂರು ಸಂಸ್ಥಾನವನ್ನು ಮಾದರಿ ಮೈಸೂರು ರಾಜ್ಯವಾಗಿ ರೂಪಿಸಿದರು.

**2. ವಿಶ್ವೇಶ್ವರ೦ಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆ೦ಯನ್ನು ಕುರಿತು ಬರೆಯಿರಿ :**

**ಉ :** ನಾಲ್ವಡಿ ಕೃಷ್ಣರಾಜ ಒಡೆಯರಿಂದ ದಿವಾನರಾಗಿ ನೇಮಕವಾದ ವಿಶ್ವೇಶ್ವರಯ್ಯನವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಛೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು, ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾ೦ರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ರಾಜ್ಯ ಪ್ರವಾಸ ಮಾಡಿ ಕಾರ್ಯ ನಡೆಸಿದ್ದರು. ಸಮರ್ಥ ಕಾರ್ಯನಿರ್ವಹಣೆಗೆ ಸಮಿತಿ ರಚನೆಗೆ ಪ್ರಾಶಸ್ಯ ನೀಡಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಆಧ್ಯತೆ ನೀಡಿದರು. ಮೈಸೂರು ಮಾದರಿ ಎಂಬ ಹೊಸ ಆಡಳಿತ ಜನ್ಮ ತಾಳಲು ಕಾರಣರಾದರು. ಇವರ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯಧಾನಿಯಾಗಿ ಮತ್ತು ರಾಜ್ಯದಲ್ಲಿ ಎರಡನೆಯ ದೊಡ್ಡ ನಗರವಾಗಿ ಪ್ರಸಿದ್ದಿ ಪಡೆಯಿತು. ಮೈಸೂರಿನ ಹೊಸ ಅರಮನೆಯ ಸಿ.ರಂಗಾಚಾರ್ಲು ಪುರಭವನ, ಅರಮನೆ ವಿಸ್ತರಣೆ, ಕೃಷ್ಣರಾಜೇಂದ್ರ ಆಸ್ಪತ್ರೆ, ಲಲಿತ ಮಹಲ್, ಅರಮನೆಯ ತಳಹದಿ ಮತ್ತು ಪ್ರಧಾನ ಅರಮನೆಯ ಕಚೇರಿ ಸಮುಚ್ಚಯಗಳು ಇವರ ಕಾಲದಲ್ಲಿಯೇ ನಿರ್ಮಾಣಗೊಂಡವು. ಶಿವನ ಸಮುದ್ರ ಜಲವಿದ್ಯುತ್ ಉತ್ಪಾದನೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿದರು. ಜನಾರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಹಲವಾರು ಆಸ್ಪತ್ರೆಗಳನ್ನು ಪ್ರಾರಂಭಿಸಿದರು. ಇವರು ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀರಣ ಇಲ್ಲವೇ ಅವನತಿ" ಎಂಬ ಘೋಷಣೆ ಮಾಡಿ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರು. 1913ರಲ್ಲಿ ಮೈಸೂರು ಬ್ಯಾಂಕ್‌ನ್ನು ಸ್ಥಾಪಿಸಿದರು, ಹೀಗೆ ವಿಶ್ವೇಶ್ವರಯ್ಯನವರು ಹೊಸಯುಗದ ಹರಿಕಾರರಾಗಿ ಮೈಸೂರು ಸಂಸ್ಥಾನಕ್ಕೆ ನವ ಚೈತನ್ಯವನ್ನು ತುಂಬಿದರು.

**3. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ವಿವರಿಸಿ.**

ಉ: ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ಯೋಜನೆಗಳನ್ನು ರೂಪಿಸಿದರು. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು, ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿ ಪರ ರಾಜ್ಯದಲ್ಲಿ ಎಲ್ಲರ ಆ ಜನ್ಮ ಸಿದ್ಧ ಹಕ್ಕಾಗಬೇಕು" ಎಂದು ಹೇಳಿದರು. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾಲಯದ ನಿಯಂತ್ರಣಕ್ಕೆ ಒಳಪಡಿಸಿ ಪ್ರೌಢಶಿಕ್ಷಣ ಸಂಸ್ಥೆಗಳನ್ನು ಬೇರ್ಪಡಿಸಿ ಸಂಸ್ಥಾನವೇ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಫಲಶೃತಿ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆಧ್ಯತೆ ನೀಡಿದರು. ಬೆಂಗಳೂರಿನ ಮೆಕ್ಯಾನಿಕಲ್ ಇಂಜನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳೆಯರಿಗಾಗಿ ಗೃಹ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವುದರ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು. ಗ್ರಂಥಾಲಯಗಳ ವ್ಯವಸ್ಥೆಗೆ ಅಸ್ಥಿಭಾರ ಹಾಕಿದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಹೀಗೆ ವಿಶ್ವೇಶ್ವರಯ್ಯನವರು ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

**ಉ) ಇಲ್ಲಿ ಬಿಟ್ಟಿರುವ ಜಾಗವನ್ನು ಸರಿಯಾದ ಪದಗಳಿಂದ ತುಂಬಿರಿ.**

1. ನಾಲ್ವಡಿ ಕೃಷ್ಣರಾಜ ಒಡೆಯರ್ ರವರಿಗೆ ರೀಜೆಂಟರಾಗಿ ಕಾರ್ಯನಿರ್ವಹಿಸಿದವರ_______ಅಮ್ಮನವರು.
   **ಉ: ಮಹಾರಾಣಿ ವಾಣಿವಿಲಾಸ**

2 1914 ರಲ್ಲಿ ಶಾಲಾ ಪ್ರವೇಶಕ್ಕೆ_________ ನಿಷೇಧವಾಯಿತು.
   **ಉ: ಜಾತಿ ಪರಿಗಣನೆಯ**

3. ವಿಶ್ವೇಶ್ವರಯ್ಯವರು ಮುಂಬೈ ಪ್ರಾಂತ್ಯದಲ್ಲಿ_____ಆಗಿ ಸೇವೆ ಪ್ರಾರಂಭಿಸಿದರು.
   **ಉ: ಸಹಾಯಕ ಎಂಜಿನಿಯರ್**

**4.** ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ__________ ಅವರು ವಿಶ್ವೇಶ್ವರ೦ಯ್ಯ ಅವರನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

**ಉ: ಲಾರ್ಡ್‌ಸಂಡ್ ಹರ್ಸ್ಟ್**

5. ಭಾರತ ಸರ್ಕಾರವು ವಿಶ್ವೇಶ್ವರಯ್ಯನವರಿಗೆ________ಎಂಬ ಪ್ರಶಸ್ತಿ ನೀಡಿ ಗೌರವಿಸಿತು.
**ಉ: ಭಾರತರತ್ನ**

**ಊ). ಕೊಟ್ಟಿರುವ ಪದಗಳ ತತ್ಸಮ–ತದ್ಭವ ಬರೆಯಿರಿ.**

1) ವಂಶ–ಬಂಚ
2) ಪಟ್ಟಣ–ಪತ್ತನ
3) ಜಾಣ – ತಾಣ
4) ಕಾರ್ಯ – ಕಜ್ಜ

**ಋ) ನೀಡಿರುವ ಪದಗಳಲ್ಲಿ ಅನ್ಯದೇಶ ಪದಗಳನ್ನು ಆರಿಸಿ ಬರೆಯಿರಿ.**

[ಡಿಪ್ಲೋಮ, ದಿವಾನ, ಕಾರ್ಖಾನೆ, ಕಛೇರಿ, ನಡೆಸು, ಪ್ರೌಢ, ಅಜಮಾಯಿಸಿ, ಕಾಗದ, ಸೋಪು, ಶಿಕ್ಷಣ]

**ಅನ್ಯದೇಶ್ಯ ಪದಗಳು :**

(ಡಿಪ್ಲೋಮ (ಇಂಗ್ಲೀಷ್)
ದಿವಾನ (ಪರ್ಶಿಯನ್ ಪಾರ್ಸಿ)
ಕಾರ್ಖಾನೆ (ಹಿಂದೂಸ್ಥಾನಿ)
ಕಛೇರಿ (ಹಿಂದೂಸ್ಥಾನಿ)
ಸೋಪು (ಇಂಗ್ಲೀಷ್)
ಅಜಮಾಯಿಷಿ (ಪರ್ಶಿಯನ್ ಪಾರ್ಸಿ)
ಕಾಗದ (ಹಿಂದೂಸ್ಥಾನಿ)

**ದೇಶ್ಯ ಪದಗಳು** : ಪ್ರೌಢ, ಶಿಕ್ಷಣ, ನಡೆಸು

# ಬಹು ಆಯ್ಕೆಯ ಪ್ರಶ್ನೆಗಳು

1. **'ಇಲಾಖೆ'** ಇದು ಈ ಭಾಷೆಯ ಶಬ್ಧವಾಗಿದೆ.
   ಅ) ಕನ್ನಡ ಆ) ಅರಬ್ಬಿ ಇ) ಇಂಗ್ಲೀಷ್ ಈ) ಪರ್ಷಿಯನ್
   **ಉ: ಆ) ಅರಬ್ಬಿ**
2. **'ಗ್ರಾಮ'** ಪದದ ತದ್ಭವ ರೂಪ
   ಅ) ಗಮ ಆ) ಹಳ್ಳಿ ಇ) ಗಾಮ ಈ) ಗಾವ
   **ಉ: ಈ) ಗಾವ**
3. **'ಶತಮಾನೋತ್ಸವ'** ಈ ಪದದ ಸಂಧಿ
   ಅ) ಸವರ್ಣದೀರ್ಘ ಆ) ಗುಣ ಇ) ಆದೇಶ ಈ) ಆಗಮ
   **ಉ: ಆ) ಗುಣ**
4. **'ಮನ್ವಂತರ'** ಬಿಡಿಸಿ ಬರೆಯಿರಿ
   ಅ) ಮನು+ಅಂತರ ಆ) ಮಾನವ+ಅಂತರ ಇ) ಮನುಷ್ಯ+ಅಂತರ ಈ) ಮನು+ವಂತರ
   **ಉ: ಅ) ಮನು + ಅಂತರ**
5. **'ಅಜಮಾಯಿಷಿ'** ಇದು ಈ ಭಾಷೆಯ ಪದ
   ಅ) ಅರಬ್ಬಿ ಆ) ಇಂಗ್ಲೀಷ್ ಇ) ಪರ್ಷಿಯನ್ ಈ) ಪಾರ್ಸಿ
   **ಉ: ಈ) ಪಾರ್ಸಿ**
6. **'ಒಂದೊಂದು'** ಇದರ ವ್ಯಾಕರಣ ವಿಶೇಷ
   ಅ) ಜೋಡಿಪದ ಆ) ನುಡಿಗಟ್ಟು ಇ) ದ್ವಿರುಕ್ತಿ ಈ) ಅವ್ಯಯ
   **ಉ: ಇ) ದ್ವಿರುಕ್ತಿ**
7. **'ಚಕ್ರಪಾಣಿ'** ಪದವು ಈ ಸಮಾಸಕ್ಕೆ ಉದಾಹರಣೆ
   ಅ) ತತ್ಪುರುಷ ಆ) ಬಹುವ್ರೀಹಿ ಇ) ಕರ್ಮಧಾರೆಯ ಈ) ದ್ವಂದ್ವ
   **ಉ: ಆ) ಬಹುವ್ರೀಹಿ**
8. **'ಮನ್ವಂತರ'** ಪದವು ಈ ಭಾಷೆಯ ಶಬ್ದ
   ಅ) ಇಂಗ್ಲೀಷ್ ಆ) ಕನ್ನಡ ಇ) ಸಂಸ್ಕೃತ ಈ) ಉರ್ದು
   **ಉ: ಇ) ಸಂಸ್ಕೃತ**

9. **'ಅಂಗೈ'** ಪದವನ್ನು ವಿಗ್ರಹಿಸಿ ಬರೆದಾಗ
   ಅ) ಅಂಗ+ಕೈ ಆ) ಕೈಯ + ಅಡಿ ಇ) ಕೈಯ + ಅಂಗ ಈ) ಅಡಿ + ಕೈ
   **ಉ: ಆ) ಕೈಯ + ಅಡಿ**
10. **'ಪತ್ತನ'** ಪದದ ಸಂಸ್ಕೃತ ರೂಪ
    ಅ) ಪೊಟ್ಟಣ ಆ) ನಗರ ಇ) ಪಟ್ಟಣ ಈ) ಪತನ
    **ಉ: ಇ) ಪಟ್ಟಣ**
11. **'ಉಂಬಳಿಯಾಗಿ'** ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ
    ಅ) ಉಂಬಳಿ+ಯಾಗಿ ಆ) ಉಂ+ಉಳಿಯಾಗಿ ಇ) ಉಂಬಳಿಯ+ಆಗಿ ಈ) ಉಂಬಳಿ+ಆಗಿ
    **ಉ: ಈ) ಉಂಬಳಿ+ಆಗಿ**
12. **'ಸುಸಂಗತ'** ಪದದ ಅರ್ಥ
    ಅ) ಸುಂದರವಾದ ಆ) ಯೋಗ್ಯವಾದ ಇ) ಸುಸಂಗಧ ಈ) ಸುಂದರವಾದ
    **ಉ : ಆ) ಯೋಗ್ಯವಾದ**
13. 'ಒಬ್ಬರು ಹೇಳಿದ ಮಾತನ್ನೆ ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ'
    ಅ) ವಾಕ್ಯವೇಷ್ಟನ ಆ) ಪ್ರಶ್ನಾರ್ಥಕ ಇ) ಉದ್ಧರಣ ಚಿಹ್ನೆ ಈ) ಆವರಣ
    **ಉ: ಇ) ಉದ್ಧರಣ ಚಿಹ್ನೆ**

14. **'ದಿವಾನ'** ಪದವು ಈ ಭಾಷೆಯಿಂದ ಬಂದಿದೆ

ಅ) ಪರ್ಷಿಯನ್ ಆ) ಪೋರ್ಚುಗೀಸ್ ಇ) ಪಾರ್ಸಿ ಈ) ಉರ್ದು

**ಉ: ಇ) ಪಾರ್ಸಿ**

15. **'ಇಮ್ಮಾವು'** ಈ ಸಮಾನಕ್ಕೆ ಸೇರಿದೆ.

ಅ) ತತ್ಪುರುಷ ಆ) ಕರ್ಮಧಾರೆಯ ಇ) ಅಂಶಿ ಈ) ದ್ವಿಗು

**ಉ : ಈ) ದ್ವಿಗು**

16. **'ಕಾರಣಾಂತರ , ವಧೂಪೇತ'** – ಪದದ ಸಂಧಿ

ಅ) ಗುಣಸಂಧಿ ಆ) ವೃದ್ಧಿಸಂದಿ ಇ) ಸವರ್ಣದೀರ್ಘಸಂಧಿ ಈ) ಯಣ್ ಸಂಧಿ

**ಉ : ಇ) ಸವರ್ಣದೀರ್ಘಸಂಧಿ**

17. ಈ ಬೆಕ್ಕು ಬಿಡಿಸಿ ಬರೆದಾಗ

ಅ) ಇದು + ಬೆಕ್ಕು ಆ) ಈ + ಬೆಕ್ಕು ಇ) ಇ + ಬೆಕ್ಕು ಈ) ಒಂದು + ಬೆಕ್ಕು

**ಉ : ಅ) ಇದು + ಬೆಕ್ಕು**

18. **'ನೇತಾರ'** ಪದದ ಅರ್ಥ

ಅ) ನಾಯಕ ಆ) ಸರದಾರ ಇ) ತಾರೆ ಈ) ನೇತಾಜಿ

**ಉ: ಅ) ನಾಯಕ**

19. **'ಶಿವನ ಸಮುದ್ರ'** ಈ ಸಮಾಸಕ್ಕೆ ಉದಾಹರಣೆಯಾಗಿದೆ

ಅ) ದ್ವಿಗು ಆ) ತತ್ಪುರುಷ ಇ) ದ್ವಂದ್ವ ಈ) ಅಂಶಿ

**ಉ : ಆ) ತತ್ಪುರುಷ**

20. ಇವುಗಳಲ್ಲಿ ಅಂಶಿಸಮಾಸಕ್ಕೆ ಉದಾಹರಣೆಯಾದ ಪದ

ಅ) ಇಮ್ಮಾವು ಆ) ಹಿಂದಲೆ ಇ) ಮೈಯನ್ನು ಈ) ಆವಸ್ತ್ರ

**ಉ: ಆ) ಹಿಂದಲೆ**

21. **'ವಂಶ'** ಈ ಪದದ ತದ್ಭವ

ಅ) ಹಂಸ ಆ) ಸಂಸ ಇ) ಕಂಸ ಈ) ಬಂಚ

**ಉ: ಈ) ಬಂಚ**

22. ಇವುಗಳಲ್ಲಿರುವ ಅನ್ಯದೇಶ್ಯ ಪದ

ಅ) ಪ್ರೌಢ ಆ) ಕಛೇರಿ ಇ) ಶಿಕ್ಷಣ ಈ) ನಡೆಸು

**ಉ: ಆ) ಕಛೇರಿ**

23. **'ಸಪ್ತಸ್ವರಗಳು'** ಈ ಸಮಾಸಕ್ಕೆ ಸೇರಿದೆ

ಅ) ದ್ವಂದ್ವ ಆ) ದ್ವಿಗು ಇ) ಅಂಶಿ ಈ) ಗಮಕ

**ಉ: ಆ) ದ್ವಿಗು**

24. **'ಪರಮೋಚ್ಛ'** ಪದದ ಸಂಧಿ

ಅ) ಲೋಪ ಆ) ಆಗಮ ಇ) ಗುಣ ಈ) ಯಣ್

**ಉ: ಇ) ಗುಣ**

25. **'ರತುನ"** ಪದದ ತತ್ಸಮ ರೂಪ

ಅ) ರತ್ನ ಆ) ರಕ್ತ ಇ) ರತ್ನ ಈ) ರತನ

**ಉ: ಇ) ರತ್ನ**

# <u>ಘಟಕ ಪರೀಕ್ಷೆ – 1</u>

**ಅಂಕಗಳು–20**

**ಅ) ಬಹು ಆಯ್ಕೆಯ ಪ್ರಶ್ನೆಗಳು : 1x3=3**

1. ಪರಿಭಾಷಿಕ ಅಥವಾ ಅನ್ಯಭಾಷೆಯ ಪದಗಳನ್ನು ಬಳಸುವಾಗ ಈ ಚಿಹ್ನೆ ಬಳಸಲಾಗುವುದು.
   ಅ) ಭಾವಸೂಚಕ ಆ) ವಾಕ್ಯವೇಷ್ಟನ ಇ) ಉದ್ಧರಣ ಈ) ಆವರಣ
2. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಆ ವಾಕ್ಯವನ್ನು ಹೀಗೆನ್ನುವರು.
   ಅ) ಸಾಮಾನ್ಯವಾಕ್ಯ ಆ) ಸಂಯುಕ್ತವಾಕ್ಯ ಇ) ಮಿಶ್ರವಾಕ್ಯ ಈ) ವಿಶೇಷವಾಕ್ಯ
3. 'ಜ್ಞಾನೇಶ್ವರ' ಪದದಲ್ಲಿ ಆಗಿರುವ ಸಂಧಿ
   ಅ) ಸವರ್ಣದೀರ್ಘ ಆ) ಗುಣ ಇ) ವೃದ್ಧಿ ಈ) ಅನುನಾಸಿಕ

**ಆ). ಕೊಟ್ಟಿರುವ ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ: 1x3=3**

| | | | | |
|---|---|---|---|---|
| 1. | ತಲೆನೋವು | : ತತ್ಪುರುಷ ಸಮಾಸ | :: ನೇಯ್ದ ವಸ್ತ್ರ | : ________ |
| 2. | ಸ್ಥಾನ | : ಠಾಣ | :: ಕಾರ್ಯ | : ________ |
| 3. | ದಿವಾನ | : ಪಾರ್ಸಿ | :: ಸ್ಯಾನಿಟರಿ | : ________ |

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: 1x3=3**

1. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು ?
2. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು ?
3. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ: 2x4=8**

1. ಡಿ.ಎಸ್.ಜಯಪ್ಪಗೌಡ ಅವರ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ
2. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?
3. ನೆಹರೂರವರು ಸರ್.ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಏನೆಂದು ಹೇಳಿದರು?
4. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾವುವು?

**ಉ) ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ: 1x3=3**

**1. "ಸಾಮಾಜಿಕ ಕಾನೂನುಗಳ ಹರಿಕಾರ"**

# ಘಟಕ ಪರೀಕ್ಷೆ – 2

**ಅಂಕಗಳು – 20**

**ಅ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: 1x4=4**

1. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?
2. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?
3. ಕನ್ನಂಬಾಡಿ ಅಣೆಕಟ್ಟನ್ನು ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ?
4. ನಾಲ್ವಡಿ ಕೃಷ್ಣರಾಜ ಒಡೆಯರು ಬಾಲಕರಾಗಿದ್ದಾಗ ರೀಜೆಂಟರಾಗಿ ಆಡಳಿತ ನಿರ್ವಹಣೆ ಮಾಡಿದವರು ಯಾರು?

**ಆ) ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ: 3x2=6**

1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?
2. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು ?
3. ವಿಶ್ವೇಶ್ವರಯ್ಯನವರು ಹೈದರಬಾದ್ ನಗರಕ್ಕೆ ಸಲ್ಲಿಸಿದ ಸೇವೆ ಏನು?

**ಇ) ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ: 2x3=6**

1. **"**ತಾವು ಕಡಿಮೆ ಮಾತನಾಡಿದ್ದೀರಿ, ಹೆಚ್ಚು ಕೆಲಸ ಮಾಡಿದ್ದೀರ**"**.
2. **"**ಮೈಸೂರು ಸಂಸ್ಥಾನಕ್ಕೆ **'**ಮಾದರಿ ಮೈಸೂರು**'** ಎಂಬ ಕೀರ್ತಿ ಪ್ರಾಪ್ತವಾಯಿತು**"**.

**ಈ) 8–10 ವಾಕ್ಯಗಳೊಂದಿಗೆ ವಿವರಿಸಿ: 1x4=4**

1. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಅಥವಾ

2. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

# ಪದ್ಯ ಪಾಠ –4
# ಕೌರವೇದ್ರನ ಕೊಂದೆ ನೀನು

**ಕವಿ : ಕುಮಾರ ವ್ಯಾಸ**

**ಆಕರ ಗ್ರಂಥ : ಕರ್ಣಾಟ ಭಾರತ ಕಥಾ ಮಂಜರಿ**

**ಕವಿ ಪರಿಚಯ :**

ಕುಮಾರ ವ್ಯಾಸ ಎಂದೇ ಪ್ರಸಿದ್ಧರಾಗಿರುವ ಗದುಗಿನ ನಾರಾಯಣಪ್ಪ ಅವರು 1430 ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಜನಿಸಿದರು. ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ (ಮೊದಲ ಹತ್ತು ಪರ್ವ) ಬರೆದಿದ್ದರಿಂದ ಈತನಿಗೆ ಕುಮಾರವ್ಯಾಸನೆಂಬ ಹೆಸರು ಬಂದಿದೆ. ಕರ್ಣಾಟ ಭಾರತ ಕಥಾ ಮಂಜರಿ ಕುಮಾರವ್ಯಾಸನ ಪ್ರಸಿದ್ಧ ಕೃತಿಯಾಗಿದೆ. ಇದಕ್ಕೆ ಕರ್ಣಾಟ ಭಾರತ; ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರುಗಳಿಂದಲೂ ಕರೆ0ಯಲಾಗುತ್ತದೆ. ಇವರು "ರೂಪಕ ಸಾಮ್ರಾಜ್ಯ ಚಕ್ರವರ್ತಿ" ಎಂಬ ಬಿರುದನ್ನು ಪಡೆದಿದ್ದಾರೆ.

ಪ್ರಸ್ತುತ ಪದ್ಯಪಾಠವನ್ನು "ಕರ್ಣಾಟ ಭಾರತ ಕಥಾ ಮಂಜರಿ" ಮಹಾಕಾವ್ಯದಿಂದ ಆಯ್ದು ಕೊಳ್ಳಲಾಗಿದೆ.

## ಪದ್ಯದ ಸಾರಾಂಶ ವಿವರಣೆ:

1.

**ಪ್ರಸ್ತುತ ಈ ಪದ್ಯಭಾಗವನ್ನು ಕುಮಾರ ವ್ಯಾಸನು ಬರೆದಿರುವ 'ಕರ್ಣಾಟ ಭಾರತ ಕಥಾ ಮಂಜರಿ' ಕಾವ್ಯದ 'ಕೌರವೇಂದ್ರನ ಕೊಂದೆ ನೀನು' ಪದ್ಯಭಾಗದಿಂದ ಆರಿಸಿ ಕೊಳ್ಳಲಾಗಿದೆ**

ಕರ್ಣ ಮತ್ತು ಕೃಷ್ಣ ಸಂಬಂಧದಲ್ಲಿ ಭಾವ ಮೈದುನರಾಗಬೇಕು. ಆ ಸಲುಗೆಯಿಂದಲೇ ಕೃಷ್ಣನು ಕರ್ಣನ ಕೈಯನ್ನು ಹಿಡಿದು ಎಳೆದುಕೊಂಡು ರಥದ ಆಸನದಲ್ಲಿ ತನ್ನ ಜೊತೆಯಲ್ಲಿ ಕೂರಿಸಿಕೊಂಡನು, ಆದರೆ ಇದನ್ನು ಕರ್ಣನು ತಿಳಿಯನು, ಇದುವರೆಗೂ ತಾನು ಸೂತಪುತ್ರ ಎಂದೇ ತಿಳಿದಿದ್ದ ಕರ್ಣನು ದೇವ ನಿಮ್ಮ ಸೇವಕನು ನಾನು ನಿಮ್ಮ ಪಾದದ ಕೆಳಗೆ ಕೂಡುವವನು ಇಂತವನಿಗೆ ಸಮ ಗೌರವವೇ ನನಗೆ ಭಯವಾಗುತ್ತಿದೆ. ಎಂದು ಹೇಳುತ್ತಾನೆ. ಆದರೂ ಕೃಷ್ಣ ಸಲುಗೆಯಿಂದ ತೊಡೆಗೆ ತೊಡೆ ತಾಕುವಂತೆ ಕುಳಿತುಕೊಂಡು ಮಾತು ಮುಂದುವರಿಸುತ್ತಾನೆ. ಇದೆಲ್ಲ ಕೃಷ್ಣನು ತನ್ನ ಭೇದ ತಂತ್ರವನ್ನು ಉಪ0ಯೋಗಿಸಲು ಮಾರ್ಗೋಪಾಯವನ್ನು ಕಂಡು ಕೊಳ್ಳುವ ಪರಿಯಾಗಿದೆ.

2.

ಕೃಷ್ಣನು ಕರ್ಣನಲ್ಲಿ ಭಯವನ್ನು ಯಾವ ರೀತಿ ಬಿತ್ತುತ್ತಾನೆ. ಎಂಬುದನ್ನು ಈ ಪದ್ಯದಲ್ಲಿ ನೋಡಬಹುದಾಗಿದೆ. "ಎಲೈ ಕರ್ಣ ನಿಮ್ಮೊಳಗೆ ಅಂದರೆ ಪಾಂಡವರೊಳಗೆ (ಕುಂತಿಯ ಮೊದಲ ಪುತ್ರ) ಯಾದವರು (ಕೃಷ್ಣನ ವಂಶಸ್ಥರು) ಮತ್ತು ಕೌರವರು ಇವರೊಳಗೆ ಯಾವುದೇ ಭೇದ-ಭಾವ ಇಲ್ಲ. ಅಂದರೆ ಈ ವಂಶಗಳು ಪರಸ್ಪರ ಸಂಬಂಧಿಕರು. ನಿನ್ನಾಣೆಗೂ ನೀನೇ ಪಾಂಡವರಲ್ಲಿ ಇದರ ಹಿರಿ0ಯ ನೀನೆ ಈ ರಾಜ್ಯದ ರಾಜನಾಗಬೇಕು. ನಿನ್ನ ಮನದಲ್ಲಿ ಇದರ ಅರಿವು ಯಾವುದು ಇಲ್ಲ ಎಂದು ಕರ್ಣನ ಮನದಲ್ಲಿ ದ್ವಂದ್ವ ಹೇಳಿಕೆಯನ್ನು ಹೇಳಿ ಭಯವಾಗುವಂತೆ ಮಾಡಿದನು ಕೃಷ್ಣನು "ಕರ್ಣ ನಿನ್ನಾಣೆಗೂ ನೀನು ಈ ಭೂಮಿಯ ಒಡೆಯ" ಎಂದು ಅವನ ಮನದಲ್ಲಿ ದ್ವಂದ್ವ ನಿಲುವು ಮೂಡುವಂತೆ ಮಾಡಿರುವುದನ್ನು ಕವಿ ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

3.

"ಕುಂತಿ ದೂರ್ವಾಸ ಮುನಿಗಳ ಸೇವೆಯಲ್ಲಿದ್ದಾಗ ಐದು ಮಂತ್ರ ರೂಪದ ವರಗಳನ್ನು ಪಡೆದಿರುತ್ತಾಳೆ. ಮಂತ್ರ ಪರೀಕ್ಷೆಯಲ್ಲಿ ಕುತೂಹಲವಾಗಿ ತರುಣಿ ಇದ್ದಾಗ ಸೂರ್ಯದೇವನನ್ನು ನೆನೆಯುತ್ತಾಳೆ. ಆಗ ಕರ್ಣನು ಜನಿಸುತ್ತಾನೆ. ಭ0ಯಗೊಂಡು ಮಗುವನ್ನು ನೀರಿನಲ್ಲಿ ಬಿಟ್ಟು ಹೋಗಿರುತ್ತಾಳೆ. ಆ ಮಗುವನ್ನು ಸೂತನೊಬ್ಬ ಸಾಕುತ್ತಾನೆ. ಅವನೆ ಕರ್ಣ. ನಂತರ ಕುಂತಿ ಯಮದೇವನನ್ನು ನೆನೆದು ಧರ್ಮರಾಯನನ್ನು, ಮೂರನೆಯದಾಗಿ ವಾಯುದೇವನನ್ನು ನೆನೆದು ಭೀಮ ಸೇನನನ್ನು, ನಾಲ್ಕನೆಯದಾಗಿ ಇಂದ್ರದೇವನನ್ನು ನೆನೆದು ಅರ್ಜುನನನ್ನು ಪಡೆದಳು. ಉಳಿದ ಒಂದು ಮಂತ್ರವನ್ನು ತನ್ನ ತಂಗಿಯಾದ ಮಾದ್ರಿಗೆ (ಪಾಂಡು ರಾಜನ ಎರಡನೆಯ ಹೆಂಡತಿ)

ನೀಡಿದಳು. ಮಾದ್ರಿ ಅಶ್ವಿನಿ ದೇವತೆಯರನ್ನು ನೆನೆದಳು ಆಗ ನಕುಲ ಮತ್ತು ಸಹದೇವ ಇಬ್ಬರು ಮಕ್ಕಳು ಜನಿಸಿದರು. ಎಂದು ಕರ್ಣನ ಜನ್ಮ ರಹಸ್ಯವನ್ನು ಕೃಷ್ಣನು ಭೇದಿಸಿಬಿಟ್ಟನು.

4.

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಹೇಗೆ ಒಡ್ಡಿದನು ಎಂಬುದನ್ನು ಈ ಪದ್ಯ ಭಾಗದಲ್ಲಿ ಕಾಣಬಹುದಾಗಿದೆ. "ಎಲೈ ಕರ್ಣ ನಿನಗೆ ಹಸ್ತಿನಾಪುರ ರಾಜ್ಯದ ರಾಜನನ್ನಾಗಿ ಮಾಡುವೆನು. ನೀನೇ ಹಿರಿಯನಾಗಿರುವುದರಿಂದ ಪಾಂಡವರು – ಕೌರವರು ಇದನ್ನು ಒಪ್ಪುತ್ತಾರೆ. ನಿನಗೆ ಈ ಎರಡು ವಂಶದವರು ಸೇವಕರಾಗುತ್ತಾರೆ, ಇದನ್ನು ಬಿಟ್ಟು ದುರ್ಯೋಧನನ ಬಾಯೆಂಜಲಿಗೆ ಕೈಚಾಚುತ್ತಿದ್ದಿಯಲ್ಲ. ಇದು ನಿನಗೆ ಸರಿ ಎನಿಸುತ್ತಿದಿಯೇ ನೀನೇ ವಿಚಾರ ಮಾಡು. ದುರ್ಯೋಧನನ ಬಾಯ ಎಂಜಲಿಗೆ ಕೈ ಚಾಚದೆ ನೀನೇ ರಾಜನಾದರೆ ಕೌರವ–ಪಾಂಡವರು ನಿನ್ನ ಸೇವೆ ಮಾಡುತ್ತಾರೆ. ಎಂದು ಕೃಷ್ಣ ಕರ್ಣನಿಗೆ ಆಮಿಷ ಒಡ್ಡುವ ವಿಷಯವನ್ನು ಕವಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಿದ್ದಾರೆ. ಭೇದ ತಂತ್ರದಿಂದ ಕರ್ಣ ಮತ್ತು ದುರ್ಯೋಧನರನ್ನು ಬೇರೆ ಬೇರೆ ಮಾಡಿ ಕರ್ಣನು ಪಾಂಡವರ ಜೊತೆ ಸೇರಿ 0ಯುದ್ಧ ಮಾಡುವಂತೆ ಮಾಡುವುದೇ ಕೃಷ್ಣನ ಉದ್ದೇಶವಾಗಿತ್ತು.

5

ಕರ್ಣ ರಾಜನಾದರೆ ಹೇಗೆ ಮೆರೆಯಬಹುದು ಎಂಬುದನ್ನು ಈ ಪದ್ಯಭಾಗದಲ್ಲಿ ಹೇಳಲಾಗಿದೆ. "ಕೃಷ್ಣ ನೀನು ರಾಜನಾದರೆ ನಿನ್ನ ಎಡಗಡೆ ಕೌರವೇಂದ್ರನ ಗುಂಪು. ಬಲಗಡೆ ಪಾಂಡವರ ಗುಂಪು, ಎದುರಿಗೆ ಮಾದ್ರ ದೇಶದವರು, ಮಾಗದರು ಯಾದವರು ಇರುತ್ತಾರೆ. ನೀನೆ ಮಧ್ಯದಲ್ಲಿ ರಾಜಸಿಂಹಾಸನದಲ್ಲಿ ಕುಳಿತು ಅತಿಯಾದ ಸೊಬಗಿನಿಂದ ಶೋಭಿಸುವುದನ್ನು ಅಂದರೆ ರಾಜ್ಯಭಾರ ಮಾಡುವುದನ್ನು ಬಿಟ್ಟು ದುರ್ಯೊಧನ ಹೇಳಿದಂತೆ ಕೇಳಿಕೊಂಡಿರುವುದು ನಿನಗೆ ಸರಿಯಿಲ್ಲ". ಎಂದು ಕರ್ಣನ ಮನವನ್ನು ಪರಿವರ್ತಿಸಲು ಕೃಷ್ಣನ ಪ್ರಯತ್ನವನ್ನು ಕವಿ ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

6.

ಕೃಷ್ಣನ ಮಾತುಗಳನ್ನು ಕೇಳಿದ ಕರ್ಣನ ಕೊರಳ ನರಗಳು ಬಿಗಿದವು, ಮಾತುಗಳು ಹೊರಡಲಿಲ್ಲ. ಕಣ್ಣೀರು ಹೆಚ್ಚಾಗಿ ಅತಿಯಾಗಿ ನೊಂದುಕೊಂಡನು. ಮನಸ್ಸಿನಲ್ಲಿ ಅ0ಯ್ಯೋ ಕುರುಪತಿ ದುರ್ಯೊಧನನಿಗೆ ಏನೋ ಕೇಡು ಸಂಭವಿಸಿತಲ್ಲ ಎಂದು ಕೊಂಡನು. ಕೃಷ್ಣನು ತನ್ನ ದ್ವೇಷವನ್ನು ಹೊರಗೆ ತೋರಿಸದೆ ಸೇಡು ತೀರಿಸಿಕೊಳ್ಳುವನಲ್ಲ. ಈ ರೀತಿಯಾಗಿ ಕೌರವನ ವಂಶವನ್ನು ನಾಶ ಮಾಡುತ್ತಿದ್ದನಲ್ಲ, ತನ್ನ ವಂಶವನ್ನು ತಿಳಿಸಿ ನನ್ನನ್ನ ಕೊಂದುಹಾಕಿದನು. ಮುಂದೇನು ಮಾತಾನಾಡುವುದು ಎಂದು ಚಿಂತಾಕ್ರಾಂತನಾದನು.

7.

ಕರ್ಣನು ಕೃಷ್ಣನ ಮಾತುಗಳನ್ನು ಕೇಳಿ ಏನೂ ತೋಚದೆ ಮೌನಕ್ಕೆ ಶರಣಾಗುತ್ತಾನೆ. ಮನಸ್ಸು ತಲ್ಲಣಗೊಳ್ಳುತ್ತದೆ. ಆಗ ಕೃಷ್ಣನು "ಏನು ಯೋಚಿಸುತ್ತಿದ್ದೀಯಾ ಕರ್ಣ ನಿನಗೆ ಪಾಂಡವರಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ ನನ್ನಾಣೆಗೂ ಹೇಳುತ್ತೇನೆ ನೀನು ಒಪ್ಪಿಕೋ ಯಾವುದೇ ಹಾನಿಯಾಗುವುದಿಲ್ಲ. ನಿನಗೆ ಎಂದು ನಾನು ಕೇಡನ್ನು ಬ0ಯಸುವುದಿಲ್ಲ. ನಾನು ನಿನ್ನ ಹಿತದೃಷ್ಠಿಯಿಂದ ಹೇಳುತ್ತೇನೆ ಎಂದು ಕರ್ಣನು ಮೌನ ಮುರಿಯುವಂತೆ ಮಾಡುತ್ತಾನೆ. ಕರ್ಣ ನಾನು ನಿನಗೆ ಕೇಡಾಗಲೆಂದು ಬಯಸುವುದಿಲ್ಲ, ನಿನಗೆ ಒಳ್ಳೆ0ಯದನ್ನೇ ಬಯಸುವೆ ಎಂದು ಕೃಷ್ಣ ಹೇಳುವ ಹಿತ ಚಿಂತನೆಯ ಮಾತು ಸ್ವಾರಸ್ಯವಾಗಿದೆ.

8.

ಕರ್ಣ ಕೃಷ್ಣನ ಮಾತಿಗೆ ಮರುಳಾಗದೆ ತನ್ನ ಸ್ವಾಮಿ ನಿಷ್ಠೆಯನ್ನು ತೋರುತ್ತಾನೆ. ಕರ್ಣನು "ಏ ಮರುಳು ಮಾಧವ (ಕೃಷ್ಣ) ಈ ರಾಜ್ಯದ ಸಿರಿ ಸಂಪತ್ತಿನ ಆಸೆಗೆ ಸೋಲುವವನು ನಾನಲ್ಲ, ಪಾಂಡವರಿಂದ ಮತ್ತು ಕೌರವರಿಂದ ಸೇವೆ ಮಾಡಿಸಿ ಕೊಳ್ಳುವುದು ನನಗೆ ಇಷ್ಟವಿಲ್ಲ. ನನ್ನನ್ನು ಕಷ್ಟಕಾಲದಲ್ಲಿ ಸಾಕಿದ ಒಡೆಯನಿಗೆ ಶತ್ರುಗಳ ಶಿರವನ್ನು ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ನೀನು ನನ್ನ ಜನ್ಮರಹಸ್ಯವನ್ನು ತಿಳಿಸಿ ಕೌರವೇಂದ್ರನಾದ ದುರ್ಯೋಧನನ್ನು ಕೊಂದು ಬಿಟ್ಟೆ ಎಂದು ತನ್ನ ಸ್ವಾಮಿ ನಿಷ್ಠೆಯನ್ನು ಮೆರೆಯುತ್ತಾನೆ. ಸೂ0ರ್ಯನ ಅನುಗ್ರಹದಿಂದ ಜನಿಸಿದ ಮಗುವನ್ನು ಕುಂತೀ ನೀರಿನಲ್ಲಿ ತೇಲಿಬಿಟ್ಟಾಗ ಅದು ಅಂಬಿಗನ ಮನೆ0ಯಲ್ಲಿ ಬೆಳೆ0ಯುತ್ತದೆ. ಆಗ ಅದು ಸೂತ ಪುತ್ರನೆಂದು ಆತನಿಗೆ ಸಮಾಜದಲ್ಲಿ ಸೂಕ್ತಸ್ಥಾನ ದೊರೆಯುವುದಿಲ್ಲ. ಅಂತಹ ಸಂದರ್ಭದಲ್ಲಿ ದುರ್ಯೋಧನ ಅಂಗ ದೇಶದ ರಾಜನನ್ನಾಗಿ ಮಾಡಿ ಕರ್ಣನನ್ನು ಕಾಪಾಡುತ್ತಾನೆ".

9.

ಕೃಷ್ಣನು ಏನು ಆಸೆ ತೋರಿಸಿದರೂ ಕರ್ಣ ಮಾತ್ರ ತನ್ನ ಸ್ವಾಮಿ ನಿಷ್ಠೆಯನ್ನು ಬಿಡುವುದಿಲ್ಲ. ಕರ್ಣನು " "ಕೃಷ್ಣ ನನಗೆ ವೀರ ದುರ್ಯೋಧನನೆ ನನಗೆ ಒಡೆಯ, ಆತನ ವೈರಿಗಳೆ ನನಗೂ ವೈರಿಗಳು ಇದ್ದ ಹಾಗೆ. ಆತನನ್ನು ಹೊಗಳಿದರೆ ನನ್ನನ್ನು ಹೊಗಳಿದಂತೆಯೇ, ಆತನಿಗೆ ಏನಾಗುತ್ತದೆಯೋ ಅದು ನನಗೂ ಆಗಲಿ. ಆದರೆ ಯುದ್ಧದಲ್ಲಿ ಪಾಂಡವರಲ್ಲಿ ನನ್ನ ಪರಾಕ್ರಮವನ್ನು ಅದರ ಶ್ರೇಷ್ಠತೆಯನ್ನು ತೋರಿಸುತ್ತೇನ" ಎಂದು ತನ್ನ ಶೌರ್ಯಗುಣವನ್ನು ಮೆರೆಯುತ್ತಾನೆ.

10.

ಈ ಪದ್ಯಭಾಗದಲ್ಲಿ ಕರ್ಣನ ಮುಂದಿನ ಹೋರಾಟದ ನಡೆ0ಯನ್ನು ಮತ್ತು ಮಹಾಭಾರತದ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಕವಿ ಹೇಳಿದ್ದಾರೆ. ಕರ್ಣನು "ನಾಳೆ ನಡೆಯುವ ಆನೆ, ಕುದುರೆ, ರಥ, ಕಾಲ್ದಳಗಳಿಂದ ಕೂಡಿದ ಮಹಾಭಾರತ ಯುದ್ಧದಲ್ಲಿ ಮೃತ್ಯುದೇವತೆ (ಮಾರಿ ದೇವತೆ) ಭೋಜನಕ್ಕೆ ಬರುವಂತೆ ಆಹ್ವಾನ ನೀಡಿ ಲೆಕ್ಕವಿಲ್ಲದಷ್ಟು ಸೈನಿಕರನ್ನು ಕೊಂದು ಪಾಂಡವರ ಶಕ್ತಿಯನ್ನು ಕಡಿಮೆಗೊಳಿಸುತ್ತೇನೆ. ಕೌರವರ ಋಣವನ್ನು ತೀರಿಸುತ್ತೇನೆ. ಒಡೆಯನ ಅಗತ್ಯಕ್ಕನುಗುಣವಾಗಿ ತನ್ನ ಪ್ರಾಣವನ್ನೆ ಕೊಡುತ್ತೇನೆ. ಆದರೆ ನನ್ನ ತಂದೆಯಾದ ಸೂರ್ಯದೇವನ ಮೇಲೆ ಆಣೆ ಎಂದು ತನ್ನ ಸಹೋದರ ವಾತ್ಸಲ್ಯ ಹಾಗೂ ದುರ್ಯೊಧನನ ಋಣವನ್ನು ತೀರಿಸುವ ಮಾತನ್ನು ಕರ್ಣನು ಹೇಳುತ್ತಾನೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**

ಉ:– ಕೃಷ್ಣನು ಕರ್ಣನ ಜೊತೆಗೆ ಮೈದುನತನದ ಸಲುಗೆಯಿಂದ ಕೈಹಿಡಿದು ಎಳೆದು ಕೊಂಡು ರಥದಲ್ಲಿ ಕೂರಿಸಿಕೊಂಡನು.

**2. ಕುಮಾರವ್ಯಾಸನ ಆರಾಧ್ಯದೈವ ಯಾರು?**

ಉ:– ಕುಮಾರ ವ್ಯಾಸನ ಆರಾಧ್ಯದೈವ ಗದುಗಿನ ವೀರ ನಾರಾಯಣ.

**3. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?**

ಉ:– ಅಶ್ವಿನಿ ದೇವತೆಗಳ ವರ ಬಲದಿಂದ ಜನಿಸಿದವರು ನಕುಲ ಸಹದೇವರು.

**4. ಕುಮಾರವ್ಯಾಸನಿಗಿರುವ ಬಿರುದು ಯಾವುದು?**

ಉ:– ಕುಮಾರವ್ಯಾಸನಿಗಿರುವ ಬಿರುದು 'ರೂಪಕ ಸಾಮ್ರಾಜ್ಯ ಚಕ್ರವರ್ತಿ'.

**5. ನಾರಾಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು ?**

ಉ:– ವ್ಯಾಸ ರಚಿತ ಸಂಸ್ಕೃತದ ಮಹಾಭಾರತದ 18 ಪರ್ವಗಳ ಕಥೆಯನ್ನು ಕನ್ನಡದಲ್ಲಿ ಮೊದಲ 10 ಪರ್ವಗಳನ್ನು ರಚಿಸಿದ್ದರಿಂದ ನಾರಾಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಬಂತು.

**ಆ). ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?**

ಉ:– ಕೃಷ್ಣನು ಕರ್ಣ ಕೌರವರು, ಪಾಂಡವರು, ಯಾದವರೊಳಗೆ ಯಾವುದೇ ಭೇಧ ಭಾವ ಇಲ್ಲ. ವಿಚಾರಿಸಿದರೆ ಇಬ್ಬರೂ ಒಂದೇ ವಂಶದವರು ನಿನ್ನಾಣೆಯಾಗಿಯೂ ನೀನೇ ಈ ಭೂಮಿಯ ಒಡೆಯ. (ರಾಜ ಮೇದಿನೀಪತಿ) ಆದರೆ ನಿನಗೆ ಅದರ ಅರಿವಿಲ್ಲ ಎಂದು ಹೇಳುವ ಮೂಲಕ ದಾನವರ ವೈರಿಯಾದ ಕೃಷ್ಣ ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.

**2. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**

ಉ:– ಕುಂತಿಯ ತಾನು ಪಡೆದ ಮಂತ್ರೋಪದೇಶದಿಂದ ಮೊದಲು ಸೂರ್ಯದೇವನ ಅನುಗ್ರಹದಿಂದ ಕರ್ಣನನ್ನು, ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುದೇವನ ಅನುಗ್ರಹದಿಂದ ಭೀಮನನ್ನು,

ಇಂದ್ರದೇವನ ಅನುಗ್ರಹದಿಂದ ಅರ್ಜುನನನ್ನು ಪಡೆದಳು. ಒಂದು ಮಂತ್ರವನ್ನು ಮಾದ್ರಿಗೆ ಕರುಣಿಸಿದಾಗ ಮಾದ್ರಿಯು ಅಶ್ವಿನಿ ದೇವತೆಯರ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

3. **ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**

ಉ:– ಕರ್ಣನ ಜನ್ಮ ವೃತ್ತಾಂತವನ್ನು ಕೃಷ್ಣನು ಹೇಳಿ ಅವನಿಗೆ ಇಡೀ ಹಸ್ತಿನಾಪುರದ ರಾಜ್ಯಭಾರವನ್ನು ಕೊಡಿಸುವುದಾಗಿ ಹೇಳಿದಾಗ ಕರ್ಣನ ಕೊರಳ ನರಗಳು ಹಿಗ್ಗಿದವು. ಕಣ್ಣೀರು ಧಾರೆಯಾಗಿ ಸುರಿಯಿತು. ಅವನು ಬಹಳವಾಗಿ ನೊಂದು 'ಅ0ಯ್ಯೋ ಕುರುಪತಿಗೆ ಕೇಡಾಯಿತು' ಎಂದು ಮನದೊಳಗೆ ನೊಂದುಕೊಂಡನು. "ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ? ಬಡಿದೆ ನನ್ನ ಜನ್ಮ ವೃತ್ತಾಂತವನ್ನು ಹೇಳಿ ಕೊಂದನು' ಎಂದು ಚಿಂತಿಸಿದನು.

4. **ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**

ಉ:– ಕೃಷ್ಣನಿಗೆ ಕರ್ಣನು "ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ, ಕುಂತಿಯ ಪುತ್ರರು, ದುರ್ಯೋಧನರಿಂದ ಎನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸ್ಸಿಲ್ಲ, ಸಾಕಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು. ಆದರೆ ನೀನು ನನ್ನ ವಂಶವನ್ನು ತಿಳಿಸಿ ಕೌರವೇಂದ್ರನನ್ನು ಕೊಂದೆ" ಎಂದು ಹೇಳಿದನು.

5. **ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**

ಉ:– ಕೃಷ್ಣನೇ ಕೇಳು "ನಾಳೆ ಯುದ್ಧ ಭೂಮಿಯಲ್ಲಿ ನನ್ನ ಭುಜಬಲ ಶೌರ್ಯದ ಪರಾಕ್ರಮವನ್ನು ಪಾಂಡವರ ಮೇಲೆ ತೋರಿಸುತ್ತೇನೆ. ನಾಳೆ ಬರಲಿರುವ ಮಹಾಭಾರತ ಯುದ್ಧವು ಮಾರಿಗೆ ಔತಣ ವಾಗುವುದು. ಆ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ ತನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿ ಕೊಡುವೆನು. ನಿನ್ನ ಧೀರರಾದ ಪಾಂಡವರನ್ನ ಸೂರ್ಯನಾಣೆಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ" ಎಂದು ಕರ್ಣನು ಹೇಳಿದರು.

ಇ). **ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

1. **"ರವಿಸುತನ ಕಿವಿಯಲಿ ಬಿತ್ತಿದನು ಭಯವ"**

**ಉ : ಆಯ್ಕೆ:–** ಈ ವಾಕ್ಯವನ್ನು ಕುಮಾರವ್ಯಾಸನು ಬರೆದಿರುವ' ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆ0ಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಮಹಾಭಾರತ ಯುದ್ಧದಲ್ಲಿ ಕರ್ಣನಿಂದ ಪಾಂಡವರಿಗೆ ಕೇಡು ಖಚಿತ ಎಂದು ಅರಿತು ಅದನ್ನು ಹೇಗಾದರು ತಡೆಯಬೇಕೆಂದು ಉದ್ದೇಶಿಸಿ ಕರ್ಣನನ್ನು ತನ್ನ ರಥದಲ್ಲಿ ಕೂರಿಸಿ ಕೊಂಡು "ಎಲೈ ಕರ್ಣ ನಿಮ್ಮೊಳಗೆ ಯಾದವರೊಳಗೆ  ಕೌರವರೊಳಗೆ ಯಾವುದೇ ಭೇದವಿಲ್ಲ. ನಿನ್ನಾಣೆಗೂ ನೀನು ಈ ಭೂಮಿಯ ಒಡೆಯ  ನಿನ್ನ ಮನಸಿನಲ್ಲಿ ಇದರ ಅರಿವು ಇಲ್ಲ ಎಂದು ಕರ್ಣನ ಮನಸ್ಸಿನಲ್ಲಿ ಗೊಂದಲವನ್ನು ಉಂಟು ಮಾಡುತ್ತಾನೆ. ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:–** ಕೃಷ್ಣನು ಕರ್ಣನ ಮನದಲ್ಲಿ ದ್ವಂದ್ವ ನಿಲುವು ಮಾಡುವಂತೆ ಕರ್ಣನ ಜನ್ಮರಹಸ್ಯವನ್ನು ಹೇಳಿ ಭಯವನ್ನುಂಟು ಮಾಡಿದ ಎಂಬುದನ್ನು ಕವಿ ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

2. **" ಬಾಯ್ದಂಬುಲಕೆ ಕೈಯಾನುವರೆ"**

**ಉ : ಆಯ್ಕೆ:–** ಈ ವಾಕ್ಯವನ್ನು ಕುಮಾರವ್ಯಾಸನು ಬರೆದಿರುವ' ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆ0ಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಕೃಷ್ಣನು ಕರ್ಣನಿಗೆ "ನಿನಗೆ ಹಸ್ತಿನಾಪುರದ ರಾಜನ ಹಿರಿಮೆಯನ್ನು ಕೊಡಿಸುವೆನು. ಪಾಂಡವ ಕೌರವ ರಾಜರೆಲ್ಲರೂ ನಿನ್ನನ್ನು ಒಲೈಸುವರು. ಈ ಎರಡೂ ಸಂತತಿಯವರೂ ನಿನಗೆ ಸೇವಕರೆನಿಸಿ ಕೊಳ್ಳುವ ಹಿರಿಮೆಯನ್ನು ತಿರಸ್ಕರಿಸಿ ನೀನು ದುರ್ಯೋಧನನ ಬಾಯೆಂಜಲಿಗೆ ಕೈಚಾಚುವುದು ಸರಿಯೇ?
ಹೇಳು ಎಂದು ಶ್ರೀ ಕೃಷ್ಣನು ಕರ್ಣನನ್ನು ಪ್ರಶ್ನಿಸುವನು.

**ಸ್ವಾರಸ್ಯ :–** ಇಡೀ ಸಾಮ್ರಾಜ್ಯವು ತನ್ನದಾಗಬಹುದಾದ ಸಾಧ್ಯತೆಯಿದ್ದರೂ ಸಹ ಕೌರವನ ಅಧೀನವನ್ನು ಒಪ್ಪಿ ಕೊಳ್ಳುವುದು ಉಚಿತವೇ ಎನ್ನುವ ಮೂಲಕ ಕರ್ಣನ ಆತ್ಮಾಭಿಮಾನವನ್ನು ಕೃಷ್ಣನು ಕೆಣುಕುವುದು ಸ್ವಾರಸ್ಯ ಪೂರ್ಣವಾಗಿದೆ.

3. **"ಜೀಯ ಹಸಾದವೆಂಬ ಕಷ್ಟ"**

**ಉ : ಆಯ್ಕೆ:–** ಈ ವಾಕ್ಯವನ್ನು ಕುಮಾರವ್ಯಾಸನು ಬರೆದಿರುವ' ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆ0ಧ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಕೃಷ್ಣನು ಕರ್ಣನಿಗೆ "ನಿನ್ನ ಎಡ ಭಾಗದಲ್ಲಿ ಕೌರವನ ಸಮೂಹದವರು ಬಲ ಭಾಗದಲ್ಲಿ ಪಾಂಡವರ ಸಮೂಹ, ಇದಿರಿನಲ್ಲಿ ಮಾದ್ರ, ಮಾಗಧ ಯಾದವಾದಿಗಳು ಇವರೆಲ್ಲರ ನಡುವೆ ನೀನು ಓಲಗದಲ್ಲಿ ಶೋಭಿಸುವೆ ಇಂತಹ ಮಹಾ ಸೌಭಾಗ್ಯವನ್ನು ಅತ್ತ ಎಸೆದು ದುರ್ಯೋಧನ ನಿನಗೇನಾದರು ಹೇಳಿದರೆ 'ಜೀಯಾ ಮಹಾ ಪ್ರಸಾದ' ಎಂದು ಒಪ್ಪಿ ಕೊಳ್ಳುವುದು ನಿನಗೆ ಕಷ್ಟವಾಗುವುದು" ಎಂದು ಹೇಳಿದನು.

**ಸ್ವಾರಸ್ಯ:–** ಇಡೀ ಭೂಮಂಡಲದ ಸಾಮ್ರಾಟನೆನಿಸಿಕೊಳ್ಳಲು ಅವಕಾಶವನ್ನು ಒಪ್ಪಿಕೊಂಡು ಕೌರವನ ಅಧೀನವನ್ನು ತಿರಸ್ಕರಿಸಬೇಕೆಂಬ ಕೃಷ್ಣನ ಹಿತವಚನ ಸ್ವಾರಸ್ಯವಾಗಿದೆ.

4. **"ನಿನ್ನ ಪದೆಸೆಯ ಬಯಸುವನಲ್ಲ"**

**ಉ : ಆಯ್ಕೆ:–** ಈ ವಾಕ್ಯವನ್ನು ಕುಮಾರವ್ಯಾಸನು ಬರೆದಿರುವ' ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆ0ಧ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕರ್ಣನು ತನ್ನ ಜನ್ಮ ರಹಸ್ಯವನ್ನು ತಿಳಿದು ಮನಸ್ಸು ದ್ವಂದ್ವದಲ್ಲಿ ಸಿಲುಕಿದಾಗ ಕೃಷ್ಣನು ಕರ್ಣನಿಗೆ "ಏನು ಹೇಳು ಕರ್ಣ ಮನಸಲ್ಲಿರುವ ತಲ್ಲಣ ಯಾವುದು? ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ? ಎನ್ನಾಣೆಗೂ ನಿನಗೆ ಯಾವುದೇ ನಷ್ಟವಿಲ್ಲ. ಮಾತನಾಡು ಮೌನವೇತಕೆ, ಭ್ರಮೆಗೊಳಗಾಗುವುದು ಬೇಡ ನಾನು ನಿನಗೆ ಕೇಡನ್ನು ಬಯಸುವುದಿಲ್ಲ" ಎಂದು ಹೇಳುತ್ತಾನೆ.

**ಸ್ವಾರಸ್ಯ:–** ಕರ್ಣನು ಪಾಂಡವರ ಸಹೋದರನಾಗಿದ್ದು. ಅವನಿಗೆ ಒಳ್ಳೆಯದನ್ನು ಮಾಡಬೇಕೆಂಬ ಆಶಯವನ್ನು ಕೃಷ್ಣನ ಕಾಳಜಿಯನ್ನು ಕಾಣಬಹುದಾಗಿದೆ.

5. **" ಮಾರಿ ಗೌತಣವಾಯ್ತು ನಾಳೀನ ಭಾರತವು"**

**ಉ : ಆಯ್ಕೆ:–** ಈ ವಾಕ್ಯವನ್ನು ಕುಮಾರವ್ಯಾಸನು ಬರೆದಿರುವ' ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆ0ಧ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕರ್ಣನು ಕೃಷ್ಣನಿಗೆ "ನಾಳೆ ಬರಲಿರುವ ಮಹಾಭಾರತ ಯುದ್ದದಲ್ಲಿ ಮಾರಿಗೆ ಔತಣವಾಗುವುದು. ಈ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಕೊಂದು ನನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿ ಕೊಡುವೆನು ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆ0ಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ" ಎಂದು ಹೇಳಿದನು. ಇಲ್ಲಿ ಕರ್ಣನು ಕೃಷ್ಣನ ಮಾತಿಗೆ ಮರಳಾಗದೆ ಸ್ವಾಮಿ ನಿಷ್ಠೆಯನ್ನು ತೋರಿಸುತ್ತಾನೆ.

**ಸ್ವಾರಸ್ಯ:–** ಕರ್ಣನ ಮುಂದಿನ ಹೋರಾಟದ ನಡೆ ಹಾಗೂ ಮಹಾಭಾರತ ಯುದ್ಧದ ಭೀಕರತೆಯನ್ನು ಕವಿ ಸ್ವಾರಸ್ಯವಾಗಿ ವರ್ಣಿಸಿದ್ದಾರೆ

**ಈ) ಈ ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

**1. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?**

**ಉ:–** ಕೌರವರಿಗೂ ಪಾಂಡವರಿಗೂ ಯುದ್ಧ ನಡೆಯುವುದು ಖಚಿತವಾದಾಗ ಕೌರವ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಬಲಶಾಲಿ ಕರ್ಣನಿರುವುದರಿಂದ ಅವನಿಂದ ಪಾಂಡವರನ್ನು ರಕ್ಷಿಸ ಬೇಕೆಂದು ನಿರ್ಧರಿಸಿದ ಕೃಷ್ಣನು ಕರ್ಣನನ್ನು ತನ್ನೊಡನೆ ಕರೆದೊಯ್ಯುತ್ತಾನೆ. ಶ್ರೀ ಕೃಷ್ಣನ ಪಕ್ಕದಲ್ಲಿ ಕುಳಿತು ಕೊಳ್ಳಲು ಸಂಕೋಚ ಪಡುವ ಕರ್ಣನಿಗೆ ಶ್ರೀ ಕೃಷ್ಣನು ಕೌರವರು ಯಾದವರಲ್ಲಿ ಯಾವುದೇ ಭೇದವಿಲ್ಲ ಹಾಗೆ ನೋಡಿದರೆ ನೀನೆ ಮೇದಿನಿಪತಿ. ಹಿಂದೆ ನಡೆದುದು ನಿನಗೆ ಅರಿವಿಲ್ಲ, ಮಂತ್ರಗಳ ಸಹಾಯದಿಂದ ಕುಂತಿ ಪಡೆದ ಮಕ್ಕಳಲ್ಲಿ ನೀನೆ ಮೊದಲನೆಯವನು ಪಾಂಡವರೆಲ್ಲರೂ ನಿನ್ನ ಸಹೋದರರು ಅದ್ದರಿಂದ ಈ ಹಸ್ತಿನಾಪುರದ ರಾಜನನ್ನಾಗಿ ನಿನಗೆ ಅಧಿಕಾರ ಸಿಗುವಂತೆ ಮಾಡುವೆನು. ಪಾಂಡವರ ಕಡೆ೦ಯವರು ಕೌರವನ ಕಡೆ೦ಯವರು ನಿನ್ನನ್ನು ಓಲೈಸುವಂತೆ ಮಾಡುವೆನು. ಅವೆರಡೂ ಸಂತತಿಯವರೂ ನಿನಗೆ ಕಿಂಕರರೆನಿಸುವರು. ನಿನ್ನ ಬಲಭಾಗದಲ್ಲಿ ಕೌರವನ ಕಡೆಯವರೂ ಎಡಭಾಗದಲ್ಲಿ ಪಾಂಡವರ ಕಡೆಯವರೂ, ನಿನ್ನ ಎದುರಿಗೆ ಮಾದ್ರ, ಮಾಗದ, ಯಾದವರು ಮೊದಲಾದ ರಾಜರು ಅವರೆಲ್ಲರ ನಡುವೆ ನೀನು ಓಲಗದಲ್ಲಿ ಕಂಗೊಳಿಸುವ ಆ ವೈಭವವನ್ನು ಕಲ್ಪಿಸಿಕೋ, ಅದೆಲ್ಲವನ್ನು ಬಿಟ್ಟು ಕೌರವನ ಎದುರು ಜೀಯ ಪ್ರಸಾದ ಎಂದು ಅವನ ಸೇವಕನಂತೆ ಜೀವಿಸುವುದು ನಿನಗೆ ತರವಲ್ಲ, ನನ್ನಾಣೆಯಾಗಿಯೂ ಹೇಳುವೆ ಹಸ್ತಿನಾಪುರದ ರಾಜ್ಯವನ್ನು ವಹಿಸಿಕೊಂಡು ಕುಂತಿ ಮಕ್ಕಳಿಂದ ಸೇವೆಯನ್ನು ಪಡೆಯುವುದರಿಂದ ಯಾವುದೇ ಹಾನಿಯಿಲ್ಲ. ಎಂದು ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದನು.

**2. ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.**

ಉ:– ಪಾಂಡವರು ನನ್ನ ಸಹೋದರರು ಎಂಬ ಸತ್ಯವನ್ನು ಶ್ರೀ ಕೃಷ್ಣನು ಹೇಳಿದಾಗ ಕರ್ಣನ ಕೊರಳ ನರಗಳು ಬಿಗಿದವು. ಅವನ ಕಂಠ ಗದ್ಗದತವಾಯಿತು. ಅವನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯಲಾರಂಭಿಸಿತು. ಅಯ್ಯೋ ಕುರುಪತಿಗೆ ಕೇಡಾಯಿತು. ಎಂದು ತನ್ನ ಮನದೊಳಗೆ ಮರುಗಿದನು. ಹರಿಯ ದ್ವೇಷದ ಹೊಗೆ ಹೆಚ್ಚಾಗದೆ ಇರುವುದೇ? ಅಂದರೆ ಕೃಷ್ಣನು ಕೌರವನ ಮೇಲೆ ಹಗೆ ಸಾಧಿಸದೇ ಬಿಡದಿರುವನೇ? ಅಷ್ಟೇ ಅಲ್ಲ ಕೃಷ್ಣನು ತನ್ನ ವಂಶದ ವಿವರವನ್ನು ಹೇಳಿ ಪಾಂಡವರು ತನ್ನ ಸಹೋದರರು ಎಂದು ಹೇಳುವ ಮೂಲಕ ತನ್ನನ್ನು ದುರ್ಬಲನನ್ನಾಗಿಸಿದನು ಎಂದು ಮರುಗಿದನು.

ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ. ಕುಂತಿಯ ಪುತ್ರರು ಮತ್ತು ದು೦ರ್ಯೋಧನರಿಂದ ಎನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸಿಲ್ಲ. ವೀರ ಕೌರವೇಂದ್ರನೇ ನನಗೆ ಒಡೆಯನಾಗಿದ್ದಾನೆ. ದು೦ರ್ಯೋಧನ ಆದಂತೆ ನಾನು ಆಗುವೆನು. ನಾಳಿನ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರಲ್ಲಿ ತನ್ನ ಭುಜಬಲದ ಪರಾಕ್ರಮವನ್ನು ತೋರಿಸುತ್ತೇನೆ. ನಾಳಿನ ಯುದ್ಧದಲ್ಲಿ ಮೃತ್ಯು ದೇವತೆಗೆ ಭೋಜನ ಕೂಟ ಏರ್ಪಡಿಸಿರುವಂತೆ ಯುದ್ಧರಂಗದಲ್ಲಿ ಅಸಂಖ್ಯಾ ವೀರ ಯೋಧರನ್ನು ಕೊಂದು ಕೌರವನ ಋಣವನ್ನು ತೀರಿಸುತ್ತೇನೆ. ಆದರೆ ಪಾಂಡವರನ್ನು ನೋಯಿಸುವುದಿಲ್ಲ ಎಂಬ ಮನಸ್ಥಿತಿ ಉಂಟಾಯಿತು.

**3. ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?**

ಉ:– ಕರ್ಣನ ದೃಷ್ಠಿಯಿಂದಲೇ ನೋಡಿದಾಗ ಅವನು ತೆಗೆದುಕೊಂಡ ನಿರ್ಧಾರವು ಸರಿ ಎನ್ನಿಸುವುದು. ಸೂತಪುತ್ರನೆಂದು ಸಮಾಜದಿಂದ ದೂಷಣೆಗೆ ಒಳಗಾದ ಸಂದರ್ಭದಲ್ಲಿ ಅವನಿಗೆ ಅಂಗ ರಾಜ್ಯವನ್ನು ನೀಡಿ ಅವನಿಗಾಗಿ ಒಂದು ಸ್ಥಾನವನ್ನು ಕಲ್ಪಿಸಿದನು. ಅವನಿಗಾಗಿಯೇ ಮೀಸಲು ಎನ್ನುವ ಅವನ ಸ್ವಾಮಿ ನಿಷ್ಠೆಯನ್ನು ಎಂಥವರೂ ಮೆಚ್ಚಬೇಕಾದುದೇ. ಭೂಮಿಯ ಸಿರಿಗೆ ದುರ್ಯೋಧನನಾದ್ದರಿಂದ ಸೋಲುವವನು ತಾನಲ್ಲ. ಪಾಂಡವರು, ದುರ್ಯೋಧನರು ತನ್ನ ಸೇವಕರಾಗುವುದರಲ್ಲಿ ಯಾವುದೇ ಹಂಬಲವಿಲ್ಲ. ತನ್ನನ್ನು ಸಲಹಿದ ತನ್ನ ಒಡೆಯನ ಇಚ್ಛೆಯಂತೆ, ಅವನ ಶತ್ರುಗಳ ತಲೆಯನ್ನು ಒಪ್ಪಿಸುವುದೇ ತನಗೆ ಇರುವ ಹಂಬಲ. ವೀರ ಕೌರವನೇ ತನ್ನ ಒಡೆಯ ಅವನ ಶತ್ರುಗಳು ನನಗೂ ಶತ್ರುಗಳು ಎನ್ನುವ ಅವನ ಮಾತುಗಳಲ್ಲಿ ಕೌರವನ ಕುರಿತಾದ ಅಭಿಮಾನವನ್ನು ಗಮನಿಸಬಹುದು. ಕೌರವನ ಋಣಭಾರ ತನ್ನ ಮೇಲಿರುವುದರಿಂದ ಅವನಿಗಾಗಿ ತನ್ನ ದೇಹ ಮತ್ತು ಪ್ರಾಣವನ್ನು ತ್ಯಾಗ ಮಾಡಲು ಸಿದ್ಧ ಎಂಬ ಅವನ ಉದಾತ್ತ ಭಾವವೂ ಇಲ್ಲಿ ವ್ಯಕ್ತವಾಗಿರುವುದು. ಕರ್ಣನು ಶ್ರೀಕೃಷ್ಣನ ಮಾತುಗಳಿಗೆ ಒಪ್ಪದೇ ತನ್ನನ್ನು ಆಪತ್ಕಾಲದಲ್ಲಿ ಓಲೈಸಿದ

ದು0ರ್ಯೋಧನನ್ನು ತೊರೆಯುವುದು ಅವನಿಗೆ ಸರಿ ಕಾಣಲಿಲ್ಲ. ಪಾಂಡವರು ತನ್ನ ಸಹೋದರರೆಂದು ತಿಳಿದು ಅವನ ಮನವು ದುರ್ಬಲವಾದರೂ, ಸಹೋದರರನ್ನು ನಾಶ ಮಾಡದೇ ತಾನೇ ಸಾಯುವುದು ಅನಿವಾರ್ಯ ಎಂದು ತಿಳಿದಾಗಲೂ ದುರ್ಯೋಧನನಿಗಾಗಿ ಎಲ್ಲಾ ತ್ಯಾಗಕ್ಕೂ ಕರ್ಣನು ಸಿದ್ಧನಾಗಿದ್ದನು. ಆದ್ದರಿಂದ ಕರ್ಣನ ನಿಲುವು ಒಪ್ಪಲರ್ಹವೆನಿಸುವುದು.

## ಭಾಷಾಭ್ಯಾಸ

**5. ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ರಾಜೀವಸಖ ಎಂದರೆ.............ಎಂದರ್ಥ.

**ಉ:–ಸೂರ್ಯ**

2. ಗದುಗಿನ ಭಾರತವು....................ಷಟ್ಪದಿಯಲ್ಲಿ ರಚಿತವಾಗಿದೆ.

**ಉ:– ಭಾಮಿನಿ**

3. ಅಶ್ವಿನಿ ದೇವತೆಗಳ ವರಬಲದಿಂದ.................ಜನಿಸಿದರು .

**ಉ:–ನಕುಲ ಸಹದೇವರು**

4. ಕರ್ಣನು................ಅನುಗ್ರಹದಿಂದ ಜನಿಸಿದರು.

**ಉ:– ಸೂರ್ಯ**

5. ಗದುಗಿನ ಸಮೀಪದ................ಕುಮಾರವ್ಯಾಸನು ಹುಟ್ಟಿದ ಸ್ಥಳ.

**ಉ:– ಕೋಳಿವಾಡ**

**ಅ) ಅಲಂಕಾರವನ್ನು ಹೆಸರಿಸಿ, ಸಮನ್ವಯಿಸಿ.**

"ಮಾರಿಗೌತಣವಾಯ್ತು ನಾಳಿನ ಭಾರತವು"

ಅಲಂಕಾರ : ರೂಪಕಾಲಂಕಾರ

ಉಪಮೇಯ : ನಾಳಿನ ಭಾರತ ಯುದ್ಧ

ಉಪಮಾನ : ಮಾರಿಯ ಔತಣ

ಸಮನ್ವಯ : ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ ಅದ್ದರಿಂದ ಇದು ರೂಪಕಾಲಂಕಾರ.

ಲಕ್ಷಣ:– ಉಪಮೇಯ ಮತ್ತು ಉಪಮಾನಗಳಿಗೆ ಅಭೇದತೆಯನ್ನು ಹೇಳುವುದೇ ರೂಪಕಾಲಂಕಾರ.

**ಆ) ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

1. ಇನತನೂಜ : ಇನನ (ಸೂರ್ಯನ)+ಮಗ(ತನುಜ) ಯಾವನೋ ಅವನು= ಕರ್ಣ

**ಬಹುವ್ರೀಹಿ ಸಮಾಸ**

2. ದನುಜರಿಪು = ದನುಜರಿಗೆ+ರಿಪು ಯಾರೋ ಅವನು ದನುಜರಿಪು = ಶ್ರೀಕೃಷ್ಣ

**ಬಹುವ್ರೀಹಿ ಸಮಾಸ**

3. ಮುರಾರಿ – ಮುರನ+ಅರಿ ಯಾರೋ ಅವನು – ಮುರಾರಿ – ಶ್ರೀಕೃಷ್ಣ

**ಬಹುವ್ರೀಹಿ ಸಮಾಸ**

4. ಮೇದನಿಪಥಿ – ಮೇದನಿಗೆ+ ಪತಿ – ಮೇದನೀಪತಿ–ಕರ್ಣ

**ಬಹುವ್ರೀಹಿ ಸಮಾಸ**

5. ರಾಜೀವಸಖ – ರಾಜೀವ+ಸುಖ ಯಾರೋ ಅವನು – ರಾಜೀವಸಖ–ಸೂರ್ಯ

**ಬಹುವ್ರೀಹಿ ಸಮಾಸ**

| | | |
|---|---|---|
| 6. ಕೈಯನ್ನು + ಅನು | – ಕೈಯಾನು | = **ಕ್ರಿಯಾಸಮಾಸ** |
| 7. ಮಾದ್ರರೂ+ಮಾಗದರೂ + ಯಾದವರೂ | – ಮಾದ್ರಮಾಗಧಯಾದವರು | = **ದ್ವಂದ್ವ ಸಮಾಸ** |
| 8. ಹೊಗೆಯನ್ನು+ತೋರು | – ಹೊಗೆದೋರು | = **ಕ್ರಿಯಾಸಮಾಸ.** |

**ಇ) ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸನ್ನು ಹೆಸರಿಸಿ, ಲಕ್ಷಣ ಬರೆಯಿರಿ.**

– ∪ | – – | – ∪ | – –

ಏನು । ಹೇಳೈ । ಕರ್ಣ । ಚಿತ್ತ

– ∪ | – ∪ ∪ | ∪ ∪ ∪ | – –

ಗ್ಲಾನಿ । ಯಾವುದು । ಮನಕೆ । ಕುಂತೀ

– ∪ | ∪ ∪ ∪∪ | – ∪ | – ∪ ∪ | – ∪ | – ∪∪ | –

ಸೂನು । ಗಳಬೆಸ । ಕೈಸಿ । ಕೊಂಬುದು । ಸೇರ । ದೇನಿನ । ಗೆ

**– ಇದು ಭಾಮಿನಿ ಪಟ್ಟದಿ ಯಾಗಿದೆ.**

**ಲಕ್ಷಣ :**

1) 1. ಮತ್ತು 2ನೆಯ ಸಾಲುಗಳು ಸಮಾನವಾಗಿದ್ದು, ಪ್ರತಿ ಸಾಲಿನಲ್ಲೂ ಮೂರು ಮಾತ್ರೆಯ ಮುಂದೆ ನಾಲ್ಕು ಮಾತ್ರೆಯ ಎರಡೆರಡು ಗಣಗಳು ಬಂದಿದೆ.

2) ಮೂರನೇ ಸಾಲಿನಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಮೂರು ಮೂರು ಗಣಗಳ ಬಂದು ಕೊನೆಯಲ್ಲಿ ಒಂದು ಗುರು ಬಂದಿದೆ. ಅದ್ದರಿಂದ ಇದು ಭಾಮಿನಿ ಷಟ್ಪದಿ.

**ಈ) ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗುರುತಿಸಿ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೆಯಪದ ಬರೆಯಿರಿ.**

1. ತನುಜ : ಮಗ :: ಸಖ :......................

**ಉ:– ಗೆಳೆಯ.ಮಿತ್ರ**

2. ಯುದ್ಧ : ಜುದ್ಧ :: ಪ್ರಸಾದ :.................

**ಉ:–ಹಸಾದ**

3. ಭೇದವಿಲ್ಲ : ಆಗಮಸಂಧಿ :: ನಿಮ್ಮಡಿಗಳಲಿ :...........

**ಉ: ಲೋಪಸಂಧಿ**

4. ಕಂದ : ನಾಲ್ಕುಸಾಲು :: ಷಟ್ಪದಿ :..........................

**ಉ:– ಆರುಸಾಲು**

**ಉ) ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲ್ಲಿ ಸುಭಟ ಕೋಟಿಯನು
ತೀರಿಸಿಯೆ ಪತಿಯವ ಸರಕ್ಕೆಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ.

# ಬಹು ಆಯ್ಕೆಯ ಪ್ರಶ್ನೆಗಳು

1. **'ಬಾಯ್ದೋರು, ಹೊಗೆದೋರು'** ಈ ಪದಗಳ ಸಂಧಿ.
ಅ) ಲೋಪ ಆ)ಆಗಮ ಇ) ಗುಣ ಈ) ಆದೇಶ
**ಉ : ಈ) ಆದೇಶ**
2. **'ಹಾನಿಯಿಲ್ಲೆನ್ನಾಣೆ'** ಈ ಪದದ ವಿಗ್ರಹ ರೂಪ.
ಅ)ಹಾನಿ+ಯಿಲ್ಲೆ ಆ)ಹಾನಿಯಿಲ್ಲೆ+ನ್ನಾಣೆ ಇ)ಹಾನಿಯಿಲ್ಲೆ+ಎನ್ನಾಣೇ ಈ)ಹಾನಿಯಿಲ್ಲ+ಎನ್ನಾಣೆ
**ಉ:– ಈ) ಹಾನಿಯಿಲ್ಲ+ಎನ್ನಾಣೆ**
3. **'ಮೇದಿನಿ'** ಪದದ ಅರ್ಥ.
ಅ) ಮಧನ ಆ)ಭೂಮಿ ಇ)ಮಾನಿನಿ ಈ) ದ್ರೌಪದಿ
**ಉ:– ಆ) ಭೂಮಿ**
4. **'ರಥ'** ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ.
ಅ) ರೂಢನಾಮ ಆ) ಅಂಕಿತನಾಮ ಇ) ಅನ್ವರ್ಥಕನಾಮ ಈ)ಸರ್ವನಾಮ
**ಉ:– ಆ) ರೂಢನಾಮ**
5. **'ಸಂಪನ್ನತನ', 'ಮರುಳುತನ'** ಇಲ್ಲಿರುವ ವ್ಯಾಕರಣಾಂಶ.
ಅ) ತದ್ಧಿಂತ ಪ್ರತ್ಯಯ ಆ) ತದ್ಧಿತಾಂತನಾಮ ಇ) ತದ್ಧಿತಾಂತವ್ಯಯ ಈ) ತದ್ಧಿತಾಂತಭಾವನಾಮ
**ಉ:–ತದ್ಧಿತಾಂತಭಾವನಾಮ**
6. **'ಇನ'** ಪದದ ಅರ್ಥ.
ಅ)ಸೂರ್ಯ ಆ) ವಾಯು ಇ)ಇಂದ್ರ ಈ) ಯಮ
**ಉ:– ಅ) ಸೂರ್ಯ**
7. ಉಪಮೇಯ ಉಪಮಾನಗಳ ಅಭೇದ ಕಲ್ಪನೆಯೇ.
ಅ)ಉಪಮಾ ಆ) ರೂಪಕಾ ಇ) ದೃಷ್ಟಾಂತ ಈ) ಶ್ಲೇಷಾ
**ಉ : ಆ) ರೂಪಕಾಲಂಕಾರ**
8. **'ಹಸಾದ'** ಇದರ ಸಂಸ್ಕೃತ ರೂಪ.
ಅ) ಪಸದನಾ ಆ)ಕಸಾದ ಇ) ಪ್ರಸಾದ ಈ) ಪಸಾದ
**ಉ:– ಇ)ಪ್ರಸಾದ**
9. **'ಹತ್ತನೆಯ'** ಇಲ್ಲಿರುವ ವಾಚಕ ಪದ.
ಅ)ನಾಮವಾಚಕ ಆ)ವಸ್ತುವಾಚಕ ಇ) ಸಂಖ್ಯಾವಾಚಕ ಈ) ಗುಣವಾಚಕ
**ಉ : ಇ) ಸಂಖ್ಯಾವಾಚಕ**
10. **'ಹೇಳೌ'** ಪದಕ್ಕೆ ಪ್ರಸ್ತಾರ ಹಾಕಿದಾಗ.
ಆ) –∪ ಆ)–– ಇ) ∪ ∪ ಈ)–∪∪
**ಉ : ಆ) – –**
11. ಗುಂಪಿಗೆ ಸೇರದ ಪದವಿದು.
ಅ)ಕೈಯನ್ನು ಆ)ಹೊಗೆದೋರು ಇ)ಕೈದೋರಿ ಈ)ಮುರಾರಿ
**ಉ:– ಈ) ಮುರಾರಿ**
12. **'ಷಟ್ಪದಿ'** ಎಂಬುದು.
ಅ) ಅಕ್ಷರ ಛಂದಸ್ಸು ಆ) ಮಾತ್ರ ಛಂದಸ್ಸು ಇ) ಪ್ರಾಸ ಛಂದಸ್ಸು ಈ) ರಗಳಾ ಛಂದಸ್ಸು
**ಉ:–ಆ) ಮಾತ್ರ ಛಂಧಸ್ಸು**

13. **'ಕೈವಾರ'** ಪದದ ಅರ್ಥ.

ಅ) ಬೆಟ್ಟ ಆ)ದೇವಾಲಯ ಇ) ಹೊಗಳಿಕೆ ಈ) ಭಾನುವಾರ

**ಉ : ಉ:– ಹೊಗಳಿಗೆ**

14. ವಾಯುದೇವನ ಮಗ.

ಅ)ರವಿಸುತ ಆ) ಭೀಮ ಇ)ಇನತನೂಜ ಈ) ಅಂಗಾಧಿಪತಿ

**ಉ:–ಆ) ಭೀಮ**

15. **'ಅರಿ'**. ಅದದ ವಿರುದ್ಧ ಪದ.

ಅ) ಶತ್ರು ಆ)ವಿಷ್ಣು ಇ)ತಿಳಿ ಈ) ಹಿತೈಷಿ

**ಉ:–ಈ) ಹಿತೈಷಿ**

16. **'ರಾಜೀವ ಸಖ'** ಇಲ್ಲಿರುವ ಅಲಂಕಾರ.

ಅ) ಉಪಮಾ ಆ)ರೂಪಕ ಇ) ಶ್ಲೇಷಾ ಈ) ಅರ್ಥಾಂತರನ್ಯಾಸ.

**ಉ:– ಆ) ರೂಪಕ**

17. **'ನುಡಿನುಡಿ'** ಇಲ್ಲಿರುವ ವ್ಯಾಕರಣಾಂಶ.

ಅ)ಜೋಡಿನುಡಿ ಆ) ನುಡಿಗಟ್ಟು ಇ) ದ್ವಿರುಕ್ತಿ ಈ) ಅನುಕರಣಾವ್ಯಯ

**ಉ:– ಇ) ದ್ವಿರುಕ್ತಿ**

18. **'ಶೌರಿ'** ಎಂದರೆ

ಅ) ಕೃಷ್ಣ ಆ) ಭೀಮ ಇ) ಬ್ರಹ್ಮ ಈ) ಕರ್ಣ

**ಉ:–ಅ) ಕೃಷ್ಣ**

19. **'ಮೌನವೇತಕೆ'** ಪದವನ್ನು ಬಿಡಿಸಿ ಬರೆದಾಗ

ಅ)ಮೌನ+ಯಾತಕೆ ಆ)ಮೌನ+ಏತಕೆ ಇ)ಮೌನ+ವೇತಕೆ ಈ) ಮೌನ + 0ಯಾಕೆ

**ಉ:– ಆ) ಮೌನ+ಏತಕೆ**

20. **'ಮುರಾರಿ'** ಇಲ್ಲಿರುವ ಸಂಧಿ

ಅ) ಸವರ್ಣ ದೀರ್ಘ ಆ) ಗುಣ ಇ) ಲೋಪ ಈ) ಆದೇಶ.

**ಉ:–ಅ) ಸವರ್ಣ ದೀರ್ಘ ಸಂಧಿ**

21. **ಮಾದ್ರಮಾಗದಯಾದವರು –** ಪದವು ಈ ಸಮಾಸಕ್ಕೆ ಸೇರಿದೆ

ಅ) ಅಂಶಿ ಆ) ದ್ವಿಗು ಇ) ಗಮಕ ಈ) ದ್ವಂದ್ವ

**ಉ:–ಈ) ದ್ವಂದ್ವ**

22. ಭಾಮಿನಿ ಷಟ್ಪದಿಯ ಒಟ್ಟು ಮಾತ್ರೆಗಳು

ಅ)101 ಆ) 102 ಇ)103 ಈ) 104

**ಉ : ಈ) 104**

23. **'ದೃಗುಜಲ'** ಎಂದರೆ

ಅ) ಗಂಗಾಜಲ ಆ) ಕಣ್ಣೀರು ಇ) ಕಣ್ಣು ಈ)ನೀರು

**ಉ:– ಆ) ಕಣ್ಣೀರು**

24. **'ಕೈಚಾಚು'** ಪದವು ಈ ಸಮಾಸಕ್ಕೆ ಸೇರಿದೆ

ಅ) ಕ್ರಿಯಾಸಮಾಸ ಆ) ದ್ವಿಗುಸಮಾಸ ಇ) ಅಂಶಿಸಮಾಸ ಈ)ತತ್ಪುರುಷಸಮಾಸ

**ಉ:– ಅ) ಕ್ರಿಯಾಸಮಾಸ**

25. ಎರಡು ಬೇರೆ ಬೇರೆ ವಾಕ್ಯಗಳು ಉಪಮಾನ ಅರ್ಥ ಸಾದೃಶ್ಯದಿಂದ ಬಿಂಬ ಪ್ರತಿ ಬಿಂಬ ಭಾವದಂತೆ ತೋರುತ್ತಿದ್ದರೆ ಈ ಅಲಂಕಾರ

ಅ)ರೂಪಕ ಆ)ಉಪಮಾ ಇ)ದೃಷ್ಟಾಂತ ಈ) ಶ್ಲೇಷಾ **ಉ: ಇ) ದುಷ್ಟಾಂತ**

# ಘಟಕ ಪರೀಕ್ಷೆ – 1

**ಗರಿಷ್ಠ ಅಂಕಗಳು–20**

**ಅ) ಬಹು ಆಯ್ಕೆಯ ಪ್ರಶ್ನೆಗಳು. 1 x3=3**

1. ಶೌರಿಯಿಂತೆಂದ ಪದದಲ್ಲಿ ಆಗಿರುವ ಸಂಧಿ
   ಅ) ಲೋಪ ಸಂಧಿ ಆ) ಆಗಮ ಸಂಧಿ ಇ) ಗುಣ ಸಂಧಿ ಈ) ಯಣ್‌ಸಂಧಿ
2. 'ಹೊಗೆದೋರು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
   ಅ) ದ್ವಿಗು ಸಮಾಸ ಆ)ಅಂಶಿ ಸಮಾಸ ಇ) ದ್ವಂದ್ವ ಸಮಾಸ ಈ) ಕ್ರಿಯಾ ಸಮಾಸ
3. 'ಮಾರಿಗೌತಣವಾಯ್ತು ನಾಳಿನ ಭಾರತವು ಇಲ್ಲಿರುವ ಅಲಂಕಾರ
   ಅ) ಉಪಮಾ ಆ) ರೂಪಕ ಇ) ದ್ವಂದ್ವ ಈ) ದೃಷ್ಟಾಂತ

**ಆ) ಮೊದಲೆರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿತ ಪದವನ್ನು ಬರೆಯಿರಿ. 1 x3=3**

1. ಮನುಷ್ಯ : ಮನುಜ :: ಧನುಜ :....................
2. ಕಂದ ಪದ್ಯ : 64ಮಾತ್ರೆಗಳು :: ವಾರ್ಧಕ ಷಟ್ಪದಿ :..................
3. ಪ್ರಸಾದ : ಹಸಾದ :: ಯುದ್ಧ :..........................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 1 x3=3**

1. ಶ್ರೀ ಕೃಷ್ಣನು ಯಾರನ್ನು ಬರಸೆಳೆದು ತನ್ನ ರಥದಲ್ಲಿ ಕೂರಿಸಿಕೊಂಡನು?
2. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
3. ಮೊದಲನೆಯ ಮಂತ್ರದಿಂದ ಕುಂತಿಯಲ್ಲಿ ಜನಿಸಿದವರು ಯಾರು?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ. 2x4=8**

1. ಕುಮಾರವ್ಯಾಸ ಕವಿಯ ಪರಿಚಯ ಮಾಡಿಕೊಡಿ.
2. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?
3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
4. ಈ ಪದ್ಯಭಾಗವನ್ನು ಪೂರ್ಣಗೊಳಿಸಿ :
   ಮಾರಿಗೌತಣವಾಯ್ತು_______________________________________ ರಾಜೀವಸಖಾನಾಣೆ

**ಉ) ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ: 3x1=3**

1. "ರವಿಸುತನ ಕಿವಿಯಲ್ಲಿ ಬಿತ್ತಿದನು ಭಯವ"

# ಘಟಕ ಪರೀಕ್ಷೆ–2

**ಗರಿಷ್ಠ ಅಂಕಗಳು–20**

**ಅ) ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1 x4=4**

1. ನಾರಾಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು?
2. ಪಾಂಡುರಾಜನ ಪುತ್ರರು ಯಾರ್‍ಯಾರು?
3. ಫಲುಗುಣ ಎಂದರೆ ಯಾರು?
4. ಕರ್ಣ ತನಗೆ ಯಾರ ಸೇವೆಯನ್ನು ಮಾಡಿಸಿಕೊಳ್ಳಲು ಇಷ್ಟವಿಲ್ಲ ಎಂದು ಹೇಳಿದನು?

**ಆ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ** **2x3=6**

1. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?
2. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?
3. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **3 x2=6**

1. "ಜೀಯ ಹಸಾದವೆಂಬುದು ಕಷ್ಟ"
2. "ನಿನ್ನ ಪದೆಸೆಯ ಬಯಸುವನಲ್ಲ"

**ಈ) ಈ ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4 x1=4**

1. ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?

**ಅಥವಾ**

2. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?

*********

KM

# ಪಠ್ಯ ಪೂರಕ ಅಧ್ಯಯನ – 2
# ವಸಂತ ಮುಖ ತೋರಲಿಲ್ಲ

**– ಡಾ॥ ವಿಜಯಶ್ರೀ ಸಬರದ**

**ಆಕರ ಗ್ರಂಥ: ಮುಗಿಲ ಮಲ್ಲಿಗೆ(ಕವನ ಸಂಕಲನ)**

ಲೇಖಕರ ಪರಿಚಯ :

ಡಾ. ವಿಜಯಶ್ರೀ ಸಬರದ ಅವರು 1957ರಲ್ಲಿ ಬೀದರ್‌ನಲ್ಲಿ ಜನಿಸಿದರು. ಇವರು ಬರಿಲಿಂಗ, ಹೂವಿನ ತೇರನೇರಿ, ಸಾಹಿತ್ಯ ಮತ್ತು ಮಹಿಳೆ, ಜಾನಪದ ಮತ್ತು ಮಹಿಳೆ, ಜ್ವಲಂತ, ಲಕ್ಷ್ಮಣರೇಖೆ ದಾಟಿದವರು, ಮುಗಿಲ ಮಲ್ಲಿಗೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ರತ್ನಮ್ಮ ಹೆಗ್ಗಡೆ ಬಹುಮಾನ ಸಾಹಿತ್ಯ ಶ್ರೀ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಬಂದಿದೆ.

ಪ್ರಸ್ತುತ ಕವನವನ್ನು 'ಮುಗಿಲ ಮಲ್ಲಿಗೆ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ:**

**1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?**

ಉ: ಪುಟ್ಟ ಪೋರಿ ಮುಸುರೆ ತಿಕ್ಕುವ ಕೆಲಸ ಮಾಡುತ್ತಿದ್ದಾಳೆ.

**2. ಅಮ್ಮ ಎಲ್ಲಿ ಮಲಗಿದ್ದಾಳೆ?**

ಉ: ಅಮ್ಮ ಗುಡಿಸಲಿನಲ್ಲಿ ಗೂರುತ್ತ ಮುಲಗಿದ್ದಾಳೆ.

**3. ಯಾರಿಗೆ ವಸಂತ ಮುಖ ತೋರಲಿಲ್ಲ?**

ಉ: ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರ ಇವರಾರಿಗೂ ವಸಂತ ಮುಖ ತೋರಲಿಲ್ಲ.

**4. ಪುಟ್ಟಿಯ ಪ್ರಶ್ನೆಗಳೇನು?**

ಉ: ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಎನ್ನುವುದು ಪುಟ್ಟಿಯ ಪ್ರಶ್ನೆಗಳು.

**5. ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

ಉ: ಹಸಿರು ತುಂಬಿ ನಿಂತ ಮಾವಿನ ಮರಗಳು ಸಂಭ್ರಮದಿಂದ ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು ಮನದುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತೆ ಸಂಭ್ರಮ, ಭೂಮಿಯ ಮೇಲೆ ಇವೆಲ್ಲವು ಪ್ರಕೃತಿಯಲ್ಲಿ ಕಂಡು ಬಂದು ವಸಂತನ ಆಗಮನವಾಗಿದೆ. ಎಂದು ವ್ಯಕ್ತಪಡಿಸುತ್ತಿವೆ. ಎಂದು ಕವಿಯತ್ರಿ ಬಣ್ಣಿಸಿದ್ದಾರೆ.

**10ನೇ ತರಗತಿ** **ಪ್ರಥಮ ಭಾಷೆ ಸಿರಿಕನ್ನಡ** **ಗರಿಷ್ಠ ಅಂಕಗಳು–20**

## ಮಾದರಿ ಪ್ರಶ್ನೆ ಪತ್ರಿಕೆ – 1 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 2 ) (FA-2)

---

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** 1x3=3

1. ಕಂಪನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥೆಯನ್ನೊಳಗೊಂಡ ಲಾವಣಿ ಯಾವುದು ?
2. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?
3. ಯಾರಿಗೆ ವಸಂತಮುಖ ತೋರಲಿಲ್ಲ ?

**ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ** 2x1=2

4. ಅ) ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?
   ಆ) ಹಲಗಲಿಗೆ ದಂಡು ಬರಲು ಕಾರಣವೇನು ?

**ಇ) ಈ ಕೆಳಗಿನ ಹೇಳಿಕೆಗಳಲ್ಲಿ ಒಂದಕ್ಕೆ ಸಂದರ್ಭದೊಡನೆ ಸ್ವಾರಸ್ಯ ವಿವರಿಸಿ.** 1x3=3

5. ಅ) " ನಿಮ್ಮ ದೇಶದ ಗೌರವವನ್ನು ಕಾಯಿರಿ ! ಇದು ದೊಡ್ಡದಾದ ರಾಷ್ಟ್ರ
   ಆ) ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ ! ಮಣ್ಣು ! ಮಣ್ಣು !

**ಈ) ಈ ಕೆಳಗಿನ ಕವಿಯ ಸ್ಥಳ, ಕಾಲ, ಕೃತಿಗಳು, ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

1x3=3

6. ಕುಮಾರವ್ಯಾಸ

**ಉ) ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎಂಟು–ಹತ್ತು ವಾಕ್ಯಗಳಲ್ಲಿ ವಿವರಿಸಿ.** 1x4=4

7. ಅ) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?
   **ಅಥವಾ**
   ಆ) ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

**ಊ) ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರ ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ**

1x2=2

**8. ಪೋರ್ಚ್‌ಗೀಸ್ ಭಾಷೆಯಿಂದ ಕನ್ನಡಕ್ಕೆ ಬಂದ ಪದ ;**

(ಎ) ಜಮೀನು (ಬಿ) ಕಾಗದ
(ಸಿ) ದವಾಖಾನೆ (ಡಿ) ಸಾಬೂನು

**9. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವುದು ;**

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

**10. ಈ ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** 1x3=3

1. ಕೈ ಕೆಸರಾದರೆ ಬಾಯಿ ಮೊಸರು.
2. ದೇಶ ಸುತ್ತಿ ನೋಡು ; ಕೋಶ ಓದಿ ನೋಡು.
3. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ.

**10ನೇ ತರಗತಿ** **ಪ್ರಥಮ ಭಾಷೆ ಸಿರಿಕನ್ನಡ** **ಗರಿಷ್ಠ ಅಂಕಗಳು–20**

# ಮಾದರಿ ಪ್ರಶ್ನೆ ಪತ್ರಿಕೆ – 2 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 2 ) (FA-2)

---

## ವಿಭಾಗ – ಎ

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** 1x2=2

1. ವೆಸ್ಟ್ ಮಿನಿಸ್ಟರ್ ಅಬೆ' 0ಯಾರ ಸ್ಮಾರಕವಾಗಿದೆ?
2. ಹಲಗಲಿ0ಯ ನಾಲ್ವರು ಪ್ರಮುಖರು 0ಯಾರು?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ:** 2x3=6

3. ಶಿಕ್ಷಣದ ಬಗ್ಗೆ ವಿಶ್ವೇಶ್ವರ0ಯ್ಯ ಅವರು ಏನೆಂದು ಹೇಳಿದ್ದಾರೆ?
4. 0ಯಾ0ರ್ಯಾರಿಗೆ ವಸಂತ ಮುಖ ತೋರಲಿಲ್ಲ?
5. ಟೊಪ್ಪಿಗೆ0ಯ ವಿಶೇಷತೆ0ಯನ್ನು ವಿ.ಕೃ. ಗೋಕಾಕ್ ಹೇಗೆ ದಾಖಲಿಸಿದ್ದಾರೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ:** 1x2=2

6. "ಹೊಡೆದರೂ ಗುಂಡು ಕರುಣಾ ಇಲ್ಲದ್ಹಂಗ"

**ಈ) ಕೊಟ್ಟಿರುವ ಪ್ರಶ್ನೆಗೆ ಎಂಟು– ಹತ್ತು ವಾಕ್ಯದಲ್ಲಿ ಉತ್ತರಿಸಿ:** 1x4=4

**7.** ಎ) ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿ0ಯನ್ನು ತಿಳಿಸಿ.

**ಅಥವಾ**

ಬಿ) ಶ್ರೀ ಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳೇನು?

## <u>ವಿಭಾಗ –ಬಿ ( ವ್ಯಾಕರಣ)</u>

**ಊ) ಕೆಳಗಿನ ಹೇಳಿಕೆಗಳಿಗೆ ಸರಿ0ಯಾದ ಉತ್ತರವನ್ನು ಆರಿಸಿ ಬರೆಯಿರಿ:** 1x3=3

8. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆ0ಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಚಿಹ್ನೆ ಇದಾಗಿದೆ.
   ಎ) ವಾಕ್ಯವೇಷ್ಠನ ಚಿಹ್ನೆ ಬಿ) ಆವರಣ ಚಿಹ್ನೆ
   ಸಿ) ಉದ್ಧರಣ ಚಿಹ್ನೆ ಡಿ) ವಿವರಣಾತ್ಮಕ ಚಿಹ್ನೆ
9. ಷಟ್ಪದಿ0ಯಲ್ಲಿರುವ ಒಟ್ಟು ಸಾಲುಗಳ ಸಂಖ್ಯೆ
   ಎ)ಎರಡು ಬಿ) ಮೂರು ಸಿ) ಆರು ಡಿ) ಎಂಟು
10. 'ನಕಲಿ' ಈ ಪದವು ಈ ಭಾಷೆ0ಯ ಪದವಾಗಿದೆ.
    ಎ) ಪೋರ್ಚುಗೀಸ್ ಬಿ) ಉರ್ದು ಸಿ) ಇಂಗ್ಲಿಷ್ ಡಿ) ಅರಬ್ಬಿ

## <u>ವಿಭಾಗ – ಸಿ</u>

**ಊ).** ಎ) ನಿಮ್ಮನ್ನು ಬಸವಕಲ್ಯಾಣದ ಸರ್ಕಾರಿ ಪ್ರೌಢಶಾಲೆ0ಯ ಲಲಿತಾ/ಲಲಿತ್ ಎಂದು ಭಾವಿಸಿಕೊಂಡು ಧಾರವಾಡದ ಕಲ್ಯಾಣನಗರದಲ್ಲಿ ವಾಸವಾಗಿರುವ ನಿಮ್ಮ ತಾಯಿ ಶ್ರೀದೇವಿ0ಯವರಿಗೆ ವಿದ್ಯಾಭ್ಯಾಸದ ಪ್ರಗತಿ0ಯನ್ನು ವಿವರಿಸಿ ಪತ್ರ ಬರೆಯಿರಿ. 1x3=3

ಅಥವಾ

ಬಿ) ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಕನ್ನಡ ನಿಘಂಟು' ವಿನ ಹತ್ತು ಪ್ರತಿಗಳನ್ನು ಕಳುಹಿಸಿ ಕೊಡುವಂತೆ ಸಾಹಿತ್ಯ ಪರಿಷತ್ತಿನ ಕಾ0ರ್ಯದರ್ಶಿಗಳಿಗೆ ಪತ್ರ ಬರೆಯಿರಿ.

********

# ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ (SA-1)

**ಸಮಯ : 3 ಗಂಟೆ** **ವಿಷಯ : ಪ್ರಥಮಭಾಷೆ ಕನ್ನಡ.** **ಅಂಕಗಳು: - 100**

**ಸೂಚನೆಗಳು :**

1) ಪ್ರಶ್ನೆ ಪತ್ರಿಕೆಯು ಒಟ್ಟು 45 ವಸ್ತುನಿಷ್ಠ ಹಾಗೂ ವಿಷಯನಿಷ್ಠ ಪ್ರಶ್ನೆಗಳನ್ನು ಒಳಗೊಂಡಿದೆ.
2) ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೇಟ್ ಮೂಲಕ ಮೊಹರು (ಸೀಲು) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತಿರಿಸಿ ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3) ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿರಿ.
4) ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗೆ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5) ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15ನಿಮಿಷಗಳು ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **06 x 1=06**

**1**. ಇವುಗಳಲ್ಲಿ ಸಪ್ತಮೀ ವಿಭಕ್ತಿಯಿಂದ ಕೂಡಿರುವ ಪದ ;

(ಎ) ಮಳೆಗಾಲ (ಬಿ) ಊರೂರು (ಸಿ) ಶಾಲೆಯಲ್ಲಿ (ಡಿ) ಮರವನ್ನು

**2**. 'ಬೃಹಚ್ಛತ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;

(ಎ) ಜಶ್ತ್ವ (ಬಿ) ಶ್ಚುತ್ವ (ಸಿ) ಅನುನಾಸಿಕ (ಡಿ) ಆದೇಶ

**3**. ಹೆಚ್ಚಿನ ವಿವರಣೆ ಅರ್ಥವನ್ನು ನೀಡುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆಯನ್ನು ಬಳಸಲಾಗುವುದು;

(ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ (ಸಿ) ಅರ್ಧವಿರಾಮ (ಡಿ) ಆವರಣ

**4**. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅಂತಹ ವಾಕ್ಯ;

(ಎ) ಸಾಮಾನ್ಯ ವಾಕ್ಯ (ಬಿ)ಮಿಶ್ರ ವಾಕ್ಯ (ಸಿ) ಸಂಯೋಜಿತ ವಾಕ್ಯ(ಡಿ) ಪಶ್ರಾರ್ಥಕ ವಾಕ್ಯ

**5**. 'ಮಾದ್ರಮಾಗಧಯಾದವರು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;

(ಎ) ಕರ್ಮಧಾರಯ (ಬಿ) ದ್ವಂದ್ವ (ಸಿ) ತತ್ಪುರುಷ (ಡಿ) ಬಹುವ್ರೀಹಿ

**6**. 'ಆದ್ದರಿಂದ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ ;

(ಎ) ಅನುಕರಣಾವ್ಯಯ (ಬಿ) ಸಾಮಾನ್ಯಾವ್ಯಯ(ಸಿ) ಸಂಬಂಧಾರ್ಥಕಾವ್ಯಯ (ಡಿ) ಅನುಕರಣಾವ್ಯಯ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **04 x 1=04**

7. ಕೊಡಲಿ : ಕುಠಾರ :: ಸಕ್ಕರೆ : ________________

8. ಮೇಜು : ಪೋರ್ಚುಗೀಸ್ :: ಕಾರ್ಖಾನೆ : ________________

9. ಶೌರಿ : ಕೃಷ್ಣ :: ಮೇಧಿನಿ : ________________

10.ಬಟ್ಟಬಯಲು : ದ್ವಿರುಕ್ತಿ :: ಕೆನೆಮೊಸರು : ________________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **07 x 1=07**

**11.** ಗಡಿ ಪದ್ರ ೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?

**12.**ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?

**13.**ರಾಮಲಕ್ಷ್ಮಣರು ಶಬರಿಯ ರೂಪದಲ್ಲಿ ಯಾರನ್ನು ಕಂಡರು ?

**14.**ಮೈಸೂರು ಸಂಸ್ಥಾನದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಂಕಣಬದ್ಧರಾದ ರಾಜಶ್ರೇಷ್ಠ ಯಾರು ?

**15.**ಕವಿ ಶಿವರುದ್ರಪ್ಪರವರು ಯಾವುದು ಕಲುಷಿತವಾಗಿದೆ ಎಂದಿದ್ದಾರೆ ?

**16.**ಹಲಗಲಿ ಲಾವಣಿಗೆ ಕಾರಣವಾದ ಘಟನೆ ಯಾವುದು ?

**17.**ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 x 2=20**

**18.**ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು ?

**19.**ರಾಮಲಕ್ಷ್ಮಣರ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು ?

**20.**ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?

**21.**ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?

**22.**ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದ ರೀತಿಯನ್ನು ತಿಳಿಸಿ.

**23.**ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

**24.**ಜಾತಿ ವ್ಯವಸ್ಥೆಯ ಬಗೆಗೆ ವಿವೇಕಾನಂದರ ಅಭಿಪ್ರಾಯವೇನು ?

**25.**ವಿವೇಕಾನಂದರ ವ್ಯಕಿತ್ವ ಇಂದಿಗೂ ಸತ್ಯ ಏಕೆ?

**26.**ವಸಂತ ಯಾರು ಯಾರಿಗೆ ಮುಖ ತೋರಲಿಲ್ಲ ? ಹಾಗೂ ಪುಟ್ಟಿಯ ಮನದಲ್ಲಿ ಮೂಡಿದ ಪಶ್ನೆಗಳೇನು?

**27.**ಭಗತ್ ಸಿಂಗ್ ಹಾಗೂ ಅವನ ಸಹಚರರು ಹೇಗೆ ಅಮರರಾದರು ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 x 3=18**

**28.**"ಆಗಲೂ ಯುದ್ಧವಾಗಿತ್ತಾ ಅಜ್ಜಿ ?"

**29.**"ಉರಿವ ಬತ್ತಿಯ ಕರುಕ ಕಾಣರು"

**30.**"ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"

**31.**"ಹೊಸ ಎಚ್ಚರದೊಳು ಬದುಕೋಣ"

**32.**"ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

**33.**"ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ"

**VI. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x3=6**

**34.** ವಿ ಕೃ ಗೋಕಾಕ್

**35.** ದ. ರಾ. ಬೇಂದ್ರೆ

VII. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1 x 3=3**

**36**. ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥

**VIII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ.** **1 x 3=3**

**37**. ಒಳಗಿನ ಮಂದಿ ಗುಂಡು ಹೊಡೆದರೋ ಮುಂಗಾರಿ ಸಿಡಿಲ ಸಿಡಿದ್ಹಾಂಗ

**IX. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3=3**

**38**. ಎ) ಮನಸ್ಸಿದ್ದರೆ ಮಾರ್ಗ.

ಬಿ) ತಾಳಿದವನು ಬಾಳಿಯಾನು.

**X.ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4=4**

**39**.ಕಲುಷಿತವಾದಿ ______________ ಮತಗಳೆಲ್ಲವು ________________

________________________ ಅಥವಾ ________________________

________________________ ________________________

________________ಮುಟ್ಟೋಣ ____________________ಬಿತ್ತೋಣ

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು **ಬರೆಯಿರಿ**. **1 x 4=4**

**40**. ವೀರ ಕೌರವರಾಯನೇ ದಾ
ತಾರನಾತನ ಹಗೆಯೆ ಹಗೆ ಕೈ
ವಾರವೇಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳ್ಕೈ ನಾಳೆ ಸಮರದ
ಸಾರದಲಿ ತೋರುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ.

**XII ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

**41**.ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು? ತಿಳಿಸಿ.

**ಅಥವಾ**

'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ಮಹಾಕೋಶದಂತಹ ವಿಶೇಷ ಸ್ಮಾರಕ ವಿವರಿಸಿ.

**42**.ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಬೇಂದ್ರೆಯವರು ಹೇಳಿರುವ ಮಾತುಗಳಾವುವು ?

**ಅಥವಾ**

ಕಾಲದ ಮುಂದೆ ಎಲ್ಲರೂ ತಲೆಬಾಗಲೇಬೇಕು ಎಂಬುದನ್ನು ಕವಿ ಹೇಗೆ ಸಾಧಿಸಿದ್ದಾರೆ. ವಿವರಿಸಿ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**01 x 04=04 (2+2)**

**43**. ರಾಮಕೃಷ್ಣ ಪರಮಹಂಸರು ಪರಮದೈವಭಕ್ತ. ಯಾವಾಗಲೂ ದೇವರನ್ನು ಕುರಿತು ಚಿಂತಿಸುತ್ತಿದ್ದರು. ಅವರಿಗೆ ಎಲ್ಲರಲ್ಲಿಯೂ ದೇವರ ಭಾವನೆಯಿತ್ತು. ಅವರು ಸಾಧಾರಣ ಗುರುಗಳಲ್ಲ. ದೇವರನ್ನು ನೋಡುವ ಶಕ್ತಿಯ ಮಟ್ಟದಲ್ಲಿರುವ ಗುರುಗಳು. ಧ್ಯಾನ ಮಾಡುವಾಗಲೆಲ್ಲಾ ದೇವರ ಜೊತೆ ಮಾತನಾಡುತ್ತಾ ಕಾಲ ಕಳೆಯುತ್ತಿದ್ದರು ಎಂದು ಅವರ ಶಿಷ್ಯರು ಹೇಳುತ್ತಿದ್ದರು. ಅವರು ಹೇಳುತ್ತಿದ್ದರು "ಮುಗ್ಧ ಮನಸ್ಸುಳ್ಳವರು ದೊಡ್ಡ ಜ್ಞಾನಿಗಳಾಗುವರು". ಅವರ ಮನಸ್ಸನ್ನು ನಾವು ಅರ್ಥ ಮಾಡಿಕೊಂಡರೆ ಅವರೆಷ್ಟು ಮಹಾತ್ಮರೆಂದು ಗೊತ್ತಾಗುವುದು. ಅವರು ಎಲ್ಲಾ ಧರ್ಮಗಳನ್ನು ಹಾಗೂ ದೇವರನ್ನು ಗೌರವದಿಂದ ನೋಡುತ್ತಿದ್ದರು. ರಾಮಕೃಷ್ಣರು ತಮ್ಮ ಪತ್ನಿ ಶಾರದಾದೇವಿಯವರನ್ನು ತಾಯಿಯ ಭಾವನೆಯಿಂದ ನೋಡುತ್ತಿದ್ದರು. ಅವರು ಶಾರದಾದೇವಿಯವರನ್ನು ತಾಯಿ–ಮಗು ಭಾವನೆಯಿಂದ ನೋಡುತ್ತಿದ್ದರು. ಶಾರದಾದೇವಿಯವರಿಗೆ ಆರೋಗ್ಯ ಸರಿ ಇಲ್ಲದಿರುವಾಗ ಮಹಿಳೆಯರನ್ನು ಕಳುಹಿಸಿ ಶುಶ್ರೂಷೆ ಮಾಡಿಸುತ್ತಿದ್ದರು. ಶಾರದಾಮಾತೆಗೆ ಒಂದು ಚೂರು ನೋವಾಗದಂತೆ ಹೂವಿನ ತರಹ ನೋಡಿಕೊಳ್ಳುತ್ತಿದ್ದರು. ಅವರ ಗುಣಗಳು, ಆದರ್ಶಗಳು ತುಂಬಾ ಅದ್ಭುತ. ಅವರಿಂದಲೇ ವಿವೇಕಾನಂದ ಜಗತ್ತಿನಲ್ಲಿ ಮಹಾನ್ ವ್ಯಕ್ತಿಯಾಗಿದ್ದು.

ಪ್ರಶ್ನೆಗಳು :

1) ರಾಮಕೃಷ್ಣ ಪರಮಹಂಸರ ಬಗ್ಗೆ ಅವರ ಶಿಷ್ಯರ ಅಭಿಪ್ರಾಯವೇನು ?

2) ಪರಮಹಂಸರು ಶಾರದಾದೇವಿಯವರ ಮೇಲೆ ಹೇಗೆ ಕಾಳಜಿ ವಹಿಸುತ್ತಿದ್ದರು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1 x5=5

**44.**ನಿಮ್ಮನ್ನು ಬೆಳಗಾವಿ ಜಿಲ್ಲೆಯ ನವಿಲುತೀರ್ಥದ ಸರ್ಕಾರಿ ಪೌಢ್ರಶಾಲೆಯ ವಿದ್ಯಾರ್ಥಿ 'ಪ್ರಜ್ವಲ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ಶಿಕ್ಷಕ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ, ಬೆಳಗಾವಿಯಲ್ಲಿರುವ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ರಾಮನಗರ ಜಿಲ್ಲೆಯ ಕನಕಪುರದ ಸರ್ಕಾರಿ ಪೌಢ್ರಶಾಲೆಯ ವಿದ್ಯಾರ್ಥಿ ಎಂದು ಭಾವಿಸಿಕೊಂಡು, ಬೆಂಗಳೂರಿನ ರಾಜಾಜಿನಗರದ ನಿವಾಸಿಯಾದ ನಿಮ್ಮ ಗೆಳೆಯ / ಗೆಳತಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಪತ್ರ ಬರೆಯಿರಿ.

**45. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1x5=5**

ಎ) ಜ್ಞಾನಾರ್ಜನೆಯಲ್ಲಿ ಗ್ರಂಥಾಲಯಗಳ ಮಹತ್ವ

ಬಿ) ಅತಿವೃಷ್ಟಿಯಿಂದಾಗುವ ಪರಿಣಾಮಗಳು.

---- 0 0 0 0 ----

## ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ (SA-1)

**ಸಮಯ : 3 ಗಂಟೆ** **ವಿಷಯ : ಪ್ರಥಮಭಾಷೆ ಕನ್ನಡ.** **ಅಂಕಗಳು: - 100**

ಭಾಗ – 'ಎ'

(ಗದ್ಯ, ಪದ್ಯ, ಪೂರಕ ಅಧ್ಯಯನ ಮತ್ತು ಅಪಠಿತ ಗದ್ಯ– 67 ಅಂಕಗಳು)

**ಕೊಟ್ಟಿರುವಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **09x1=09**

1. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?
2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
3. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
4. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?
5. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
6. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?
7. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
8. ಹಲಗಲಿ ಗ್ರಾಮ ಎಲ್ಲಿದೆ?
9. ವಿವೇಕಾನಂದರನ್ನು ಮಾನವ ಮಿತ್ರ ಎಂದು ಕರೆದವರು ಯಾರು?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

10. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
11. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
12. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
13. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
14. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?
15. ಹಲಗಲಿ ಬೇಡರು ದಂಗೆ ಏಳಲು ಕಾರಣವೇನು?
16. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
17. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
18. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
19. ವಸಂತ ಮುಖ ಯಾರು ಯಾರಿಗೆ ತೋರಲಿಲ್ಲ?

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **4x3=12**

20. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"
21. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."
22. "ರೆಕ್ಕೆಗಳೆರಡೂ ಪಕ್ಕದಲ್ಲುಂಟು"
23. "ಜೀವ ಸತ್ತು ಹೋಗುವುದು ಗೊತ್ತ"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1x4=4**

ನೀಲಮೇಘ________________

________________

________________

________________

ಹಕ್ಕಿ ಹಾರುತಿದೆ ನೋಡಿದಿರಾ?

ಅಥವಾ

ಯುಗ–ಯುಗಗಳ________________

________________

________________

________________

ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿ, ಪ್ರಶಸ್ತಿಯನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

**2x3=6**

24. ಸಾರಾ ಅಬೂಬಕ್ಕರ್

25. ಕುಮಾರ ವ್ಯಾಸ

ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ. **1x4=4**

27. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ– ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2x4=8**

28. ಅ) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು ? ವಿವರಿಸಿ

ಅಥವಾ

ಆ) ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಅ) ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳೇನು ?

ಅಥವಾ

ಆಖ) ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

29. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**01x04=04**(2+2)

ಹನ್ನೆರಡನೆಯ ಶತಮಾನವೆಂದಾಕ್ಷಣ 'ವಚನ ಧರ್ಮ'ನಮ್ಮ ಮತಿಗೆ ಹೊಳೆಯುವುದು ಸಹಜ. ಅದಕ್ಕೆ ಕಾರಣ ಅಂದು ತನ್ನ ಉತ್ತುಂಗ ಶಿಖರವನ್ನು ತಲುಪಿತ್ತು. ವಚನ ಧರ್ಮ ಆ ಸ್ಥಿತಿಯನ್ನು ತಲುಪಲು ಮೂಲ ಕಾರಣವೇ ಶರಣರು. ಅವರ "ಸಾಮಾಜಿಕ ಚಿಂತನೆಯ ಪರಿವರ್ತನೆಯ ಪ್ರಯತ್ನದಿಂದಾಗಿ ವಚನ ಧರ್ಮ ವಿಶ್ವಮಾನ್ಯ ವಾಗುವ ಅರ್ಹತೆ" ಯನ್ನು ಪಡೆದುಕೊಂಡಿತು. 'ಸಾಹಿತ್ಯ' ಎನ್ನುವುದಕ್ಕೆ ವಚನ ಧರ್ಮ ಚಲನಶೀಲತೆಯನ್ನು ತಂದು ಕೊಟ್ಟಿತು. ಅಂದಿನ ಸಮಾಜದಲ್ಲಿದ್ದಂತಹ ವರ್ಣವ್ಯವಸ್ಥೆಗೆ ಪೆಟ್ಟು ಕೊಟ್ಟು, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕರಂಗದಲ್ಲಿಂದ್ದಂತಹ ಎಲ್ಲಾ ತಾರತಮ್ಯಗಳನ್ನು ತೆಗೆದೊಗೆದು, 'ಸ್ತ್ರೀ ಪುರುಷರೆಂಬ ಭೇಧ'ವನ್ನು ಅಳಿಸಿಹಾಕಿ ಎಲ್ಲಾ ವರ್ಗದ ಹಾಗೂ ಎಲ್ಲಾ ಸ್ತರದ ಜನತೆಯನ್ನು ಮುಟ್ಟುವ ಮಾನವೀಯ ಧರ್ಮ ವಾಯಿತು. ಇಂದಿನ "ಆಧುನಿಕ ಜಗತ್ತಿಗೆ ಅತೀ ಪ್ರಸ್ತುತವಾಗಿರುವ ಧರ್ಮ ವಿದಾಗಿದೆ "ನಮ್ಮ ರಾಷ್ಟ್ರ ಜೀವನದ ಸಂಗೀತಕ್ಕೆ ಧರ್ಮ ಶ್ರುತಿ ಇದ್ದಂತೆ" ಎಂಬ 'ಸ್ವಾಮಿವಿವೇಕಾನಂದರ' ಮಾತು ಸತ್ಯವಾದುದು. ಆಧುನಿಕ ಯುಗದಲ್ಲಿ ಈ ಪರಿಸ್ಥಿತಿಯಲ್ಲಿ, ಪ್ರತಿಯೊಂದು ಧರ್ಮದಲ್ಲಿ ನಂಬಿಕೆಯನ್ನು ಮೀರಿದ ಅಂಧ ಶ್ರದ್ಧೆ ನಡೆಯುತ್ತಲೇ ಇದೆ. ಇನ್ನೂ 800 ವರ್ಷಗಳ ಹಿಂದೆ ಅದರ ಸ್ಥಿತಿಯನ್ನು ಕಲ್ಪನೆ ಮಾಡಿಕೊಳ್ಳದ ಪರಿಸ್ಥಿತಿ ಇತ್ತು. ಇತರ ಧರ್ಮಗಳನ್ನು ಬಹಿಷ್ಕರಿಸದೆ ಅದರ ಹೆಸರಿನಲ್ಲಿ ನಡೆಯುತ್ತಿದ್ದ ವಿಷಮತೆಯ ಮುಖವಾಡವನ್ನು ಕಿತ್ತು 'ಮಾನವ ದರ್ಶನ'ವನ್ನು ಮನೆ ಮನೆಗೆ ಕೊಂಡೊಯ್ಯುವ

ಕಾರ್ಯವನ್ನು ಶರಣರು ಕೈಗೊಂಡರು ಆದ್ದರಿಂದ ಅದೊಂದು ಶರಣರ ಧರ್ಮ. "ಧರ್ಮಾಚರಣೆ ವೈಯಕ್ತಿಕವಾಗಿರಬೇಕು, ಅದರ ಫಲ ಮಾತ್ರ ಸಾರ್ವತ್ರಿಕವಾಗಿರಬೇಕು" ಎಂದು ಶರಣರು ಬದುಕಿದರು, ಬಾಳಿದರು.

ಪ್ರಶ್ನೆಗಳು

1) ವಚನ ಧರ್ಮ ಮಾನವೀಯ ಧರ್ಮವಾಗಿದ್ದು ಹೇಗೆ ?

2) ವಚನ ಧರ್ಮ ವಿಶ್ವಧರ್ಮವಾಗುವ ಆರ್ಹತೆಯನ್ನು ಪಡೆದದ್ದು ಹೇಗೆ ?

## ಭಾಗ–ಬಿ

(ಆನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು – 20 ಅಂಕಗಳು)

ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಬರೆಯಿರಿ.

**10x1=10**

31. ವರ್ಗೀಯ ವ್ಯಂಜನದ ಕೊನೆಯ ಅಕ್ಷರಗಳು ;

(ಎ) ಅನುನಾಸಿಕಗಳು (ಬಿ) ಯೋಗವಾಹಕಗಳು (ಸಿ) ಮಹಾಪ್ರಾಣಗಳು (ಡಿ) ಸ್ವರಗಳು

32. 'ಮಳೆಗಾಲ' ಪದದಲ್ಲಿ ಆಗಿರುವ ಸಂಧಿ;

(ಎ)ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಆದೇಶ ಸಂಧಿ (ಡಿ) ಸವರ್ಣದೀರ್ಘ ಸಂಧಿ

33. ಅರ್ಥಕ್ಕನುಗುಣವಾಗಿ ಬರುವ ನಾಮಪದ ;

(ಎ) ರೂಢನಾಮ (ಬಿ) ಅಂಕಿತನಾಮ (ಸಿ) ಅನ್ವರ್ಥನಾಮ (ಡಿ) ಭಾವನಾಮ

34. 'ಕರಣಕಾರಕ ' ಹೊಂದಿರುವ ವಿಭಕ್ತಿಯ ಪ್ರತ್ಯಯ ;

(ಎ) ಉ (ಬಿ) ಅನ್ನು (ಸಿ) ಇಂದ (ಡಿ) ಗೆ

35. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ;

(ಎ) ಪೂರ್ಣವಿರಾಮ ಚಿಹ್ನೆ (ಬಿ) ಅಲ್ಪವಿರಾಮ ಚಿಹ್ನೆ (ಸಿ) ಅರ್ಧವಿರಾಮ ಚಿಹ್ನೆ(ಡಿ) ಉದ್ಧರಣ ಚಿಹ್ನೆ

36. ಮಕ್ಕಳು ಹಾಲು ಕುಡಿದರಾದ್ದರಿಂದ ಹಲ್ಲುಗಳು ಗಟ್ಟಿಯಾದವು – ಎಂಬುದು ;

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

37. ' ಬೆಟ್ಟದಾವರೆ '– ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:

(ಎ) ಕರ್ಮಧಾರೆಯ ಸಮಾಸ (ಬಿ) ದ್ವಂದ್ವ ಸಮಾಸ (ಸಿ) ತತ್ಪುರುಷ ಸಮಾಸ (ಡಿ) ಬಹುವ್ರೀಹಿ ಸಮಾಸ

38. ವಿದ್ಯಾರ್ಥಿಗಳು ಪಾಠವನ್ನು ಬರೆಯಲಿ – ಈ ವಾಕ್ಯದ ಕ್ರಿಯಾರೂಪ ;

(ಎ) ವಿದ್ಯರ್ಥಕ (ಬಿ) ಸಂಭವನಾರ್ಥಕ (ಸಿ) ನಿಷೇಧಾರ್ಥಕ (ಡಿ) ಬಹುರೂಪಕ

39. 'ದಿವಾನ ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ:

(ಎ) ಪರ್ಷಿಯನ್ (ಬಿ) ಪೋರ್ಚುಗೀಸ್ (ಸಿ) ಹಿಂದೂಸ್ಥಾನಿ (ಡಿ) ಅರಬ್ಬೀ

40. 'ಇಸವಾಸ ' ಪದದ ಗ್ರಾಂಥಿಕ ರೂಪ ;

(ಎ) ಇಸ್ವಿ (ಬಿ) ಸಹವಾಸ (ಸಿ) ವಿಶ್ವಾಸ (ಡಿ) ವಿಸವಾಸ

ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. **4x1=4**

41. ಸರಸರ : ಅನುಕರಣಾವ್ಯಯ : : ಈಗೀಗ : ________

42. ಲೋಪಸಂಧಿ : ಸ್ವರಸಂಧಿ : : ಆದೇಶ ಸಂಧಿ : ________

43. ಯುದ್ಧ : ಜುದ್ಧ : : ವಿದ್ಯೆ : ________

44. ಹರಿಕಾರ : ಮುಂದಾಳು : : ಸುಸಂಗತ : ________

ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1x3=3**

(ಎ) ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

ಅಥವಾ

ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದನೂರ್ವರುಮಿದಿರ್ಚೆ
ಸತ್ತೊಡೆಕೋಪಂ

ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ. **1x3=3**

45. ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ

ಅಥವಾ

ಮಾರಿಗೌತಣವಾಯ್ತು ನಾಳಿನ ಭಾರತವು

## ವಿಭಾಗ–ಸಿ
(ವಾಕ್ಯ ರಚನೆ ಹಾಗೂ ಬರೆವಣಿಗೆ ಕೌಶಲ್ಯ 13 ಅಂಕಗಳು)

47. ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. **1x3=3**

ಅ) ತಾಳಿದವನು ಬಾಳಿಯಾನು
ಆ) ಅತಿಯಾಸೆ ಗತಿಗೇಡು
ಇ) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

48. ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ' ನಮನ ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ವಿಜ್ಞಾನ ದಿನಾಚರಣೆಗೆ ಅತಿಥಿಯಾಗಿ ಆಗಮಿಸುವಂತೆ ನಿಮ್ಮ ಗ್ರಾಮಪಂಚಾಯಿತಿ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ. **1x5=5**

ಅಥವಾ

ನಿಮ್ಮನ್ನು ಬೆಂಗಳೂರಿನ ವಿವೇಕಾನಂದ ಪ್ರೌಢಶಾಲೆಯ 'ನೂತನ ' ಎಂದು ಭಾವಿಸಿಕೊಂಡು ನಿಮ್ಮ ಅರ್ಧವಾರ್ಷಿಕ ಪೂರ್ವ ತಯಾರಿ ಕುರಿತು ನಿಮ್ಮ ತಂದೆಗೊಂದು ಪತ್ರ ಬರೆಯಿರಿ

49. ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1x5=5**

ಅ) ರಾಷ್ಟ್ರೀಯ ಹಬ್ಬಗಳ ಮಹತ್ವ

ಆ) ಸ್ವಚ್ಛ ಭಾರತ ಅಭಿಯಾನ

ಇ) ಪ್ರಾಕೃತಿಕ ವಿಕೋಪ

KM

# ಗದ್ಯಪಾಠ –5

# ಎದೆಗೆ ಬಿದ್ದ ಅಕ್ಷರ

**ಲೇಖಕರು– ದೇವನೂರು ಮಹಾದೇವ**

**ಆಕರ ಗ್ರಂಥ – ಎದೆಗೆ ಬಿದ್ದ ಅಕ್ಷರ**

**ಲೇಖಕರ ಪರಿಚಯ:**

ದೇವನೂರು ಮಹಾದೇವ ಅವರು 1948 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು ಎಂಬ ಗ್ರಾಮದಲ್ಲಿ ಜನಿಸಿದರು ಇವರ ಕುಸುಮ ಬಾಲೆ, ಒಡಲಾಳ, ದ್ಯಾವನೂರು, ಗಾಂಧಿ ಮತ್ತು ಮಾವೋ, ಎದೆಗೆ ಬಿದ್ದ ಅಕ್ಷರ, ನಂಬಿಕೆಯ ನೆಂಟ ನೋಡು ಮತ್ತು ಕೂಡು ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತಿಯ ಭಾಷಾ ಪರಿಷತ್ ಪ್ರಶಸ್ತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಬಂದಿವೆ.

**ಪ್ರಸ್ತುತ ಪಾಠ ಭಾಗವನ್ನು 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆರಿಸಲಾಗಿದೆ.**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. **ಇಂದಲ್ಲ –ನಾಳೆ ಫಲ ಕೊಡುವ ಅಂಶಗಳಾವುವು?**

ಉ:– ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

2. **ಮನೆ ಮಂಚಮ್ಮ ಯಾರು?**

ಉ:– ಮನೆ ಮಂಚಮ್ಮ ಊರಿನ ಗ್ರಾಮ ದೇವತೆ.

3. **ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?**

ಉ:– ಮನೆ ಮಂಚಮ್ಮನ ಕತೆ ಹೇಳಿದ ಕವಿ ಡಾ॥ ಸಿದ್ಧಲಿಂಗಯ್ಯ

4. **ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಯಾರು?**

ಉ:– ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಫ.ಗು. ಹಳಕಟ್ಟಿಯವರು.

5. **ವಚನಕಾರರಿಗೆ ಯಾವುದು ದೇವರಾಗಿತ್ತು?**

ಉ:– ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

6. **ಅಶೋಕ ಪೈ ಅವರ ವೃತ್ತಿ ಯಾವುದು?**

ಉ:– ಅಶೋಕ ಪೈ ಅವರ ಒಬ್ಬ ಮನೋವೈದ್ಯರು.

7. **ದೇವನೂರರ ನನ್ನ ದೇವರು ಯಾರೆಂಬುದನ್ನು ಸ್ಪಷ್ಟೀಕರಿಸಿ.**

ಉ:– "ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ' ಎಂದು ದೇವನೂರು ಮಹಾದೇವ ಅವರು ನನ್ನ ದೇವರು ಯಾರು ಎಂಬುದನ್ನು ಸ್ಪಷ್ಟೀಕರಿಸುತ್ತಾರೆ.

**ಆ). ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.**

1. **ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?**

ಉ:– ಅಶೋಕ ಪೈ ಅವರು ಹೇಳಿದ ಮನಸ್ಸಿನ ಬಗ್ಗೆ ನಡೆದಿರುವ ಸಂಶೋಧನಾ ಸತ್ಯವೆಂದರೆ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವವರು ಅನುಭವಿಸುತ್ತಿರುವ ದುಃಖ ಅಥವಾ ಸಂತೋಷದ ಭಾವವು ಪಕ್ಕದ ಕೊಠಡಿಯಲ್ಲಿ ಟೆಲಿವಿಷನ್ ನೋಡದೆ ಕುಳಿತಿರುವವರ ಮೇಲೂ ಸ್ವಲ್ಪ ಮಟ್ಟಿಗೆ ಅದೇ ರೀತಿಯಾದ ಪ್ರಭಾವವನ್ನು ಬೀರುತ್ತದೆ. ಅಂದರೆ ಈ ಉದಾಹರಣೆ ವಿವರಿಸುವ ನಿಜವೆಂದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ, ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆನೋ. ಈ ಅನುಕಂಪನ ಇಡೀ ಜೀವ ಸಂಕುಲವನ್ನೆ ಒಂದು ಎಂದು ಹೇಳುತ್ತದೆ.

**2. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.**

ಉ:– ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ. ಜ್ಞಾನ ಮಾತ್ರ ಅಲ್ಲ ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ. ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ.

**ಇ). ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

**1. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ"**

ಆಯ್ಕೆ: ಈ ವಾಕ್ಯವನ್ನು ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ ಎದೆಗೆ ಬಿದ್ದ ಅಕ್ಷರ ಎಂಬ ಪಾಠದಿಂದ ಅಯ್ದು ಕೊಳ್ಳಲಾಗಿದೆ.

ಸಂದರ್ಭ:– ಕವಿ ಸಿದ್ಧಲಿಂಗಯ್ಯನವರು ಲೇಖಕರಿಗೆ ಒಮ್ಮೆ ಹೇಳಿದ ಕತೆಯಲ್ಲಿ ಬರುವ ಪ್ರಸಂಗವಾಗಿದೆ. ಒಂದು ಗ್ರಾಮದ ಜನರು ತಮ್ಮ ಗ್ರಾಮ ದೇವತೆಗೋಸ್ಕರ ಗುಡಿ ಕಟ್ಟಲು ಪ್ರಾರಂಭಿಸುತ್ತಾರೆ. ಗುಡಿ ಛಾವಣಿಯ ಮಟ್ಟವನ್ನು ತಲುಪಿದಾಗ ಇದಕ್ಕಿದ್ದಂತೆ ಜನರಿಗೆ ಪ್ರತ್ಯಕ್ಷಳಾದ

ಮಂಚಮ್ಮ ದೇವತೆ ಅವರು ಮಾಡುತ್ತಿರುವ ಕಾರ್ಯದ ಕುರಿತು ವಿಚಾರಿಸುತ್ತಾಳೆ. ಜನರು ಅವಳಿಗಾಗಿಯೇ ಗುಡಿ ಕಟ್ಟುತ್ತಿರುವುದಾಗಿ ಹೇಳಿದಾಗ ಅವಳು ನಿಮಗೆಲ್ಲರಿಗೂ ಮನೆ ಇದೆಯೇ ಎಂದು ಪ್ರಶ್ನಿಸುತ್ತಾಳೆ. ಅವರಲ್ಲೊಬ್ಬ ತನಗಿಲ್ಲವೆಂದು ಹೇಳಿದಾಗ ಮಂಚಮ್ಮ ದೇವತೆ ಎಲ್ಲರಿಗೂ ಮನೆ ಆಗುವವರಿಗೆ ತನಗೆ ಮನೆ ಬೇಡವೆಂದು ಹೇಳುತ್ತಾಳೆ.

ಸ್ವಾರಸ್ಯ: ತನಗೆ ಗುಡಿ ಕಟ್ಟುವ ಜನರಿಗೆ ಮನೆ ಇಲ್ಲದ ಮೇಲೆ ತನಗೇಕೆ ಗುಡಿಮನೆ ಎಂದು ಗ್ರಾಮದೇವತೆ ಹೇಳುವ ಈ ಮಾತು ಸಮಾನತೆಯ ತತ್ವವನ್ನು ಹೇಳುತ್ತದೆ.

**2. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ"**

**ಆಯ್ಕೆ:–** ಈ ವಾಕ್ಯವನ್ನು ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ ಎದೆಗೆ ಬಿದ್ದ ಅಕ್ಷರ ಎಂಬ ಪಾಠದಿಂದ ಅಯ್ದು ಕೊಳ್ಳಲಾಗಿದೆ.

**ಸಂದರ್ಭ :–** ಮನೋ ವೈದ್ಯರಾದ ಅಶೋಕ ಪೈಯವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯದ ಕುರಿತು ಹೇಳುತ್ತಾರೆ. ಒಂದು ಕೊಠಡಿಯಲ್ಲಿ ಒಂದಷ್ಟು ಜನರು ಟೆಲಿವಿಷನ್ ವೀಕ್ಷಿಸುತ್ತಿರುವಾಗ ಅವರು ನೋಡುವ ಸನ್ನಿವೇಶಗಳಿಗೆ ತಕ್ಕಂತೆ ದುಃಖ ಅಥವಾ ಸಂತೋಷದ ಭಾವವನ್ನು ಅನುಭವಿಸುತ್ತಿರುವಾಗ ಅವರು ಭಾವವು ಅವರ ಪಕ್ಕದ ಕೊಠಡಿಯಲ್ಲಿ ಟೆಲಿವಿಷನ್ ನೋಡದೆ ಇರುವವರನ್ನು ಸ್ವಲ್ಪ ಮಟ್ಟಿಗಾದರು ತಲುಪಿ ಅವರು ಕೂಡ ದುಃಖ ಅಥವಾ ಸಂತೋಷದ ಭಾವವನ್ನು ಅಲ್ಪ ಮಟ್ಟಿಗಾದರು ತಾಳುತ್ತಾರೆ ಎಂದು ವಿವರಿಸಿದ್ದಾರೆ. ಇದನ್ನು ಗಮನಿಸಿದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಅರ್ಥವಾಗುತ್ತದೆ. ಎಂದು ಲೇಖಕರು ಹೇಳಿದ್ದಾರೆ.

**ಸ್ವಾರಸ್ಯ:–** ಯಾವ ಜೀವಿಯು ಸ್ವತಂತ್ರವಾಗಿ ಬದುಕಲು ಸಾಧ್ಯವಿಲ್ಲ ಜೀವಿಗಳು ಪರಸ್ಪರಾವಲಂಬಿಗಳು. ಇಡೀ ಜೀವ ಸಂಕುಲವೆಲ್ಲ ಒಂದೇ ಎಂದು ಸ್ವಾರಸ್ಯವಾಗಿ ಹೇಳಲಾಗಿದೆ.

**3. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"**

**ಆಯ್ಕೇ:–** ಈ ವಾಕ್ಯವನ್ನು ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ ಎದೆಗೆ ಬಿದ್ದ ಅಕ್ಷರ ಎಂಬ ಪಾಠದಿಂದ ಅಯ್ದು ಕೊಳ್ಳಲಾಗಿದೆ.

**ಸಂದರ್ಭ:–** ವಚನಕಾರರ ದೃಷ್ಟಿಯಲ್ಲಿ ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ವಚನಕಾರರು ನಮ್ಮ ಸುತ್ತ ಮುತ್ತ ಇರುವ ದೇವರುಗಳನ್ನು ದೇವರು ಅಂದು ಕೊಂಡಿರಲಿಲ್ಲ ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟ ದೈವ ಅಂದರೆ ಅವರಿಗೆ ಪ್ರಜ್ಞೆಯೇ ದೇವರಾಗಿತ್ತು ಎಂದು ಲೇಖಕರು ಹೇಳಿದ್ದಾರೆ.

ವಚನಕಾರರು ತಮ್ಮ ಕಷ್ಟ, ಸುಖ, ದುಮ್ಮಾನ, ಏಳು ಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿ ಕೊಳ್ಳುತ್ತ ಒದ್ದಾಡುತ್ತಿದ್ದರೆಂದು ಕಾಣುತ್ತದೆ ಎಂದು ಪ್ರಜ್ಞೆಯ ಬಗ್ಗೆ ವಿವರಿಸಿದ್ದಾರೆ.

**ಸ್ವಾರಸ್ಯ:–** ವಚನಕಾರರಿಗೆ ಇಷ್ಟ ದೈವದ ರೀತಿಯಲ್ಲಿ ಪ್ರಜ್ಞೆಯಂತೆ ಪ್ರತಿಯೊಬ್ಬರಲ್ಲಿ ಪ್ರಜ್ಞೆ ಜಾಗೃತವಾಗಿರಬೇಕು ಎಂಬುದನ್ನು ಸ್ವಾರಸ್ಯವಾಗಿ ಹೇಳಿದ್ದಾರೆ.

**4. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ"**

**ಆಯ್ಕೆ:–** ಈ ವಾಕ್ಯವನ್ನು ದೇವನೂರು ಮಹಾದೇವ ಅವರ ಎದೆಗೆ ಬಿದ್ದ ಅಕ್ಷರ ಕೃತಿಯಿಂದ ಆ0ಯ್ದು ಎದೆಗೆ ಬಿದ್ದ ಅಕ್ಷರ ಎಂಬ ಪಾಠದಿಂದ ಅಯ್ದು ಕೊಳ್ಳಲಾಗಿದೆ.

**ಸಂದರ್ಭ:–** ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೋ

ಈ ಅನುಕಂಪನ ಇಡೀ ಜೀವ ಸಂಕುಲವನ್ನೆ ಒಂದು ಎಂದು ಹೇಳುತ್ತದೆ. ಬುದ್ಧನ ಕಾರುಣ್ಯ ಇಲ್ಲಿಂದಲೇ ಮಾಡಿರಬಹುದು, ಕೊಲೆ, ಸುಲಿಗೆ, ದ್ವೇಷ, ಅಸೂ0ಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ಇದು ಘಾಸಿಗೊಳಿಸುವುದು. ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೆ ಈ ಸಮಷ್ಟಿ ಮನಸಲ್ಲಿ ಎಲ್ಲರೂ ಇರುತ್ತಾರೆ ಎಂದು ಲೇಖಕರು ಹೇಳಿದ್ದಾರೆ.

**ಸ್ವಾರಸ್ಯ:** ಸಮಸ್ತರು ಸಮಾನರು ಅದ್ದರಿಂದ ಕಾರುಣ್ಯ ಮನೋಭಾವ ಎಲ್ಲರ ಮನದಲ್ಲೂ ಮೂಡಿರಬೇಕು. ಎಂಬುದನ್ನು ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

**ಈ). 8–10 ವಾಕ್ಯಗಳಲ್ಲಿ ಉತ್ತರಿಸಿ.**

**1. ಕವಿ ಸಿದ್ದಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.**

ಉ:– ದೇವನೂರು ಮಹಾದೇವ ಅವರಿಗೆ ಕವಿ ಸಿದ್ಧಲಿಂಗಯ್ಯ ಅವರು ಮನೆ ಮಂಚಮ್ಮ ಎಂಬ ಗ್ರಾಮ ದೇವತೆಯ ಕತೆಯನ್ನು ಹೇಳುತ್ತಾರೆ. ಒಂದುಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ಗ್ರಾಮ ದೇವತೆ ಮಂಚಮ್ಮಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಗುಡಿ ಕಟ್ಟುತ್ತಾ ಇರುತ್ತಾರೆ. ಗುಡಿಯ ಕಟ್ಟಡ ಛಾವಣಿ ಮಟ್ಟಕ್ಕೆ ಬಂದಾಗ ಅಲ್ಲಿದ್ದ ಒಬ್ಬನ ಮೈ ಮೇಲೆ ಆ ಗ್ರಾಮ ದೇವತೆ ಮಂಚಮ್ಮ ಆವಾಹಿಸಿಕೊಂಡು 'ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ ಆ ಅಬ್ಬರಕ್ಕೆ ಜನ ತಮ್ಮ ಕೆಲಸ ನಿಲ್ಲಿಸಿ ಕಕ್ಕಾ ಬಿಕ್ಕಿಯಾಗಿ ನೋಡುತ್ತಾರೆ. ಆಗ ಗ್ರಾಮ ದೇವತೆ ಮಂಚಮ್ಮ ಏನ್ರಯ್ಯಾ 'ಏನ್ ಮಾಡ್ತಾ ಇದ್ದೀರಾ "ಎನ್ನುತ್ತಾಳೆ. ಅಲ್ಲಿನ ಜನರು ನಿನಗೊಂದು ಗುಡಿಮನೆ ಕಟ್ತಾ ಇದ್ದಿವಿ ತಾಯಿ ಎಂದು ಹೇಳುತ್ತಾರೆ. ಪುನಃ ಆ ದೇವತೆ "ಓಹೋ ನನಗೆ ಗುಡಿಮನೆ ಕಟ್ತಾ ಇದ್ದಿರೋ? ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ? 'ಎಂದು ಕೇಳುತ್ತಾಳೆ, ಆಗ ಒಬ್ಬನು "ನನಗಿಲ್ಲ ತಾಯಿ ಎಂದು ಹೇಳುತ್ತಾನೆ. ಆಗ ಗ್ರಾಮ ದೇವತೆ ಮಂಚಮ್ಮ "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎಂದು ಹೇಳುತ್ತಾಳೆ, ಅಂದಿನಿಂದ ಮಂಚಮ್ಮ ದೇವಿ ಮನೆ ಮಂಚಮ್ಮ ನಾಗುತ್ತಾಳೆ. ಛಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆ ಮಂಚಮ್ಮ ಎಂದು ಪೂಜಿತಳಾಗುತ್ತಿದ್ದಾಳೆ.

**ಉ) ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.**

1. **ಕಕ್ಕಾಬಿಕ್ಕಿ** : ವಿದ್ಯಾರ್ಥಿಗಳು ಹಾವನ್ನು ನೋಡಿ ಕಕ್ಕಾಬಿಕ್ಕಿಯಾಗಿ ಓಡಿ ಹೋದರು
2. **ಆರಂಭಿಸು** : ವಿಶ್ವೇಶ್ವರಯ್ಯನವರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಆರಂಭಿಸಿದರು.
3. **ಪ್ರಯತ್ನಿಸು** : ವಿದ್ಯಾರ್ಥಿಗಳು 10 ನೇ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಲು ಪ್ರಯತ್ನಿಸಬೇಕು.
4. **ಘಾಸಿಗೊಳಿಸು** : ಸೋಲು ಉಂಟಾಯಿತೆಂದು ಮನಸ್ಸಿಗೆ ಘಾಸಿ ಮಾಡಿಕೊಳ್ಳಬಾರದು.

**6. ಕೊಟ್ಟಿರುವ ಪದಗಳ ವಿರುದ್ಧಾರ್ಥಕ ಪದ ಬರೆಯಿರಿ.**

ಒಳಿತು x ಕೆಡುಕು ಬೆಳಕು x ಕತ್ತಲು ಸಮಷ್ಠಿ x ವ್ಯಷ್ಟಿ

ಧರ್ಮ x ಅಧರ್ಮ ಪುಣ್ಯ x ಪಾಪ

# ಬಹು ಆಯ್ಕೆಯ ಪ್ರಶ್ನೆಗಳು.

1. **'ಅಕ್ಷರ'** ಪದದ ತದ್ಭವ ರೂಪ

   ಅ) ಆಕಾರ  ಆ)ರಕ್ಷಸ  ಇ) ಅಕ್ಕರ  ಈ) ರಕ್ಷಕ

   **ಉ: ಇ) ಅಕ್ಕರ**

2. **'ಗುಡಿಮನೆ'** ಈ ಪದದ ವ್ಯಾಕರಣ ವಿಶೇಷ

   ಅ) ದ್ವಿರುಕ್ತಿ  ಆ) ಜೋಡಿಪದ  ಇ) ನುಡಿಗಟ್ಟು  ಈ) ಗುಣಸಂಧಿ

   **ಉ: ಆ) ಜೋಡಿಪದ**

3. **'ಸತ್ಯ'** ಪದದ ವಿರುದ್ಧ ಪದ.

   ಅ) ಅಸತ್ಯ  ಆ) ಮಿಥ್ಯಾ  ಇ) ಸತ್ಯಾ  ಈ) ಸುಳ್ಳು

   **ಉ: ಅ) ಅಸತ್ಯ**

4. **'ಖುಷಿ'** ಈ ಪದವು ಈ ಭಾಷೆಯಿಂದ ಬಂದಿದೆ

   ಅ)ಇಂಗ್ಲೀಷ್  ಆ)ಉರ್ದು  ಇ)ಪಾರ್ಸಿ  ಈ)ತಮಿಳು

   **ಉ: ಇ)ಪಾರ್ಸಿ**

5. **'ನಿಲ್ಸಿ ನನ್ ಮಕ್ಕಳಾ'** ಈ ವ್ಯಾಕದಲ್ಲಿರುವ ಲೇಖನ ಚಿಹ್ನೆ

   ಅ) ಪ್ರಶ್ನಾರ್ಥಕ  ಆ)ಉದ್ಧರಣ  ಇ) ವಾಕ್ಯವೇಷ್ಟನ  ಈ) ಭಾವಸೂಚಕ

   **ಉ: ಆ)ಉದ್ಧರಣ**

6. ಜಾತಿಯ ಬಚ್ಚಲು ಗುಡಿಮನೆ ಇಲ್ಲಿರುವ ಅಲಂಕಾರ

   ಅ) ರೂಪಕ  ಆ) ಉಪಮಾ  ಇ) ದುಷ್ಟಾಂತ  ಈ) ಅರ್ಥಾಂತರನ್ಯಾಸ

   **ಉ: ಅ) ರೂಪಕ**

7. **'ಕಕ್ಕಾಬಿಕ್ಕಿ'** ಇದು ವ್ಯಾಕರಣಾಂಶಕ್ಕೆ ಉದಾಹರಣೆ.

   ಅ) ಜೋಡಿಪದ  ಆ) ದ್ವಿರುಕ್ತಿ  ಇ) ಅವ್ಯಯ  ಈ) ನುಡಿಗಟ್ಟು

   **ಉ: ಈ) ನುಡಿಗಟ್ಟು**

8. **'ಹೌದೌದು'** ಬಟ್ಟಬಯಲು ಇದು.

   ಅ) ದ್ವಿರುಕ್ತಿ  ಆ) ನುಡಿಗಟ್ಟು  ಇ) ಅವ್ಯಯ  ಈ)ಜೋಡಿನುಡಿ

   **ಉ: ಅ) ದ್ವಿರುಕ್ತಿ**

9. ತದ್ಧಿತಾಂತ ನಾಮಕ್ಕೆ ಉದಾಹರಣೆ.

   ಅ) ಜಾಣತನ  ಆ) ಬಡತನ  ಇ) ಬಳೆಗಾರ  ಈ) ಶಾಲೆಯತನಕ

   **ಉ: ಇ) ಬಳೆಗಾರ**

10. **'ಚಲುವಿಕೆ'** ಇದು

    ಅ) ಅವ್ಯಯ  ಆ)ತದ್ಧಿತಾಂತವ್ಯಯ  ಇ) ತದ್ಧಿತಾಂತ ಭಾವನಾಮ  ಈ) ಕರುಣಾಭಾವ

    **ಉ: ಇ) ತದ್ಧಿತಾಂತ ಭಾವನಾಮ**

11. ತದ್ಧಿತಾಂತಾವ್ಯಯ ಕ್ಕೆ ಉದಾಹರಣೆ

    ಅ)ಭೀಮ  ಆ) ಚಂದ್ರನಂತೆ  ಇ) ಬಣ್ಣ  ಈ) ವಿಜ್ಞಾನಿ.

    **ಉ: ಆ) ಚಂದ್ರನಂತೆ**

12. **ಬುದ್ಧನನ್ನು** ಇದು ಈ ವಿಭಕ್ತಿ

    ಅ)ದ್ವಿತೀಯ  ಆ) ತೃತೀಯ  ಇ) ಚತುರ್ಥಿ  ಈ) ಪಂಚಮಿ

    **ಉ: ಅ)ದ್ವಿತೀಯ**

13. **'ಕಡೆಗಣ್ಣು'** ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಅ) ಕ್ರಿಯಾ ಆ) ದ್ವಿಗು ಇ) ಅಂಶಿ ಈ) ದ್ವಂದ್ವ

**ಉ: ಇ) ಅಂಶಿ**

14. **'ಮಾತಂತು'** ಈ ಸಂಧಿಗೆ ಸೇರಿದೆ

ಅ) ಆದೇಶ ಆ) ಆಗಮ ಇ) ಗುಣ ಈ) ಲೋಪ

**ಉ: ಈ) ಲೋಪ**

15. **'ನಿಲ್ಸಿ'** ಪದದ ಗ್ರಾಂಥಿಕ ರೂಪ ಪದ

ಅ) ನಿಲ್ಲಿಸು ಆ) ನಿಲ್ಲಿಸಿ ಇ) ನಿಲ್ಲಿ ಈ) ಎದ್ದು ಹೋಗು

**ಉ: ಆ) ನಿಲ್ಲಿಸಿ**

16. **'ಅವಾಹಿಸು'** ಪದದ ಅರ್ಥ

ಅ) ಮೈಮೇಲೆ ಬರುವುದು ಆ) ಆವರಿಸು ಇ) ಸುತ್ತುವರೆ ಈ) ಆವಾಹನೆ

**ಉ: ಅ) ಮೈಮೇಲೆ ಬರುವುದು**

17. **'ಧರ್ಮ'** ಪದದ ತ್ದ್ಭವ ರೂಪ

ಅ) ದಮ್ಮ ಆ) ಅಧರ್ಮ ಇ) ಅದಮ್ಮ ಈ) ನ್ಯಾಯ

**ಉ: ಅ) ದಮ್ಮ**

18. **'ಹೂವಾಡಿಗ'** ಇದರಲ್ಲಿರುವ ತದ್ಧಿತರೂಪ

ಅ) ಇಗ ಆ) ವಾಡಿಗ ಇ) ಡಿಗ ಈ) ಅಡಿಗ

**ಉ: ಈ) ಅಡಿಗ**

19. **ಕಪ್ಪು, ಬಿಳುಪು,** ಪದಗಳು ಈ ವ್ಯಾಕರಣಾಂಶಕ್ಕೆ ಸೇರಿದೆ.

ಅ) ತದ್ಧಿತಾಂತನಾಮ ಆ) ಧಾತು ಇ)ತದ್ಧಿತಾಂತ ಭಾವನಾಮ ಈ) ಅವ್ಯಯ

**ಉ: ಇ)ತದ್ಧಿತಾಂತ ಭಾವನಾಮ**

20. **'ಹಣವಂತ'** ಇದು ಒಂದು

ಅ)ತದ್ಧಿತಾಂತನಾಮ ಆ)ತದ್ಧಿತಾಂತ ಭಾವನಾಮ ಇ)ಕೃದಂತ ಈ) ಅವ್ಯಯ.

**ಉ: ಅ)ತದ್ಧಿತಾಂತನಾಮ**

21. **'ಕಡುವೆಳ್ಪು'** ಇದು ಈ ಸಂಧಿಗೆ ಉದಾಹರಣೆ

ಅ)ಲೋಪ ಸಂಧಿ ಆ)ಆಗಮ ಸಂಧಿ ಇ)ಆದೇಶ ಸಂಧಿ ಈ)ವೃದ್ಧಿ ಸಂಧಿ

**ಉ: ಇ)ಆದೇಶ ಸಂಧಿ**

22. **'ಕಣ್ಮರೆ'** ಈ ಸಮಾಸಕ್ಕೆ ಸೇರಿದೆ.

ಅ) ಅಂಶಿ ಆ) ಕ್ರಿಯಾ ಇ) ದ್ವಿಗು ಈ) ದ್ವಂದ್ವ

**ಉ: ಆ) ಕ್ರಿಯಾ**

23. **'ಅಂಜಿಕೆ'** ಇದರ ವ್ಯಾಕರಣಾಂಶ.

ಅ) ಕೃದಂತ ಅವ್ಯಯ ಆ)ಸರ್ವನಾಮ ಇ) ಅವ್ಯಯ ಈ) ಕೃದಂತ

**ಉ: ಅ) ಕೃದಂತ ಅವ್ಯಯ**

25. **'ಕನ್ನಡಿಗ'** ಈ ಪದದಲ್ಲಿರುವ ತದ್ಧಿತ ಅರ್ಥ.

ಅ) ಅಡಿಗ ಆ) ನಡಿಗ ಇ) ಇಗ ಈ) ಡಿಗ

**ಉ: ಇ) ಇಗ**

# ಘಟಕ ಪರೀಕ್ಷೆ–1

**ಅಂಕಗಳು–20**

**ಅ) ಬಹು ಆಯ್ಕೆಯ ಪ್ರಶ್ನೆಗಳು** **1x3=3**

1. **'ನನಗಿಲ್ಲಾ ತಾಯಿ'** ಈ ವಾಕ್ಯದಲ್ಲಿರುವ ಲೇಖನ ಚಿಹ್ನೆ.
   ಅ) ಪ್ರಶ್ನಾರ್ಥಕ ಆ)ಉದ್ಧರಣ ಇ) ಭಾವಸೂಚಕ ಈ) ವಾಕ್ಯವೇಷ್ಟನ
2. ಕಾರವಾರದಲ್ಲಿ ಕೊರೋನ ವ್ಯಾಪಕವಾಗಿ ಹಬ್ಬಿತು ಈ ವಾಕ್ಯವು
   ಅ) ಸಾಮಾನ್ಯ ಆ) ಸಂಯೋಜಿತ ಇ) ಮಿಶ್ರ ಈ) ವಿಶೇಷ
3. ಶಿವಾನುಭವ ಪದದಲ್ಲಿ ಆಗಿರುವ ಸಂಧಿ
   ಅ) ಗುಣ ಆ)ಸವರ್ಣದೀರ್ಘ ಇ) ವೃದ್ಧಿ ಈ) ಯಣ್

**ಆ). ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ:** **1x3=3**

1. ಮುಗಾವುದು : ದ್ವಿಗು ಸಮಾಸ :: ತಲೆನೋವು:...................
2. ಸಮಷ್ಟಿ : ವ್ಯಷ್ಟಿ :: ಪುಣ್ಯ:.................
3. ಮಾಡ್ತಾ : ಮಾಡುತ್ತಾ :: ಹೇಳ್ತಾರೆ :......

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x3=3**

1. ಶಿವಾನುಭವ ಶಬ್ದಕೋಶ ಪುಸ್ತಕವನ್ನು ಬರೆದವರು ಯಾರು?
2. ದೇವನೂರ ಮಹಾದೇವ ಅವರಿಗೆ ಮನೆ ಮಂಚಮ್ಮನ ಕಥೆಯನ್ನು ಹೇಳಿದವರು ಯಾರು?
3. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ.** **2x4=8**

1. ದೇವನೂರ ಮಹಾದೇವ ಅವರ ಪರಿಚಯ ಮಾಡಿ ಕೊಡಿ.
2. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು? ವಿವರಿಸಿ
3. ವಚನಕಾರರ ದೃಷ್ಠಿ0ಯಲ್ಲಿ ಅರಿವು ಎಂದರೆ ಏನು? ವಿವರಿಸಿ.
4. ವಚನಕಾರರು ಯಾವ ಇಕ್ಕಟ್ಟಿಗೆ ಮುಖಾಮುಖಿಯಾದರು ಎಂದು ಮಹಾದೇವ ಅವರು ಹೇಳುತ್ತಾರೆ?

**ಉ) ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ:** **1x3=3**

1. "ಯಾವ ಜೀವಿಯು ತನ್ನಷ್ಟಕ್ಕೆ ತಾನಿಲ್ಲ"

# ಘಟಕ ಪರೀಕ್ಷೆ– 2

ಅಂಕಗಳು–20

**ಅ) ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x3=3**

1. ವಚನಕಾರರಿಗೆ ಯಾವುದು ದೇವರಾಗಿತ್ತು?
2. ಮನೆ ಮಂಚಮ್ಮ ಯಾರು?
3. ನಮ್ಮೊಳಗೆ ಯಾವುದನ್ನು ಎಚ್ಚರಗೊಳಿಸಬೇಕಾಗಿದೆ?

**ಆ) ಪ್ರತಿ ಪ್ರಶ್ನೆಗೂ 3–4 ವಾಕ್ಯದಲ್ಲಿ ಉತ್ತರಿಸಿ.** **2x3=6**

1. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
2. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೇನು? ವಿವರಿಸಿ.
3. ದೇವನೂರ ಮಹಾದೇವ ಅವರು ಗುರುತಿಸಿದ ವಚನಕಾರರ ಪ್ರಜ್ಞೆಯ ಬಗ್ಗೆ ತಿಳಿಸಿ?

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ** **2x3=6**

1. "ಈ ಸಮಷ್ಠಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ"
2. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"

**ಈ) 8–10 ವಾಕ್ಯಗಳೊಂದಿಗೆ ಉತ್ತರಿಸಿ** **1x5=5**

1. ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.

********

KM

# ಪದ್ಯಪಾಠ – 5
# ಹಸುರು

**ಕವಿ – ಕುವೆಂಪು**

**ಆಕರಗ್ರಂಥ – ಪಕ್ಷಿಕಾಶಿ**

**ಕವಿ ಪರಿಚಯ :**

ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ 29–12–1904 ರಲ್ಲಿ ಜನಿಸಿದರು, ಇವರು ಪಕ್ಷಿಕಾಶಿ, ಪ್ರೇಮ ಕಾಶ್ಮೀರ, ಪಾಂಚಜನ್ಯ, ಕೊಳಲು, ಶ್ರೀರಾಮಾಯಣ ದರ್ಶನಂ ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿ ಜೋಗಿ, ಜಲಗಾರ, ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್, ನೆನಪಿನ ದೋಣಿಯಲ್ಲಿ ಇನ್ನೂ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರಕವಿ, ಕರ್ನಾಟಕ ರತ್ನ ಮೊದಲಾದ ಪ್ರಶಸ್ತಿಗಳು ಲಭಿಸಿದೆ. ಕುವೆಂಪು ರವರ ಪ್ರಸ್ತುತ 'ಹಸುರು' ಪದ್ಯವನ್ನು 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಿ ಕೊಳ್ಳಲಾಗಿದೆ.

**ಪದ್ಯದ ಸಾರಾಂಶ ವಿವರಣೆ –**

1

ಹಸುರು ಕವನವು ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪು ಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವಿತೆಯಾಗಿದೆ. ಅಶ್ವಯುಜ ಮಾಸದ ನವರಾತ್ರಿಯ ಸಮಯದಲ್ಲಿ ಪ್ರಕೃತಿಯಲ್ಲಿ ಎಲ್ಲೆಲ್ಲೂ ಹಸುರು ಕಂಡು ಬರುತ್ತದೆ. ನಮ್ಮ ಭೂಮಿತಾಯಿಯು ಹಸುರನ್ನು ತೊಟ್ಟು ಎಲ್ಲೆಲ್ಲೂ ಹೊಸದಾಗಿ ಕಂಗೊಳಿಸುತ್ತಾಳೆ. ಹಾಗೇಯೆ ನೀಲ ವರ್ಣದ ಹಸುರಿನ ಸಮುದ್ರದಲ್ಲಿ ಕವಿಯ ಆತ್ಮವೂ ಕೂಡ ಹಸುರಾಗಿ ರಸಪಾನದಲ್ಲಿ ಮೀಯುತ್ತದೆ. ಎಂದು ಕುವೆಂಪು ಅವರು ಹಸುರನ್ನು ಕುರಿತು ವರ್ಣಿಸಿದ್ದಾರೆ.

2.

ಹಸುರಾಗಿರುವ ಆಗಸ, ಹಸುರಿನ ಮುಗಿಲು, ಹಚ್ಚಹಸುರು ಗದ್ದೆಯಬಯಲು ಹಸುರಿನಿಂದ ಕಂಗೊಳಿಸುವ ಬೆಟ್ಟಗಳು ಹಸುರಾಗಿರುವ ಕಣಿವೆಗಳು, ಸಂಜೆಯ ಬಿಸಿಲೂ ಕೂಡ ಹಸುರಾಗಿ ಕಂಗೊಳಿಸುತ್ತಿದೆ.

3.

ಅಶ್ವಯುಜ ಮಾಸದಲ್ಲಿನ ಬತ್ತದ ಗದ್ದೆಗಳೆಲ್ಲ ಗಿಳಿಯ ಬಣ್ಣದಂತೆ ಕಾಣುತ್ತಿವೆ. ಬನದ ಅಂಚಿನಲ್ಲಿ ಗೊನೆಯನ್ನು ಹೊತ್ತು ನಿಂತಿರುವ ಅಡಿಕೆಯ ತೋಟ ಹಸುರಾಗಿ ಕಾಣಿಸುತ್ತದೆ ಎನ್ನುತ್ತಾರೆ ಕವಿ ಕುವೆಂಪು.

4.

ಅದೋ ಅಲ್ಲಿ ಭೂಮಿತಾಯಿಯ ಮೇಲೆ ನಯವಾದ ಬಟ್ಟೆಯಂತಿರುವ ಹಸುರು ಹುಲ್ಲಿನ ಹೊದಿಕೆ ಕಾಣುತ್ತಿದೆ. ಅದು ಎಳೆಯ ಚಿಗುರಿನ ಹೊಸ ಹಸುರಿನ ಜಮಖಾನೆಯಾಗಿ ಹರಡಿ ಭೂಮಿಯ ಮೈಯನ್ನು ಮುಚ್ಚಿರುವಾಗ ಹಸುರನ್ನು ಬಿಟ್ಟು ಬೇರೆ ಬಣ್ಣವನ್ನು ಕಾಣಲಾರೆನು ಎಂದು ಬಣ್ಣಿಸಿದ್ದಾರೆ.

5.

ಹೊಸ ಹೂವಿನ ಸುವಾಸನೆಯು (ಕಂಪು) ಹಸುರಾಗಿದೆ. ಬೀಸುವ ಗಾಳಿ0ಯು ತಂಪು ಹಸುರಾಗಿದೆ. ಹಕ್ಕಿಯ ಕೊರಳಿನ ಧ್ವನಿ ಹಸುರಾಗಿದೆ, ಹಸುರಾಗಿರುವ ಭೂಮಿಯ ಉಸಿರೋ ಹಸಿರಾದೆ ಎಂದು ಕುವೆಂಪುರವರ ಬಣ್ಣನೆ.

6.

ಆ ಕಡೆ ನೋಡಿದರೂ ಹಸುರು. ಈ ಕಡೆ ನೋಡಿದರು ಹಸುರು ಎತ್ತೆತ್ತಲೂ ನೋಡಿದರೂ ಹಸುರು. ಕಡಲೂ ಹಸುರಾಗಿದೆ. ಕವಿಯ ಆತ್ಮವೂ ಹಸುರುಗಟ್ಟಿ ಬಿಟ್ಟಿದೆ. ಒಡಲೊಳಗಿನ ರಕ್ತವೂ ಹಸುರಾಗಿದೆ. ಪ್ರಕೃತಿಯ ಜೊತೆಗೆ ತಮ್ಮ ಆತ್ಮವನ್ನು ಕವಿ ಹಸುರಾಗಿಸಿ ಕೊಂಡಿರುವುದನ್ನು ಕಾಣ ಬಹುದಾಗಿದೆ.

ಹಸುರು ಪದ್ಯವು ಕುವೆಂಪು ಅವರ ಪ್ರಿಯವಾದ ಸ್ಥಳ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲದ' ಪ್ರಕೃತಿಯ ಸೌಂದರ್ಯದ ಅನುಭವ ಹಾಗೂ ಅಲ್ಲಿನ ಪರಿಸರದೊಂದಿಗೆ ಕವಿ ಹೊಂದಿದ್ದ ಭಾವ ಸಂಬಂಧವನ್ನು ತೋರಿಸುತ್ತದೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರುನಂತಿದೆ?**

ಉ:– ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.

**2. ಕವಿ0ಯು ನೋಡಿದ ಅಡಿಕೆಯ ತೋಟ ಎಲ್ಲಿದೆ?**

ಉ:– ಕವಿ0ಯು ನೋಡಿದ ಅಡಿಕೆಯ ತೋಟ ಬನದ ಅಂಚಿನಲ್ಲಿದೆ.

**3. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?**

ಉ:– ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಪೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

**4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?**

ಉ:– ಕವಿಗೆ ಹುಲ್ಲಿನ ಹಾಸು ನಯವಾದ ಬಟ್ಟೆಯನ್ನು ಹಾಸಿದ ಜಮಖಾನೆ ರೀತಿ ಕಂಡಿದೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರ ಕಾಣುತ್ತಿದೆ?**

ಉ: ಕವಿಗೆ ನವರಾತ್ರಿಯ ಸಮಯದಲ್ಲಿ ಭೂಮಿ ನವಧಾತ್ರಿಯೆನಿಸುತ್ತಿದೆ. ಹಸಿರಿನ ಕಡಲಿನಲ್ಲಿ ಕವಿಯ ಆತ್ಮವು ಮಿಂದು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಆಕಾಶ, ಗದ್ದೆ ಬಯಲು, ಬೆಟ್ಟಗಳು, ಕಣಿವೆಗಳೆಲ್ಲವೂ ಜೊತೆಗೆ ಸಂಜೆಯ ಬಿಸಿಲು ಕೂಡ ಕವಿಗೆ ಹಸುರಾಗಿ ಕಾಣುತ್ತದೆ.

**2. ಹಸುರು ಸಕಲೇಂದ್ರಿಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**

ಉ:– ಹಸುರು ಎನ್ನುವ ಪದವು ಮತ್ತೆ ಮತ್ತೇ ಪದ್ಯದಲ್ಲಿ ಜಪಿಸಲ್ಪಟ್ಟು ಹಸುರಿನ ವಾತಾವರಣವನ್ನು ಸೃಷ್ಠಿ ಮಾಡುತ್ತಿದೆ. ಎತ್ತೆತ್ತಲೂ ಹಸುರು ಆಗಸದಿಂದ ಹಿಡಿದು ಭೂಮಿಯಲ್ಲಿ ಗದ್ದೆಯ ಬಯಲು ಬೆಟ್ಟ, ಕಣಿವೆ, ಸಂಜೆಯ ಬಿಸಿಲು ಎಲ್ಲವೂ ಹಸುರು. ಹೂವಿನ ಕಂಪಿನ ಹಸುರಾಗಿ ಗಾಳಿಯ ತಂಪಿನ ಹಸುರಾಗಿ, ಹಕ್ಕಿಯ ಕೊರಲಿಂಪಿನ ಹಸುರಾಗಿ, ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿ ವರ್ಣಿಸಿದ್ದಾರೆ.

**3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**

ಉ:– ನವರಾತ್ರಿಯ ನವಧಾತ್ರಿಯಲ್ಲಿ ಕವಿಯ ಆತ್ಮವು ಹಸುರಿನ ಕಡಲಲ್ಲಿ ಮಿಂದು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಮಲೆನಾಡಿನ ತುಂಬ ತುಂಬಿದ ಹಸುರು ತಬ್ಬಿದ ಹಸುರು ಹಸುರ್ಗಡಲನ್ನು ಸೃಷ್ಟಿಸಿದೆ. ಗದ್ದೆ ಬಯಲು ಬೆಟ್ಟ ಕಣಿವೆ ಇರಲಿ ಸಂಜೆಯ ಬಿಸಿಲೂ ಕೂಡ ಕವಿಗೆ ಹಸುರಾಗಿಯೇ ಕಾಣುತ್ತದೆ ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ. ಹುಲ್ಲು ಹಾಸು ಪಚ್ಚೆಯ ಜಮಾಖಾನೆಯಂತಿದೆ. ಬೇರೆ ಬಣ್ಣವೇ ಕಾಣದಂತೆ ಭೂಮಿಯನ್ನು ಎಲ್ಲೆಲೂ ಅವರಿಸಿರುವ ಹಸುರು ಶಬ್ದ, ಸ್ಪರ್ಶ, ಗಂಧಾದಿಗಳನ್ನೂ ವ್ಯಾಪಿಸುತ್ತದೆ. ಇವೆಲ್ಲ ನೋಡಿದ ತಾದಾತ್ಮ ಹೊಂದಿದ ಕವಿಯ ಆತ್ಮವೇ ಹಸುರುಗಟ್ಟುತ್ತದೆ.

**ಇ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ**

1. "ಹಸುರಾದುದು ಕವಿಯಾತ್ಮ"

**ಉ:– ಆಯ್ಕೆ:–** ಈ ವಾಕ್ಯವನ್ನು ಕುವೆಂಪುರವರು ಬರೆದಿರುವ "ಪಕ್ಷಿಕಾಶಿ" ಕವನ ಸಂಕಲನದಿಂದ ಆಯ್ದ 'ಹಸುರು' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಅಶ್ವಯುಜ ಮಾಸದ ನವರಾತ್ರಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಕವಿ ಪ್ರೇರಿತರಾಗಿದ್ದಾರೆ. ಸಸ್ಯ ಸಮೃದ್ಧಿಯ ಹಸುರೇ ಆಕಾಶ, ಗದ್ದೆ ಬಯಲು, ಸಂಜೆಯ ಗಂಪು. ಹಕ್ಕಿಯ ದನಿ,

ಕಡಲಿನವರೆಗೂ ವ್ಯಾಪಿಸುವ ಮಟ್ಟಿಗೆ ಕವಿಯು ತಾನು ಹಸುರಿನಲ್ಲಿ ತಲ್ಲೀನರಾಗಿರುವ ಬಗೆಯನ್ನು ವರ್ಣಿಸುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:** ಹಸುರಾಗಿರುವ ವನವನ್ನು ನೋಡಿದ ಕುವೆಂಪು ಅವರ ಅತ್ಮವೂ ಕೂಡ ಹಸುರಾದದ್ದು ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

**2. "ಬೇರೆ ಬಣ್ಣವನೆ ಕಾಣೆ"**

**ಉ:–** **ಆಯ್ಕೆ:–** ಈ ವಾಕ್ಯವನ್ನು ಕುವೆಂಪುರವರು ಬರೆದಿರುವ **"ಪಕ್ಷಿಕಾಶಿ"** ಕವನ ಸಂಕಲನದಿಂದ ಆಯ್ದ 'ಹಸುರು' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ :–** ಅಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಪೂರ್ತಿ ತುಂಬಿದ ಹಸುರು ಎಲ್ಲೆಡೆಯೂ ಹಸುರು ವಾತಾವರಣವನ್ನು ಸೃಷ್ಟಿ ಮಾಡಿದ. ಗದ್ದೆ, ಬಯಲು ಬೆಟ್ಟ, ಕಣಿವೆ ಇರಲಿ ಸಂಜೆ ಬಿಸಿಲು ಕೂಡ ಕವಿಗೆ ಹಸಿರಾಗಿ ಕಾಣುತ್ತದೆ. ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ, ಹುಲ್ಲು ಹಾಸು ಪಚ್ಚೆಯ ಜಮಖಾನೆಯಂತಿದೆ. ಭೂಮಿಯೂ ಹಸುರಿನಿಂದ ಮೈ ಮುಚ್ಚಿ ಬೇರೆ ಯಾವುದೇ ಬಣ್ಣವನ್ನು ಕಾಣಲು ಆಗದು ಎಂದು ಕವಿ ವರ್ಣಿಸಿದ್ದಾರೆ.

**ಸ್ವಾರಸ್ಯ:–** ಕವಿಯ ಪ್ರಕೃತಿ ತನ್ಮಯತೆಯನ್ನು ಮತ್ತು ಮಲೆನಾಡಿನ ಪ್ರಕೃತಿ ಹಸುರುಗಳೊಂದಿಗೆ ಹೊಂದಿದ್ದ ಸ್ವಾರಸ್ಯವಾಗಿ ಹೇಳಲಾಗಿದೆ.

**3. "ಹಸುರು ಹಸುರಿಳೆಯುಸಿರೂ"**

**ಉ :** **ಆಯ್ಕೆ:–** ಈ ವಾಕ್ಯವನ್ನು ಕುವೆಂಪುರವರು ಬರೆದಿರುವ **"ಪಕ್ಷಿಕಾಶಿ"** ಕವನ ಸಂಕಲನದಿಂದ ಆಯ್ದ 'ಹಸುರು' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಕವಿಗೆ ಹಸುರು ಹೂವಿನ ಕಂಪಿನ ಹಸುರಾಗಿ ಗಾಳಿ0ಯ ತಂಪಿನ ಹಸುರಾಗಿ ಹಕ್ಕಿ0ಯ ಕೊರಳಿಲಿಂಪಿನ ಹಸುರಾಗಿ ಇಳೆ0ಯ ಉಸಿರಿನ ಹಸಿರಾಗಿ ಸಕಲೇಂದ್ರಿ0ಯಗಳನ್ನು ವ್ಯಾಪಿಸಿದೆ ಎಂದು ವರ್ಣಿಸುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :–** ಎಲ್ಲಿ ನೋಡಿದರೂ ಹಸಿರೇ ಕಾಣುವ ಬಗೆ0ಯನ್ನು ಹಸಿರಿನಿಂದ ಕವಿ ಪ್ರೇರಿತರಾಗಿರುವ ಬಗೆ0ಯನ್ನು ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

**4. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್?**

**ಉ:** **ಆಯ್ಕೆ:–** ಈ ವಾಕ್ಯವನ್ನು ಕುವೆಂಪುರವರು ಬರೆದಿರುವ **"ಪಕ್ಷಿಕಾಶಿ"** ಕವನ ಸಂಕಲನದಿಂದ ಆಯ್ದ 'ಹಸುರು' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ:** ಹಸುರು ಪದವು ಮತ್ತೆ ಮತ್ತೆ ಕವನದಲ್ಲಿ ಪುನರಾವರ್ತಿವಾಗಿ ಜಪಿಸಲ್ಪಟ್ಟು ಹಸುರಿನ ವಾತಾವರಣವನ್ನು ನಿರ್ಮಿಸಲಾಗಿದೆ. ಎತ್ತೆತ್ತಲೂ ಹಸುರನ್ನೇ ಕಾಣುತ್ತೇವೆ. ಆ ಕಡೆ ನೋಡಿದರೂ ಹಸುರು, ಕಡಲೂ ಹಸುರಾಗಿದೆ, ಕವಿಯ ಆತ್ಮವೂ ಹಸುರುಗಟ್ಟಿ ಬಿಟ್ಟಿದೆ. ಒಡಲೊಳಗಿನ ರಕ್ತವೂ ಹಸುರಾಗಿದೆ ಎಂದು ಪ್ರಕೃತಿ ಸೌಂದ0ರ್ಯವನ್ನು ವರ್ಣಿಸಿದ್ದಾರೆ.

**ಸ್ವಾರಸ್ಯ :** ಭೂಮಿಯ ಎತ್ತೆತ್ತ ನೋಡಿದರೂ ಹಸುರು. ಇದನ್ನು ನೋಡಿದ ಕವಿಯ ನೆತ್ತರು, ಅತ್ಮವೂ ಹಸುರುಗಟ್ಟಿ, ಪ್ರಕೃತಿ ಮತ್ತು ಕವಿಯ ಆತ್ಮದ ಬಗ್ಗೆ ಸ್ವಾರಸ್ಯ ಪೂರ್ಣವಾಗಿ ಬಣ್ಣಿಸಲಾಗಿದೆ.

**ಈ) ಈ ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

**1. 'ಹಸುರು' ಕವನದ ರೀತಿ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.**

**ಉ:–** ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರಿನಿಂದ ಕವಿಗೆ ಆಗಸವು ಹಾಗೂ ಆಗಸದಲ್ಲಿನ ಮುಗಿಲ ಬಣ್ಣವು ಹಸುರಾಗಿ ಕಾಣುತ್ತದೆ. ಗದ್ದೆಯ ಬಯಲಿನಲ್ಲಿ ಸೊಂಪಾಗಿ ಬೆಳೆದ ಭತ್ತದ ಪೈರುಗಳು ಹಸುರಾಗಿ ಕಾಣುತ್ತದೆ. ಬೆಟ್ಟದಲ್ಲಿ ಕಣಿವೆಯಲ್ಲಿ ದಟ್ಟವಾಗಿ ಬೆಳೆದ ಗಿಡ ಮರಗಳು ಹಸುರಾಗಿ

ಕಾಣುತ್ತದೆ. ಪ್ರಕೃತಿಯೇ ಹಚ್ಚ ಹಸುರಿನಿಂದ ಕೂಡಿರುವುದರಿಂದ ಸಂಜೆಯ ಬಿಸಿಲೂ ಸಹ ಕವಿಗೆ ಹಸುರಾಗಿ ಕಾಣುತ್ತದೆ. ಪ್ರಕೃತಿಯಲ್ಲಿ ಅರಳಿದ ಹೊಸ ಹೂವಿನ ಕಂಪನ ಹಸುರಿನ ಭಾವದಿಂದ ಮೂಗು ಆಘ್ರಾಣಿಸುತ್ತದೆ, ಎಲೆಗಳ ತಂಪು ಮೈಗೆ ಹಸುರು ಸ್ಪರ್ಶದ ಆನಂದವನ್ನು ನೀಡುತ್ತದೆ. ಮರಗಿಡಗಳ ಪೊದರಿನಿಂದ ಬರುವ ಹಕ್ಕಿಯ ಕೊರಲಿನ ಇಂಪು ಕಿವಿಗೆ ಹಸುರಿನ ಆನಂದವನ್ನು ನೀಡುತ್ತದೆ. ಹಸುರು ಇಳೆಯ ಉಸಿರಾಗಿದೆ. ಹೀಗೆ ಹಸುರಿನ ಶಾಂತತೆಯ ಭಾವ ಆನಂದದಿಂದ ಅನುಭವವನ್ನು ನೀಡಿ ಹಸುರು ಎಲ್ಲೆಲ್ಲೂ ವ್ಯಾಪಿಸಿದೆ.

**2. ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ**

ಉ:– ಹಸುರು ಸಕಲ ಜೀವಿಗಳ ಉಸಿರು ಇದ್ದಂತೆ ಹಸುರು ಪ್ರಕೃತಿಯ ಸಂಭ್ರಮವನ್ನು ತೋರಿಸುತ್ತಿದೆ. ಹಸುರು ಸಮೃದ್ಧಿಯ ಸಂಕೇತ. ಭೂಮಿ  ಹಸುರಿನಿಂದ ಕಂಗೊಳಿಸುತ್ತಿದೆ. ಎಂದರೆ ಭೂಮಿ ಸಮೃದ್ಧವಾಗಿದೆ ಎಂದೆ ಅರ್ಥ. ಕುವೆಂಪು ರವರು ಪ್ರಕೃತಿಯನ್ನು 'ನೋಡಿದ ಭಾವ ಹಸುರುಮಯವಾಗಿದೆ. ಪ್ರಕೃತಿಯ ಚರಾಚರ ವಸ್ತುಗಳು ಕೂಡ ಕವಿಯ ಆತ್ಮವನ್ನು ಹಸುರುಮಯವಾಗಿಸಿ ಇಡೀ ಪ್ರಕೃತಿಯ ಜೊತೆಗೆ ತಮ್ಮ ಆತ್ಮವನ್ನು ಹಸುರಾಗಿಸಿಕೊಂಡು ರಸಪಾಕದಲ್ಲಿ ಮಿಂದಿದ್ದಾರೆ. ಇದು ಪ್ರಕೃತಿಯೊಂದಿಗಿನ ಅದ್ವೈತ ಸ್ಥಿತಿಯನ್ನು ಎತ್ತಿ ತೋರಿಸಿದೆ, ಹಸುರಿನಿಂದ ಕೂಡಿದ ಮರಗಿಡ ಪೈರುಗಳು ಪ್ರಾಣಿ, ಪಕ್ಷಿ ಮಾನವ ಮೊದಲಾದ ಜೀವಜಗತ್ತಿಗೆ ಆಹಾರ–ಆನಂದವನ್ನು ಉಂಟು ಮಾಡುತ್ತದೆ. ಹಸುರಾದ ಬೆಟ್ಟ, ಕಣಿವೆ, ತೋಟಗಳು ಭತ್ತದ ಗದ್ದೆಗಳು ಆಗಸ ಎಲ್ಲರ ಕಣ್ಣಿಗೆ, ಮನಸ್ಸಿಗೆ ಆಹ್ಲಾದವನ್ನು ತರುವುದರ ಜೊತೆಗೆ ಜೀವವನ್ನು ತುಂಬುತ್ತದೆ. ಆದ್ದರಿಂದ ಹಸುರು ಇಳೆಯ ಉಸಿರಾಗಿದೆ ಜೀವಿಗಳ ಉಸಿರು ಇರಬೇಕಾದರೆ ಹಸುರು ಕಾಪಾಡುವುದು ಬಹಳ ಮುಖ್ಯ ಆದ್ದರಿಂದ ಭೂಮಿಯ ಮೇಲಿನ ಹಸುರನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಹಸಿರೇ ಉಸಿರು ಆ ಹಸಿರನ್ನು ನಿತ್ಯ ಹಸಿರಾಗಿಸುವುದೇ ಬದುಕಿನ ಗುರಿ ಯಾಗಿಸಿಕೊಂಡು ಪರಿಸರದೊಂದಿಗೆ ಜೀವಿಸಬೇಕು.

**ಉ) ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ**

ಹಸುರಾಗಸ : ಹಸುರು ಮುಗಿಲು
ಹಸುರು ಗದ್ದೆಯಾ ಬಯಲು
ಹಸುರಿನ ಮೇಲೆ : ಹಸಿರು ಕಣಿವೆ
ಹಸಿರು ಸಂಜೆಯೇ ಬಿಸಿಲೂ।

ಹೊಸ ಹೂವಿನ ಕಂಪು ಹಸುರು
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು
ಹಸುರು ಹಸುರಿಳೆಯುಸಿರೂ!

# ಬಹು ಆಯ್ಕೆಯ ಪ್ರಶ್ನೆಗಳು

1. 'ಶಾಲೀವನ' ಪದದ ಅರ್ಥ.
   ಅ) ಬೆಟ್ಟದ ಹಸಿರು ಆ) ಭತ್ತದ ಗದ್ದೆ ಇ) ಆಗಸ ನೀಲಿ ಈ)ಹೂವಿನ ಕಂಪು
   **ಉ:– ಆ) ಭತ್ತದ ಗದ್ದೆ**
2. 'ನವರಾತ್ರಿ' ಪದವು ಈ ಸಮಾಸಕ್ಕೆ ಸೇರಿದೆ.
   ಅ) ಅಂಶಿ ಆ) ದ್ವಂದ್ವ ಇ) ಕ್ರಿಯಾ ಈ) ದ್ವಿಗು
   **ಉ:– ದ್ವಿಗು ಸಮಾಸ**
3. 'ಹಸುರಾಗಸ' ಪದವು ಈ ಸಂಧಿಗೆ ಉದಾಹರಣೆ.
   ಅ) ಲೋಪಸಂಧಿ ಆ) ಆಗಮಸಂಧಿ ಇ) ಆದೇಶಸಂಧಿ ಈ) ಸವರ್ಣದೀರ್ಘಸಂಧಿ
   **ಉ:–ಅ) ಲೋಪಸಂಧಿ**
4. 'ದನಿ' ಪದದ ತತ್ಸಮ ರೂಪ.
   ಅ) ದಾನಿ ಆ) ದ್ವಾನಿ ಇ) ಧ್ವನಿ ಈ) ಧನಿ
   **ಉ:–ಇ) ಧ್ವನಿ**
5. 'ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ ಇಲ್ಲಿನ ಅಲಂಕಾರ.
   ಅ) ರೂಪಕ ಆ) ಉಪಮಾ ಇ) ದೃಷ್ಟಾಂತ ಈ) ಶ್ಲೇಷಾ
   **ಉ:– ಆ) ಉಪಮಾಲಂಕಾರ**
6. 'ಕವಿಯಾತ್ಮ' ಸೌಂದರ್ಯಾನುಭವ ಪದಗಳು ಈ ಸಂಧಿ
   ಅ) ಯಣ್‌ಸಂಧಿ ಆ) ವಿಧಿ ಇ) ಸವರ್ಣ ದೀರ್ಘಸಂಧಿ ಈ) ಗುಣಸಂಧಿ
   **ಉ:– ಆ) ಸವರ್ಣದೀರ್ಘಸಂಧಿ**
7. 'ಹಚ್ಚಹಸಿರು' ಈ ಪದದ ವ್ಯಾಕರಣ ವಿಶೇಷ.
   ಅ) ದ್ವಿರುಕ್ತಿ ಆ) ಜೋಡಿಪದ ಇ) ನುಡಿಗಟ್ಟು ಈ) ಸರ್ವನಾಮ
   **ಉ:– ಅ) ದ್ವಿರುಕ್ತಿ**
8. ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಶಬ್ದಾರ್ಥ ವೈಚಿತ್ರ್ಯವೇ.
   ಅ) ಛಂದಸ್ಸು ಆ) ಜೋಡಿಪದ ಇ) ನುಡಿಗಟ್ಟು ಈ) ಸರ್ವನಾಮ
   **ಉ:– ಅಲಂಕಾರ**
9. ಇದರಲ್ಲಿ ಅರ್ಥಾಲಂಕಾರಕ್ಕೆ ಸೇರಿದುದು.
   ಅ) ಅನುಪ್ರಾಸ ಆ) ರೂಪಕ ಇ) ಯಮಕ ಈ) ಚಿತ್ರಕವಿತ್ವ
   **ಉ:– ಆ) ರೂಪಕ**
10. ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅದನ್ನು
    ಅ) ಯಮಕ ಆ) ಛೇಕಾನುಪ್ರಾಸ ಇ) ವೃತ್ಯಾನುಪ್ರಾಸ ಈ) ಚಿತ್ರಕವಿತ್ವ.
    **ಉ : ಆ) ಛೇಕಾನುಪ್ರಾಸ**
11. ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನ ನರಿಯದೆ ಪೇಳು ವಿಶ್ವಾಮಿತ್ರ ಇಲ್ಲಿರುವ ಅಲಂಕಾರ.
    ಅ) ರೂಪಕ ಆ) ಉಪಮಾ ಇ) ಶ್ಲೇಷಾ ಈ) ದೃಷ್ಟಾಂತ
    **ಉ:– ರೂಪಾಲಂಕಾರ**
12. ಇವುಗಳಲ್ಲಿ ಸರ್ವನಾಮ ಪದವಿಯ
    ಅ) ಏಕಾಕ್ಷ ಆ) ಕೂಡಲ ಸಂಗಮ ಇ) ಬಸವಣ್ಣ ಈ) ನಾನು
    **ಉ:–ಈ) ನಾನು**

13. 'ಕತೆಯಲ್ಲಿ' ಇಲ್ಲಿರುವ ವಿಭಕ್ತಿ

ಅ) ಪ್ರಥಮ ಆ) ತೃತೀಯ ಇ) ಸಪ್ತಮೀ ಈ) ಷಷ್ಠೀ

**ಉ:– ಇ) ಸಪ್ತಮೀ**

14. ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆ ಸಂಬಂಧವನ್ನು ಸೂಚಿಸುವ ಪದ

ಅ) ಉಪಮವಾಚಕ ಆ) ಉಪಮೇಯ ಇ) ಉಪಮಾನ ಈ) ಸಮಾನಧರ್ಮ

**ಉ : ಅ) ಉಪಮಾವಾಚಕ**

15. ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ

ಅ) ಉತ್ರೇಕ್ಷೆ ಆ) ಶ್ಲೇಷಾ ಇ) ಉಪಮಾ ಈ) ರೂಪಕ

**ಉ:– ಇ) ಉಪಮಾಲಂಕಾರ**

16. 'ಜಮಖಾನೆ' ಪದವು ಈ ಭಾಷೆಯಿಂದ ಬಂದಿದೆ.

ಅ) ಉರ್ದು ಆ) ಅರೇಬಿಕ್ ಇ) ಪಾರ್ಸಿ ಈ) ಹಿಂದೂಸ್ಥಾನಿ

**ಉ:** ಹಿಂದೂಸ್ಥಾನಿ

17. ತತ್ಪುರುಷ ಸಮಾಸಕ್ಕೆ ಉದಾಹರಣೆ ಪದ?

ಅ) ನವರಾತ್ರಿ ಆ) ಹಸುರಾಗಸ ಇ) ಕವಿಯಾತ್ಮ ಈ) ವನಧಿ

**ಉ: ಇ) ಕವಿ0ಯಾತ್ಮ**

18. 'ಎಲರ್' ಪದದ ಅರ್ಥ

ಅ) ಭೂಮಿ ಆ) ಗಾಳಿ ಇ) ನೀರು ಈ) ಬೆಂಕಿ

**ಉ:– ಆ) ಗಾಳಿ**

19. ಪದ್ಯರಚನಾ ನಿಯಮವನ್ನು ಹೀಗೆನ್ನುವರು

ಅ) ಅಲಂಕಾರ ಆ) ವ್ಯಾಕರಣಾಂಶ ಇ) ಛಂಧಸ್ಸು ಈ) ಪ್ರಾಸ

**ಉ:– ಇ) ಛಂದಸ್ಸು**

20. ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪ ಬಾರದಂತೆ ನಿಲ್ಲಿಸುವ ಸ್ಥಳವೇ

ಅ) ಗಣ ಆ) ಮಾತ್ರೆ ಇ) ಸಿಂಹಪ್ರಾಸ ಈ) ಯತಿ

**ಉ:– ಈ) ಯತಿ**

21. ಮಾತ್ರೆಗಳ ಲೆಕ್ಕಚಾರದೊಂದಿಗೆ ವಿಭಾಗಿಸಲ್ಪಡುವ ಗಣವೇ

ಅ) ಅಕ್ಷರಗಣ ಆ) ಅಂಶಗಣ ಇ) ಮಾತ್ರಾಗಣ ಈ) ಅಚಿಶ

**ಉ:–** ಇ) ಮಾತ್ರಾಗಣ

22. ವ್ಯಂಜನಾಕ್ಷರದಿಂದ ಕೂಡಿದ ಅಕ್ಷರಗಳಿಗೆ.

ಅ) ಲಘು ಆ)ಗುರು ಇ) ಗಣವಿಭಾಗ ಈ) ಪ್ಲುತ

**ಉ:– ಆ) ಗುರು**

23. ಆರು ಸಾಲುಗಳುಳ್ಳ ಪದ್ಯ ಪ್ರಕಾರವೇ

ಅ) ಕಂದ ಆ) ಸಾನೆಟ್ ಇ) ವೃತ್ತಗಳು ಈ) ಷಟ್ಪದಿ

**ಉ:– ಷಟ್ಪದಿ**

24. ಷಟ್ಪದಿಯಲ್ಲಿರುವ ವಿಧಗಳು.

ಅ) ಆರು ಆ) ನಾಲ್ಕು ಇ) ಮೂರು ಈ) ಹದಿನಾಲ್ಕು

**ಉ:– ಅ) ಆರು**

25. 'ವನಧಿ' ಎಂದರೆ

ಅ) ಕಾಡು ಆ) ಕಪ್ಪೂನಾಡು ಇ) ಸಮುದ್ರ ಈ) ಬೆಟ್ಟಗಳು

**ಉ:– ಇ) ಸಮುದ್ರ (ಹಸುರಿನ ಸಮುದ್ರ)**

# ಘಟಕ ಪರೀಕ್ಷೆ – 1

**ಅಂಕಗಳು : 20**

**ಅ) ಬಹು ಆಯ್ಕೆಯ ಪ್ರಶ್ನೆಗಳು.** **1x3=3**

1. 'ಶಾಲೀವನ' ಪದವು ಈ ಸಮಾಸಕ್ಕೆ ಸೇರಿದೆ.
   ಅ) ತತ್ಪುರುಷ ಆ)ಕರ್ಮಧಾರೆಯ ಇ)ಅಂಶಿ ಈ)ದ್ವಂದ್ವ
2. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರದಂತೆ :– ಇಲ್ಲಿರುವ ಅಲಂಕಾರ
   ಅ)ರೂಪಕ ಆ) ಉಪಾಮ ಇ) ದೃಷ್ಟಾಂತ ಈ) ಉತ್ರೇಕ್ಷೆ
3. 'ಹಸುರಾಗಸ' ಪದದಲ್ಲಿ ಆಗಿರುವ ಸಂಧಿ
   ಅ) ಪ್ರಕೃತಿಭಾವ ಆ) ಆದೇಶ ಇ) ಆಗಮ ಈ) ಲೋಪ

**ಆ.) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

**1x3=3**

1. ನವರಾತ್ರಿಯ : ಷಷ್ಠೀ ವಿಭಕ್ತಿ :: ವನದಿಯಲ್ಲಿ :............
2. ಬಣ್ಣ : ವರ್ಣ :: ಆಗಸ :.........................
3. ಇಳೆ : ಭೂಮಿ :: ಎಲರ್ :.................................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x3=3**

1. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
2. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
3. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?

**ಈ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ.** **2x4=8**

1. ಕುವೆಂಪು ಅವರ ಪರಿಚಯ ಮಾಡಿಕೊಡಿ?
2. ಕವಿಗೆ ಯಾವ ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
3. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
4. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನಲೆಯ ಅಂಶಗಳೇನು?

**ಉ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **1x3=3**

5. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್, ಈ ಹೇಳಿಕೆಯ ಸಂದರ್ಭ ತಿಳಿಸಿ ಸ್ವಾರಸ್ಯ ಬರೆಯಿರಿ.

# ಘಟಕ ಪರೀಕ್ಷೆ – 2

**ಅಂಕಗಳು : 20**

**ಅ) ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x4=4**

1. ಕವಿಯಾತ್ಮ ಎಲ್ಲಿ ಎಲ್ಲಿ ಹಸುರಾಗಿದೆ?
2. ಕವಿಯು ನೋಡಿದ ಅಡಿಕೆಯ ತೋಟ ಎಲ್ಲಿದೆ?
3. ಕುವೆಂಪು ರವರು ರಚಿಸಿದ ಮಹಾಕಾವ್ಯ ಯಾವುದು?
4. ಹಸುರು ಪದ್ಯದ ಆಕಾರ ಗ್ರಂಥವನ್ನು ತಿಳಿಸಿ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x3=6**

1. ಕವಿಗೆ ಯಾವ ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನಲೆಯ ಅಂಶಗಳೇನು?

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **3x42=6**

1. " ಹಸುರಾದುದು ಕವಿಯಾತ್ಮ"
2. ಹಸುರು ಹಸುರಿಳೆಯುಸಿರೂ"

**ಈ) ಈ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.** **1x4=4**

1. ಹಸುರು ಕವನದ ರೀತಿಯು ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ

**ಅಥವಾ**

2. ಪ್ರಕೃತಿಯ ಹಸುರು ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ಬರೆಯಿರಿ

*********

# ಗದ್ಯಪಾಠ –06
# ವ್ಯಾಘ್ರಗೀತೆ

**ಲೇಖಕರು – ಎ.ಎನ್.ಮೂರ್ತಿರಾಯರು**
**ಆಕರ ಗ್ರಂಥ – ಸಮಗ್ರ ಲಲಿತ ಪ್ರಬಂಧಗಳು**

**ಲೇಖಕರ ಪರಿಚಯ :**

ಎ.ಎನ್.ಮೂರ್ತಿರಾವ್ ಇವರು 1900 ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು ಎಂಬ ಊರಿನಲ್ಲಿ ಜನಿಸಿದರು. ಇವರು ಹಗಲುಗನಸುಗಳು, ಅಲೆಯುವ ಮನ ಅಪರವಯಸ್ಕನ ಅಮೇರಿಕಾ ಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ ಚಂಡ ಮಾರುತ ಮೊದಲಾದ ಪ್ರಮುಖ ಕೃತಿಗಳನ್ನು ಬರೆದಿದ್ದಾರೆ ಇವರಿಗೆ 'ಚಿತ್ರಗಳು–ಪತ್ರಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್ ಪದವಿಯನ್ನು ನೀಡಿದೆ. ಪ್ರಸ್ತುತ ಗದ್ಯಪಾಠವನ್ನು ಎ.ಎಸ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ**

**1. ಭಗವದ್ಗೀತೆಯನ್ನು ರಚಿಸಿದವರು ಯಾರು?**

ಉ: ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.

**2. ಹುಲಿಗೆ ಪರಮಾನಂದವಾಗಲು ಕಾರಣವೇನು?**

ಉ: ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

**3. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**

ಉ: ಹುಲಿಗೆ ತಮ್ಮ ಮುಖದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರ ತಲೆ ಸುತ್ತಲಾರಂಭಿಸಿತು.

**4. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?**

ಉ: ಶಾನುಭೋಗರ ಬ್ರಹ್ಮಾಸ್ತ್ರ 'ಖಿರ್ದಿ ಪುಸ್ತಕ'.

**5. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**

ಉ: ಹಸಿದು ಮಲಗಿದ್ದ ಹುಲಿಯು ವಿಧಿ0ಯು ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

**ಐ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ**

**1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**

ಉ: ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಚಿಕ್ಕನಾಯಕನ ಹಳ್ಳಿಯಲ್ಲಿರುವ ಖಜಾನೆಗೆ ಕಟ್ಟಿ ಅಲ್ಲಿದ್ದ ಸ್ನೇಹಿತರನ್ನು ನೋಡಿಕೊಂಡು ಶಾನುಭೋಗರು ವಾಪಸ್ಸು ಹೊರಡಬೇಕೆನ್ನುವಷ್ಟರಲ್ಲಿ ಸಂಜೆ 6 ಗಂಟೆಯಾಗಿತ್ತು. ಅವರು ಮರಳಿ ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು, ಕಾಡು ದಾರಿ ಆದರೂ ಬೆಳದಿಂಗಳ ದಿನ ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಶಾನುಭೋಗರು ಯೋಚಿಸಿದರು.

**2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?**

ಉ: ಭರತಖಂಡದ ಹುಲಿಗಳು ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಯಾವ ನಾಡಿನಲ್ಲಿ ಶ್ರೀರಾಮನಂತಹ ದೊರೆಗಳು ಆಳಿದರೋ ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ

ಗ್ರಂಥ ಉದ್ಭವಿಸಿತೋ ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದು ಕೊಳ್ಳವುದಿಲ್ಲ. ಯಾರನ್ನೆ ಆಗಲಿ ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವೆಂದು ಹುಲಿಯ ಅಭಿಪ್ರಾಯ.

**3. ಶಾನು ಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

ಉ: ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು ಶಾನಭೋಗರು ಬಿದ್ದ ಸ್ಥಳಕ್ಕೆ ಸ್ವಲ್ಪ ದೂರ ಇದ್ದಾಗ ಎತ್ತುಗಳು ಮುಂದೆ ಹೋಗದೆ ಅಲ್ಲೆ ನಿಂತು ಬಿಟ್ಟವು. ಅಷ್ಟರಲ್ಲಿ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಧ್ವನಿ ಕೇಳಿ ಹುಲಿ ಕೆಲವು ನಿಮಿಷ ತಡೆಯಿತು. ಆದರೆ ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗರ್ಜನೆ ನಿಂತು ಸ್ವಲ್ಪ ಹೊತ್ತು ಕಳೆದ ಮೇಲೆ ರೈತರು ತಮ್ಮ ಬಳಿಯಿದ್ದ ಕೋವಿಯಿಂದ ಗುಂಡು ಹಾರಿಸಿ ಕೈಲಾದಷ್ಟು ಗಲಭೆ ಮಾಡುತ್ತ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಮುಂದೆ ಬಂದು ನೋಡಿದಾಗ ಶಾನುಭೋಗರು ಮೂರ್ಛೆಯಲ್ಲಿ ಬಿದ್ದಿದ್ದರು ರೈತರು ಅವರ ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

**ಒ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

**1. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"**

ಉ: **ಆಯ್ಕೆ :** ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಶಾನುಭೋಗರನ್ನು ಬೇಟೆಯಾಡಬೇಕೆಂದು ಹುಲಿ ಅವರನ್ನು ಹಿಂಬಾಲಿಸಿತು, ಆದರೆ ಹುಲಿಯ ಧರ್ಮಶ್ರದ್ಧೆಯ ಪ್ರಕಾರ ಅದು ಹಿಂದಿನಿಂದ ದಾಳಿ ಮಾಡುವ ಹಾಗಿರಲಿಲ್ಲ. ಇದನ್ನು ಅರಿತಿದ್ಧ ಶಾನುಭೋಗರು ಆದಷ್ಟು ಅದಕ್ಕೆ ಬೆನ್ನು ಹಾಕಿ ನಡೆಯುತ್ತ ಅದರ ದಾಳಿಯಿಂದ ತಪ್ಪಿಸಿ ಕೊಳ್ಳುತ್ತಿದ್ದರು, ಮೇಲೆ ಬಿದ್ದೆ ಬಿಡಲೆ ಎಂದು ಯೋಚಿಸಿದ ಹುಲಿಗೆ ತಾನು ಸದ್ವಂಶದಲ್ಲಿ ಜನಿಸಿದವನು ಎಂಬುದು ನೆನಪಾಯಿತು. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ" ಎಂದು ಎದುರಿಗೇ ತನ್ನ ಪ್ರಾಣವನ್ನೆ ತೊರೆದ ತನ್ನ ಅಜ್ಜನನ್ನು ಹುಲಿಯು ನೆನಪಿಸಿಕೊಂಡಿತು.

**ಸ್ವಾರಸ್ಯ :** ಪುಣ್ಯಕೋಟಿ ಕಥೆಯಲ್ಲಿನ ಆದರ್ಶ ತನಗೂ ಮಾದರಿಯಾದದ್ದು ಎಂಬ ಹುಲಿಯ ಚಿಂತನೆ, ಅದರ ಆದರ್ಶ ಸ್ವಾರಸ್ಯಪೂರ್ಣವಾಗಿದೆ.

**2. "ಸ್ವಧರ್ಮೇ ನಿಧನಂ ಶ್ರೇಯ"**

ಉ: **ಆಯ್ಕೆ :** ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂಧರ್ಭ:** ಶಾನುಭೋಗರ ಮೇಲೆ ಹಿಂದಿನಿಂದ ಮೇಲೆ ಬಿದ್ದಾದರೂ ಅವರನ್ನು ಕೊಲ್ಲಬೇಕೆಂದು ಹುಲಿಯು ಒಂದು ಕ್ಷಣ ಆಲೋಚಿಸಿತು. ಆ ಸಂದರ್ಭದಲ್ಲಿ ಅದಕ್ಕೆ ಪುಣ್ಯಕೋಟಿಯ ಸತ್ಯತೆಯನ್ನು ಮೆಚ್ಚಿ ತನ್ನ ಪ್ರಾಣವನ್ನು ಬಿಟ್ಟ ತನ್ನ ವಂಶದ ಹಿರಿಯ ಹುಲಿಯ ನೆನಪಾಯಿತು. ಅಂತಹ ಹುಲಿಯ ಮೊಮ್ಮಗನಾಗಿ ಹುಟ್ಟಿ ತಾನು ಅಧರ್ಮಕ್ಕೆ ಕೈ ಹಾಕುವುದೆ? ಎಂದು ಆಲೋಚಿಸಿದ ಹುಲಿಗೆ ಭಗದ್ಗೀತೆಯಲ್ಲಿ ಬಂದಿರುವ "ಸ್ವಧರ್ಮೇ ನಿಧನಂಶ್ರೇಯ" ಎಂಬ ವಾಕ್ಯ ನೆನಪಾಯಿತೆಂದು ಲೇಖಕರು ಹೇಳಿದ್ದಾರೆ.

**3. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"**

ಉ: **ಆಯ್ಕೆ :** ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಶಾನುಭೋಗರು ಹುಲಿಗೆ ಬೆನ್ನು ಹಾಕಿ ಅದರ ಆಕ್ರಮಣವನ್ನು ತಪ್ಪಿಸಿಕೊಳ್ಳಲು ಸಾಕಷ್ಟು ಪ್ರಯತ್ನಿಸಿ ನಡೆದು ನಡೆದು ಸುಸ್ತಾದರು ಕೊನೆಗೆ ಅವರಿಗೆ ನೆನೆಪಾಗುವುದು ಅವರ ಬಳಿಯಲ್ಲಿದ್ದ ಖಿರ್ದಿ ಪುಸ್ತಕ. ಅದನ್ನು ಪ್ರಯೋಗಿಸಿ ಅದರಿಂದ ಹುಲಿಯ ಗಮನ ಸ್ವಲ್ಪವಾದರೂ ಚಲಿಸಿದರೆ ಅಷ್ಟರಲ್ಲಿ ಸಮೀಪದ ಮರಕ್ಕೆ ಹಾರಿ ಮೇಲಕ್ಕೇರ ಬಹುದು ಎಂದು ಯೋಚಿಸಿ ಪುಸ್ತಕವನ್ನು ಹುಲಿಯ ಮುಖಕ್ಕೆ ಬೀಸಿದರು.

ಬಳಲಿಕೆಯಿಂದ ಜಡವಾಗಿದ್ದ ಮನಸ್ಥಿತಿಯಲ್ಲಿದ್ದ ಹುಲಿಗೆ ಏನಾಯಿತೆಂದು ಅರಿಯಲು ಅರೆ ನಿಮಿಷ ಬೇಕಾಯಿತು. ಆಗ ಶಾನುಭೋಗರು ಈ ಮೇಲಿನ ಮಾತಿನಂತೆ ಯೋಚಿಸುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆ ದಾವಿಸಿದರು.

**ಸ್ವಾರಸ್ಯ :** ಶಾನುಭೋಗರು ಹುಲಿಯಿಂದ ತಪ್ಪಿಸಿಕೊಂಡು ಜೀವ ಉಳಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿದೆ.

**4. "ನಾನು ಮುಖ ಮೇಲಾಗಿ ಬಿದ್ದಿದ್ದೇನೆ?"**

**ಉ:** **ಆಯ್ಕೆ :** ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂಧರ್ಭ :** ಹುಲಿಯಿಂದ ತಪ್ಪಿಸಿಕೊಳ್ಳಬೇಕೆಂದು ಶಾನುಭೋಗರು ತಮ್ಮ ಬಳಿಯಿದ್ದ ಖಿರ್ದಿ ಪುಸ್ತಕವನ್ನು ಅದರ ಮುಖಕ್ಕೆ ಬೀಸಿದರು. ಅದು ಗಾಬರಿಯಾಗಿದ್ದ ಸಂದರ್ಭ ಬಳಸಿ ಓಡಿ ಹೋಗುತ್ತಿದ್ದಾಗ ಕಲ್ಲು ಎಡವಿ ಬಿದ್ದು ಮೂರ್ಛೆ ಹೋದರು. ಅಷ್ಟರಲ್ಲಿ ಅಲ್ಲಿಗೆ ರೈತರು ಬಂದಿದ್ದರಿಂದ ಹುಲಿ ಅಲ್ಲಿಂದ ಪಲಾಯನ ಮಾಡಿತು. ಆದರೂ ಶಾನುಭೋಗರ ಮನಸ್ಸಿನಲ್ಲಿ ಸಂಶಯವೊಂದು ಕಾಡುತ್ತಿತ್ತು. ನಿಸ್ಸಹಾಯಕರಾಗಿ ಪ್ರಜ್ಞೆಯಿಲ್ಲದೆ ಬಿದ್ದಾಗಲೂ ಹುಲಿ ಏಕೆ ಎಳೆದೊಯ್ಯಲಿಲ್ಲ ಎಂದು ಯೋಚಿಸಿದ ಅವರು ಗಾಡಿಯವರನ್ನು "ನಾನು ಮುಖ ಮೇಲಾಗಿ ಬಿದ್ದಿದ್ದೇನೆ" ಎಂದು ಕೇಳಿದರು. ಶಾನುಭೋಗರು ಬೆನ್ನು ಮೇಲಾಗಿ ಬಿದ್ದುದ್ದರಿಂದ ಹುಲಿಯು ತನ್ನ ಕುಲಧರ್ಮ ಪಾಲಿಸಿದ್ದರಿಂದ ಹುಲಿಯಿಂದ ಶಾನುಭೋಗರು ಪಾರಾಗಿದ್ದರು"

**ಸ್ವಾರಸ್ಯ :** ಹುಲಿಯು ಅವಕಾಶ ಸಿಕ್ಕಿದ್ದರೂ ತನ್ನನು ಏಕೆ ತಿನ್ನಲಿಲ್ಲ ಎಂದು ಯೋಚಿಸಿದ ಶಾನುಭೋಗರು ಹುಲಿಯು ತನ್ನ ಕುಲಧರ್ಮವನ್ನು ಪಾಲಿಸಿಕೊಂಡೇ ಬಂದಿದೆ ಎಂಬುದು ಸ್ವಾರಸ್ಯ ಪೂರ್ಣವಾಗಿದೆ.

**5. "ಹುಲಿ ಈಗ ಎಷ್ಟು ಹಸಿದಿರಬೇಕು"**

**ಉ:** **ಆಯ್ಕೆ :** ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಬೇಟೆಯಾಡುವ ಉದ್ದೇಶದಿಂದ ತಮ್ಮನ್ನು ಹಿಂಬಾಲಿಸಿದ ಹುಲಿಯಿಂದ ತಪ್ಪಿಸಿಕೊಂಡ ಶಾನುಭೋಗರು ಕುಡಿದ ನೀರು ಅಲುಗದ ಹಾಗೆ ಅಲ್ಲದಿದ್ದರೆ ಜೀವ ಸಹಿತ ಮನೆ ಸೇರಿಕೊಂಡರು, ರಸದೂಟವನ್ನು ಮಾಡಿದರು. **ಸ್ವಾರಸ್ಯ:** ಆ ಸಂದರ್ಭದಲ್ಲಿ ಅವರು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ. ಆದರೆ ನನ್ನನ್ನು ಬಿಟ್ಟು ಆ ಹುಲಿ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ನೆನೆಯುವುದು ಸ್ವಾರಸ್ಯಪೂರ್ಣವಾಗಿದೆ

**ಒ) ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ**

**1. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗ್ಗೆಯನ್ನು ವಿವರಿಸಿ.**

ಉ: ಹುಲಿ ಕ್ರೂರಪ್ರಾಣಿ ಪ್ರಾಣಿಗಳನ್ನು ಕೊಂದು ತಿನ್ನುವುದೊಂದೆ ಅದರ ಗುಣ ಸ್ವಭಾವ ಆದರೆ ಹುಲಿ ಆಹಾರಕ್ಕಾಗಿ ಬೇಟೆಯಾಡಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಎಂದು ಆದರ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನು ಇಲ್ಲ. 0ಯಾಕೆಂದರೆ ಅವು ಮೂಲತಃ ಮಾಂಸಹಾರಿಗಳು ಶಾಖಾಹಾರವನ್ನು ತಿಂದು ಬದುಕಬಹುದುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಮಾಂಸಹಾರಿ0ಯಾದ ಹುಲಿಯಲ್ಲಿ ಅದೊಂದು ದೊಡ್ಡ ಅಪರಾದವೇನಲ್ಲ. ಅದು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದರಲ್ಲೇನೂ ತಪ್ಪಿಲ್ಲ ಆದರೆ ಹಾಗೆ ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಎಂಬುದೇ ಇಲ್ಲಿ ಮುಖ್ಯ. ಪ್ರಶ್ನೆ ಹುಲಿಗೆ ಧರ್ಮವೇನು ಬಂತು ಎನ್ನಬಹುದು ಇತರ ದೇಶಗಳಲ್ಲಿರುವ ಹುಲಿಗಳ ವಿಷಯ ಹೇಗೋ ನನಗೆ ತಿಳಿಯದು ಆದರೆ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿದ ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಯಾರನ್ನೆ ಆಗಲಿ ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿ0ಯೇ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ ಆದ್ದರಿಂದಲೇ ಹುಲಿ0ಯು ಶಾನುಭೋಗರನ್ನು ಹಿಂದಿನಿಂದ ಹಾರಿ ಕೊಲ್ಲಲಿಲ್ಲ ಎಂದು ಮೂರ್ತಿರಾಯರು ಹುಲಿ ಬೇಟೆಯಾಡುವ ಬಗ್ಗೆಯನ್ನು ವಿವರಿಸಿದ್ದಾರೆ.

**2. ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿ0ಯ ಧರ್ಮವೇ? ಸಮರ್ಥನೆ0ಯೊಂದಿಗೆ ವಿವರಿಸಿ?**

ಉ: ಶಾನುಭೋಗರಿಗೆ ಖಿರ್ದಿ ಪುಸ್ತಕ ಕೇವಲ ಜೀವನಾಧಾರವಲ್ಲ. ಅದು ಅವರ ರಾಜ ಭಕ್ತಿಯ ಲಾಂಛನ ಖಜಾನೆಗೆ ರೈತರ ಕಂದಾಯದ ಹಣವನ್ನು ಕಟ್ಟಿ ಶಾನುಭೋಗರು ತಮ್ಮ ಹಳ್ಳಿಗೆ ಮರುಳಿತ್ತಿದ್ದ ಸಮಯದಲ್ಲಿ ಕಾಡಿನಲ್ಲಿ ಅವರು ಬರುತ್ತಿದ್ದಾಗ ಹುಲಿಯೊಂದು ಅವರನ್ನು ಬೇಟೆಯಾಡಲು ಹೊಂಚು ಹಾಕಿತು. ಹುಲಿಗಳು ಹಿಂದಿನಿಂದ ಮೇಲೆ ಬೀಳುವುದಿಲ್ಲವೆಂದು ಅರಿತಿದ್ದ ಶಾನುಭೋಗರು ಉಪಾಯವಾಗಿ ಹುಲಿಗೆ ಬೆನ್ನು ತಿರುಗಿಸಿ ನಡೆದು ನಡೆದು ದಣಿದರು. ಈ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ನೆನಪಾಗಿದ್ದು ಅವರ ಬಳಿಯಿದ್ದ ಖಿರ್ದಿ ಪುಸ್ತಕ. ಅದು ಸದ್ಯಕ್ಕೆ ಅವರ ಬಳಿಯಿದ್ದ ಬ್ರಹ್ಮಾಸ್ತ್ರ. ಅದರಿಂದ ಹುಲಿಯ ಮುಖಕ್ಕೆ ಬಡಿದಾಗ ಏನಾಯಿತೆಂದು ಅರಿಯಲು ಅದಕ್ಕೆ ಅರೆ ನಿಮಿಷ ಹಿಡಿಯಿತು ಅದನ್ನೆ ಉಪಯೋಗಿಸಿಕೊಂಡು ಓಡಿದ ಅವರು ಕಲ್ಲು ಎಡವಿಬಿದ್ದು ಮೂರ್ಛೆ ಹೋದರು. ಅಷ್ಟರಲ್ಲಿ ಅಲ್ಲಿಗೆ ಬರುತ್ತಿದ್ದ ರೈತರಿಂದಾಗಿ ಆ ಹುಲಿಯಿಂದ ಬಚವಾದರು. ಅವರಿಗೆ ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ಪ್ರಾಣವನ್ನು ಕಾಪಾಡಿದ ಪುಸ್ತಕದ ಮೇಲೆ ಅವರಿಗೆ ಕೃತಜ್ಞತಾ ಭಾವ ಖಿರ್ದಿ ಪುಸ್ತಕವೇ ತಮ್ಮ ಜೀವ ಉಳಿಸಿತು ಎಂಬುದು ಅವರ ನಂಬಿಕೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ ಹುಲಿಯ ಧರ್ಮ ಶ್ರದ್ಧೆಯಿಂದ. ಹಿಂದಿನಿಂದ ದಾಳಿ ಮಾಡಿ ಕೊಲ್ಲದಿರುವ ಅದರ ಉದಾರಗುಣವೇ ಶಾನುಭೋಗರು ಹುಲಿಯಿಂದ ಪಾರಾಗಲು ಕಾರಣವಾಗಿದೆ.

**ಔ) ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ**

1. ಮಂತ್ರಿತ್ವ ಹೋಗಿ ಕೇವಲ __________ ಮಾತ್ರ ಉಳಿದಿತ್ತು.
   ಉ: ಶಾನುಭೋಗಿಕೆ
2. ಖಿರ್ದಿ ಪುಸ್ತಕ __________ ಬ್ರಹ್ಮಾಸ್ತ್ರ
   ಉ: ಶಾನುಭೋಗರ
3. ನೆಲದಿಂದ ಮೇಲೆದ್ದುಕೊಂಡಿದ್ದ __________ ಎಡವಿ ಶಾನುಭೋಗರು ಬಿದ್ದರು.
   ಉ : ಕಲ್ಲನ್ನು
4. ರೈತರು ತಿಂಗಳ ಬೆಳಕಿನಲ್ಲಿ __________ ಹೊಡೆಯುತ್ತಿದ್ದರು.
   ಉ : ಗಾಡಿ
5. ಶಾನುಭೋಗರು ಉಳಿದದ್ದು __________ ಪುಸ್ತಕದಿಂದಲ್ಲ.
   ಉ: ಖಿರ್ದಿ

**ಅ). ಭಾಷಾ ಚಟುವಟಿಕೆ**

**1. ತದ್ಧಿತಾಂತಗಳು ಎಂದರೇನು?**

**ಉ:** ನಾಮಪದಗಳ ಮೇಲೆ ಬೇರೆ ಬೇರೆ ಅರ್ಥಗಳಲ್ಲಿ ಗಾರ, ಕಾರ, ಇಗ, ಅಡಿಗ ವಂತ, ಇರಿ ಮುಂತಾದ ತದ್ಧಿತ ಪ್ರತ್ಯಯಗಳು ತದ್ದಿತಾಂತಗಳಾಗುತ್ತವೆ. ಇದನ್ನೇ ತದ್ಧಿತಾಂತಗಳು ಎನ್ನುವರು.

**2. ತದ್ಧಿತಾಂತ ಭಾವನಾಮಗಳೆಂದರೇನು? ಉದಾಹರಣೆ ಕೊಡಿ.**

ಉ: ಷಷ್ಠೀವಿಭಕ್ತ್ಯಂತ್ಯ ನಾಮಪದಗಳ ಮುಂದೆ ಭಾವಾರ್ಥದಲ್ಲಿ ತನ್ನ, ಇಕೆ, ಪುಮೆ, ಇತ್ಯಾದಿ ತದ್ಭಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಭಾವನಾಮಗಳು ಅಗುತ್ತದೆ.

***ಉದಾಹರಣೆಗೆ :– ಜಾಣನ (ಭಾವ) ತನ = ಜಾಣತನ***

ಚೆಲಿವಿನ (ಭಾವ) ಇಕೆ = ಚೆಲುವಿಕೆ
ಕರಿದರ (ಭಾವ) ಪು = ಕಪ್ಪು
ಪಿರಿದರ (ಭಾವ) ಮೆ = ಪೆರ್ಮೆ

# ಬಹು ಆಯ್ಕೆಯ ಪ್ರಶ್ನೆಗಳು

1. 'ಕುಲಾಲಚಕ್ರ' ಪದದ ಅರ್ಥ
   ಅ) ತಿಗುರಿ ಆ) ಭೂಚಕ್ರ ಇ) ವಿಷ್ಣುಚಕ್ರ ಈ) ಬಂಡಿಚಕ್ರ
   **ಉ: ಅ) ತಿಗುರಿ**
2. 'ಧರ್ಮಾಧರ್ಮ' ಪದವನ್ನು ಬಿಡಿಸಿ ಬರೆದಾಗ.
   ಅ) ಧರ್ಮ +ಧರ್ಮ ಆ) ಶರ್ಮಾ +ಧರ್ಮಾ ಇ) ಧರ್ಮ + ಮರ್ಮ ಈ) ಧರ್ಮ + ಅಧರ್ಮ
   **ಉ: ಈ) ಧರ್ಮ + ಅಧರ್ಮ**
3. 'ಕತ್ತೆತ್ತಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಅ) ಕರ್ಮಧಾರೆಯ ಆ) ತತ್ಪುರುಷ ಇ) ಕ್ರಿಯಾ ಈ) ದ್ವಂದ್ವ
   **ಉ : ಇ) ಕ್ರಿಯಾಸಮಾಸ**
4. ಸದ್ವಂಶ ಈ ಪದದ ಸಂಧಿ
   ಅ) ಜಶ್ತ್ವಸಂಧಿ ಆ) ಆದೇಶಸಂಧಿ ಇ) ಗುಣಸಂಧಿ ಈ) ಲೋಪಸಂಧಿ
   **ಉ : ಅ) ಜಶ್ತ್ವಸಂಧಿ**
5. 'ಕ್ಷಣ' ಪದದ ಕನ್ನಡ ರೂಪ
   ಅ) ಕಣ ಆ) ಚಣ ಇ) ಕ್ವಾಣ ಈ) ಜಾಣ
   **ಉ : ಆ) ಚಣ**
6. 'ಹಳತು' ಪದವು
   ಅ) ಸಂಖ್ಯಾವಾಚಕ ಆ) ಗುಣವಾಚಕ ಇ) ದಿಗ್ವಾಚಕ ಈ) ಪರಿಮಾಣವಾಚಕ
   **ಉ : ಆ) ಗುಣವಾಚಕ**
7. 'ನಾನು' ಎಂಬುದು
   ಅ) ಪ್ರಥಮ ಪುರುಷ ಆ) ಮಧ್ಯಮಪುರುಷ ಇ) ಪರಪುರುಷ ಈ) ಉತ್ತಮ ಪುರುಷ
   **ಉ : ಈ) ಉತ್ತಮ ಪುರುಷ**
8. ಆತ್ಮಾರ್ಥಕ ಸರ್ವನಾಮ ಪದಕ್ಕೆ ಉದಾಹರಣೆ
   ಅ) ನಾನು ಆ) ನೀವು ಇ) ತಾವು ಈ) ಅವರು
   **ಉ : ಇ) ತಾವು**
9. 'ರಸದೂಟ' ಪದವು ಈ ಸಂಧಿಗೆ ಸೇರಿದೆ
   ಅ) ಲೋಪಸಂಧಿ ಆ) ಆಗಮಸಂಧಿ ಇ) ಆದೇಶಸಂಧಿ ಈ) ಸವರ್ಣದೀರ್ಘ ಸಂಧಿ
   **ಉ : ಅ) ಲೋಪಸಂಧಿ**
10. 'ಬರೆಯುವ' ಪದದ ವ್ಯಾಕರಣ ವಿಶೇಷ
    ಅ) ಭೂತ ಆ) ವರ್ತಮಾನ ಇ) ಭವಿಷ್ಯತ್ ಈ) ಸರ್ವಕಾಲ
    **ಉ : ಇ) ಭವಿಷ್ಯತ್**
11. 'ಐವತ್ತು' ಇದು ಈ ನಾಮವಾಚಕಕ್ಕೆ ಸೇರುತ್ತದೆ.
    ಅ) ರೂಢನಾಮ ಆ) ಅಂಕಿತನಾಮ ಇ) ಅನ್ವರ್ಥಕನಾಮ ಈ) ಸಂಖ್ಯಾವಾಚಕ
    **ಉ : ಈ) ಸಂಖ್ಯಾವಾಚಕ**
12. 'ತನ್ನ ಬಡ ಬಂಧುವಾದ ಬೆಕ್ಕಿನಂತೆ' ಇಲ್ಲಿರುವ ಅಲಂಕಾರ
    ಅ) ಉಪಮಾ ಆ) ರೂಪಕ ಇ) ಶ್ಲೇಷಾ ಈ) ದೃಷ್ಟಾಂತ
    **ಉ : ಅ) ಉಪಮಾ**
13. 'ವ್ಯಾಘ್ರ' ಪದದ ತದ್ಭವ ರೂಪ
    ಅ) ಉಗ್ರ ಆ) ಪ್ರಯಾಗ ಇ) ಬಗ್ಗ ಈ) ಸುಯಾಗ
    **ಉ : ಇ) ಬಗ್ಗ**
14. 'ವದನಾರವಿಂದ' ಇದು ಈ ಅಲಂಕಾರಕ್ಕೆ ಸೇರಿದೆ
    ಅ) ಉಪಮಾ ಆ) ರೂಪಕ ಇ) ಶ್ಲೇಷಾ ಈ) ದೃಷ್ಟಾಂತ
    **ಉ : ಆ) ರೂಪಕ**

15. **‘ಜಾಡು’** ಪದದ ಅರ್ಥ
ಅ) ಪಟ್ಟಿ ಆ) ಕಾಡು ಇ) ಮಾಳು ಈ) ದಾರಿ
**ಉ : ಈ) ದಾರಿ**

16. **‘ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ’** ಇಲ್ಲಿರುವ ಲೇಖನ ಚಿಹ್ನೆ
ಅ) ಪೂರ್ಣವಿರಾಮ ಆ) ಪ್ರಶ್ನಾರ್ಥಕ ಇ) ಭಾವಸೂಚಕ ಈ) ವಾಕ್ಯವೇಷ್ಠನ
**ಉ : ಈ) ವಾಕ್ಯವೇಷ್ಠನ**

17. **‘ದುಂಡು ದುಂಡಾದ’** ಇದು ಈ ವಾಕ್ಯರಣಾಂಶಕ್ಕೆ ಉದಾಹರಣೆ
ಅ) ದ್ವಿರುಕ್ತಿ ಆ) ನುಡಿಗಟ್ಟು ಇ) ಜೋಡಿಪದ ಈ) ಅನುಕರಣಾವ್ಯಯ
**ಉ : ಅ) ದ್ವಿರುಕ್ತಿ**

17. **‘ಪಂಚೇಂದ್ರಿಯ’** ಪದವು ಈ ಸಮಾಸಕ್ಕೆ ಸೇರಿದೆ
ಅ) ಗಮಕ ಆ) ದ್ವಿಗು ಇ) ತತ್ಪುರುಷ ಈ) ಅಂಶಿ
**ಉ : ಆ) ದ್ವಿಗು**

18. **‘ಅವರ ಜ್ಞಾನ ಸಂಗ್ರಹ’** ನಿಜವಾದ ಶಕ್ತಿಯಾಗಿ ಪರಿಣಮಿಸಿದೆ, ಇಲ್ಲಿರುವ ಸರ್ವನಾಮ
ಅ) ಅವರ ಆ) ಜ್ಞಾನಸಂಗ್ರಹ ಇ) ಶಕ್ತಿಯಾಗಿ ಈ) ಪರಿಣಮಿಸಿದೆ
**ಉ : ಅ) ಅವರ**

19. **‘ಭಕ್ತಿ’** ಈ ಪದದ ತದ್ಭವ ರೂಪ
ಅ) ಭಕ್ತ ಆ) ಕರುಣೆ ಇ) ಬಕುತಿ ಈ) ರಕುತ
**ಉ : ಇ) ಬಕುತಿ**

20. **‘ಹುಲಿಯ’** ಈ ಪದದಲ್ಲಿರುವ ವಿಭಕ್ತಿ
ಅ) ಪ್ರಥಮಾ ಆ) ಚತುರ್ಥಿ ಇ) ಸಪ್ತಮಿ ಈ) ಷಷ್ಠೀ
**ಉ : ಈ) ಷಷ್ಠೀ**

21. **‘ರಾತ್ರಿ’** ಈ ಪದದ ವಿರುದ್ಧಾರ್ಥಕ ಪದ
ಅ) ಬೆಳಕು ಆ) ಕತ್ತಲು ಇ) ಹಗಲು ಈ) ಕಗ್ಗತ್ತಲು
**ಉ : ಇ) ಹಗಲು**

22. **‘ಮುಂಭಾಗ’** ಪದವನ್ನು ವಿಗ್ರಹಿಸಿದಾಗ ಬರುವ ರೂಪ
ಅ) ಮುಂ + ಭಾಗ ಆ) ಭಾಗದ + ಮುಂದೆ ಇ) ಮುಂದಿನ + ಭಾಗ ಈ) ಮುಂದು + ಭಾಗ
**ಉ : ಆ) ಭಾಗದ +ಮುಂದೆ**

23. **‘ತೆಂಕಣ’** ಪದವು
ಅ) ಗುಣವಾಚಕ ಆ) ಅನ್ವರ್ಥಕನಾಮ ಇ) ದಿಗ್ವಾಚಕ ಈ) ಸಂಖ್ಯಾವಾಚಕ
**ಉ : ಇ) ದಿಗ್ವಾಚಕ**

24. **‘ಓಟ, ಆಟ’** ಇವು ಈ ವ್ಯಾಕರಣಕ್ಕೆ ಸೇರಿದೆ
ಅ) ಕೃದಂತನಾಮ ಆ) ತದ್ಧತಾಂತ ಇ) ಕೃದಂತ ಅವ್ಯಯ ಈ) ಕೃದಂತ ಭಾವನಾಮ
**ಉ : ಈ) ಕೃದಂತಭಾವನಾಮ**

25. **‘ಮಗುವನ್ನು ಶಾಲೆಯ ತನಕ ಬಿಟ್ಟು ಬಂದನು’** ವಾಕ್ಯದಲ್ಲಿರುವ ತದ್ಧಿತಾಂತ ಅವ್ಯಯ
ಅ) ಮಗು ಆ) ಶಾಲೆ ಇ) ಬಂದ ಈ) ಶಾಲೆಯ ತನಕ
**ಉ :ಈ) ಶಾಲೆಯ ತನಕ**

# **ಘಟಕ ಪರೀಕ್ಷೆ – 1**

**ಅಂಕಗಳು: 20**

**ಅ) ಬಹು ಆಯ್ಕೆಯ ಪ್ರಶ್ನೆಗಳು :** **1x3=3**

1. ಘ್ರಾಣೇಂದ್ರಿಯ ಪದವು ಈ ಸಂಧಿಗೆ ಉದಾಹರಣೆ
   ಅ) ಆಗಮ ಆ) ಲೋಪ ಇ) ಗುಣ ಈ) ವೃದ್ಧಿ
2. 'ಯೋಚನೆಯನ್ನು' ಪದದಲ್ಲಿರುವ ವಿಭಕ್ತಿಯ ಹೆಸರು.
   ಅ) ಪ್ರಥಮ ಆ) ದ್ವಿತೀಯ ಇ) ತೃತೀಯ ಈ) ಚತುರ್ಥಿ
3. 'ಸದ್ವಂಶ' ಪದದಲ್ಲಿ ಆಗಿರುವ ಸಂಧಿ
   ಅ) ಗುಣ ಆ) ವೃದ್ಧಿ ಇ) ಶ್ಚುತ್ವ ಈ) ಜಶ್ತ್ವ

**ಆ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರಯಿರಿ:** **1x3=3**

1. ಊರು : ರೂಢನಾಮ : : ಶಾನುಭೋಗ : ____________
2. ಆರ್ಯ : ಅಜ್ಜ : : ದೃಷ್ಟಿ :__________
3. ಜಾಣತನ : ತದ್ಧತಾಂತಭಾವನಾಮ : : ಕನ್ನಡಿಗ : ____________

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **1x3=3**

1. ಹುಲಿಯು ಪರಮಾನಂದವಾಗಲು ಕಾರಣವೇನು ?
2. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?
3. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

**ಈ) ಕೊಟ್ಟಿರುವ ಪ್ರತಿಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ :** **2x4=8**

1. ಎ.ಎನ್.ಮೂರ್ತಿರಾವ್ ಅವರ ಪರಿಚಯ ಮಾಡಿಕೊಡಿ?
2. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
3. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?
4. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

**ಉ) 'ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು' ಈ ಹೇಳಿಕೆಯನ್ನು ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ:** **1x3=3**

# ಘಟಕ ಪರೀಕ್ಷೆ – 2

**ಅಂಕಗಳು: 20**

**ಅ) ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ:** **1x4=4**

1. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
2. ಭಗವದ್ಗೀತೆಯನ್ನು ರಚಿಸಿದವರು ಯಾರು ?
3. ಹುಲಿಯ ಆನಂದಕ್ಕೆ ಕೊರೆತ ಕಂಡದ್ದು ಏಕೆ ?
4. ಶಾನುಭೋಗರ ರಾಜಭಕ್ತಿಯ ಲಾಂಛನ ಯಾವುದಾಗಿತ್ತು ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:** **2x3=6**

1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?
2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?
3. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

**ಇ) ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ:** **2x3=6**

1. "ಖಂಡವಿದೆಕೋ ಮಾಂಸವಿದೆಕೋ ಗುಂಡಿಗೆಯ ಬಿಸಿರಕ್ತವಿದೆಕೋ"
2. "ನಾನು ಮುಖ ಮೇಲಾಗಿ ಬಿದ್ದಿದ್ದೇನೆ"?

**ಈ) 8–10 ವಾಕ್ಯಗಳೊಂದಿಗೆ ಉತ್ತರಿಸಿ:** **1x4=4**

1. ಮೂರ್ತಿರಾಯರ ದೃಷ್ಟಿ0ಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

**ಅಥವಾ**

2. ಶಾನುಭೋಗರನ್ನು ರಕ್ಷಸಿದುದು ಖಿರ್ದಿ ಪುಸ್ತಕವೇ ? ಹುಲಿಯ ಧರ್ಮವೇ ? ಸಮರ್ಥನೆಯೊಂದಿಗೆ ವಿವರಿಸಿ.

********

# ಪದ್ಯಪಾಠ – 06
# ಛಲಮನೆ ಮೆರೆವೆಂ

ಕವಿ – ರನ್ನ
ಆಕರ ಗ್ರಂಥ – ಸಾಹಸ ಭೀಮ ವಿಜಯಂ (ಗದಾಯುದ್ಧಂ)

**ಕವಿ ಪರಿಚಯ :**

ಕನ್ನಡದ ರತ್ನತ್ರಯದಲ್ಲಿ ಒಬ್ಬರಾದ ಕವಿ ರನ್ನ, ಕವಿಯು ಕ್ರಿ.ಶ. ಸುಮಾರು 949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಜನವಲ್ಲಭ, ತಾಯಿ ಅಬ್ಬಲಬ್ಬೆ. ಇವರು ಸಾಹಸ ಭೀಮ ವಿಜಯಂ, ಅಜಿತ ತೀರ್ಥಂಕರ, ಪುರಾಣತಿಲಕಂ, ಪರಶುರಾಮ ಚರಿತಂ, ಚಕ್ರೇಶ್ವರ ಚರಿತಂ ಎಂಬ ಕಾವ್ಯಗಳನ್ನು ಬರೆದಿದ್ದಾರೆ. ರನ್ನನು ಚಾಲುಕ್ಯ ದೊರೆ ತೈಲಪನಂದನಿಂದ 'ಕವಿ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದನು. ಪ್ರಸ್ತುತ ಪದ್ಯಭಾಗವನ್ನು ರನ್ನನ 'ಸಾಹಸ ಭೀಮ ವಿಜಯಂ' (ಕಾವ್ಯದ ಐದನೆಯ ಆಶ್ವಾಸದಿಂದ) ಕೃತಿಯಿಂದ ಆರಿಸಿಕೊಳ್ಳಲಾಗಿದೆ.

**ಪದ್ಯದ ಸಾರಾಂಶ ವಿವರಣೆ**

ಈ ಪದ್ಯಭಾಗವನ್ನು ರನ್ನನು ಬರೆದಿರುವ ಗದಾಯುದ್ಧ ಕಾವ್ಯದಿಂದ ಆಯ್ದ 'ಛಲಮನೆ ಮೆರೆವೆಂ' ಪದ್ಯಭಾಗದಿಂದ ಆ0ಯ್ದುಕೊಳ್ಳಲಾಗಿದೆ.

**ವಚನ :** ದುಯೋಧನನ ಅಜ್ಜನಾದ ಭೀಷ್ಮಾಚಾರ್ಯರು ಹೀಗೆ ಹೇಳುತ್ತಾರೆ, ದುರ್ಯೋಧನ ನಾನು ಹೇಳುವ ಮಾತನ್ನು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಹೂಡು ಅವರು ನನ್ನ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನನ್ನ ಮಾತನ್ನು ಮೀರದೆ ನಡೆದುಕೊಳ್ಳಬೇಕು ಎಂದು ಭೀಷ್ಮಾಚಾರ್ಯರು ಹೇಳಿದಾಗ ದುರ್ಯೋದನನು ಮುಗುಳು ನಗೆ ಬೀರುತ್ತಾನೆ.

–1–

ದುಯೋಧನನು ಭೀಷ್ಮರಿಗೆ 'ಅಜ್ಜ ನಾನು ನಿಮಗೆ ನಮಸ್ಕರಿಸಿ ಹೋಗಲೆಂದು ಬಂದಿದ್ದೇನೆ. ವಿನಹ ಶತ್ರುಗಳೊಡನೆ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕೆಂದು ಬಂದೆನೆ ?' ಅಜ್ಜಾ ಯುದ್ಧದಲ್ಲಿ ಇನ್ನು ನನ್ನ ಕಾರ್ಯವೇನೆಂಬುದನ್ನು ಹೇಳಿರಿ ಎಂದು ಹೇಳುತ್ತಾನೆ.

–2–

ದುರ್ಯೋಧನನು ಭೀಷ್ಮಾಚಾರ್ಯರಿಗೆ "ನಾನು ಭೂಮಿಗಾಗಿ ರಾಜ್ಯಕ್ಕಾಗಿ ಹೋರಾಡುವೆನೆಂದು ಭಾವಿಸಿದಿರಾ? ಇಲ್ಲ ಅಜ್ಜ ನಾನು ಛಲಕ್ಕಾಗಿಯೇ ಪಾಂಡವರೊಡನೆ ಹೋರಾಡುತ್ತೇನೆ. ಈ ನೆಲ (ಭೂಮಿ) ನನಗೆ ಹಾಳು ನೆಲ ದಿನಪಸುತನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ನಾನು ಕೂಡಿ ಬಾಳುವೆನೆ ?" ಎಂದು ಪ್ರಶ್ನಿಸುತ್ತಾನೆ.

–3–

ದುರ್ಯೋಧನನು ಮತ್ತೆ ಮುಂದುವರೆದು ಭೀಷ್ಮರಿಗೆ "ನನ್ನ ಪ್ರೀತಿಯ ಗೆಳೆಯನನ್ನು (ಕರ್ಣನನ್ನು) ನನ್ನ ಪ್ರೀತಿಯ ತಮ್ಮನನ್ನು (ದುಶ್ಯಾಸನ) ಕೊಂದ ಅರ್ಜುನ – ಭೀಮರು ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ, ಅಜ್ಜಾ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಈ ಇಬ್ಬರನ್ನೂ ಕೊಲ್ಲುವೆನು, ಅವರನ್ನು ಕೊಂದ ಬಳಿಕ ಧರ್ಮರಾಜ ನೊಡನೆ ಸಂಧಿ ಮಾಡಿಕೊಳ್ಳುತ್ತೇನೆ. ನನ್ನ ದುಃಖ ಆರಿದ ನಂತರ ಸಂಧಿ ಆಗುವುದಿಲ್ಲ ಎನ್ನುವೆನೆ ?" ಎಂದು ಹೇಳುತ್ತಾನೆ.

– 4–

ಮುಂದುವರಿದು ದುರ್ಯೋದನನು ಭೀಷ್ಮಾಚಾರ್ಯರಿಗೆ "ಹುಟ್ಟಿದ ನನ್ನ ನೂರು ಜನರೂ ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಅದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆಯಿತು.

ಸತ್ತವರೇನು ಮತ್ತು ಹುಟ್ಟುವುದಿಲ್ಲವೇ ? ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುತ್ತೇನೆ (ಸಾಧಿಸುವೆನು) ಎಂದು ದುರ್ಯೋಧನನು ಹೇಳುತ್ತಾನೆ .

– 5 –

ಮುಂದುವರಿದು ದುರ್ಯೋಧನನು ಭೀಷ್ಮಾಚಾರ್ಯರಿಗೆ "ಅಜ್ಜ ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಅದ್ದರಿಂದ ಈ ಭೂಮಿ ಪಾಂಡವರದಾಗಬೇಕು ಇಲ್ಲವೇ ಕೌರವನದಾಗಬೇಕು ಎಂದು ದುರ್ಯೋಧನನು ಶರಶಯ್ಯೆದಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳಿದನು.

**ಅ). ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ**

**1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು ?**

**ಉ:** ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಭೀಷ್ಮರಿಗೆ ಹೇಳುವನು.

**2. ದಿನಪಸುತ ಎಂದರೆ ಯಾರು ?**

**ಉ:** ದಿನಪಸುತ ಎಂದರೆ ಕರ್ಣ.

**3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ ?**

**ಉ:** ಪಾರ್ಥ (ಅರ್ಜುನ)–ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

**4. ಛಲವನ್ನೆ ಮೆರೆಯುವುದಾಗಿ ನಿರ್ಧರಿಸಿದವನು ಯಾರು ?**

**ಉ:** ಛಲವನ್ನೆ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ

**5. ಅಂತಕಾತ್ಮಜ ಎಂದರೆ ಯಾರು ?**

**ಉ:** ಅಂತಕಾತ್ಮಜ ಎಂದರೆ ಧರ್ಮರಾಯ (ಯುದಿಷ್ಠಿರ)

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ:**

**1. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?**

**ಉ:** ದು0ರ್ಯೊಧನನಿಗೆ ಭೀಷ್ಮರು ಸಂಧಿ ಮಾಡಿಕೊ ಎಂದು ಸಲಹೆ ನೀಡಿದಾಗ ದುರ್ಯೋಧನನು ಸಂಧಿಗೆ ಒಪ್ಪದೆ" ಅಜ್ಜ ನಾನು ನಿಮ್ಮನ್ನು ನಮಸ್ಕರಿಸಲೆಂದು ಬಂದೆನೇ ಹೊರತು ಸಂಧಿ ಮಾಡಿಸೆಂದು ಕೇಳಲು ಅಲ್ಲ. ನಾನೇನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಹಾಳು ಭೂಮಿ, ಕರ್ಣನನ್ನು ಕೊಲ್ಲಿಸಿದ ಭೂಮಿಯೊಡನೆ ಮತ್ತೆ ನಾನು ಬಾಳುವುದುಂಟೆ ?" ಎಂದು ವಿವರಿಸಿತ್ತಾನೆ.

**2. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

**ಉ:** ದುರ್ಯೋಧನ "ಛಲಕ್ಕೊಸ್ಕರ ಹೋರಾಡುತ್ತೇನೆಯೇ ಹೊರತು ನೆಲಕ್ಕಾಗಿ ಅಲ್ಲ, ನನ್ನ ಪ್ರೀತಿಯ ಗೆಳೆಯ ಕರ್ಣ, ಪ್ರೀತಿಯ ತಮ್ಮ ದುಶ್ಯಾಸನ ಮೊದಲಾದ ಒಡಹುಟ್ಟಿದವರನ್ನು ಕೊಲ್ಲಿಸಿದ ಈ ನೆಲ ನನಗೆ ಹಾಳು ಬಿದ್ದಿರುವ ನೆಲ ಇಂತಹ ನೆಲದೊಡನೆ ಮತ್ತೆ ನಾನು ಸಹಬಾಳ್ವೆ ಮಾಡಲು ಸಾಧ್ಯವಿಲ್ಲ" ಎಂದು ಹೇಳುತ್ತಾನೆ.

**3. ಪಾರ್ಥ – ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

**ಉ:** "ನನ್ನ ಪ್ರೀತಿಯ ಕರ್ಣನನ್ನೂ ನನ್ನ ಪ್ರೇಮದ ದುಶ್ಯಾಸನನ್ನು ಕೊಂದ ಅರ್ಜುನ ಭೀಮರು ಜೀವಂತವಾಗಿರುವವರಿಗೆ, ನನ್ನ ದೇಹದಲ್ಲಿ ಪ್ರಾಣವಿರುವವರೆಗೂ ನಾನು ಸಂಧಿಗೆ ಒಪ್ಪಲಾರೆನು. ಮೊದಲು ಆ ಇಬ್ಬರನ್ನು ಕೊಲ್ಲುವೆನು ಹಾಗೆ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿ ಕೊಳ್ಳುತ್ತೇನೆ. ನನ್ನ ದುಃಖ ಆರಿದ ಮೇಲೆ ಸಂಧಿ ಬೇಡ ಎನ್ನುವೆನೆ? ಎಂದು ಪಾರ್ಥ, ಭೀಮ ಕುರಿತು ದುರ್ಯೋಧನ ಅಭಿಪ್ರಾಯ ಪಡುತ್ತಾನೆ.

ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ:

1. **"ನೆಲಕಿಟಿಪೆನೆಂದು ಬಗೆದಿರೆ ಚಲಕಿಟಿಪೆಂ".**

**ಉ: ಆಯ್ಕೆ :** ಈ ವಾಕ್ಯವನ್ನು ರನ್ನ ಕವಿಯ "ಸಾಹಸ ಭೀಮ ವಿಜಯಂ" ಕೃತಿಯಿಂದ ಆಯ್ದ "ಛಲಮನೆ ಮೆಟಿಪೆಂ" ಎಂಬ ಪದ್ಯಭಾಗದಿಂದ ಆಯ್ದು ಕೊಳ್ಳಲಾಗಿದೆ.

ಸಂದರ್ಭ : ಮಹಾಭಾರತ ಯುದ್ಧದಲ್ಲಿ ತನ್ನೆಲ್ಲಾ ಸಹೋದರರನ್ನೂ ತನ್ನ ಗೆಳೆಯ ಕರ್ಣನನ್ನು ಕಳೆದುಕೊಂಡ ದು0ರ್ಯೋಧನ ತನ್ನ ತಂದೆ ತಾಯಿಯರ ಸಲಹೆಯಂತೆ ಶರಶಯ್ಯೆದಲ್ಲಿ ಮಲಗಿದ್ದ ಭೀಷ್ಮರ ಬಳಿ ಬಂದಾಗ ಅವರು ಪಾಂಡವರೊಡನೆ ಸಂಧಿ ಮಾಡಿಕೊಳ್ಳಲು ಸೂಚಿಸುತ್ತಾರೆ. ಆಗ ದುರ್ಯೋಧನನು ಭೀಷ್ಮರಿಗೆ "ನಿಮಗೆ ನಮಸ್ಕರಿಸಲು ಬಂದೆನೇ ಹೊರತು ಪಾಂಡವರೊಡನೆ ಸಂಧಿ ಮಾಡಿಸೆಂದು ಕೇಳಲು ಅಲ್ಲ ಇಷ್ಟಕ್ಕೂ ನಾನು ನೆಲಕ್ಕಾಗಿ (ಸಾಮ್ರಾಜ್ಯಕ್ಕಾಗಿ) ಯುದ್ಧ ಮಾಡುವವನಲ್ಲ ಛಲಕ್ಕಾಗಿ ಯುದ್ಧಮಾಡುತ್ತೇನೆ" ಎಂದು ಹೇಳುತ್ತಾನೆ.

ಸ್ವಾರಸ್ಯ : ದುರ್ಯೋಧನನ ನೆಲದ ಮೇಲಿನ ವ್ಯಾಮೋಹಕ್ಕಿಂತ ದುರ್ಯೋಧನನ ಛಲದ ಗುಣ ಅವನ ಸ್ವಾಭಿಮಾನ ಗುಣ ಬಹು ಸ್ವಾರಸ್ಯಪೂರ್ಣವಾಗಿದೆ.

2. "ಸಮರದೊಳನಗಜ್ಜ ಪೇಟಿಮಾವುದು ಕಜ್ಜಂ".

ಉ: **ಆಯ್ಕೆ :** ಈ ವಾಕ್ಯವನ್ನು ರನ್ನ ಕವಿಯ "ಸಾಹಸ ಭೀಮ ವಿಜಯಂ" ಕೃತಿಯಿಂದ ಆಯ್ದ "ಛಲಮನೆ ಮೆಟಿಪೆಂ" ಎಂಬ ಪದ್ಯಭಾಗದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ :** ಶರಶಯ್ಯದಲ್ಲಿ ಮಲಗಿದ್ದ ಭೀಷ್ಮರನ್ನು ತಂದೆ ತಾಯಿಯ ಸಲಹೆಯಂತೆ ದು0ರ್ಯೋಧನನು ಸಂಧಿಸಿದಾಗ ಅವರು ಪಾಂಡವರೊಡನೆ ಸಂಧಿಮಾಡಿಕೊ ಪಾಂಡವರನ್ನು ನಾನೇ ಒಪ್ಪಿಸುತ್ತೇನೆ ಎಂದು ಸಲಹೆ ನೀಡಿದಾಗ ಸುಯೋಧನನು ನಿಮಗೆ ಸಮಸ್ಕಾರ ಮಾಡಿ ಹೋಗಬೇಕೆಂದು ಬಂದೇನಲ್ಲದೆ ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸಲೆಂದು ನಾನು ಬಂದೆನೆ? ಅಜ್ಜ ಯುದ್ಧದಲ್ಲಿ ಇನ್ನು ನನ್ನ ಕಾರ್ಯವೇನೆಂಬುದನ್ನು ಹೇಳಿ ಎಂದು ಹೇಳುವನು.

**ಸ್ವಾರಸ್ಯ :** ದುರ್ಯೋಧನನ ವೀರತನ 0ಯುದ್ಧದಲ್ಲಿ ಯಾವ ರೀತಿ ಹೋರಾಡಬೇಕೆಂಬ ಸಲಹೆ, ಕಾರ್ಯವನ್ನು ಕೇಳುವುದು ಸ್ವಾರಸ್ಯವಾಗಿದೆ .

3. **"ಪಾಂಡವರೊಳಿಟಿದು ಛಲಮನೆ ಮೆರೆವೆಂ"**

ಉ: **ಆಯ್ಕೆ :-** ಈ ವಾಕ್ಯವನ್ನು ರನ್ನ ಕವಿಯ "ಸಾಹಸ ಭೀಮ ವಿಜಯಂ" ಕೃತಿಯಿಂದ ಆಯ್ದ "ಛಲಮನೆ ಮೆಟಿಪೆಂ" ಎಂಬ ಪದ್ಯಭಾಗದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ :** ಭೀಷ್ಮರ ಸಲಹೆಯಂತೆ ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಳ್ಳಲು ಒಪ್ಪದ ದುರ್ಯೋಧನನು ಹುಟ್ಟಿದ ನೂರು ಮಕ್ಕಳು ನನ್ನೊಡನೆ ಹುಟ್ಟಿದ ನೂರು ಸಹೋದರರು ಪಾಂಡವರನ್ನು ಎದುರಿಸಿ ಸತ್ತರು ಅದರಿಂದ ನನ್ನಿ ಕೋಪ ಕೆರಳಿ ಅಧಿಕವಾಯಿತು, ಸತ್ತವರೇನು ಮರಳಿ ಹುಟ್ಟುತ್ತಾರೆಯೇ? ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೆ ಸಾಧಿಸುವೆನು ಎಂದು ಭೀಷ್ಮರಲ್ಲಿ ತನ್ನ ನಿಲುವನ್ನು ಹೇಳುತ್ತಾನೆ.

**ಸ್ವಾರಸ್ಯ :** ಪಾಂಡವರೊಂದಿಗೆ ತಾನು ಹಿಡಿದ ಛಲವನ್ನು ಸಂಧಿಸುವೆ ಎನ್ನುವ ದು0ರ್ಯೋಧನನ ಅಚಲ ನಿಲುವು ಛಲದ ಗುಣ ಸ್ವಾರಸ್ಯಪೂರ್ಣವಾಗಿದೆ.

4. **"ಮೇಣಾಯ್ತು ಕೌರವಂಗವನಿತಳಂ".**

ಉ: **ಆಯ್ಕೆ :** ಈ ವಾಕ್ಯವನ್ನು ರನ್ನ ಕವಿಯ "ಸಾಹಸ ಭೀಮ ವಿಜಯಂ" ಕೃತಿಯಿಂದ ಆಯ್ದ "ಛಲಮನೆ ಮೆಟಿಪೆಂ" ಎಂಬ ಪದ್ಯಭಾಗದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ :** ಭೀಷ್ಮರು ಪಾಂಡವರೊಡನೆ ಸಂಧಿ ಮಾಡಿಕೊಳ್ಳಬೇಕೆನ್ನುವ ಸಲಹೆ ಮಾತನ್ನು ಒಪ್ಪದ ದು0ರ್ಯೋಧನನು ನಾನು ಪಾಂಡವರರೊಡನೆ ಯುದ್ಧ ಮಾಡದೇ ಇರಲಾರೆನು. ಇಂದಿನ ಒಂದು ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೇ ನಾನು ಉಳಿಯಬೇಕು, ಅದರಿಂದ ಭೂಮಿಯ ಒಡೆತನ ಪಾಂಡವರಿಗೆ ಹೋಗಬೇಕು ಇಲ್ಲವೆ ಕೌರವನಿಗೆ ಉಳಿಯಬೇಕು ಎಂದು ಹೇಳುತ್ತಾನೆ .

**ಸ್ವಾರಸ್ಯ :** ಯುದ್ಧದ ಕುರಿತು ದು0ರ್ಯೋಧನನ ಅಚಲ ನಿಲುವು ಬಂದುದ್ದನ್ನು ಧೈರ್ಯದಿಂದ ಎದುರಿಸಿ ಮಾಡು ಇಲ್ಲವೆ ಮಡಿ ಎಂಬ ಗುಣ ಬಹುಸ್ವಾರಸ್ಯ ಪೂರ್ಣವಾಗಿದೆ .

ಈ) **8–10 ವಾಕ್ಯಗಳೊಂದಿಗೆ ಉತ್ತರಿಸಿ**

1. **ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆ೦ಯ ಸ್ವಾರಸ್ಯವನ್ನು ವಿವರಿಸಿ.**

**ಉ:** ಮಹಾಭಾರತ ಕುರುಕ್ಷೇತ್ರ ಯುದ್ಧದಲ್ಲಿ ತನ್ನೆಲ್ಲಾ ತಮ್ಮಂದಿರನ್ನು ಅಪ್ತಮಿತ್ರ ಕರ್ಣನನ್ನೂ ಕಳೆದುಕೊಂಡ ದುರ್ಯೋಧನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶ೦ಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದು೦ರ್ಯೋಧನನಿಗೆ ನೀಡುತ್ತಾರೆ. ನೀನು ಒಪ್ಪುವುನೆಂದರೆ ಪಾಂಡವರನ್ನು ಸಂಧಿಗೆ ಒಪ್ಪಿಸುವೆನು. ಅವರು ಈಗಲೂ ನಮ್ಮ ಮಾತನ್ನು ಕೇಳುತ್ತಾರೆ. ಭೀಷ್ಮರು ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆಂದು ಈ ನಿಲುವು ವ್ಯಕ್ತಪಡಿಸುತ್ತಾರೆ. ಆದರೆ ತಾನು ನಿಮಗೆ ನಮಸ್ಕರಿಸಲು ಬಂದೆನೇ ಹೊರತು ಸಂಧಿ ಮಾಡಿಸೆಂದು ಕೇಳಲು ಅಲ್ಲ ಎಂದು ಹೇಳುತ್ತಾನೆ. ನಾನು ನೆಲಕ್ಕಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಪಾಂಡವರೊಡನೆ ಹೋರಾಡುತ್ತಿದ್ದೇನೆ. ಕರ್ಣನಿಲ್ಲದ ಈ ಭೂಮಿ ನನಗೆ ಪಾಳು ಭೂಮಿ ಎನ್ನುವ ದು೦ರ್ಯೋಧನನಲ್ಲಿ ತನ್ನ ಛಲದ ಕುರಿತಾದ ಅಭಿಮಾನ, ಕರ್ಣನನ್ನು ಕಳೆದುಕೊಂಡ ನೋವು ವ್ಯಕ್ತಪಡಿಸುತ್ತಾನೆ. ಕರ್ಣನನ್ನು ತನ್ನ ಸಹೋದರ ದುಶ್ಯಾಸನನ್ನು ಕೊಂದ ಅರ್ಜುನ ಭೀಮರನ್ನು ಕೊಂದು ನಂತರವೇ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುವೆ ಎನ್ನುವ ದು೦ರ್ಯೋಧನನಲ್ಲಿ ದುಶ್ಯಾಸನ ಕರ್ಣರನ್ನು ಕಳೆದುಕೊಂಡ ನೋವಿನ ಜೊತೆಗೆ ಅವರ ಸಾವಿಗೆ ಕಾರಣರಾದವರ ಬಗ್ಗೆ ರೋಷವು ವ್ಯಕ್ತವಾಗಿದೆ. ಪಾಂಡವರೊಡನೆ ಹೋರಾಡಲು ಸಿದ್ಧ. ಈ ಯುದ್ಧದಲ್ಲಿ ಭೂಮಿಯು (ಸಾಮ್ರಾಜ್ಯವು) ಪಾಂಡವರಿಗೆ ಹೋಗಬೇಕು ಇಲ್ಲವೇ ನನಗೆ ಉಳಿಯಬೇಕು ಎಂದು ದುರ್ಯೋಧನನು ತನ್ನ ಅಚಲ ನಿಲುವನ್ನು ವ್ಯಕ್ತಪಡಿಸುತ್ತಾನೆ.

2. **ದು೦ರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.**

ಉ: 'ಛಲಧೋಳ್ ದುರ್ಯೋಧನಂ' ಎನ್ನುವ ಪಂಪ ಕವಿಯ ಮಾತಿನಂತೆ ಛಲವೆನ್ನೆ ಮುಖ್ಯ ಗುಣವುಳ್ಳವನು ದುರ್ಯೋಧನ, ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೇ ೦ಯುದ್ಧ ಮಾಡೇ ಮಾಡುತ್ತೇನೆಂಬ ಅವನ ಛಲದ ಗುಣ ಸ್ವಭಾವಕ್ಕೆ ತಕ್ಕಂತೆ ಅಭಿವ್ಯಕ್ತಗೊಂಡಿರುವ ಪದ್ಯಭಾಗವೇ ಛಲಮನೆಮೆಟ್ಟೆಂ. ಭೀಷ್ಮನು ಸಂಧಿಗೆ ಪಾಂಡವರನ್ನು ಒಪ್ಪಿಸುತ್ತೇನೆ. ನೀನು ಸಂಧಿ ಮಾಡಿಕೋ ಎಂದು ಸಲಹೆ ನೀಡುತ್ತಾರೆ, ಅದಕ್ಕೆ ಒಪ್ಪದ ದು೦ರ್ಯೋಧನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು ವಿನಹಃ ಈ ನೆಲಕ್ಕಾಗಿ ಅಲ್ಲ, ಈ ನೆಲ ನನಗೆ ಪಾಳುಬಿದ್ದ ನೆಲ ಇಂತಹ ನೆಲದೊಡನೆ ಮತ್ತೆ ಬಾಳುವುದಿಲ್ಲ. ಪ್ರೀತಿಯ ಗೆಳೆಯ ಕರ್ಣ ನನ್ನ ಪ್ರೀತಿಯ ತಮ್ಮ ದುಶ್ಯಾಸನರನ್ನು ಕೊಂದ ಆ ಪಾರ್ಥ–ಭೀಮನನ್ನು ಕೊಲ್ಲುವುದೇ ನನ್ನ ಛಲವಾಗಿದೆ. ನನ್ನ ಮಕ್ಕಳು ನನ್ನ ಒಡಹುಟ್ಟಿದ ಸಹೋದರರು ಪಾಂಡವರೊಡನೆ ಹೋರಾಡಿ ಸತ್ತರು ಅದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಅಧಿಕವಾಯಿತು. ಪಾಂಡವರೊಡನೆ ಹೋರಾಡಿ ತನ್ನ ಛಲವನ್ನೆ ಮೆರೆಯುತ್ತೇನೆ. ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಈ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಈ ಸಾಮ್ರಾಜ್ಯವು ಪಾಂಡವರಿಗೆ ಸೇರಬೇಕು ಇಲ್ಲವೆ ಈ ಕೌರವನದಾಗಬೇಕು. ಎಂಬ ಛಲದಿಂದ ಯುದ್ಧದ ನಿರ್ಧಾರವನ್ನು ಕೈಗೊಂಡಿರುವುದನ್ನು ಹೇಳುತ್ತಾನೆ. ಇಲ್ಲಿ ದು೦ರ್ಯೋಧನನ ಮಾತುಗಳಲ್ಲಿ ಅವನ ಛಲದಗುಣ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

## ಭಾಷಾ ಚಟುವಟಿಕೆ

ಅ) **ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದ್ರಸ್ಸಿನ ಹೆಸರನ್ನು ಬರೆಯಿರಿ:**

– U U| – U U| – U U

1. ಪುಟ್ಟಿದ। ನೂರ್ವರು। ಮೆನ್ನೊಡ

– U U | – U U | U – U | – U U | – –

2. ಪುಟ್ಟಿದ । ನೂರ್ವರು। ಮಿದಿರ್ಚಿ। ಸತ್ತೊಡೆ । ಕೋಪಂ

**ಛಂದಸ್ಸು : ಕಂದ ಪದ್ಯ**

**ಲಕ್ಷಣ** : ಈ ಪದ್ಯದ ಮೊದಲನೆಯ ಸಾಲಿನಲ್ಲಿ 4 ಮಾತ್ರೆಯ 3 ಗಣಗಳೂ ಬಂದು ಒಟ್ಟು 12 ಮಾತ್ರೆಗಳನ್ನು, ಎರಡನೆಯ ಸಾಲಿನಲ್ಲಿ 4 ಮಾತ್ರೆ೦ಯ 5 ಗಣಗಳು ಒಂದು ಒಟ್ಟು 20 ಮಾತ್ರೆಗಳಿಂದ

ಕೊಡಿದೆ. ಇದು ಕಂದ ಪದ್ಯದ ಪೂರ್ವಾರ್ಧದ ಲಕ್ಷಣವನ್ನು ಹೊಂದಿದೆ, ಆದ್ದರಿಂದ ಇದು ಕಂದ ಪದ್ಯವಾಗಿದೆ.

ಭ ರ ನ ಭ ಭ ರ ಲಘು ಗುರು

– ∪ ∪ | – ∪ – | ∪ ∪ ∪| – ∪∪ | – ∪∪ | – ∪ – |∪ –

1. ಎನ್ನಣು । ಗಾಳನೆ । ನ್ನುಣುಗ । ದಮ್ಮನ । ನಿಕ್ಕದ । ಪಾರ್ಥಭೀಮರು

– – ∪

ಳ್ಳನ್ನೆಮ್

**ಛಂಧಸ್ಸಿನ ಹೆಸರು : ಉತ್ಪಲ ಮಾಲಾ ವೃತ್ತ .**

**ಲಕ್ಷಣ** : ಈ ಸಾಲಿನಲ್ಲಿ 20 ಅಕ್ಷರಗಳಿವೆ ಭರನಭಭರಲಗ ಗಣಗಳು ಬಂದಿದೆ. ಅದ್ದರಿಂದ ಇದು ಉತ್ಪಲಮಾಲಾವೃತ್ತದ ಲಕ್ಷಣವನ್ನು ಹೊಂದಿದೆ.

**ಆ) ಕೊಟ್ಟಿರುವ ಪದಗಳಿಗೆ ತತ್ಸಮ – ತದ್ಭವ ಬರೆಯಿರಿ**

ಕಜ್ಜ = ಕಾರ್ಯ, ಅಜ್ಜ = ಆ0ರ್ಯ

**ಇ) ಕೊಟ್ಟಿರುವ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

1. ಪಾರ್ಥನು + ಭೀಮನು = ಪಾರ್ಥಭೀಮರು = ದ್ವಂದ್ವ ಸಮಾಸ
2. ಅಂತಕನ + ಆತ್ಮಜನು ಆವನೋ ಅವನು = ಅಂತಕಾತ್ಮಜ – ಯುಧಿಷ್ಠಿರ ಧರ್ಮರಾ0ಯ =ಬಹುವ್ರೀಹಿ ಸಮಾಸ
3. ದಿನಪನ + ಸುತನು ಆವನೋ ಅವನು = ದಿನಪಸುತ–ಕರ್ಣ = ಬಹುವ್ರೀಹಿ ಸಮಾಸ

## ಚಟುವಟಿಕೆ – 2

**ಅ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ**

ನೆಲಕಿಟಿವೆನೆಂದು ಬಗೆದಿರೆ
ಚಲಕಿಟಿವೆಂ ಪಾಂಡುಸುತರೊಳೀನೆಲವಿದು ಪಾ॥
ಟ್ಸೆಲನೆನಗೆ ದಿನಪಸುತನಂ
ಕೂಲಿಸಿದ ನೆಲದೊಡನೆ ಮತ್ತೆ ಪುದುವಾಳ್ವಪೆನೇ

ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ
ಪುಟ್ಟಿ ಪೊದಮಿದು ಸತ್ತರ್
ಪುಟ್ಟರೆ ಪಾಂಡವರೊಳಿಟಿದು ಛಲಮನೆ ಮೆಚಿವೆಂ

# ಬಹು ಆಯ್ಕೆಯ ಪ್ರಶ್ನೆಗಳು

1) " ಇಂಬುಕೆ೦ಯ್ವ೦ಯುಪ್ಪೊಡೆ ಪದದ ಹೊಸಗನ್ನಡ ರೂಪ
ಅ) ಒಪ್ಪಿಕೊ ಆ) ಒಪ್ಪಿಕೊಳ್ಳುವೆಯಾದರೆ ಇ) ಒಪ್ಪಿಸು ಈ) ಒಪ್ಪದಿದ್ದರೆ
**ಉ : ಅ) ಒಪ್ಪಿಕೊಳ್ಳುವೆಯಾದರೆ**

2) " ಒಡಂಬಡಿಸಿ" ಈ ಪದದ ಅರ್ಥ
ಅ) ಒಪ್ಪಿಸಿ ಆ) ಒಪ್ಪದೆ ಇ) ಒಪ್ಪಿಕೊ ಈ) ಒಪ್ಪದಿದ್ದರೆ
**ಉ : ಅ) ಒಪ್ಪಿಸಿ**

3) "ಪೀಳ್ದುದಂ" ಈ ಪದದ ವಿಭಕ್ತಿ
ಅ) ಪ್ರಥಮ ಆ) ದ್ವಿತೀಯ ಇ) ತೃತೀಯ ಈ) ಚತುರ್ಥಿ
**ಉ : ಆ) ದ್ವಿತೀಯ ವಿಭಕ್ತಿ**

4) 'ಯುದ್ಧ' ಈ ಪದದ ತದ್ಭವ ರೂಪ
ಅ) ರಣರಂಗ ಆ) ಕಾಳಗ ಇ) ಜುದ್ಧ ಈ) ಬದ್ಧ
**ಉ : ಇ) ಜುದ್ಧ**

5) 'ಸಮರದೊಳ್' ಈ ಪದದ ವಿಭಕ್ತಿ
ಅ) ಪಂಚಮಿ ಆ) ಷಷ್ಠೀ ಇ) ಚತುರ್ಥಿ ಈ) ಸಪ್ತಮೀ
**ಉ : ಈ) ಸಪ್ತಮಿ ವಿಭಕ್ತಿ**

6) 'ಅಣುಗಾಳ್' ಈ ಪದದ ಗಣ
ಅ) ಭಗಣ ಆ) ರಗಣ ಇ) ಸಗಣ ಈ) ಯಗಣ
**ಉ : ಇ) ಸಗಣ**

7) ಗುಂಪಿಗೆ ಸೇರದ ಗಣವಿದು
ಅ) ಯಗಣ ಆ) ಬ್ರಹ್ಮಗಣ ಇ) ವಿಷ್ಣುಗಣ ಈ) ರುದ್ರಗಣ
**ಉ : ಅ) ಯಗಣ**

8) ಉತ್ಪಲ ಮಾಲಾ ವೃತದಲ್ಲಿರುವ ಪ್ರತೀ ಸಾಲಿನ ಒಟ್ಟು ಅಕ್ಷರಗಳು
ಅ) 19 ಆ) 20 ಇ) 21 ಈ) 22
**ಉ : ಆ) 20**

9) 'ಅಸು' ಪದದ ಅರ್ಥ
ಅ) ಪ್ರಾಣಿ ಆ) ಹಸು ಇ) ಪ್ರಾಣ ಈ) ಕೂಸು
**ಉ : ಇ) ಪ್ರಾಣ**

10) ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿ ಬಿಂಬ ಭಾವವು ತೋರಿ ಬಂದರೆ ಅದನ್ನು
ಅ) ಅರ್ಥಾಂತರನ್ಯಾಸ ಆ) ರೂಪಕಾ ಇ) ಉತ್ಪ್ರೇಕ್ಷಾ ಈ) ದೃಷ್ಟಾಂತ
**ಉ : ಈ) ದೃಷ್ಟಾಂತ ಅಲಂಕಾರ**

11) “ಭೀಷ್ಮರು” ಪದದ ಗಣ

ಅ) ‘ಮ’ಗಣ ಆ) ‘ನ’ಗಣ ಇ) ‘ಭ’ಗಣ ಈ) ‘ಯ’ಗಣ

**ಉ : ಇ) ‘ಭ’ ಗಣ**

12) ‘ಮಾಳ್ಪ’ ಪದದ ಹೊಸಗನ್ನಡ ರೂಪ

ಅ) ‘ಮಾಡುವ ಆ) ‘ನೋಡುವ ಇ) ಮಾರುವವರು ಈ) ‘ಮಾಡುವೆನು

**ಉ : ಈ) ಮಾಡುವೆನು**

13) ನ,ಜ,ಭ,ಜ,ಜ,ಜ,ರ ಲಕ್ಷಣವುಳ್ಳ ವೃತ್ತ

ಅ) ಉತ್ಪಲ ಆ) ಚಂಪಕ ಇ) ಮತ್ತೇಭ ಈ) ಶಾರ್ದೂಲ

**ಉ :ಆ) ಚಂಪಕಮಾಲ**

14) ಖ್ಯಾತ ಕರ್ನಾಟಕಗಳ ಸಂಖ್ಯೆ \

ಅ) ನಾಲ್ಕು ಆ) ಎಂಟು ಇ) ಆರು ಈ) ಮೂರು

**ಉ : ಇ) ಆರು**

15) ‘ತ್ರಿಗುರು’ ಬಂದರೆ ಅದು

ಅ) ಮಹಾಸ್ರಗ್ಧರಾ ಆ) ಸ್ರಗ್ಧರಾ ಇ) ಮತ್ತೇಭ ಈ) ಚಂಪಕ

**ಉ : ಅ) ಮಹಾಸ್ರಗ್ಧರಾ**

16) ಮಾತು ಬಲ್ಲವನಿಗೆ ಜಗಳವಿಲ್ಲ : ಊಟ ಬಲ್ಲವನಿಗೆ ರೋಗವಿಲ್ಲ: ಇಲ್ಲಿರುವ ಅಲಂಕಾರ

ಅ) ಉಪಮಾ ಆ) ರೂಪಕ ಇ) ಶ್ಲೇಷಾ ಈ) ದೃಷ್ಟಾಂತ

**ಉ :ಈ) ದೃಷ್ಟಾಂತ**

17) ‘ದಿನಪಸುತ’ ಎಂದರೆ

ಅ) ಭೀಷ್ಮ ಆ) ಕರ್ಣ ಇ) ಪಾರ್ಥ ಈ) ಭೀಮ

**ಉ : ಆ) ಕರ್ಣ**

18) ‘ಕವಿ’ ಪದದ ತದ್ಭವ ರೂಪ

ಅ) ಕಬ್ಬಿಗ ಆ) ಕಬ್ಬ ಇ) ಕಜ್ಜ ಈ) ಅಜ್ಜ

**ಉ : ಅ) ಕಬ್ಬಿಗ**

19) ಕಂದ ಪದ್ಯದಲ್ಲಿ ಒಟ್ಟು ಮಾತ್ರೆಗಳ ಸಂಖ್ಯೆ

ಅ) 102 ಆ) 104 ಇ) 64 ಈ) 144

**ಉ : ಇ) 64**

20) ವೃತ್ತಗಳಲ್ಲಿರುವ ಪಾದಗಳ ಸಂಖ್ಯೆ

ಅ) 2 ಆ) 3 ಇ) 4 ಈ) 6

**ಉ :ಇ) 4**

21) ಅಂತಕಾತ್ಮಜ ಪದವು ಈ ಸಮಾಸಕ್ಕೆ ಉದಾಹರಣೆ

ಅ) ತತ್ಪುರುಷ ಆ) ಕರ್ಮಧಾರೆಯ ಇ) ದ್ವಂದ್ವ ಈ) ಬಹುವ್ರೀಹಿ

**ಉ : ಈ) ಬಹುವ್ರೀಹಿಸಮಾಸ**

22) 'ಅವಸಿ' ಪದದ ಅರ್ಥ

ಅ) ಭೂಮಿ ಆ) ಆಕಾಶ ಇ) ಚಂದ್ರ ಈ) ಸೂರ್ಯ

**ಉ : ಅ) ಭೂಮಿ**

23) 'ಚಕ್ರೇಶ್ವರ' ಪದವು ಈ ಸಂಧಿಗೆ ಸೇರಿದೆ.

ಅ) ಆಗಮಸಂಧಿ ಆ) ಆದೇಶ ಸಂಧಿ ಇ) ಗುಣ ಸಂಧಿ ಈ) ವೃದ್ಧಿಸಂಧಿ

**ಉ : ಇ) ಗುಣಸಂಧಿ**

24) 'ಸಿಂಹಾವಲೋಕನ' ಪದದ ಸಂಧಿ

ಅ) ಲೋಪ ಸಂಧಿ ಆ) ಆದೇಶ ಸಂಧಿ ಇ) ಗುಣ ಸಂಧಿ ಈ) ಸವರ್ಣದೀರ್ಘಸಂಧಿ

**ಉ : ಸವರ್ಣ ದೀರ್ಘಸಂಧಿ**

25) 'ವಿದ್ವಾಂಸ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ

ಅ) ರೂಢ ಆ) ಅಂಕಿತ ಇ) ಅನ್ವರ್ಥಕ ಈ) ಸರ್ವನಾಮ

**ಉ : ಇ) ಅನ್ವರ್ಥಕ**

# ಘಟಕ ಪರೀಕ್ಷೆ – 1

**ಅಂಕಗಳು: 20**

**ಅ) ಬಹು ಅಯ್ಕೆಯ ಪ್ರಶ್ನೆಗಳು.** **1x3=3**

1. ಪಾರ್ಥಭೀಮರು ಪದವು ಈ ವಾಕ್ಯರಣಾಂಶಕ್ಕೆ ಸೇರಿದೆ
   ಅ)ಬಹುವ್ರೀಹಿ ಆ) ತತ್ಪುರುಷ ಇ) ದ್ವಂದ್ವ ಈ) ದ್ವಿಗು
2. ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮೀ0ಯ ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು. ಇಲ್ಲಿರುವ ಅಲಂಕಾರ
   ಅ) ಉಪಮಾ ಆ) ದೃಷ್ಟಾಂತ ಇ) ರೂಪಕ ಈ) ಶ್ಲೇಷಾ
3. 'ಅಂತಕಾತ್ಮಜ ಪದದಲ್ಲಿ ಆಗಿರುವ ಸಂಧಿ
   ಅ) ಗುಣ ಆ) ಯಣ್ ಇ) ವೃದ್ಧಿ ಈ) ಸವರ್ಣದೀರ್ಘ

**ಅ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.** **1x3=3**

1. ಅಹಿತರೊಳ್ : ಸಪ್ತಮಿ ವಿಭಕ್ತಿ : : ಪಾಂಡವರ್ಗೆ : ______________
2. ಅಜ್ಜ : ಆರ್ಯ : : ಕಜ್ಜ : ______________
3. ಗುರುವೊಂದಾದಿಯೊಳ್ : ಉತ್ಪಲಂ : : ಲಘುನಾಲ್ಕು : ______________

**ಆ) ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x3=3**

1. "ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ" ಎಂದು ದುರ್ಯೋಧನ ಯಾರಿಗೆ ಹೇಳಿದನು ?
2. 0ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ ?
3. ದಿನಪಸುತ ಎಂದರೆ ಯಾರು ?

**ಇ) ಕೊಟ್ಟಿರುವ ಪ್ರಶ್ನೆಗೂ 2–3 ವಾಕ್ಯಗಳಲ್ಲಿ ಉತ್ತರಿಸಿ.** **2x3=6**

1. ಕವಿ ರನ್ನನ ಪರಿಚಯ ಮಾಡಿಕೊಡಿ.
2. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?
3. ಪಾರ್ಥ – ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?

**4. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ** **1x3=3**

ಪುಟ್ಟಿದ ________________________________

________________________________ಛಲಮನೆ ಮೆಟ್ಟೆವೆಂ

**ಇ) ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ** **1x2=2**

1. "ಸಮರದೊಳೆನಗಜ್ಜ ಪೇಟ್ಮಾವುದು ಕಜ್ಜಂ"

# <u>ಘಟಕ ಪರೀಕ್ಷೆ – 2</u>

**ಈ) ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ:** **1x4=4**

1. ಅಂತಕಾತ್ಮಜ ಎಂದರೆ ಯಾರು ?
2. ಛಲವನ್ನೇ ಮರೆಯುವುದಾಗಿ ನಿರ್ಧರಿಸಿದವನು ಯಾರು ?
3. ಪಾಂಡವರನ್ನು ಸಂಧಿಗೆ ಒಪ್ಪಿಸುತ್ತೇನೆ ಎಂದು ದುರ್ಯೋಧನನಿಗೆ ಹೇಳಿದವರು ಯಾರು ?
4. ದುರ್ಯೊಧನನ ಪ್ರೀತಿಯ ತಮ್ಮ ಯಾರು ?

**ಉ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:** **2x3=6**

1. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ ?
2. ದುರ್ಯೋಧನ ತಾನು ಯಾವಾಗ ಸಂಧಿ ಮಾಡಿಕೊಳ್ಳಬಹುದೆಂದು ಹೇಳಿದನು ?
3. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?

**ಊ) ಸಂದಭದೋಡನೆ ಸ್ವಾರಸ್ಯ ಬರೆಯಿರಿ:** **2x3=6**

1. "ಪಾಂಡವರೊಳಿಟೆದು ಛಲಮನೆ ಮೆರೆವೆಂ"
2. "ಮೇಹಾಯ್ತು ಕೌರವಂಗವನಿತಳಂ"

**ಋ) ಕೊಟ್ಟಿರುವ ಪ್ರಶ್ನೆಗೂ 8–10 ವಾಕ್ಯಗಳಲ್ಲಿ ಉತ್ತರಿಸಿ.** **1x4=4**

1. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ

**ಅಥವಾ**

2. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ .

************

# ಪಠ್ಯ ಪೂರಕ ಅಧ್ಯಯನ – 3

## ಭಗತ್ ಸಿಂಗ್

**ಕೃತಿಕಾರರ ಪರಿಚಯ :**

ಡಾ.ಜಿ.ರಾಮಕೃಷ್ಣ ಅವರು 1939ರಲ್ಲಿ ಬೆಂಗಳೂರು ಗ್ರಾಮಾಂತರ ಮಾಗಡಿ ಬಳಿಯ ಕೆಂಪಸಾಗರದಲ್ಲಿ ಜನಿಸಿದರು. ಇವರು ಭಗತ್ ಸಿಂಗ್, ಭೂಪೇಶಗುಪ್ತ, ಚೆಗುವೆರ್ರೈ, ಲೆನಿನ್, ಬಾ ನೊಣವೇ, ವಾನರನಿಂದ ಮಾನವ ದರ್ಶನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿನೀಡಿ ಗೌರವಿಸಲಾಗಿದೆ. ಪ್ರಸ್ತುತ ಪಾಠವನ್ನು "ಭಗತ್ ಸಿಂಗ್" ಎಂಬ ಜೀವನ ಚರಿತ್ರೆಯಿಂದ ಆರಿಸಿಕೊಳ್ಳಲಾಗಿದೆ.

**ಈ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ**

**1. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಎಂದು ನಡೆಯಿತು?**

ಉ: ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಏಪ್ರಿಲ್ 13, 1919 ರಂದು ನಡೆಯಿತು.

**2. ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?**

ಉ: ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ತ್ಯಾಗದ ಪ್ರತೀಕ ಎಂದು ತೋರಿಸುತ್ತಾನೆ.

**3. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?**

ಉ : ಏಪ್ರಿಲ್ 13, 1919 ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು ಎರಡು ಸಾವಿರ ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ.

**4. ಭಗತ್‌ಸಿಂಗ್‌ನ ಸಹಚರರು ಯಾರು?**

ಉ : ಸುಖದೇವ್, ರಾಜ್‌ಗುರು, ಭಟುಕೇಶ್ವರ ದತ್ತರು ಭಗತ್‌ಸಿಂಗ್‌ರ ಸಹಚರರಾಗಿದ್ದರು

**5. ಭಗತ್‌ಸಿಂಗ್ ಹುತಾತ್ಮನಾದದ್ದು ಯಾವಾಗ?**

ಉ : ಭಗತ್‌ಸಿಂಗ್ ಅವರು ಮಾರ್ಚ್ 23, 1921 ರಂದು ಬ್ರಿಟಿಷರಿಂದ ಮರಣ ದಂಡನೆಗೆ ಈಡಾಗಿ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರ ಯೋಧನಾಗಿ ಹುತ್ಮಾತನಾದನು.

******

# ಮಾದರಿ ಪ್ರಶ್ನೆ ಪತ್ರಿಕೆ – 1 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 3 ) (FA-3)

## ವಿಭಾಗ – ಎ

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. 'ಶಿವಾನುಭಾವ ಶಬ್ದಕೋಶ' ಪುಸ್ತಕ ಬರೆದವರು 0ಯಾರು?
2. 0ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದು0ಯೋ೯ಧನ ಹೇಳುತ್ತಾನೆ?
3. ಭಗತ್‌ಸಿಂಗ್ ಹುತಾತ್ಮನಾದದ್ದು 0ಯಾವಾಗ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ:**

4. ಹುಲಿ0ಯು ಹಿಂದಿನಿಂದ ಹಾರಿಕೊಲ್ಲದಿರಲು ಕಾರಣವೇನು?
5. ಕವಿಗೆ 0ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೆ ಹಸುರ ಕಾಣುತ್ತಿದೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ:**

6. "ಪಾಂಡವರೊಳಿಂದು ಛಲಮನೆ ಮೆರೆವೆಂ"

**ಈ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ:**

7. ನೆಲಕಿರಿಮನೆಂದು ------------------------ಪುದುವಾಳ್ದಪನೇ.

**ಉ) ಕೊಟ್ಟಿರುವ ಪ್ರಶ್ನೆಗೆ (ಒಂದಕ್ಕೆ ಮಾತ್ರ) ಎಂಟು– ಹತ್ತು ವಾಕ್ಯದಲ್ಲಿ ಉತ್ತರಿಸಿ:**

**7.** ಎ) ಮೂರ್ತಿರಾ0ಯರ ದೃಷ್ಠಿ0ಯಲ್ಲಿ ಹುಲಿ0ಯು ಬೇಟೆ0ಯಾಡುವ ಬಗೆ0ಯನ್ನು ವಿವರಿಸಿ.

ಅಥವಾ

ಬಿ) ಶ್ಯಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿ0ಯ ಧರ್ಮವೇ?

## ವಿಭಾಗ –ಬಿ ( ವ್ಯಾಕರಣ)

**ಊ) ಕೆಳಗಿನ ಹೇಳಿಕೆಗಳಿಗೆ ಸರಿ0ಯಾದ ಉತ್ತರವನ್ನು ಆರಿಸಿ ಬರೆಯಿರಿ:**

8. ಕ್ರಿ0ಯಾಸಮಾಸಕ್ಕೆ ಇದು ಉದಾಹರಣೆ0ಯಾಗಿದೆ.
   ಎ) ಆಕಲ್ಲು ಬಿ) ಕೆಡಗಣ್ಣು ಸಿ) ಮೈಮುಚ್ಚು ಡಿ) ಹೊಸಗನ್ನಡ
9. ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದು ಪುನಾರವರ್ತನೆ0ಯಾದರೆ ಅದನ್ನು ಹೀಗೆ ಕರೆ0ಯುವರು.
   ಎ)ಅನುಪ್ರಾಸ ಬಿ) ವೃತ್ತ್ಯಾನುಪ್ರಾಸ ಸಿ) 0ಯುಮಕ ಡಿ)ಛೇಕಾನುಪ್ರಾಸ
10. ಅಕ್ಷರ ಗಣಗಳಲ್ಲಿ ಇರುವ ವಿಧಗಳು
   ಎ) ನಾಲ್ಕು ಬಿ) ಆರು ಸಿ) ಮೂರು ಡಿ) ಎಂಟು

## ವಿಭಾಗ – ಸಿ

**ಊ) ಕೊಟ್ಟಿರುವ ವಿಷ0ಯಗಳಲ್ಲಿ 0ಯಾವುದಾದರೂ ಒಂದನ್ನು ಕುರಿತು ಪ್ರಬಂಧ ರಚಿಸಿರಿ.**

11. ಎ) ಹೆತ್ತತಾಯಿ; ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು
    ಬಿ) ಮಾತೇ ಮುತ್ತು; ಮಾತೇ ಮೃತ್ಯು.

*******

**10ನೇ ತರಗತಿ** **ಪ್ರಥಮ ಭಾಷೆ ಸಿರಿಕನ್ನಡ** **ಗರಿಷ್ಠ ಅಂಕಗಳು–20**

# ಮಾದರಿ ಪ್ರಶ್ನೆ ಪತ್ರಿಕೆ – 2 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 3 ) (FA-3)

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** 1x3=3

1. ಮನೆಮಂಚಮ್ಮ ಇಂದು ಎಲ್ಲಿ ಪೂಜಿತಳಾಗುತ್ತಿದ್ದಾಳೆ ?
2. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು ?
3. ಅಶೋಕ ಪೈ ಅವರ ವೃತ್ತಿ ಯಾವುದು?

**ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ** 2x1=2

4. ಅ) ಜಲಿಯನ್ ವಾಲಾಭಾಗ್‌ಗೆ ಬಂದ ಬಾಲಕ ಭಗತ್ ಸಿಂಗ್ ಏನು ಮಾಡಿದನು ?
   ಆ) ಜನರಲ್ ಡಯರ್‌ನು ಜಲಿಯನ್ ವಾಲಾಬಾಗ್‌ನಲ್ಲಿ ಮಾಡಿಸಿದ ಕ್ರೂರ ಪೈಶಾಚಿಕ ಕೃತ್ಯವನ್ನು ತಿಳಿಸಿ.

**ಇ) ಈ ಕೆಳಗಿನ ಹೇಳಿಕೆಗಳಲ್ಲಿ ಒಂದಕ್ಕೆ ಸಂದರ್ಭದೊಡನೆ ಸ್ವಾರಸ್ಯ ವಿವರಿಸಿ** 1x3=3

5. ಅ) , ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು '
   ಆ) , ನಾನು ಮುಖ ಮೇಲಾಗಿ ಬಿದ್ದಿದ್ದೆನೆ ? '

**ಈ) ಈ ಕೆಳಗಿನ ಕವಿಯ ಸ್ಥಳ, ಕಾಲ, ಕೃತಿಗಳು, ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** 1ಥ3=3

6. ಕುವೆಂಪು

**ಉ) ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎಂಟು–ಹತ್ತು ವಾಕ್ಯಗಳಲ್ಲಿ ವಿವರಿಸಿ** 1x4=4

7. ಅ) ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ
   ಆ) ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ

**ಊ) ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರ ಆರಿಸಿ, ಕ್ರಮಾಕ್ಷರ ದೊಡನೆ ಬರೆಯಿರಿ** 1x2=2

**8. ಕ್ರಿಯಾಸಮಾಸಕ್ಕೆ ಉದಾಹರಣೆ ;**
(ಎ) ದೈವಭಕ್ತಿ (ಬಿ) ಹಿಂದಲೆ (ಸಿ) ಬಿಲ್ಗೊಂಡು (ಡಿ) ಧನುಜರಿಪು

**9. ವಾಚಾಳಿ – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ ;**
(ಎ) ತದ್ಧಿತಾಂತನಾಮ (ಬಿ) ತದ್ಧಿತಾಂತ ಭಾವನಾಮ (ಸಿ) ಕೃದಂತನಾಮ (ಡಿ) ಕೃದಂತಾವ್ಯಯ

**10. ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ , ಗಣ ವಿಂಗಡಿಸಿ ,ಛಂದಸ್ಸಿನ ಹೆಸರು ಬರೆಯಿರಿ** 1x3=3

ಏನು ಹೇಳೈ ಕರ್ಣಚಿತ್ತ
ಗ್ಲಾನಿ0ಯಾವುದು ಮನಕೇ ಕುಂತೀ
ಸೂನುಗಳ ಬಸಕೈಸಿ ಕೊಂಬುದು ಸೇರದೇ ನಿನಗೆ

*******

# ಗದ್ಯಪಾಠ 7
# ವೃಕ್ಷಸಾಕ್ಷಿ

**ಲೇಖಕರು – ದುರ್ಗಸಿಂಹ**

**ಆಕರ ಗ್ರಂಥ – ಪಂಚತಂತ್ರ**

**ಲೇಖಕರ ಪರಿಚಯ :** ದುರ್ಗ ಸಿಂಹ ಕವಿಯು ಈಗಿನ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಸವಡಿಯಲ್ಲಿ (ಕಿಸು ಕಾಡು ನಾಡಿನ ಸಯ್ಯಡಿಯಲ್ಲಿ) 1031 ರಲ್ಲಿ ಜನಿಸಿದರು. ಇವನು ಒಂದನೆಯ ಜಗದೇಕ ಮಲ್ಲನ ಆಸ್ಥಾನದಲ್ಲಿ ದಂಡ ನಾಯಕನೂ ಸಂಧಿ ವಿಗ್ರಹಿಯೂ ಆಗಿದ್ದನು. ಇವನು ಕರ್ನಾಟಕದಲ್ಲಿ ಪಂಚತಂತ್ರ ಎಂಬ ಕೃತಿಯನ್ನು ಬರೆದಿದ್ದಾನೆ. ಭೇಧ ಪರೀಕ್ಷಾ, ವಿಶ್ವಾಸ, ವಂಚನಾ ಮತ್ತು ಮಿತ್ರ ಕಾರ್ಯ ಎಂಬ ಐದು ತಂತ್ರಗಳನ್ನಾದರಿಸಿ 48 ಉಪಕಥೆಗಳು ಪಂಚತಂತ್ರ ಕೃತಿಯಲ್ಲಿ ಕಂಡು ಬರುತ್ತದೆ.
ಪ್ರಸ್ತುತ ಪಾಠವನ್ನು ದುರ್ಗ ಸಿಂಹನ ಕರ್ನಾಟಕ ಪಂಚತಂತ್ರ ಕೃತಿಯಿಂದ ಆರಿಸಿ ಕೊಳ್ಳಲಾಗಿದೆ.

ಹೊಸಗನ್ನಡ ಸಾರಾಂಶ ರೂಪ:

ವಚನ॥ ಮಧುರಾ ನಗರದೊಳಗೆ ಧರ್ಮಬುದ್ಧಿ ಮತ್ತು ದುಷ್ಟ ಬುದ್ಧಿಯೂ ಎಂಬ ಇಬ್ಬರು ವ್ಯಾಪಾರಿಗಳ ಮಕ್ಕಳು ಒಟ್ಟಿಗೆ ವ್ಯಾಪಾರಕ್ಕಾಗಿ ಹೋಗಿ ಬಹಳ ಹೊನ್ನನ್ನು ಪಡೆದು ಹಿಂಸಿರುಗಿ ಪುನಃ ತಮ್ಮ ಹುಟ್ಟುರಾದ ಮಧುರಾಪುರದ ಹೊರ ವಲಯದ ಹೂದೋಟದಲ್ಲಿ ಬೀಡು ಬಿಟ್ಟರು. ಅರ್ಧ ರಾತ್ರಿಯಾದಾಗ ಧರ್ಮ ಬುದ್ಧಿಯು ಪಾಪ ಬುದ್ಧಿಯ ದುಷ್ಟ ಬುದ್ಧಿಯನ್ನು ಕರೆದು ಗಳಿಸಿರುವ ಹೊನ್ನನ್ನು ಪಾಲು ಮಾಡಿಕೊಳ್ಳೋಣ ಎನ್ನಲು, ದುಷ್ಟಬುದ್ಧಿ ದುರ್ಬುದ್ಧಿಯಿಂದ ಹೀಗೆಂದನು. “ನಾವು ಈ ಹೊನ್ನನ್ನು ಪಾಲು ಮಾಡಿಕೊಂಡು ಮನೆಯಲ್ಲಿ ಸ್ವೇಚ್ಚೆಯಿಂದ ಇರುವವರಲ್ಲ. ಮರಳಿ ವ್ಯಾಪಾರಕ್ಕೆ ಹೋಗಬೇಕು ಆದ ಕಾರಣದಿಂದ ನಿನಗೂ ನನಗೂ ವೆಚ್ಚಕ್ಕೆ ಬೇಕಾಗುವಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನನ್ನು ಇಲ್ಲಿಯೇ ಇಡೋಣ” ಎಂದನು. ಧರ್ಮಬುದ್ಧಿಯು ಆ ಪಾಪ ಕರ್ಮನನ್ನು ತನ್ನ ಗೆಳೆಯನೆ (ತನ್ನಹಾಗೆ) ಎಂದು ಬಗೆದು ಅವನ ಮಾತಿಗೆ ಒಪ್ಪಿಕೊಂಡು ಒಂದು ದೊಡ್ಡ ಆಲದ ಮರದ ಬಳಿಯಲ್ಲಿ ಹೊನ್ನನ್ನು ಹೂಳಿ ಮರುದಿನ ಇಬ್ಬರೂ ನಗರಕ್ಕೆ ಹೋಗಿ ಇಷ್ಟ ವಿಷಯ ಸುಖಭೋಗಗಳನ್ನು ಅನುಭವಿಸುತ್ತಿದ್ದರು. ದುಷ್ಟ ಬುದ್ಧಿಯು ಧರ್ಮ ಬುದ್ಧಿಯನ್ನು ವಂಚಿಸಿ ಹೋಗಿ ಹೊನ್ನನೆಲ್ಲ ಕೊಂಡು ಹೊಂಡವನ್ನು ಮೊದಲಿನಂತೆ ಮುಚ್ಚಿದನು. ಸ್ವಲ್ಪ ದಿನಗಳ ಮೇಲೆ ತಾನೇ ಧರ್ಮ ಬುದ್ಧಿಯಲ್ಲಿಗೆ ಬಂದು ತನ್ನ ಬಳಿ ವೆಚ್ಚಕ್ಕೆ ಹೊನ್ನಿಲ್ಲ ಅದ್ದರಿಂದ ಮತ್ತಷ್ಟು ಹೊನ್ನನ್ನುತೆಗೆದುಕೊಂಡು ಬರೋಣವೆಂದು ಅವನನ್ನು ಕರೆದು ಕೊಂಡು ಹೋಗಿ ಹೊನ್ನನ್ನು ಹೂತಿಟ್ಟ ಸ್ಥಳವನ್ನು ಅಗೆದಾಗ ಅಲ್ಲಿ ಹೊನ್ನನ್ನು ಕಾಣದೆ ಇನ್ನೂ ಹೇಳದಿದ್ದರೆ (ಮಾತನಾಡದೆ) ಇರಲು ಸುಳ್ಳು ತನ್ನ ಮೇಲೆ ಬರುವುದೆಂದು ಹೊನ್ನನ್ನೆಲ್ಲ ನೀನೆ ತೆಗೆದಿರ ಬೇಕು ಎಂದನು.
ಕಂದ॥ ಅತಿಕುಟಿಲ ಮನಸ್ಸಿನವನಾದ ದುಷ್ಟ ಬುದ್ಧಿಯು ಧನದ ಮೇಲಿನ ವ್ಯಾಮೋಹ (ಲೋಭ) ತನದಿಂದ ಮತಿಗೆಟ್ಟವನಾಗಿ ಕಳ್ಳನಿಗೆ ಸುಳ್ಳೇ ತನ್ನ ಶಕ್ತಿ ಎಂಬ ವಾಕ್ಯವನ್ನು ನೆನೆಯುತ್ತ ಸುಳ್ಳನ್ನು ಹೇಳಿದನು ( ಕಳ್ಳನಿಗೆ ಸುಳ್ಳೇ ಪ್ರಧಾನ).
ಹಾಗೆ ದುಷ್ಟ ಬುದ್ಧಿಯು ಮೊದಲೇ ಹಾ। ಹಾ। ಎಂದು ಕೆಟ್ಟೆನೆಂದು ಬಾಯನ್ನು ಹೊಟ್ಟೆಯನ್ನು ಹೊಡೆದು ಕೊಳ್ಳುತ್ತ ಕೂಗುತ್ತ ಕೂಗುತ್ತ ( ಬೊಬ್ಬೆ ಹಾಕುತ್ತಾ) ಕಳವಳ ಗೊಂಡವನಂತೆ ರಕ್ಷಣೆಯಿಲ್ಲವೆಂದು ನುಡಿಯಲು, ಸ್ನೇಹ ನಾಶವಾಯಿತ್ತಲ್ಲಾ ಎಂದು ಜರಿಯುತ್ತ ನೀನೆ ಕದ್ದವನೆಂದು ಆರೋಪಿಸುತ್ತ

ವಿಚಾರ ಮಾಡೋಣವೆಂದು ಧರ್ಮಾಧೀಕರಣರಲ್ಲಿಗೆ ಬಂದು ಇಬ್ಬರೂ ನಡೆದ ವಿಚಾರವನ್ನೆಲ್ಲ ಸವಿಸ್ತಾರವಾಗಿ ಹೇಳಲು ಕೊನೆಯಲ್ಲಿ ದುಷ್ಟಬುದ್ಧಿಯು ಹೀಗೆ ಹೇಳಿದನು, ಹೊನ್ನನ್ನೆಲ್ಲವನ್ನೂ ಈತನೆ ತೆಗೆದುಕೊಂಡನೆಂಬುದಕ್ಕೆ ಸಾಕ್ಷಿಯಿದೆ. ಎನ್ನಲು ಸಭಾಸದರು ಸಾಕ್ಷಿಯನ್ನು ಹೇಳು ಎಂದಾಗ ದುಷ್ಟ ಬುದ್ಧಿಯು ಹೊನ್ನನ್ನು ಇಡುವಾಗ ಇವನು ಮತ್ತು ತಾನಲ್ಲದೆ ಅಲ್ಲಿ ಇನ್ನೂ ಯಾರು ಮನುಷ್ಯರಿರಲಿಲ್ಲ. ಆದರೆ ಆ ಸಂದರ್ಭದಲ್ಲಿ ಅಲ್ಲಿದ್ದ ವಟವೃಕ್ಷವೇ ಸಾಕ್ಷಿ

ಎಂದನು. ಅದನ್ನು ಕೇಳಿ ಧರ್ಮಾಧೀಕರಣರು ವಿಸ್ಮಯ ಗೊಂಡರು. ಇವನ ಮಾತು ಹಿಂದೆಂದೂ ಕೇಳದ ವಿಚಾರ ಈ ಆಶ್ಚರ್ಯವನ್ನು ನೋಡೋಣವೆಂದು ಧರ್ಮ ಬುದ್ಧಿಯನ್ನು ಕರೆದು ನೀನು ಈ ಸಾಕ್ಷಿಯನ್ನು ಒಪ್ಪಿ ಕೊಳ್ಳುವುದು ಎಂದಾಗ  ಅವನು ವೃಕ್ಷ ಸಾಕ್ಷಿಯೆಂದು ಈ ಮೊದಲು ಹೇಳಿದವರಾಗಲೀ ಕೇಳಿದವರಾಗಲೀ ಇಲ್ಲ ಎಂದಾಗ

ವಚನ॥ ಮನುಷ್ಯರ ಸುಕೃತ್ಯ ಮತ್ತು ದುಷ್ಕೃತ್ಯಗಳನ್ನು  ದೈವಗಳು ತಿಳಿಯುವವು. ಆದುದರಿಂದ ಈ ಸಾಕ್ಷಿಯು ಉಚಿತವಾದುದು. ಮರವನ್ನು ಮಾತಾಡಿಸುವುದು. ಪರಮಗಹನವಾದ ವಿಚಾರ. ಅದ್ದರಿಂದ ಈ ಸಾಕ್ಷಿಯನ್ನು ಅಂಗೀಕರಿಸುವುದು ಎಂದು ಧರ್ಮಾಧೀಕರಣರು ಹೇಳಲು ಧರ್ಮ ಬುದ್ಧಿಯು ತುಂಬಾ ಆಲೋಚಿಸಿ ಒಪ್ಪಿಕೊಂಡನು. ಆಗ ಧರ್ಮಾಧೀಕರಣರು  ಇಂದು ಹೊತ್ತು ಹೋಯಿತು. (ಸಂಜೆ ಯಾಯಿತು) ನಾಳೆ ಹೋಗಿ ಕೇಳೋಣವೆಂದು ಹೇಳಲು ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಅಷ್ಟರಲ್ಲಿ ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಯನ್ನು ಹಿಡಿದು ಯಾರು ಇಲ್ಲದಂತಹ ಸ್ಥಳಕ್ಕೆ ಕರೆತಂದು ನಡೆದ ವೃತ್ತಾಂತವೆಲ್ಲವನ್ನು ವಿವರಿಸಿ ಹೇಳಿ ನಿಮ್ಮ ಒಂದು ಮಾತಿನಿಂದ  ತಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು  ಹಣವು ಬರುವುದು ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮ ಬುದ್ಧಿಯೇ ಹೊನ್ನನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ ಎಂದನು. ಆತನು ಹೀಗೆಂದನು

ಪರಧನ ಹರಣವೂ , ವಿಶ್ವಾಸ ಘಾತಕವೂ, ಸ್ವಾಮಿ ದ್ರೋಹವೂ ಇವೆಲ್ಲವೂ ಹೇಗೆಂದರೆ ಕೆಡಕನ್ನು ಉಂಟು ಮಾಡುವುದು. ಇವೆಲ್ಲವನ್ನೂ ನೀನು ತಿಳಿದೂ ಕೂಡ ನನ್ನನ್ನು ಸಾಕ್ಷಿ ಮಾಡಿ ನುಡಿಸಿ ಕೆಡಿಸಲು ಆಲೋಚಿಸಿದೆ. ನಿನ್ನ ಕ್ಷುಲ್ಲಕ (ಕೀಳು) ಆಲೋಚನೆಯು ತಮ್ಮ ಕುಲವನ್ನೆ ನಾಶ ಮಾಡುವ ರೀತಿಯದು ಎನ್ನಲು ದುಷ್ಟ ಬುದ್ಧಿಯು ಅದನ್ನು ಕೇಳಿ ನಮ್ಮ ಕಾರ್ಯವನ್ನು ಕೆಡಿಸದೆ ನಾನು ಹೇಳಿದಂತೆ ಮಾಡು ಎಂದು ತನ್ನ ತಂದೆಯನ್ನು ಒಪ್ಪಿಸುವಷ್ಟರಲ್ಲಿಯೇ ಸಂಜೆಯಾಯಿತು.

ಆಕಾಶವನ್ನು ಆವರಿಸಿ ದಿಕ್ಕುಗಳನ್ನು ಮುಚ್ಚಿ ದೃಷ್ಟಿಯನ್ನು ತಡೆದು, ಹೊಗೆ ತುಂಬಿ, ಮಳೆಗಾಲದ ಮೋಡ, ಕಾಡಿಗೆಯ ರಾಶಿ, ಕೋಗಿಲೆ, ವಿಷ್ಣುವಿನ ಕಾಯ, ಕಾಂತಿ, ಶಿವನ ಕುತ್ತಿಗೆಯ ಬಣ್ಣದ ಕತ್ತಲೆ ಕ್ರಮೇಣ ಹಬ್ಬಿತು.

ಆರೀತಿಯಾಗಿ ಕವಿದ ಕತ್ತಲೆಯಲ್ಲಿ ಕೊಲ್ಲದೆ ಬಿಡನೆಂದು ಕರೆದುಕೊಂಡು ಹೋಗುವಂತೆ ಕರೆದೊಯ್ದು ಮಾರಿಯ ಮನೆಗೆ ಹರಕೆಯ ಕುರಿಯನ್ನು ಕರೆದೊಯ್ಯುವಂತೆ ಆಲದ ಮರದ ಪೊಟರೆಯಲ್ಲಿ ತನ್ನ ತಂದೆಯನ್ನು ಹೋಗಿಸಿ ವ್ಯಾಜ್ಯವನ್ನು ಗೆದ್ದನೆಂದು ಖುಷಿಪಟ್ಟು ಮನೆಗೆ ಬಂದು ನಿದ್ರೆ ಮಾಡಿದನು.

ಬೆಳಗಾಗಲು ಧರ್ಮಬುದ್ಧಿಯು ದೇವ, ಗುರು, ದ್ವಿಜ ಪೂಜೆಗಳನ್ನು ಮಾಡುತ್ತ ಕಳೆಯುತ್ತಿರಲು, ದುಷ್ಟಬುದ್ಧಿಯು ಮುಖವನ್ನು  ತೊಳೆಯದೆ ಬಂದು ಧರ್ಮಾಧೀಕರಣರಿಗೆ ಹೀಗೆ ಹೇಳಿದನು.
ಪ್ರತ್ಯರ್ಥಿ ಬಂದಿಲ್ಲ. ಬಹಳ ಹೊತ್ತಾಯಿತು, ನಾನೇನು ಮಾಡಬೇಕು ಎಂದು ಕೇಳುತ್ತಿರಲು ಅಷ್ಟರಲ್ಲಿ ಧರ್ಮ ಬುದ್ಧಿಯು ಬರುತ್ತಿರುವುದನ್ನು ಕಂಡು ಆ ಕೂಡಲೇ ನಡೆಯಿರಿ ನಿಮ್ಮಿಬ್ಬರ ಜಗಳವನ್ನು ತೀರ್ಮಾನಿಸುವೆವು. ಎಂದು ಆಲದ ಮರದ ಸಮೀಪಕ್ಕೆ ಬಂದು ಅಷ್ಟ ವಿಧಾರ್ಚನೆಯಿಂದ ಮರವನ್ನು ಅರ್ಚಿಸಿ ಆನಂತರ ಅವರಿಬ್ಬರನ್ನು ವಿಚಾರಿಸಿ 'ಆ ಮರವನ್ನು ಕುರಿತು ಹೀಗೆಂದರು. ನೀನಾದರೋ ಯಕ್ಷಾದಿ ದಿವ್ಯ ದೇವತಾವಾಸವೂ ಆದ ವೃಕ್ಷವಾಗಿರುವೆ.
ಅದ್ದರಿಂದ ನಿನ್ನ ಸಾಕ್ಷಿ ಮಾಡಿ ಕೇಳುವೆವು. ನೀನು ನಿಜವನ್ನೇ ನುಡಿಯೆಂದು ಧರ್ಮಾಧೀಕರಣರು ಧರ್ಮದ ವಿಚಾರಗಳನ್ನು ಕುರಿತು ಹೇಳಿದಾಗ ಮರದ ಪೊಟರೆಯಲ್ಲಿ ಅಡಗಿ ಕುಳಿತಿದ್ದ ದುಷ್ಟ ಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮ ಗತಿಯನ್ನು ಬಿಟ್ಟು 'ಪ್ರಕೃತಿ ವಿಕೃತಿಯಾದ ಮನುಷ್ಯನ ಆಯುಷ್ಯ ಕುಂದುವುದು ಎಂದು ಹೇಳುವಂತೆ ಧರ್ಮ ಬುದ್ಧಿಯೇ ಧನವನ್ನು ತೆಗೆದು ಕೊಂಡಿರುವನು ಎಂದು ಹೇಳಿದನು. ನೆರೆದವರೂ ಧರ್ಮಾಧೀಕರಣರೂ ಇದನ್ನು ಕೇಳಿ ಆಶ್ಚರ್ಯಪಟ್ಟರು. ಧರ್ಮ ಬುದ್ಧಿಯೂ ಕೂಡ ಆಶ್ಚರ್ಯ ಚಕಿತನಾಗಿ ಇದು ದೈವವಲ್ಲ ಆಗಿದ್ದರೆ ಸತ್ಯವನ್ನೇಕೆ ನುಡಿ0ಯುದು?

ಇದೇನಾದರೊಂದು ಕೃತ್ರಿಮಾವಾಗಿರಬೇಕು. ಎಂದು ಆ ಮರವನ್ನು ಒಂದು ಸುತ್ತು ಹಾಕಿ ನೋಡಿ ಅಲ್ಲೊಂದು ದೊಡ್ಡ ಪೊಟರೆ0ಯೂ ಹಾಗೂ ಅಲ್ಲಿ ಮನುಷ್ಯ ಸಂಚಾರವಾದ ಕುರುಹು ಇದ್ದುದ್ದನ್ನು ನೋಡಿ ಧರ್ಮಾಧೀಕರಣರಿಗೆ ಹೀಗೆ ಹೇಳಿದನು ಸುಳ್ಳು ಹೇಳದ ವ್ಯಾಪಾರಿಯೇ ಇಲ್ಲ ನಾನು ವ್ಯಾಪಾರಿಯಾದುದರಿಂದ ನನ್ನ ವೃತ್ತಿ ಧರ್ಮಕ್ಕನುಗುಣವಾಗಿ ಧರ್ಮ ಬುದ್ಧಿ ಅಧರ್ಮ ಬುದ್ಧಿಯಾಗಿ ಧನವನ್ನು ವಂಚಿಸಿ ನನ್ನ ಮನೆಗೆ ತೆಗೆದುಕೊಂಡು ಹೋಗ ಬೇಕೆನ್ನುವರಷ್ಟರಲ್ಲಿ ಸೂರ್ಯನು ಮೂಡಿ ಬೆಳಗಾಯಿತು, ಅದ್ದರಿಂದ ತೆಗೆದುಕೊಂಡು ಹೋಗಲು ಸಾಧ್ಯವಾಗದೆ ಮರದ ಪೊಟರೆಯಲ್ಲಿಟ್ಟು ಬಂದೆನು. ಮರು ದಿವಸ ಹೋಗಿ ನೋಡವಷ್ಟರಲ್ಲಿ ಆ ಹೊನ್ನನ್ನು ಒಂದು ಸರ್ಪವು ಸುತ್ತಿಕೊಂಡು ಮಲಗಿತ್ತು. ಆದ್ದರಿಂದ ಹೊನ್ನನ್ನು ತೆಗೆದುಕೊಂಡು ಹೋಗಲು ಅಂಜಿದೆನು. ನೀವೆಲ್ಲ ಇಲ್ಲಿಯೇ ಇದ್ದು ನೋಡುತ್ತಿರಿ ಪೊಟರೆಯೊಳಗೆ ಹೊಗೆಯನ್ನು ಹಾಕಿ ಹಾವನ್ನು ಹೊರ ಹೋಗುವಂತೆ ಮಾಡಿ ಕದ್ದ ಒಡವೆಯನ್ನು ಕೊಡುವೆನು ಎಂದು ಧರ್ಮಬುದ್ಧಿಯು ಹುಲ್ಲು ಕಟ್ಟಿಗೆ0ಯನ್ನು ತರಿಸಿ ಅದನ್ನು ಪೊಟರೆ0ಯಲ್ಲಿ ತುಂಬಿ ದುಷ್ಟಬುದ್ಧಿ0ಯ ಮನೆಗೆ ಬೆಂಕಿ ಹಾಕುವಂತೆ ಬೆಂಕಿ ಹಾಕಲು ಹೊಗೆ ಸುತ್ತಿ ಬೆಂಕಿ ಉರಿಯ ತೊಡಗಲು ಒಳಗಿದ್ದ ಪ್ರೇಮಮತಿ ಧೈರ್ಯಗೆಟ್ಟು, ಕೂಗುತ್ತ (ಬೊಬ್ಬೆ ಹಾಕುತ್ತ) ಪೊಟರೆಯೊಳಗಿಂದ ಹೊರಳಿ ಉರುಳಿ ಕಂಡಗತ ಪ್ರಾಣನಾದನು. ಇದನ್ನು ನೋಡಿದ ಧರ್ಮಾಧೀಕರಣರು  ಇವನು ದುಷ್ಟ ಬುದ್ಧಿಯ ತಂದೆಯೆಂಬುದರಲ್ಲಿ ಸಂಶಯವಿಲ್ಲ. ಎಂದು ಅರಿತು ಈ ಪಾಪ ಕರ್ಮನಾಗಿರುವ ದುಷ್ಟ ಪುತ್ರನಿಂದ ನಿನಗೆ ಇಂತ ದುರ್ಮರಣ ಸಂಭವಿಸಿತು ಎಂದರು.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?**

**ಉ:–** ವೃಕ್ಷಸಾಕ್ಷಿ ಕತೆಯನ್ನು ದುರ್ಗಸಿಂಹನು ಬರೆದಿರುವ ಕರ್ನಾಟಕ ಪಂಚತಂತ್ರ ಕೃತಿಯಿಂದ ಆರಿಸಲಾಗಿದೆ.

**2. ದುಷ್ಟ ಬುದ್ಧಿಯು ಧರ್ಮ ಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಸಿದನು ?**

**ಉ:–** ದುಷ್ಟ ಬುದ್ಧಿಯು ಧರ್ಮ ಬುದ್ಧಿಯ ಮೇಲೆ ಹೊನ್ನು ಕದ್ದ ಆರೋಪವನ್ನು ಹೊರಸಿದನು.

**3. ಧರ್ಮಾಧೀಕರಣರು ಏಕೆ ವಿಸ್ಮಯ ಹೊಂದಿದ್ದರು?**

**ಉ:–** ದುಷ್ಟ ಬುದ್ಧಿಯ ವಟ ವೃಕ್ಷವೊಂದೇ (ಆಲದಮರ) ಸಾಕ್ಷಿ ಎಂದು ಹೇಳಿದಾಗ ಧರ್ಮಾಧೀಕರಣರು ವಿಸ್ಮಯ ಗೊಂಡರು.

**4. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**

**ಉ:–** ಧರ್ಮ ಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವರು, ಗುರುಗಳು, ಬ್ರಾಹ್ಮಣರ ಪೂಜೆ ಮಾಡುತ್ತ ಕಳೆದನು.

**5. ಧರ್ಮಾಧೀಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?**

**ಉ:–** ಧರ್ಮಾಧೀಕರಣರು ದುಷ್ಟಬುದ್ಧಿ ಮತ್ತು ಧರ್ಮ ಬುದ್ಧಿ ಇವರಿಬ್ಬರಲ್ಲಿ ಹೊನ್ನನ್ನು ಕದ್ದವರಾರು ಎಂದು ಸಾಕ್ಷಿ ಕೇಳಲು ವಟ ವೃಕ್ಷದ ಸಮೀಪಕ್ಕೆ ಬಂದರು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.**

**1. ಧರ್ಮಬುದ್ಧಿಗೆ ದುಷ್ಟ ಬುದ್ಧಿಯು ಯಾವ ಸಲಹೆಯಿತ್ತನು?**

**ಉ:–** ಧರ್ಮಬುದ್ಧಿಗೆ ದುಷ್ಟ ಬುದ್ಧಿಯು "ನಾವು ಇಷ್ಟು ಹೊನ್ನನ್ನು ಮನೆಯಲ್ಲಿಟ್ಟು ಸ್ವೇಚ್ಛೆಯಿಂದ ಬಾಳಲು ಸಾಧ್ಯವಿಲ್ಲ ಮತ್ತೆ ವ್ಯಾಪಾರಕ್ಕೆ ಬೇರೆ ಬೇರೆ ಊರಿಗೆ ಹೋಗ ಬೇಕಾದ್ದರಿಂದ ನಮ್ಮಿಬ್ಬರಿಗೂ ವೆಚ್ಚ ಮಾಡಲು ಎಷ್ಟು ಬೇಕೋ ಅಷ್ಟು ಹೊನ್ನನ್ನು ತೆಗೆದುಕೊಂಡು ಉಳಿದದ್ದನ್ನು ಇಲ್ಲಿಯೆ ಇಡೋಣ" ಎಂದು ಸಲಹೆ ನೀಡಿದನು.

**2. ದುಷ್ಟ ಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

**ಉ:–** ದುಷ್ಟ ಬುದ್ಧಿಯು ತನ್ನ ತಂದೆಯ ಕೈಯನ್ನು ಹಿಡಿದು ಯಾರು ಇಲ್ಲದಂತಹ ಸ್ಥಳಕ್ಕೆ ಕರೆದು ತಂದು ನಡೆದ ವೃತ್ತಾಂತ್ತವೆಲ್ಲವನ್ನು ವಿವರಿಸಿ ಹೇಳಿ "ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣವು ಬರುವುದು. ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮ ಬುದ್ಧಿಯೇ ಹೊನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ" ಎಂದು ಹೇಳಿದನು.

**3. ಧರ್ಮಾಧೀಕರಣರು ವಟವೃಕ್ಷಕ್ಕೆ ಏನು ಹೇಳಿದರು?**

ಉ:– ಕಳೆದು ಹೋಗಿರುವ ಹೊನ್ನು ಕದ್ದವರಾರು ಎಂದು ತಿಳಿಯಲು ಧರ್ಮಾಧಿಕರಣ ದುಷ್ಟ ಬುದ್ಧಿ ಮತ್ತು ಧರ್ಮ ಬುದ್ಧಿಯವರೊಡಗೂಡಿ ಹೊನ್ನನ್ನು ಹೂತಿಟ್ಟ ಆಲದಮರದ ಸಮೀಪಕ್ಕೆ ಬಂದು ಅಷ್ಟ ವಿಧಾರ್ಚನೆಯಿಂದ ಮರವನ್ನು ಅರ್ಚಿಸಿ ಆನಂತರ ಅವರಿಬ್ಬರನ್ನೂ ವಿಚಾರಿಸಿ ಆ ಮರವನ್ನು ಕುರಿತು "ನೀನಾದರೋ ಯಕ್ಷಾದಿ ದಿವ್ಯ .ದೇವತೆಗಳಿಗೆ ವಾಸಸ್ಥಾನವು ಮತ್ತು ಅವರ ಸೇವೆಯನ್ನು ಮಾಡುವ ವೃಕ್ಷವೂ ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುವೆವು ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

ಇ) **ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

1. **"ಪೊನ್ನನೆಲ್ಲಮಂ ನೀನೆ ಕೊಂಡೆ"**

ಉ: **ಆಯ್ಕೆ:–** ಈ ವಾಕ್ಯವನ್ನು ದುರ್ಗಸಿಂಹನ' ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷ ಸಾಕ್ಷಿ" ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:–** ವ್ಯಾಪಾರದಿಂದ ಬಂದ ಸಂಪತ್ತನ್ನು ಹಂಚಿ ಕೊಳ್ಳೋಣ ಎಂಬ ಧರ್ಮ ಬುದ್ಧಿಯ ಸಲಹೆಗೆ ದುಷ್ಟ ಬುದ್ಧಿಯು ಹಣವನ್ನು ತೆಗೆದುಕೊಂಡು ಮನೆಯಲ್ಲಿಟ್ಟರೆ ನಮಗೆ ತೊಂದರೆ ಯಾಗಬಹುದು. ಆದ್ದರಿಂದ ಖರ್ಚಿಗೆ ಬೇಕಾಗುವಷ್ಟು ಹಣವನ್ನು ಇಟ್ಟುಕೊಂಡು ಉಳಿದ ಹಣವನ್ನು ಇಲ್ಲಿಯೇ ಇಡೋಣ ಎಂದು ಅಲ್ಲಿಯೇ ಇದ್ದ ಆಲದ ಮರದ ಕೆಳಗೆ ಹೂತಿಟ್ಟರು. ಕೆಲವು ದಿನಗಳ ನಂತರ ದುಷ್ಟ ಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಹೊನ್ನೆಲ್ಲವನ್ನೂ ತೆಗೆದು ಕೊಂಡು ಹೋದನು. ಮತ್ತೆ ಕೆಲವು ದಿನಗಳ ನಂತರ ಧರ್ಮಬುದ್ಧಿಯನ್ನು ಕರೆದು ಖರ್ಚಿಗೆ ಹಣವು ಬೇಕೆಂದು ತಾವು ಹೊನ್ನನ್ನು ಹೂತಿಟ್ಟ ಜಾಗಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಹೊನ್ನು ಇಲ್ಲದಿರುವುದನ್ನು ಕಂಡು ದುಷ್ಟ ಬುದ್ಧಿಯೇ ಧರ್ಮ ಬುದ್ಧಿಗೆ ನೀನೆ ಎಲ್ಲ ಹೊನ್ನನ್ನು ಕಳ್ಳತನ ಮಾಡಿರುವೆ ಎಂಬ ಆರೋಪವನ್ನು ಮಾಡುತ್ತಾನೆ.

**ಸ್ವಾರಸ್ಯ :** ತನ್ನ ಮೇಲೆ ಅಪವಾದ ಬರದಂತೆ ನೋಡಿಕೊಳ್ಳುವ, ಮತ್ತು ಧರ್ಮ ಬುದ್ಧಿಯ ಮೇಲೆ ಅಪವಾದವನ್ನು ಹೊರಿಸುವ ದುಷ್ಟಬುದ್ಧಿ0ಯ ತಂತ್ರಗಾರಿಕೆಯು ಸ್ವಾರಸ್ಯವಾಗಿದೆ.

2. **"ಈತನ ಮಾತು ಅಶ್ರುತ ಪೂರ್ವಮ್"**

ಉ: **ಆಯ್ಕೆ:–** ಈ ವಾಕ್ಯವನ್ನು ದುರ್ಗಸಿಂಹನ' ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷ ಸಾಕ್ಷಿ" ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :–** ನ್ಯಾಯ ತೀರ್ಮಾನಕ್ಕಾಗಿ ಧರ್ಮಾಧಿಕರಣರ ಬಳಿ ಬಂದಾಗ ದುಷ್ಟ ಬುದ್ಧಿಯು ಹೊನ್ನನ್ನೆಲ್ಲವನ್ನು ಈತನೇ ಕದ್ದು ಕೊಂಡಿರುವುದಕ್ಕೆ ಸಾಕ್ಷಿ ಉಂಟು ಎಂದು ಹೇಳಿದನು ಆಗ ಸಭೆಯ ಸದಸ್ಯರು ಸಾಕ್ಷಿಯನ್ನು ಹೇಳು ಎನ್ನಲು ದುಷ್ಟ ಬುದ್ಧಿಯು ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತನು ಮತ್ತು ನಾನು ಬಿಟ್ಟು ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇರುವ ವಟ ವೃಕ್ಷವೇ ಸಾಕ್ಷಿ ಎಂದಾಗ ಧರ್ಮಾಧಿಕರಣರು ವಿಸ್ಮಯಗೊಂಡು ಈ ಮೇಲಿನ ಮಾತನ್ನು ಹೇಳಿಕೊಂಡರು.

**ಸ್ವಾರಸ್ಯ:–** ವೃಕ್ಷ ಸಾಕ್ಷಿ ಹೇಳುವುದು ಹಿಂದೆ ಎಂದೂ ಕೇಳಿಲ್ಲ ಎಂದು ಧರ್ಮಾಧಿಕರಣರೇ ಅಶ್ಚರ್ಯ ವ್ಯಕ್ತ ಪಡಿಸುವ ಸನ್ನಿವೇಶ ಸ್ವಾರಸ್ಯ ಪೂರ್ಣವಾಗಿದೆ.

3. **"ನಿನ್ನ ಪಮಿವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"**

ಉ: **ಆಯ್ಕೆ:–** ಈ ವಾಕ್ಯವನ್ನು ದುರ್ಗಸಿಂಹನ' ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷ ಸಾಕ್ಷಿ" ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:–** ಹೊನ್ನನ್ನು ತಾನು ಕದ್ದು ದುಷ್ಟ ಬುದ್ಧಿಯು ಧರ್ಮ ಬುದ್ಧಿಯ ಮೇಲೆ ಆರೋಪವನ್ನು ಹೊರಸಿ ಅದಕ್ಕೆ ವೃಕ್ಷವೇ ಸಾಕ್ಷಿಯೆಂದು ಧರ್ಮಾಧಿಕರಣರಿಗೆ ಹೇಳಿದನು. ಮತ್ತೆ ಮನೆಗೆ ಬಂದು ತನ್ನ ತಂದೆಯನ್ನು ಮರದ ಪೊಟರೆಯಲ್ಲಿ ಅಡಗಿ ಧರ್ಮ ಬುದ್ಧಿ0ಯೇ ಹೊನ್ನನ್ನು ಕದ್ದನೆಂದು ಹೇಳುವಂತೆ ಒತ್ತಾಯಿಸುತ್ತಾನೆ ಆಗ ದುಷ್ಟಬುದ್ಧಿಗೆ ಬುದ್ಧಿ ಹೇಳುತ್ತ ತಂದೆಯು ಪರಧನ ಸ್ವಾಮಿದ್ರೋಹ ವಿಶ್ವಾಸ ಘಾತುಕತನ ಇವೆಲ್ಲವೂ ಎಲ್ಲ ಕಾಲದಲ್ಲಿಯೂ ಹಾನಿಯನ್ನುಂಟು ಮಾಡುತ್ತದೆ. ನಿನ್ನ ದುರಾಸೆಯಿಂದ ಕಳ್ಳತನವು ನಮ್ಮ ಕುಲವನ್ನೇ ನಾಶ ಮಾಡುವುದು ಎಂದು ಹೇಳುತ್ತಾನೆ.

**ಸ್ವಾರಸ್ಯ:–** ಅನೀತಿ, ಅನ್ಯಾಯ, ಅಕ್ರಮಗಳಿಂದ ಸಂಪಾದಿಸುವುದು ಎಂದಿಗೂ ಒಳ್ಳೆಯದನ್ನು ಮಾಡಲಾರದು. ಎಂಬುದನ್ನು ದುಷ್ಟ ಬುದ್ಧಿಗೆ ತನ್ನ ತಂದೆ ಬುದ್ಧಿ ಮಾತನ್ನು ಹೇಳುವುದು ಸ್ವಾರಸ್ಯವಾಗಿದೆ.

**4. " ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗಂ"**

ಉ: **ಆಯ್ಕೆ:–** ಈ ವಾಕ್ಯವನ್ನು ದುರ್ಗಸಿಂಹನ' ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷ ಸಾಕ್ಷಿ" ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:–** ವ್ಯಾಪಾರದಲ್ಲಿ ದೊರೆತು ಹೂತಿಟ್ಟ ಹಣದ ಕಳುವಿನ ಆರೋಪವನ್ನು ದುಷ್ಟ ಬುದ್ಧಿಯು ಧರ್ಮ ಬುದ್ಧಿಯ ಮೇಲೆ ಹೊರಿಸುತ್ತಾನೆ. ನ್ಯಾಯ ತೀರ್ಮಾನಕ್ಕಾಗಿ ಧರ್ಮಾಧಿಕರಣರ ಬಳಿ ಬಂದು ನಡೆದುದೆಲ್ಲವನ್ನು ವಿವರಿಸಿ ಧರ್ಮಾಬುದ್ಧಿಯೇ ಹೊನ್ನನ್ನು ತೆಗೆದವನು ಎಂಬುದಕ್ಕೆ ಆಲದ ಮರವೇ ಸಾಕ್ಷಿ ಎನ್ನುತ್ತಾನೆ. ಮರುದಿನ ಅವರೆಲ್ಲರೂ ಹೊನ್ನನ್ನು ಅಡಗಿಸಿಟ್ಟಿದ್ದ ಆಲದ ಮರದ ಬಳಿ ಬರುತ್ತಾರೆ. ಮಗನ ಒತ್ತಾಯಕ್ಕೆ ಕಟ್ಟುಬಿದ್ದ ದುಷ್ಟ ಬುದ್ಧಿಯ ತಂದೆ ಈ ಮೊದಲೇ ಮರದ ಪೊಟರೆಯಲ್ಲಿ ಅಡಗಿ ಕುಳಿತಿರುತ್ತಾನೆ. ಧರ್ಮಾಧಿಕರಣರು ವೃಕ್ಷದ ಬಳಿ ವಿಚಾರಿದಾಗ ಅಲ್ಲಿ ಅಡಗಿ ಕುಳಿತಿದ್ದ ಪ್ರೇಮಮತಿಯು ಧರ್ಮಧ ದಾರಿಯನ್ನು ಬಿಟ್ಟು ಪ್ರಕೃತಿ ವಿಕೃತಿಯಾದರೆ ಮನುಷ್ಯನ ಆಯುಷ್ಯವು ಕುಂದುವುದು' ಎಂದು ನುಡಿಯುತ್ತಾನೆ.

**ಸ್ವಾರಸ್ಯ:–** ಪ್ರಕೃತಿ ಮುನಿದರೆ ಯಾರಿಗೂ ಉಳಿಗಾಲವಿಲ್ಲ. ವಟವೃಕ್ಷವು ಪ್ರಕೃತಿಯ ಕೊಡುಗೆ ಅದಕ್ಕೆ ವಿರುದ್ಧವಾಗಿ ನಡೆಯುವುದು ವಿಕೃತಿ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

**5. "ಹುಸಿಯದ ಬೇಹಾರಿಯೇ ಇಲ್ಲ"**

ಉ: **ಆಯ್ಕೆ:–** ಈ ವಾಕ್ಯವನ್ನು ದುರ್ಗಸಿಂಹನ' ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷ ಸಾಕ್ಷಿ" ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:–** ನ್ಯಾಯವನ್ನು ತೀರ್ಮಾನಿಸಲು ವೃಕ್ಷದ ಸಾಕ್ಷಿ ಕೇಳಲು ತೀರ್ಮಾನಿಸಿದಾಗ ದುಷ್ಟ ಬುದ್ಧಿಯು ತನ್ನ ತಂದೆಯನ್ನು ಮರದ ಪೊಟರೆಯಲ್ಲಿ ಅಡಗಿಸಿಟ್ಟು ಧರ್ಮಾಧೀಕರಣರು ಪ್ರಶ್ನಿಸಿದಾಗ ಧರ್ಮ ಬುದ್ಧಿಯೇ ಕದ್ದನೆಂದು ತಂದೆಯಿಂದ ಹೇಳಿಸುವನು. ವೃಕ್ಷವು ಸಾಕ್ಷಿಯನ್ನು ನುಡಿಯುವುದೇ ಆದಲ್ಲಿ ಸತ್ಯವನ್ನೇಕೆ ನುಡಿಯಲಾರದು ಎಂದು ಅನುಮಾನ ಗೊಂಡ ಧರ್ಮ ಬುದ್ಧಿಯು ಮರವನ್ನೊಮ್ಮೆ ಸುತ್ತು ಹಾಕಿದಾಗ ಪೊಟರೆಯಲ್ಲಿ ಮನುಷ್ಯ ಇರುವುದು ಅರಿತು ಕೊಂಡು ಇದರ ಮರ್ಮವನ್ನು ತಿಳಿಯಬೇಕೆಂದು ಈ ಮೇಲಿನ ಮಾತಿನಂತೆ ಹೇಳುತ್ತಾನೆ.

**ಸ್ವಾರಸ್ಯ:–** ವ್ಯಾಪಾರಿಗಳು ವೃತ್ತಿ ಧರ್ಮದಲ್ಲಿ ಕೆಲವೊಂದು ಸಲ ಸುಳ್ಳು ಹೇಳುತ್ತಾರೆ ಎಂಬ ಲೋಕರೂಢಿಯ ಮಾತು ಬಹು ಸ್ವಾರಸ್ಯ ಪೂರ್ಣವಾಗಿದೆ.

**ಈ) 8–10 ವಾಕ್ಯಗಳಲ್ಲಿ ಉತ್ತರಿಸಿ.**

**1. ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?**

**(ವಿಶೇಷ ಸೂಚನೆ: ವಿದ್ಯಾರ್ಥಿಗಳು ತಮ್ಮ ವಿವೇಚನೆಗೆ ಸೂಕ್ತವಾದ ಪಾತ್ರವನ್ನು ಕುರಿತು ಬರೆ0ಯು ಬಹುದಾಗಿದೆ)**

ಉ:– ವೃಕ್ಷ ಸಾಕ್ಷಿ ಪಾಠದಲ್ಲಿ ನಾನು ಮೆಚ್ಚುವ ಪಾತ್ರವೆಂದರೆ ಧರ್ಮಬುದ್ಧಿಯ ಪಾತ್ರ ಏಕೆಂದರೆ ಧರ್ಮಬುದ್ಧಿ ಧರ್ಮಮಾರ್ಗದಲ್ಲಿ ನಡೆಯುವ ವ್ಯಕ್ತಿ ಹೆಸರಿಗೆ ತಕ್ಕಂತೆ ಗುಣವನ್ನು ಹೊಂದಿದ್ದು ಧರ್ಮಬುದ್ಧಿಯ ಪಾತ್ರವು ಸಹನಶೀಲತೆ, ಸುಸಂಸ್ಕೃತ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. ತನ್ನ ಸ್ನೇಹಿತನ ಮಾತನ್ನು ನಂಬುಗೆಯಿಂದ ನೋಡಿದವನಾಗಿದ್ದಾನೆ, ಆತನಲ್ಲಿ ತಾಳ್ಮೆಯ ಸ್ವಭಾವ, ಉನ್ನತವಾದುದ್ದು, ಏಕೆಂದರೆ ದುಷ್ಟಬುದ್ದಿ ಈತನ ಮೇಲೆ ಕಳ್ಳತನದ ಆರೋಪ ಹೊರಿಸಿದರೂ ಭಯಪಡದೆ ಶಾಂತನಾಗಿ ವರ್ತಿಸಿದನು. ಸೂರ್ಯೋದಯವಾದೊಡನೆ ಧರ್ಮ ಬುದ್ಧಿಯು ದೇವರು, ಗುರುಗಳು, ಬ್ರಾಹ್ಮಣರ, ಪೂಜೆ ಮಾಡುತ್ತ ಬೆಳಗಿನ ಹೊತ್ತನ್ನು ಕಳೆದನು. ಎಂಬುದನ್ನು ನೋಡಿದರೆ ಆತನೊಬ್ಬ ದೈವ ಭಕ್ತನಾಗಿದ್ದನು. ಎಂದು ಹೇಳಬಹುದು. ಅಲ್ಲದೇ ,ಮರದ ಪೊಟರೆಯೊಳಗಿದ್ದ ಪ್ರೇಮಮತಿ, ಧರ್ಮ ಬುದ್ಧಿಯೇ ಹೊನ್ನನ್ನು ಕದ್ದನು ಎಂದು ಹೇಳಿದಾಗಲೂ ವಿಚಲಿತನಾಗದೆ ದೇವರು ಮಾತನಾಡಿದ್ದರೆ ಸತ್ಯವನ್ನು ಹೇಳುತ್ತಿತ್ತು. ಇದರಲ್ಲಿ ಏನೋ ಮೋಸ ಅಡಗಿದೆ ಎಂದು ತನ್ನ ಬುದ್ಧಿ ವಂತಿಕೆಯಿಂದ ಮರದೊಳಗೆ ಮನುಷ್ಯ ಸಂಚಾರವಾಗಿರುವುದನ್ನು

ಗ್ರಹಿಸಿಕೊಂಡು ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟ ಬುದ್ಧಿಯ ತಂದೆ ಪ್ರೇಮಮತಿಯನ್ನು ಹೊರಗೆ ಬರುವಂತೆ ಮಾಡಿ ಸತ್ಯವನ್ನು ತೋರಿಸುತ್ತಾನೆ. ಆದ್ದರಿಂದ ಆತ ಸತ್ಯವಂತನಾಗಿದ್ದನು. ದುಷ್ಟಬುದ್ಧಿಯ ತಂತ್ರ ಆತನಿಗೆ ತಿರುಗು ಬಾಣವಾಗುವಂತೆ ಮಾಡಿ ಸರಿಯಾದ ಪಾಠವನ್ನು ಕಲಿಸುತ್ತಾನೆ.

**2. ದುಷ್ಟ ಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.**

**ಉ:** ಅತಿ ಕುಟಿಲ ಮನಸ್ಸಿನ ದುಷ್ಟಬುದ್ಧಿಯು ಧರ್ಮಬುದ್ಧಿ ಮತ್ತು ತಾನು ಸಂಪಾದಿಸಿದ ಸಂಪತ್ತನ್ನು ಮನೆಗೆ ತೆಗೆದು ಕೊಂಡು ಹೋಗಲು ಬಿಡದೆ ಅದನ್ನು ಮರದ ಕೆಳಗೆ ಹೂತಿಡಲು ಧರ್ಮಬುದ್ಧಿಯನ್ನು ಒಪ್ಪಿಸುವಲ್ಲಿ ಯಶಸ್ವಿಯಾಗುತ್ತಾನೆ. ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಹೂತ್ತಿಟ್ಟಿದ್ದ ಹೊನ್ನನ್ನು ತಾನೇ ತೆಗೆದು ಕೊಂಡು ಅದರ ಕಳ್ಳತನ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುತ್ತಾನೆ. ಕೊನೆಗೆ ಇಬ್ಬರೂ ಧರ್ಮಾಧಿಕರಣರಲ್ಲಿಗೆ ಬಂದು ವ್ಯಾಜ್ಯ ತೀರ್ಮಾನಿಸುವಂತೆ ಕೇಳಿ ಕೊಳ್ಳುತ್ತಾರೆ. ನಡೆದುದೆಲ್ಲವನ್ನು ವಿವರಿಸಿ ಧರ್ಮಬುದ್ಧಿಯೇ ಹೊನ್ನನ್ನು ಕದ್ದಿದ್ದಾನೆಂದು ಹೇಳುವ ದುಷ್ಟ ಬುದ್ಧಿ0ಯು ಅದಕ್ಕೆ ಅಲ್ಲಿದ್ದ ಮರವೇ ಸಾಕ್ಷಿ ಎನ್ನುವನು, ಮರುದಿನ ಮರದ ಬಳಿ ಸಾಕ್ಷಿ ಕೇಳಲು ಹೋಗುವುದೆಂದು ತೀರ್ಮಾನವಾದಾಗ ಮನೆಗೆ ಬಂದ ದುಷ್ಟ ಬುದ್ಧಿಯು ತನ್ನ ತಂದೆಯ ಬಳಿ ಮರದ ಪೊಟರೆಯಲ್ಲಿ ಅವಿತು ಸಾಕ್ಷಿ ನುಡಿಯುವಂತೆ ಒತ್ತಾಯಿಸುತ್ತಾನೆ. ಒಲ್ಲದೆ ಮನಸ್ಸಿನಿಂದ ಅವನ ತಂದೆಯು ಮಗನ ಮೇಲಿನ ವ್ಯಾಮೋಹಕ್ಕೆ ಕಟ್ಟು ಬಿದ್ದು ಮರುದಿನ ಎಲ್ಲರೂ ಬರುವುದಕ್ಕೆ ಮುಂಚೆಯೇ ಮರದ ಪೊಟರೆಯಲ್ಲಿ ಅವಿತು ಕುಳಿತು ಕೊಳ್ಳುವನು. ಧರ್ಮಾಧೀಕರಣರು ದುಷ್ಟ ಬುದ್ಧಿ ಮತ್ತು ಧರ್ಮಬುದ್ಧಿಯರನ್ನು ನಿಲ್ಲಿಸಿ ವೃಕ್ಷದ ಸಾಕ್ಷಿ ಕೇಳಿದಾಗ ಪೊಟರೆಯಲ್ಲಿ ಅವಿತಿದ್ದ ದುಷ್ಟಬುದ್ಧಿಯ ತಂದೆಯು ಧರ್ಮ ಬುದ್ಧಿಯೇ ಹೊನ್ನನ್ನು ಕದ್ದಿರುವನೆಂದಾಗ, ಮರವು ಸಾಕ್ಷಿ ನುಡಿಯುವುದೇ ಆದಲ್ಲಿ ಅದು ಸತ್ಯವನ್ನು ಹೇಳದೇ ಏಕೆ ಸುಳ್ಳು ನುಡಿಯುವುದು ಎಂದು ಆಲೋಚಿಸಿದ ಧರ್ಮಬುದ್ಧಿಯು ಮರವನ್ನು ಪ್ರದಕ್ಷಿಣೆ ಹಾಕಿದಾಗ ಅಲ್ಲಿ ಮನುಷ್ಯ ಸಂಚಾರದ ಕುರುಹು ದೊರೆಯುತ್ತದೆ. ಆಗ ಧರ್ಮಬುದ್ಧಿಯು ಉಪಾಯವಾಗಿ ಎಲ್ಲಾ ವ್ಯಾಪಾರಿಗಳಿಗಿರುವಂತೆ ತನಗೂ ಕೂಡ ಹಣದ ಮೋಹವಿದೆ ಹೊನ್ನನ್ನು ತೆಗೆದುಕೊಂಡು ಹೋಗುವಷ್ಟರಲ್ಲಿ ಬೆಳಗಾಗಿದ್ದರಿಂದ ಪೊಟರೆಯಲ್ಲಿ ಅಡಗಿಸಿಟ್ಟಿದ್ದಾಗಿಯೂ ಮರುದಿನ ತೆಗೆದುಕೊಂಡು ಹೋಗಲು ಬಂದಾಗ ಅಲ್ಲಿ ದೊಡ್ಡ ಹಾವು ಇತ್ತೆಂದು ಹೊನ್ನನ್ನು ಅಲ್ಲಿಯೇ ಬಿಟ್ಟು ಹೋಗಿದ್ದುದ್ದಾಗಿ ತಿಳಿಸಿದನು. ಕಟ್ಟಿಗೆಯನ್ನು ತರಿಸಿ ಪೊಟರೆಗೆ ಬೆಂಕಿ ಹತ್ತಿಸಿದಾಗ ಪೊಟರೆಯಲ್ಲಿ ಅಡಗಿ ಕುಳಿತಿದ್ದ ದುಷ್ಟ ಬುದ್ಧಿಯ ತಂದೆ ಬೆಂಕಿಗೆ ಆಹುತಿಯಾಗುತ್ತಾನೆ ಹೀಗೆ ಅತಿಯಾಸೆಗೆ ಒಳಗಾಗಿ ತಾನು ಬೀಸಿದ ಬಲೆಯಲ್ಲಿ ತಾನೇ ಸಿಕ್ಕುಹೊನ್ನಿನ ಜೊತೆ ತನ್ನ ತಂದೆಯನ್ನು ಕಳೆದು ಕೊಳ್ಳುತ್ತಾನೆ.

**ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ**

1. ವಡ್ಡಾರಾಧನೆ : ಶಿವಕೋಟ್ಯಾಚಾರ್ಯ : : ಪಂಚತಂತ್ರ :.............................
2. ಕಬ್ಬ :ಕಾವ್ಯ :: ಬೇಹಾರಿ :.................................
3. ಅನೃತ : ಸುಳ್ಳು :: ಕೃತಿಮ :.................................
4. ಬಂದಲ್ಲದೆ : ಲೋಪಸಂಧಿ :: ಧೃತಿಗೆಟ್ಟು :............................
5. ದೈವಭಕ್ತಿ : ತತ್ಪುರುಷಸಮಾಸ :: ಅಬ್ಬೋದರ :..........................

**ಉತ್ತರಗಳು :–** 1. ದುರ್ಗಸಿಂಹ 2) ವ್ಯಾಪಾರಿ 3) ಮೋಸ, ವಂಚನೆ 4)ಆದೇಶಸಂಧಿ
5) ಬಹುವ್ರೀಹಿಸಮಾಸ

## ಭಾಷಾ ಚಟುವಟಿಕೆ

**ಅ) ಈ ಪದಗಳನ್ನು ಬಿಂಗಡಿಸಿ ಸಂಧಿಯ ಹೆಸರು ಬರೆಯಿರಿ.**

1. ಪೊಗಲ್+ಪೇಲ್ಕುಂ = ಪೊಗಲ್ಟೇಲ್ಕುಂ = ಆದೇಶಸಂಧಿ
2. ತಕ್ಕ + ಇನಿತು = ತಕ್ಕನಿತು = ಲೋಪಸಂಧಿ
3. ಪೊಟ್ದೇಳು+ ಎಡೆ = ಪೊಲ್ದಡೆ = ಲೋಪಸಂಧಿ

**ಆ) ಕೊಟ್ಟಿರುವ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

| | | | |
|---|---|---|---|
| ಅತಿಯಾದ | + ಕುಟಿಲ | = ಅತಿಕುಟಿಲ | = ಕರ್ಮಧಾರೆಯ ಸಮಾಸ |
| ಕೈಯನ್ನು | + ಕೊಳ್ವುದು | = ಕೈಕೊಳ್ವುದು | = ಕ್ರಿಯಾ ಸಮಾಸ |
| ಕಡಿದು | + ಏಕಾಂತ | = ಕಟ್ಟೇಕಾಂತ | = ಕರ್ಮಧಾರೆಯ ಸಮಾಸ |
| ಸ್ವಾಮಿಗೆ | + ದ್ರೋಹ | = ಸ್ವಾಮಿದ್ರೋಹ | = ತತ್ಪುರುಷ ಸಮಾಸ |
| ಪರರ | + ಧನ | = ಪರಧನ | = ತತ್ಪುರುಷ ಸಮಾಸ |
| ಧನದ | + ಹರಣ | = ಧನಹರಣ | = ತತ್ಪುರುಷ ಸಮಾಸ |
| ಸಾಕ್ಷಿಯನ್ನು | + ಮಾಡು | = ಸಾಕ್ಷಿಮಾಡು | = ಕ್ರಿಯಾ ಸಮಾಸ |
| ಬಲಕ್ಕೆ | + ಬಂದು | = ಬಲವಂದು | = ಕ್ರಿಯಾ ಸಮಾಸ |

**ಇ) ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರಹಾಕಿ, ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.**

u uuu | u u – | u u – |

ಅತಿಕುಟಿ । ಲಮನಂ। ಧನಲು ।

u u – | – – | u – u | u u – | u u – |

ಬ್ಧತೆಯಂ । ದಂದು । ಷ್ಟಬುದ್ಧಿ । ನುಡಿದಂ । ಪುಸಿಯಂ ।

ಛಂದಸ್ಸಿನ ಹೆಸರು : ಕಂದ ಪದ್ಯ

**ಲಕ್ಷಣ** * ಮೊದಲನೆಯ ಸಾಲಿನಲ್ಲಿ 4 ಮಾತ್ರೆಯ 3 ಗಣಗಳು ಬಂದು ಒಟ್ಟು 12 ಮಾತ್ರೆಗಳಿಂದ ಕೂಡಿದೆ. * ಎರಡನೆಯ ಸಾಲಿನಲ್ಲಿ 4 ಮಾತ್ರೆಯ 5 ಗಣಗಳು ಬಂದು ಒಟ್ಟು 20 ಮಾತ್ರೆಗಳಿಂದ ಕೂಡಿದೆ. ಇದು ಕಂದ ಪದ್ಯದ ಲಕ್ಷಣ ಹೊಂದಿರುವುದರಿಂದ ಇದು ಕಂದಪದ್ಯವಾಗಿದೆ.

ಭ ರ ನ ಭ ಭ ರ ಲಘು ಗುರು

– uu | – u – | u – u | – u u | – u u | – u – | u –

ಆ) ಮೇದಿನಿ । ಯಂಕ್ರಮ । ಕ್ರಮೇದ । ಪರ್ವಿದು । ದಾತ್ತನ । ಭೋವಿಭಾ । ಗಮಾ

ಛಂದಸ್ಸಿನ ಹೆಸರು : ಉತ್ಪಲ ಮಾಲಾ ವೃತ್ತ.

ಲಕ್ಷಣ : ಈ ಸಾಲಿನಲ್ಲಿ 20 ಅಕ್ಷರಗಳಿವೆ. ಭ.ರ.ನ.ಭ.ಭ.ರ.ಲ.ಗು. ಗಣಗಳು ಬಂದಿವೆ. ಸಾಲಿನ ಮೊದಲಲ್ಲಿ ಒಂದು ಗುರು ಬಂದಿದೆ. ಅದ್ದರಿಂದ ಇದು ಉತ್ಪಲ ಮಾಲ ವೃತ್ತ ಛಂದಸ್ಸಿನ ಲಕ್ಷಣವನ್ನು ಹೊಂದಿದೆ. ಅದಕ್ಕಾಗಿಯೇ ಇದು ಉತ್ಪಲ ಮಾಲ ವೃತ್ತ ಛಂದಸ್ಸಾಗಿದೆ.

# ಘಟಕ ಪರೀಕ್ಷೆ – 1

**I ಬಹು ಆಯ್ಕೆಯ ಪ್ರಶ್ನೆಗಳು**

1. 'ಅತಿಕುಟಿಲ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಅ) ತತ್ಪುರುಷ ಸಮಾಸ ಆ) ಕರ್ಮಧಾರೆಯ ಸಮಾಸ

ಇ) ಗಮಕಸಮಾಸ ಈ)ದ್ವಂದ್ವ ಸಮಾಸ

2. 'ಅರ್ಧರಾತ್ರಿಯೊಳ್' ಪದದಲ್ಲಿರುವ ವಿಭಕ್ತಿಯ ಹೆಸರು.

ಅ) ಪ್ರಥಮ ಆ) ಪಂಚಮೀ

ಇ) ಪಷ್ಠಿ ಈ) ಸಪ್ತಮಿ

3. 'ಅಚ್ಚೋದರ' ಪದದಲ್ಲಿ ಆಗಿರುವ ಸಂಧಿ.

ಅ) ಗುಣಸಂಧಿ ಆ) ಆದೇಶ ಸಂಧಿ

ಇ) ಸರ್ವರ್ಣದೀರ್ಘ ಸಂಧಿ ಈ) ಲೋಪಸಂಧಿ

**II. ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1. ತಕ್ಕೆನಿತು : ಲೋಪಸಂಧಿ :: ಪೋಗಲ್‌ವೇಲ್ಕುಂ : __________

2. ಕಬ್ಬ : ಕಾವ್ಯ :: ಬೇಹಾರಿ : __________

3. ಬವರ : ಜಗಳ :: ಬಳಾರಿ : __________

**III ಪ್ರತಿ ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
2. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
3. ಧರ್ಮಾಧಿಕರಣರು ವಟವೃಕ್ಷದ ಸಂಮೀಪಕ್ಕೆ ಏಕೆ ಬಂದರು?

**IV. ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ.**

1. ದುರ್ಗಸಿಂಹ ಕವಿಯ ಪರಿಚಯ ಮಾಡಿಕೊಡಿ.
2. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?
3. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

**V. ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ.**

1. "ಹುಸಿಯದ ಬೇಹಾರಿಯೇ ಇಲ್ಲ"

# ಘಟಕ ಪರೀಕ್ಷೆ – 2

**I. ಪ್ರತಿ ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
2. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಎಲ್ಲಿ ಬೀಡುಬಿಟ್ಟಿದ್ದರು?
3. ದುಷ್ಟಬುದ್ಧಿಯ ತಂದೆಯ ಹೆಸರೇನು?
4. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?

**II. ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ.**

1. ಸಂಜೆ ಕತ್ತಲಾವರಿಸಿದ ಬಗೆಯನ್ನು ದುರ್ಗಸಿಂಹ ಹೇಗೆ ವರ್ಣಿಸಿದ್ದಾನೆ?
2. ಧರ್ಮಾಧಿಕರಣರು ವಟವೃಕ್ಷವನ್ನು ಪೂಜಿಸಿ ಏನೆಂದು ಬೇಡಿದರು?
3. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

**III. ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ.**

1. " ಈತನ ಮಾತು ಅಶ್ರುತಪೂರ್ವಮ್"
2. " ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"

**IV. 8-10 ವಾಕ್ಯಗಳಲ್ಲಿ ಉತ್ತರಿಸಿ.**

1. ವೃಕ್ಷಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?

ಅಥವಾ

ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

KM

# ಬಹು ಆಯ್ಕೆಯ ಪ್ರಶ್ನೆಗಳು.

1. 'ಬೀಯ' ಪದದ ತತ್ಸಮ ರೂಪ

ಅ) ಜೀಯ ಆ) ಬೀಯ್ಯಾ ಇ) ವ್ಯಾಯ ಈ) ವ್ಯಯ

**ಉ:–ಈ) ವ್ಯಯ**

2. 'ಬಂದಲ್ಲದೆ' ಪದವು ಈಸಂಧಿಗೆ ಉದಾ:–

ಅ) ಲೋಪ ಆ) ಆಗಮ ಇ) ಆದೇಶ ಈ) ಗುಣ

**ಉ:– ಅ) ಲೋಪಸಂಧಿ**

3. 'ಚೋದ್ಯ' ಪದದ ಅರ್ಥ

ಅ) ಚೋರ ಆ) ಚೋದ ಇ) ಅದ್ಬುತ ಈ) ಆನೇಕ

**ಉ:– ಇ) ಅದ್ಭುತ**

4. 'ಅಬ್ಜೋಧರ' ಎಂದರೆ

ಅ) ಭಕಾಸುರ ಆ) ದೊಡ್ಡಹೊಟೆ ಇ) ವಿಷ್ಣು ಈ) ಶಿವ

**ಉ: ಇ) ವಿಷ್ಣು**

5. 'ತಕ್ಕನಿತು' ಪದದ ಹೊಸಗನ್ನಡ ರೂಪ

ಅ) ತಕ್ಕದು ಆ) ತಕ್ಕಸ್ವಲ್ಪ ಇ) ಸ್ವಲ್ಪ ಈ) ತಕ್ಕಷ್ಟು

**ಉ:–ಈ) ತಕ್ಕಷ್ಟು**

6. 'ಅನೃತಂ' ಎಂದರೆ

ಅ) ಸತ್ಯ ಆ) ಸುಳ್ಳು ಇ) ಧರ್ಮ ಈ) ನೀತಿ

**ಉ:– ಆ) ಸುಳ್ಳು (ಅಸತ್ಯ)**

7. "ಬಳ್ಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ" ಇಲ್ಲಿರುವ ಅಲಂಕಾರ

ಅ) ಶ್ಲೇಷಾ ಆ) ರೂಪಕ ಇ) ದೃಷ್ಟಾಂತ ಈ) ಉಪಮಾ

**ಉ: ಈ) ಉಪಮಾ**

8. 'ತೊಳೆಯದೆ' ಈ ಅವ್ಯಯಕ್ಕೆ ಉದಾಹರಣೆ.

ಅ) ಭಾವಸೂಚಕ ಆ) ಕೃದಂತಾವ್ಯಯ ಇ) ತದ್ಧಿತಾಂತಾವ್ಯಯ ಈ) ಸಾಮನ್ಯಾವ್ಯಯ

**ಉ:– ಇ) ತದ್ಧಿತಾಂತವ್ಯಯ**

9. 'ತಮ್ಮ ತಮ್ಮ' ಪದದ ಸರ್ವನಾಮ ರೂಪ

ಅ) ಗುಣವಾಚಕ ಆ) ಆತ್ಮಾರ್ಥಕ ಇ) ಪ್ರಶ್ನಾರ್ಥಕ ಈ) ಪುರುಷಾರ್ಥಕ

**ಉ:–ಆ) ಆತ್ಮಾರ್ಥಕ**

10. 'ತೆಂಕಣ' ಪದವು ಈ ನಾಮಪದಕ್ಕೆ ಸೇರಿದೆ.

ಅ) ಗುಣವಾಚಕ ಆ) ವಸ್ತುವಾಚಕ ಇ) ದಿಗ್ವಾಚಕ ಈ) ಪರಿಯಾಣವಾಚಕ

**ಉ:– ಇ) ದಿಗ್ವಾಚಕ**

11. 'ಪುದಿವಿನೊಳ್' ಈ ಪದದಲ್ಲಿರುವ ವಿಭಕ್ತಿ

ಅ) ಸಪ್ತಮೀ ಆ) ಷಷ್ಠಿ ಇ) ಪಂಚಮೀ ಈ) ಚತುರ್ಥಿ

**ಉ:– ಅ) ಸಪ್ತಮೀ**

12. 'ಆದಿತ್ಯೋದಯ' ಈ ಸಂಧಿಗೆ ಉದಾಹರಣೆ.

ಅ) ವೃದ್ಧಿ ಆ) ಗುಣ ಇ) ಯಣ್ ಈ) ಅನುನಾಸಿಕ

**ಉ:– ಆ) ಗುಣಸಂಧಿ**

13. **'ಬೀಣೆಯಂ'** ಪದದಲ್ಲಿರುವ ಗಣ

ಅ) ನಗಣ ಆ) ಭಗಣ ಇ) ಮಗಣ ಈ) ಯಗಣ

**ಉ:– ಇ) ಮಗಣ**

14. **'ಪೊನ್ನಮ್'** ಪದದಲ್ಲಿರುವ ವಿಭಕ್ತಿ

ಅ) ಪ್ರಥಮ ಆ) ದ್ವಿತೀಯಾ ಇ) ತೃತೀಯ ಈ) ಚತುರ್ಥಿ

**ಉ:– ಆ) ದ್ವಿತೀಯಾ**

15. **'ತಸ್ಕರ'** ಎಂದರೆ

ಅ) ಕಳ್ಳ ಆ) ಸುಳ್ಳ ಇ) ಮಳ್ಳ ಈ) ಧರ್ಮಬುದ್ಧಿ

**ಉ:– ಅ) ಕಳ್ಳ**

16. **'ಕೋಕಿಲಾ'** ಪದದ ತತ್ಸಮ ರೂಪ

ಅ) ಕೋಕಿ ಆ) ಕೋಳಿ ಇ) ಕಾಗೆ ಈ) ಕೋಗಿಲೆ

**ಉ:– ಈ) ಕೋಗಿಲೆ**

17. **'ಸ್ರಗ್ಧರಾ ವೃತ್ತ'** ದಲ್ಲಿರುವ ಪ್ರತಿಪಾದದ ಅಕ್ಷರಗಳು

ಅ) 19 ಆ) 20 ಇ) 21 ಈ) 22

**ಉ:– ಇ) 21.**

18. **'ಧೃತಿಗೆಟ್ಟು'** ಪದವು ಈ ಸಂಧಿಗೆ ಸೇರಿದೆ.

ಅ) ಗುಣ ಆ) ಲೋಪ ಇ) ಆಗಮ ಈ) ಆದೇಶ

**ಉ:– ಈ) ಆದೇಶ ಸಂಧಿ**

19. **'ಬಲವಂದು'** ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಅ) ಕ್ರಿಯಾ ಆ) ದ್ವಂದ್ವ ಇ) ಅಂಶಿ ಈ) ದ್ವಿಗು

**ಉ:– ಅ) ಕ್ರಿಯಾಸಮಾಸ**

20. **'ಪೊಳಲ್'** ಎಂದರೆ

ಅ) ಊರು ಆ) ನಗರ ಇ) ದೇಶ ಈ) ಪ್ರದೇಶ

**ಉ:– ಆ) ನಗರ**

21. ಸ.ತ.ತ.ನ.ಸ.ರ.ರ ಲಕ್ಷಣವುಳ್ಳ ವೃತ್ತ

ಅ) ಶಾರ್ದೂಲ ಆ) ಸ್ರಗ್ಧರಾ ಇ) ಮಹಾಸ್ರಗ್ಧರಾ ಈ) ಉತ್ಪಲಮಾಲಾ.

**ಉ:–ಇ) ಮಹಾಸ್ರಗ್ಧರಾವೃತ್ತ.**

22. **'ತಮ'** ಪದದ ಅರ್ಥ

ಅ) ಕತ್ತಲು ಆ) ಬೆಳಕು ಇ) ತಮ್ಮ ಈ) ತಾವು

**ಉ:–ಅ) ಕತ್ತಲು**

23. **'ದಿವ್ಯ'** ಪದದ ತದ್ಭವ ರೂಪ

ಅ) ಬೆಳಕು ಆ) ನೋಟ ಇ) ಶಕ್ತಿ ಈ) ದಿಬ್ಬ

**ಉ:– ಈ) ದಿಬ್ಬ**

24. **'ಮೆಲ್ಲಮೆಲ್ಲನೆ'** ಈ ಪದದ ವ್ಯಾಕರಣ ವಿಶೇಷ

ಅ) ದ್ವಿರುಕ್ತಿ ಆ) ಜೋಡಿಪದ ಇ) ನುಡಿಗಟ್ಟು ಈ) ಸರ್ವನಾಮ

**ಉ:–ಅ) ದ್ವಿರುಕ್ತಿ**

25. ಲಘು ನಾಲ್ಕು ಬಂದರೆ ಅದು ಈ ವೃತ್ತ

ಅ) ಉತ್ಪಲಮಾಲಾ ಆ) ಚಂಪಕ ಮಾಲಾ ಇ)ಸ್ರಗ್ಧರೆ ಈ) ಮಹಾ ಸ್ರಗ್ಧರೆ.

**ಉ:– ಆ) ಚಂಪಕ ಮಾಲಾ ವೃತ್ತ**

# ಪದ್ಯಪಾಠ–07
# ವೀರಲವ

**ಕವಿ – ಲಕ್ಷ್ಮೀಶ**
**ಆಕಾರ ಗ್ರಂಥ– ಜೈಮಿನಿ ಭಾರತ**

**ಕವಿ ಪರಿಚಯ:** ಲಕ್ಷ್ಮೀಶ ಕವಿಯು 1550 ರಲ್ಲಿ ಚಿಕ್ಕ ಮಂಗಳೂರು ಗ್ರಾಮದಲ್ಲಿ ಜನಿಸಿದರು. ಈತನಿಗೆ ಲಕ್ಷ್ಮೀರಮಣ. ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಇವನು ಜೈಮಿನಿ ಭಾರತ. ಎಂಬ ಪ್ರಸಿದ್ಧ ಕೃತಿಯನ್ನು ಬರೆದಿದ್ದಾನೆ. ಈತನಿಗೆ ಉಪಮಾಲೋಲ, **'**ಕರ್ನಾಟಕ ಕವಿ ಚೂತವನಚೈತ್ರ**'** ಎಂಬ ಬಿರುದುಗಳಿವೆ.

ಪ್ರಸ್ತುತ ಪದ್ಯಭಾಗವನ್ನು ಲಕ್ಷ್ಮೀಶನ 'ಜೈಮಿನಿ ಭಾರತ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

**ಪದ್ಯದ ಸಾರಾಂಶ ವಿವರಣೆ**

**1**

ಬಲಶಾಲಿಗಳಾದ ರಾಜರೆಲ್ಲರೂ ಸಹ ಶ್ರೀ ರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೇ ಕುದುರೆಯನ್ನು ಕಟ್ಟಲು ಹೆದರಿ, ಕುದುರೆಗೆ ನಮಸ್ಕರಿಸಿ ಅದನ್ನು ತಡೆಯದೇ ಇರಲು, ಶ್ರೀರಾಮನ ಯಜ್ಞಾಶ್ವದ ಪ್ರೀತಿಯ ಕುದುರೆಯು ಇಡೀ ಭೂಮಂಡಲದಲ್ಲಿ ಚಲಿಸುತ್ತ, ವಾಲ್ಮೀಕಿಯ ತಪೋವನದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಿತು. ಅಲ್ಲಿ ತನ್ನ ಸ್ನೇಹಿತರೊಡನೆ ಆಟವಾಡಿ ಮುಗಿಸಿ ಬಿಲ್ಲಿನ ಸಮೇತನಾಗಿ ಬರುತ್ತಿದ್ದ ವೀರಲವನು ಆಶ್ರಮವನ್ನು ಪ್ರವೇಶಿಸಿದ್ದ ಪೂಜಿಸಲ್ಪಟ್ಟ ಸುಂದರ ಕುದುರೆಯನ್ನು ಕಂಡನು.

**2**

ಉಪವನದೊಳಕ್ಕೆ ನುಗ್ಗಿದ ಕುದುರೆಯನ್ನು ನೋಡಿದ ಲವನು ಎಲ್ಲಿಯ ಕುದುರೆಯದು? ಉಪವನಕ್ಕೆ ನುಗ್ಗಿ ಹೂದೋಟವನ್ನು ಹಾಳು ಮಾಡಿದೆಯಲ್ಲ! ವಾಲ್ಮೀಕಿ ಮುನಿಶ್ರೇಷ್ಠರು ವರುಣನು ಕರೆದಿದ್ದರಿಂದ ಅಲ್ಲಿಗೆ ಹೋಗುವಾಗ ನನಗೆ ಈ ಉಪವನವನ್ನು ಕಾಯಲು ಹೇಳಿ ಹೋಗಿದ್ದರು. ಮತ್ತೆ ಅವರು ವರುಣನ ಲೋಕದಿಂದ ಹಿಂತಿರುಗಿ ಬಂದಾಗ ಈ ಹೂದೋಟವು ಹಾಳಾದುದನ್ನು ನೋಡಿ ಮುನಿಸಿಕೊಳ್ಳುವರು. ಎಂದು ಯೋಚಿಸುತ್ತ ಕುದುರೆಯಡೆಗೆ ಬಂದನು, ಆಗ ಲವನು ಅದರ ಹಣೆಯ ಮೇಲೆ ಬರಹದ ಪಟ್ಟಿಯು ಇದ್ದುದ್ದನ್ನು ನೋಡಿ ಅದನ್ನು ಓದತೊಡಗಿದನು.

**3.**

**"**ಈ ಭೂಮಿಯಲ್ಲಿ ಕೌಸಲ್ಯಯು ಪಡೆದ ಮಗನಾದ ಶ್ರೀ ರಾಮನೊಬ್ಬನೇ ವೀರ. ಅವನ ಯಜ್ಞ ಕುದುರೆಯನ್ನು ತಡೆಯಿರಿ : (ನಿರ್ವಹಿಸುವ) ಎಂದಿದ್ದನ್ನು ನೋಡಿ ಓಹೋ! ಅವನ (ಶ್ರೀರಾಮನ) ಗರ್ವವನ್ನು ಮುರಿಯದಿದ್ದರೆ ನನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೆ?
ಅಲ್ಲದೇ ನನ್ನ ತೋಳುಗಳಿದ್ದೂ ಏನು ಪ್ರಯೋಜನ? ಅಂದರೆ ರಾಮನ ಗರ್ವವನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಲವನು ಉರಿದೆದ್ದನು (ಆಕ್ರೋಶಗೊಂಡನು).

**4**

ಲವನು ತನ್ನ ಉತ್ತರೀಯವನ್ನು (ಮೇಲು ಹೊದಿಕೆ) ಹೊಸೆದು (ಉರಿಮಾಡಿಕೊಂಡು) ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಲು, ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರೂ ಅತಿಯಾಗಿ ಹೆದರಿಕೊಂಡು, ಬೇಡ ಬೇಡ ರಾಜರ ಕುದುರೆಯನ್ನು ಬಿಟ್ಟು ಬಿಡು, ಇಲ್ಲವಾದರೆ ನಮ್ಮನ್ನು ಹೊಡೆಯುತ್ತಾರೆ. ಎಂದರು ಅದಕ್ಕೆ ಅವನು ನಗುತ್ತ ಬ್ರಾಹ್ಮಣರ ಮಕ್ಕಳು ಹೆದರುವರೆಂದರೆ ಸೀತೆಯ ಮಗನು ಇದಕ್ಕೆ ಹೆದರುವನೇ? ಹೋಗಿ ನೀವು ಎಂದು ಲವನು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ ತೀಡಿ ಜೇಂಕಾರ ಮಾಡಿ ನಿಂತಿದ್ದನು.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು?**

**ಉ:–** ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಮೀಶ.

**2. ಯಜ್ಞಾಶ್ವವನ್ನು ಕಟ್ಟಿದವರು ಯಾರು?**

ಉ:– ವೀರಲವನು ಯಜ್ಞಾಶ್ವವನ್ನು ಕಟ್ಟಿಹಾಕಿದನು.

**3. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**

ಉ:– ಕುದುರೆಯನ್ನು ವೀರ ಲವನು ಉತ್ತರೀಯದಿಂದ (ಮೇಲು ಹೊದಿಕೆ) ಕಟ್ಟಿದನು.

**4. ಮುನಿಸುತರು ಹೆದರಲು ಕಾರಣವೇನು?**

ಉ:– ವೀರಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಶ್ರೀರಾಮನ ಕಡೆಯಿಂದ ಹೊಡೆಸಿಕೊಳ್ಳ ಬೇಕಾಗುವುದುದೆಂದು ಮುನಿಸುತರು ಹೆದರಿದರು.

**ಆ) ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ**

**1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

ಉ:– ರಾಂನು ರಾವಣನನ್ನು ಕೊಂದ ಬ್ರಹ್ಮ ಹತ್ಯಾ ದೋಷ ಪರಿಹಾರಕ್ಕಾಗಿ ಅಶ್ವಮೇಧ ಯಾಗವನ್ನು ಕೈಗೊಳ್ಳುವನು. ಸಂಚಾರಕ್ಕೆ ಕುದುರೆಯ ಬೆಂಗಾವಲಿಗೆ ತನ್ನ ಸಹೋದರ ಶತ್ರುಘ್ನನನ್ನು ಕಳುಹಿಸಿದನು. ಬಲಶಾಲಿಗಳಾದ ರಾಜರು ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೇ ಕುದುರೆಯನ್ನು ಕಟ್ಟಲು ಹೆದರಿ ಅದಕ್ಕೆ ನಮಸ್ಕರಿಸಿ, ಅದನ್ನು ತಡೆಯದೇ ಇರಲು, ಶ್ರೀರಾಮನ ಯಜ್ಞ ಕುದುರೆಯು ಇಡೀ ಭೂ ಮಂಡಲದಲ್ಲಿ ಚಲಿಸುತ್ತ, ವಾಲ್ಮೀಕಿ0ಯು ವಾಸವಿದ್ದ ತಪೋವನದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರನ್ನು ಬಯಸಿ ಆಶ್ರಮವನ್ನು ಪ್ರವೇಶಿಸಿತು.

**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

ಉ:– ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀ ರಾಮನೊಬ್ಬನೇ ವೀರ. ಅವನ ಯಜ್ಞ ಕುದುರೆ ಇದು, ಇದನ್ನು ನಿರ್ವಹಿಸುವವರು ಯಾರಾದರೂ ಸಮರ್ಥರು ಇದ್ದರೆ ಈ ಕುದುರೆಯನ್ನು ತಡೆಯಿರಿ" ಎಂದು ಬರೆಯಲಾಗಿತ್ತು.

**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

ಉ:– ವೀರ ಲವನು ತನ್ನ ಉತ್ತರೀಯವನ್ನು ಹೊಸೆದು, ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದನು. ಋಷಿ ಮುನಿಗಳ ಮಕ್ಕಳು ಅತಿಯಾಗಿ ಹೆದರಿಕೊಂಡು ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟು ಬಿಡು. ಇಲ್ಲವಾದರೆ ನಮ್ಮನ್ನು ಹೊಡೆಯುವರು ಎಂದರು. ಅದಕ್ಕೆ ಅವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಸೀತೆಯ ಮಗನು ಇದಕ್ಕೆ ಹೆದರುವನೇ? ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದಗೇರಿಸಿ ನಿಂತನು.

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

**1. "ರಘೂದ್ವಹನ ಸೊಲ್ಗೇಲಿ ನಮಿಸಲ್"?**

ಉ: **ಆಯ್ಕೆ:–** ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶನ 'ಜೈಮಿನಿ ಭಾರತ' ಕೃತಿಯಿಂದ ಆ0ಯ್ದ 'ವೀರಲವ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ರಾವಣನ ಹತ್ಯೆಯಿಂದ ಬಂದೊದಗಿದ ಬ್ರಹ್ಮ ಹತ್ಯಾ ದೋಷ ನಿವಾರಣೆಗಾಗಿ ಶ್ರೀ ರಾಮನು ಅಶ್ವಮೇಧ ಯಾಗವನ್ನು ಕೈಗೊಂಡು 0ಯಜ್ಞಾಶ್ವದ ರಕ್ಷಣೆಯ ಕುದುರೆಗೆ ಬೆಂಗಾವಲಾಗಿ ಶತ್ರುಘ್ನನನ್ನು ಕಳಿಸಿದನು. ಅದು ಇಡೀ ಭೂಮಂಡಲದೊಳಗೆ ಸಂಚರಿಸುತ್ತಿರಲು, ಬಲಶಾಲಿಗಳಾದ ರಾಜರೆಲ್ಲರೂ ಶ್ರೀ ರಾಮನ ಆಜ್ಞೆಯನ್ನು ಕೇಳಿ, ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟೊ ಕಳುಹಿಸಲು ಶ್ರೀ ರಾಮನ ಅಶ್ವಮೇಧ ಯಜ್ಞಾಶ್ವವು ವಾಲ್ಮೀಕಿಯ ಆಶ್ರಮವನ್ನು ಹೊಕ್ಕಿತು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳುತ್ತಾರೆ.

**ಸ್ವಾರಸ್ಯ :–** ಯಜ್ಞಾಶ್ವದ ವಿಶೇಷತೆ ಮತ್ತು ಶ್ರೀ ರಾಮನ ಬಗ್ಗೆ ಇತರ ರಾಜರು ಹೊಂದಿರುವ ಭಯ, ಭಕ್ತಿ ಗೌರವಗಳನ್ನು ಸ್ವಾರಸ್ಯವಾಗಿ ಹೇಳಲಾಗಿದೆ.

3. **“ತನ್ನ ಮಾತೆಯಂ ಸರ್ವಜನಮುಂ ಬಂಜೆಯನ್ನದಿರ್ದಪುದೆ”**

ಉ: **ಆಯ್ಕೆ:–** ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶನ ‘ಜೈಮಿನಿ ಭಾರತ’ ಕೃತಿಯಿಂದ ಆಯ್ದ ‘ವೀರಲವ’ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ವಾಲ್ಮೀಕಿಯ ಆಶ್ರಮ ಪ್ರವೇಶಿಸಿದ ಶ್ರೀರಾಮನ ಯಜ್ಞಾಶ್ವದ ಕುದುರೆಯ ಹಣೆಪಟ್ಟಿಯ ಮೇಲಿದ್ದ “ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀ ರಾಮನೊಬ್ಬನೇ ವೀರ. ಅವನ ಯಜ್ಞ ತುರಗವಿದು. ಇದನ್ನು ಧರಿಸುವ (ಕಟ್ಟುವ) ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ” ಎಂದಿದ್ದನ್ನು ನೋಡಿ ಓಹೋ! ಶ್ರೀರಾಮನ ಗರ್ವವನ್ನು ಮುರಿಯದಿದ್ದರೆ ನನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೇ? ಅಲ್ಲದೇ ನನ್ನ ತೋಳುಗಳಿದ್ದೂ ಏನು ಪ್ರಯೋಜನ? ಅಂದರೆ ರಾಮನ ಗರ್ವವನ್ನು ಮುರೆಯುತ್ತೇನೆ ಎಂದು ಪ್ರತಿಜ್ಞೆಯನ್ನು ವೀರಲವನು ಮಾಡಿದನು.

**ಸ್ವಾರಸ್ಯ :–** ವೀರಲವನು ತನ್ನ ತಾಯಿ ವೀರಜನನಿ ಎಂಬ ಮಾತೃ ಪ್ರೇಮವನ್ನು ಜೊತೆಗೆ ತನ್ನ ವೀರತ್ವವನ್ನು ಪ್ರದರ್ಶಿಸುವುದು ಸ್ವಾರಸ್ಯ ಪೂರ್ಣವಾಗಿದೆ.

3. **“ಅರಸುಗಳ ವಾಜಿಯಂ ಬಿಡು”**

ಉ: **ಆಯ್ಕೆ:–** ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶನ ‘ಜೈಮಿನಿ ಭಾರತ’ ಕೃತಿಯಿಂದ ಆಯ್ದ ‘ವೀರಲವ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ಶ್ರೀ ರಾಮನ ಯಜ್ಞಾಶ್ವವನ್ನು ವೀರಲವನು ತನ್ನ ಉತ್ತರೀಯದಿಂದ (ಮೇಲು ಹೊದಿಕೆ) ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ ಅಲ್ಲಿದ್ದ ಋಷಿಮುನಿಗಳ ಮಕ್ಕಳೆಲ್ಲರು ಅತಿಯಾಗಿ ಹೆದರಿ ಬೇಡ ಬೇಡ ರಾಜರ ಕುದುರೆಯನ್ನು ಬಿಟ್ಟೂ ಬಿಡು ನಮಗೆ ತೊಂದರೆಯಾಗುವುದು ಎಂದು ಕುದುರೆಯನ್ನು ಕಟ್ಟ ಬೇಡವೆಂದು ವೀರಲವನನ್ನು ತಡೆಯುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:–** ಯಜ್ಞಾಶ್ವವನ್ನು ಕಟ್ಟಿ ಹಾಕಿದರೆ ಶ್ರೀ ರಾಮನ ಕಡೆಯವರಿಂದ ನಮಗೆ ಬರಬಹುದಾದ ಅಪಾಯ ಕುರಿತು ಮುನಿಕುಮಾರರ ಭಯವನ್ನು ಬಹುಸ್ವಾರಸ್ಯವಾಗಿ ಹೇಳಲಾಗಿದೆ.

4. **“ಜಾನಕಿಯ ಮಗನಿದಕೆ ಬೆದರುವನೆ”**

ಉ: **ಆಯ್ಕೆ:–** ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶನ ‘ಜೈಮಿನಿ ಭಾರತ’ ಕೃತಿಯಿಂದ ಆಯ್ದ ‘ವೀರಲವ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ರಾಮನ ಯಜ್ಞಾಶ್ವವನ್ನು ವೀರಲವನು ತನ್ನ ಉತ್ತರೀಯದಿಂದ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿ ಹಾಕುತ್ತಾನೆ. ಆಗ ಅಲ್ಲಿದ್ದ ಋಷಿ ಮುನಿಗಳ ಮಕ್ಕಳೆಲ್ಲರೂ ಅತಿಯಾಗಿ ಹೆದರಿಕೊಂಡು ರಾಜರ ಕುದುರೆಯನ್ನು ಬಿಟ್ಟು ಬಿಡು, ಅವರು ನಮ್ಮನ್ನು ಹೊಡೆಯುವರು ಎಂದು ಹೇಳಿದಾಗ ವೀರಲವನು ನಗುತ್ತಾ, ಬ್ರಾಹ್ಮಣರ ಮಕ್ಕಳು ಹೆದರಿದರೆ ಜಾನಕಿಯ ಮಗನು ಇದಕ್ಕೆ ಹೆದರುವನೆ, ಹೋಗಿ ನೀವು ಎಂದು ಶೌರ್ಯದಿಂದ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಜಾನಕಿಯ ಮಗನಾದ ವೀರಲವನು ಯಾರಿಗೂ ಹೆದರುವುದಿಲ್ಲ ಲವನು ತನ್ನ ಶೌರ್ಯವನ್ನು, ನಿರ್ಭಯವನ್ನು ತೋರಿಸುವುದು ಸ್ವಾರಸ್ಯ ಪೂರ್ಣವಾಗಿದೆ.

ಈ) **ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

1. **ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?**

ಉ:– ಭುಜಬಲವುಳ್ಳ ದೊರೆಗಳೆಲ್ಲರೂ ಶ್ರೀ ರಾಮನ ಆಜ್ಞೆಯನ್ನು ಕೇಳಿ ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟು ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞದ ಕುದುರೆಯು ಭೂಮಿಯ ಮೇಲೆ ಸಂಚರಿಸುತ್ತ ವಾಲ್ಮೀಕಿಯು ವಾಸವಿದ್ದ ಉದ್ಯಾನವನದ ಹಸುರನ್ನು ಬಯಸಿ ಆಶ್ರಮವನ್ನು ಹೊಕ್ಕಿತು. ಆಗ ಆ ತೋಟದ ರಕ್ಷಣೆಗೆ ಇದ್ದ ವೀರಲವನು ಕುದುರೆಯನ್ನು ಕಂಡನು. ಅದನ್ನು ನೋಡಿದ ಲವನು ಯಾವ ಕಡೆಯ ಕುದುರೆ ಇದು.

ಹೂದೋಟವನ್ನು ಹೊಕ್ಕು ನುರಿಯಾಗುವಂತೆ ತುಳಿಯುತ್ತಿದೆಯಲ್ಲ. ವಾಲ್ಮೀಕಿ ಋಷಿಗಳು ತೋಟವನ್ನು ಒಣಗದಂತೆ ಹಾರೈಕೆ ಮಾಡುವುದು ಎಂದು ನನಗೆ ನೇಮಿಸಿ ವರುಣ ದೇವನು ಕರೆಯಲಾಗಿ ಹೋದರು. ಮತ್ತೆ ವರುಣನ ಲೋಕದಿಂದ ಬಂದು ಇದನ್ನು ನೋಡಿ ಕೋಪಗೊಳ್ಳುತ್ತಾರೆಂದು, ಕುದುರೆಯ ಕಡೆಗೆ ಬಂದು ನೋಡಲು ಅದರ ಹಣೆಯ ಮೇಲೆ "ಮೆರೆವ ಪಟ್ಟದ ಬರಹವನ್ನು ಓದಿಕೊಂಡು ಕೌಸಲ್ಯೆ ಪಡೆದ ಕುಮಾರ ಶ್ರೀ ರಾಮನೊಬ್ಬನೇ ವೀರನು, ಆತನ ಯಜ್ಞದ ಕುದುರೆಯಿದು ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಿರಿ" ಎಂದು ಇದ್ದ ಲೇಖನವನ್ನು ಓದಿ ಇವನು ಅಹಂಕಾರವನ್ನು ಬಿಡಿಸದೇ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರು ಬಂಜೆ ಎನ್ನದೆ ಇರುವರೇ. ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ವೀರಲವನು ಉರಿದೆದ್ದು ಉತ್ತರೀಯವನ್ನು ಉರಿ ಮಾಡಿಕೊಂಡು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದನು

**2. ಲವನ ನಡವಳಿಕೆ ಮೆಚ್ಚುಗೆಯಾಯಿತೇ? ಏಕೆ?**

**ಉ:–** ಲವನ ನಡವಳಿಕೆಯು ಮೆಚ್ಚುಗೆಯಾಯಿತು.

* ಶ್ರೀ ರಾಮನ ಅಶ್ವಮೇಧದ ಕುದುರೆಯು ವಾಲ್ಮೀಕಿ ಮಹರ್ಷಿ ಆಶ್ರಮದ ಉಪವನದಲ್ಲಿದ್ದ ಹಸಿರಿಗೆ ಮನಸೋತು ಅಲ್ಲಿ ಪ್ರವೇಶಿಸಿದಾಗ ಉಪವನದ ಕಾವಲಿಗೆ ಮಹರ್ಷಿಗಳಿಂದ ನೇಮಕವಾಗಿದ್ದ ಲವನು ಅದನ್ನು ನೋಡಿ ಮಹರ್ಷಿಗಳು ತೋಟದ ಕಾವಲಿಗೆ ತನ್ನನ್ನು ನೇಮಿಸಿ ವರುಣನಲ್ಲಿಗೆ ಹೋಗಿರುವರು. ಅವರು ಮರಳಿ ಬಂದು ತೋಟದ ದುರವಸ್ಥೆಯನ್ನು ನೋಡಿ ಮುನಿಸಿಕೊಳ್ಳುವರು, ಎಂದು ಆಲೋಚಿಸುವನು. ತೋಟದ ರಕ್ಷಣೆಗೆ ಮುಂದಾಗುವನು. ಇಲ್ಲಿ ಲವನಲ್ಲಿ ಜಾಗೃತವಾದ ಕರ್ತವ್ಯ ಪ್ರಜ್ಞೆಯನ್ನು ಗಮನಿಸಬಹುದು.

ಯಜ್ಞಾಶ್ವದ ಕುದುರೆಯ ಮೇಲಿದ್ದ ಹಣೆಪಟ್ಟಿಯಲ್ಲಿ ಈ ಭೂಮಿಯಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು. ಯಜ್ಞಾಶ್ವವನ್ನು ಕಟ್ಟುವವರು ಯಾರಾದರೂ ಇದ್ದರೆ ಕಟ್ಟ ಬಹುದು. ಎಂದಿರುವುದನ್ನು ಓದಿದ ಲವನು ಶ್ರೀರಾಮನೊಬ್ಬನೇ ವೀರನಾದರೆ ಅವನನ್ನು ಪಡೆದ ತಾಯಿಯು ವೀರಮಾತೆಯೇ ತನ್ನಲ್ಲಿ ತೋಳ್ಬಲವಿದ್ದೂ ಏನು ಪ್ರಯೋಜವಿಲ್ಲ. ಹಾಗಾಗಿ ತನ್ನ ತಾಯಿಯನ್ನು ಬಂಜೆಯೆಂದು ಕರೆಯುವಂತಾಗುವುದು. ಆದ್ದರಿಂದ ಶ್ರೀರಾಮನ ಗರ್ವವನ್ನು ಅಡಗಿಸಿ ತನ್ನ ತಾಯಿಗೆ ವೀರ ಮಾತೆಯೆಂಬ ಗೌರವವನ್ನು ಒದಗಿಸಬೇಕು ಎಂಬ ಭಾವವು ಅವನಲ್ಲಿ ಜಾಗೃತವಾಗುವುದು ಇಲ್ಲಿ ತನ್ನನ್ನು ಹೆತ್ತ ತಾಯಿಗೆ ಉನ್ನತ ಗೌರವ ಸಿಗಬೇಕೆಂಬುದು ಹಾಗೂ ಮಾತೃ ಪ್ರೇಮವನ್ನು ಗಮನಿಸ ಬಹುದು. ಶ್ರೀರಾಮನ ಕುದುರೆಯನ್ನು ಬಿಡದಿದ್ದರೆ ಅವನ ಕಡೆಯಿಂದ ಹೊಡಿಸಿಕೊಳ್ಳ ಬೇಕಾಗುವುದು ಅದ್ದರಿಂದ ಕುದುರೆಯನ್ನು ಕಟ್ಟದಿರು ಎಂದು ಮುನಿಸುತರು ಲವನಲ್ಲಿ ಬೇಡಿ ಕೊಂಡಾಗ ಬ್ರಾಹ್ಮಣರ ಮಕ್ಕಳಾದ ನೀವು ಹೆದರುತ್ತಿರೆಂದರೆ ಜಾನಕಿಯ ಮಗನಾದ ನಾನಿದಕ್ಕೆ ಹೆದರುವನೇ? ಎಂದು ಲವನು ಉತ್ತರಿಸುವನು. ಇಲ್ಲಿ ಲವನು ಚಿಕ್ಕ ಹುಡುಗನಾದರೂ ಲೋಕ ವೀರ ಶ್ರೀರಾಮನಿಂದ ಮುಂದೆ ಎದುರಾಗ ಬಹುದಾದ ಅಪಾಯಕ್ಕೆ ಹೆದರದೇ ಅವನನ್ನು ಎದುರಿಸಲು ಸನ್ನದ್ಧನಾಗುವನು. ಲವನ ವೀರತೆ. ಶೌರ್ಯ ಗುಣ, ನಿರ್ಭಯತೆಯ ಗುಣವನ್ನು ಕಾಣ ಬಹುದಾಗಿದೆ.

**ಉ. ಹೊಂದಿಸಿ ಬರೆಯಿರಿ.**

| ಅ | ಬ | ಉತ್ತರಗಳು |
|---|---|---|
| 1. ದೇವನೂರು | ರಾಮ | ಲಕ್ಷೀಶ |
| 2. ಕೌಸಲ್ಯ | ಲಕ್ಮೀಶ | ರಾಮ |
| 3. ವರುಣ | ಅಶ್ವ | ಅಬ್ಧಿಪ |
| 4. ವಾಲ್ಮೀಕಿ | ಅಬ್ಧಿಪ | ಮುನಿ |
| 5. ತುರಂಗ | ಮುನಿ | ಅಶ್ವ |
| | ಮಳೆ | |
| | ಶತ್ರಘ್ನ | |

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

ಸೊಲ್ಲನ್ನು + ಕೇಳಿ = ಸೊಲ್ಗೇಳಿ = ಕ್ರಿಯಾಸಮಾಸ
ನಲ್ಲಿತು + ಕುದುರೆ = ನಲ್ದುದುರೆ = ಕರ್ಮಧಾರೆಯ ಸಮಾಸ
ಬಿಲ್ಲನ್ನು + ಕೊಂಡು= ಬಿಲ್ಗೊಂಡು = ಕ್ರಿಯಾ ಸಮಾಸ
ಬಿಲ್ದಿರುವನು + ಏರಿಸು = ಬಿಲ್ದಿರುವನೇರಿಸಿ = ಕ್ರಿಯಾಸಮಾಸ
ಪೂವಿನ + ತೋಟ = ಪೂದೋಟ = ತತ್ಪುರಿಷ ಸಮಾಸ

**ಆ) ಕೊಟ್ಟಿರುವ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.**

ವೀರ – ಬೀರ   ಕುವರ – ಕುಮಾರ

ಬಂಜೆ – ವಂದ್ಯಾ   ಲೋಕ – ಲೋಗ

ಯಜ್ಞ – ಜನ್ನ

**ಇ) ಬಿಂಗಡಿಸಿ ಸಂಧಿಯ ಹೆಸರು ಬರೆಯಿರಿ.**

ಚರಿಸು + ಅದ್ದರದ = ಚರಿಸುತದ್ದರದ = ಲೋಪಸಂಧಿ
ನಿಜ + ಆಶ್ರಮ = ನಿಜಾಶ್ರಮ = ಸವರ್ಣದೀರ್ಘ ಸಂಧಿ
ಲೇಖನವನು + ಓದಿ = ಲೇಖನವನೋದಿ = ಲೋಪಸಂಧಿ
ತೆಗೆದು + ಉತ್ತರೀಯಮಂ = ತೆಗೆದುತ್ತರೀಯಮಂ = ಲೋಪಸಂಧಿ
ಬೇಡ ಬೇಡ + ಅರಸುಗಳ = ಬೇಡ ಬೇಡರಸುಗಳ = ಲೋಪಸಂಧಿ
ನಿಂತು + ಇರ್ದನು = ನಿಂತಿರ್ದನು = ಲೋಪಸಂಧಿ

**ಈ) ಕೊಟ್ಟಿರುವ ಪದ್ಯ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

-U-   --U   UUUUU   --U
ಊರ್ವಿಯೊಳ್। ಕೌಸಲ್ಯೆ । ಪಡೆದ ಕುವ। ರಂರಾಮ

-U-   -U-   UU-U   UUUUU
ನೊರ್ವನೇ। ವೀರನಾ। ತನಯಜ್ಞ। ತುರುಗಮಿದು।

-UUU   -U-   -U-   UUU-   -U-   UUU-   -
ನಿರ್ವಹಿಸ।ಲಾರ್ಪರಾ।ರಾದೊಡಂ। ತಡೆಯಲೆಂ।ದಿರ್ದಲೇ।ಖನವನೋ।ದಿ   =32

**ಛಂದಸ್ಸಿನ ಹೆಸರು: ವಾರ್ಧಕ ಷಟ್ಪದಿ**

ಲಕ್ಷಣ: ಈ ಪದ್ಯದ 1 ಮತ್ತು 3ನೆಯ ಸಾಲಿನಲ್ಲಿ 5 ಮಾತ್ರೆಯ 4 ಗಣಗಳು ಬಂದು ಒಟ್ಟು 20 ಮಾತ್ರೆಗಳಿಂದ ಕೂಡಿದೆ. ಹಾಗೆಯೇ 3ನೆಯ ಸಾಲಿನಲ್ಲಿ 5ಮಾತ್ರೆಯ 6 ಗಣಗಳು ಬಂದು ಕೊನೆಯಲ್ಲಿ 1 ಗುರು ಉಳಿದು ಒಟ್ಟು 32 ಮಾತ್ರೆಗಳಿಂದ ಕೂಡಿದೆ. ಇದು ವಾರ್ಧಕ ಷಟ್ಪದಿಯ ಲಕ್ಷಣವನ್ನು ಹೊಂದಿದೆ. ಆದ್ದರಿಂದ ಇದು ವಾರ್ಧಕ ಷಟ್ಪದಿಯಾಗಿದೆ.

**I. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.**

ಊರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರುಗಮಿದು
ನಿರ್ವಹಿಸಲಾರ್ಪರಾರಾದೊಂಡಂ ತಡೆಯಲೆಂದಿರ್ದ ಲೇಖನಬನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವ ತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

ತೆಗೆದುತ್ತರೀಯಮಂ ಮುರಿದು ಕುದರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡ ಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮರೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ

ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗದುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೀಗೈದು ನಿಂತಿರ್ದನು

## ಬಹು ಆ0ಯ್ಕೆ ಪ್ರಶ್ನೆಗಳು

4. 'ನಿಜಾಶ್ರಮ' ಪದವನ್ನು ಬಿಡಿಸಿ ಬರೆದಾಗ
ಅ) ನಿಜ+ಆಶ್ರಮ ಆ) ನಿಜ+ಶ್ರಮ ಇ) ನಿನ್ನ+ಆಶ್ರಮ ಈ) ನಿಜ+ಆಶ್ರಮ.
**ಉ:- ಅ) ನಿಜ+ಆಶ್ರಮ**

5. 'ಅದ್ವರ' ಪದದ ಅರ್ಥ
ಅ) ಆದ್ಯರು ಆ) ಯಾಗ ಇ) ನುಡಿಗಟ್ಟು ಈ) ಗಾದೆ
**ಉ:-ಆ) ಯಾಗ**

6. 'ತಂದೆ-ಮಕ್ಕಳು' ಪದದ ವ್ಯಾಕರಣ ವಿಶೇಷ.
ಅ) ಜೋಡಿಪದ ಆ) ದ್ವಿರುಕ್ತಿ ಇ) ನುಡಿಗಟ್ಟು ಈ) ಗಾದೆ
**ಉ:- ಅ) ಜೋಡಿಪದ**

7. 'ಸಂಧ್ಯಾ' ಪದದ ಸಂಸ್ಕೃತ ರೂಪ
ಅ) ವಂದನೆ ಆ) ರಾಗ ಇ) ಸಂಜೆ ಈ) ರಾತ್ರಿ
**ಉ:-ಇ) ಸಂಜೆ**

8. 'ಪಸುರು' ಪದದ ಅರ್ಥ
ಅ) ಹಸುರು ಆ) ಹಸಿರು ಇ) ಹರಳು ಈ) ಹಸು
**ಉ:- ಅ) ಹಸುರು**

9. 'ಬಿಲ್ಗೊಂಡು' ಇಲ್ಲಿರುವ ಸಮಾಸ
ಅ) ಅಂಶಿ ಆ) ದ್ವಿಗು ಇ) ದ್ವಂದ್ವ ಈ) ಕ್ರಿಯಾ
**ಉ:- ಈ) ಕ್ರಿಯಾಸಮಾಸ**

10. 'ಬೇಡ ಬೇಡ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ
ಅ) ಜೋಡಿಪದ ಆ) ದ್ವಿರುಕ್ತಿ ಇ) ನುಡಿಗಟ್ಟು ಈ) ಸಮಾಸ
**ಉ:- ಆ) ದ್ವಿರುಕ್ತಿ**

11. 'ಪೂದೋಟಮ0ಯಂ' ಇಲ್ಲಿರುವ ವಿಭಕ್ತಿ
ಅ) ಪ್ರಥಮ ಆ) ದ್ವಿತೀಯಾ ಇ) ತೃತೀಯಾ ಈ) ಸಪ್ತಮೀ
**ಉ:- ಆ) ದ್ವಿತೀಯಾ**

12. 'ಬಿಲ್ದಿರುವನೇರಿಸಿ' ಇಲ್ಲಿರುವ ಸಮಾಸ
ಅ) ಕ್ರಿಯಾ ಆ) ತತ್ಪುರುಷ ಇ) ಕರ್ಮಧಾರೆಯ ಈ) ಅಂಶಿ
**ಉ:- ಅ) ಕ್ರಿಯಾಸಮಾಸ**

13. 'ಜಲಾಧಿಪತಿ' ಪದವು ಈ ಸಂಧಿಗೆ ಉದಾಹರಣೆ
ಅ) ಗುಣಸಂಧಿ ಆ) ವೃದ್ಧಿಸಂಧಿ ಇ) ಸವರ್ಣದೀರ್ಘಸಂಧಿ ಈ) ಆಗಮಸಂಧಿ
**ಉ:- ಇ) ಸವರ್ಣ ದೀರ್ಘಸಂಧಿ**

14. ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥ ಕೊಡುವಂತಹ ಅಲಂಕಾರ.
ಅ) ರೂಪಕ ಆ) ಉಪಮಾ ಇ) ಶ್ಲೇಷಾ ಈ) ದುಷ್ಟಾಂತ.
**ಉ:- ಇ) ಶ್ಲೇಷಾ**

15. 'ರಘಟಾ' ಪದದ ತದ್ಭವ ರೂಪ
ಅ) ರಘು ಆ) ರಗಳೆ ಇ) ಷಟ್ಪದಿ ಈ) ರಂಗಾ
**ಉ:- ಆ) ರಗಳೆ**

16. ರಗಳೆಯ ವಿಧಗಳಲ್ಲಿ ಇದು ಅಲ್ಲ.

ಅ) ಲಲಿತ ಆ)ಶಿಥಿಲ ಇ) ಉತ್ಸಾಹ ಈ) ಮಂದಾನಿಲ.

**ಉ:– ಆ) ಶಿಥಿಲ**

17. ವಾರ್ಧಕ ಷಟ್ಪದಿಯ ಒಟ್ಟು ಮಾತ್ರೆಗಳು

ಅ) 64 ಆ) 104 ಇ) 144 ಈ) 124

**ಉ:– ಇ) 144**

18. **'ಮುಳಿ'** ಪದದ ಅರ್ಥ

ಅ)ಹುಳಿ ಆ) ಉಳಿ ಇ) ಸಂತೋಷ ಈ) ಕೋಪ

**ಉ:– ಈ) ಕೋಪ**

19. ಪ್ರಾರಂಭದ ಪ್ರತಿ ಸಾಲಿನಲ್ಲಿ ಐದು ಮಾತ್ರೆಗಳ ನಾಲ್ಕು ಗಣಗಳಿಗಿರುವ ರಗಳೆ.

ಅ) ಲಲಿತಾ ಆ) ಅನಿತ ಇ) ಉತ್ಸಾಹ ಈ) ಮಂದಾನಿಲ

**ಉ:– ಅ) ಲಲಿತಾ**

20. **'ಪೂರ್ವ'** ಪದದ ಕನ್ನಡ ರೂಪ

ಅ) ತೆಂಕಣ ಆ) ಮೂಡಣ ಇ) ಬಡಗಣ ಈ) ಪಡುವಣ

**ಉ:– ಆ) ಮೂಡಣ**

21. **'ತುರಗ'** ಎಂದರೆ

ಅ)ಸುರಂಗ ಆ) ರಣರಂಗ ಇ) ಅಶ್ವ ಈ) ಗಜ

**ಉ:–ಇ) ಅಶ್ವ**

22. **'ನಲ್ಗುದುರೆ'** ಪದವು ಈ ಸಮಾಸಕ್ಕೆ ಸೇರಿದೆ.

ಅ) ತತ್ಪುರುಷಸಮಾಸ ಆ) ಕರ್ಮಧಾರೆಯಸಮಾಸ ಇ) ಅಂಶಿಸಮಾಸ ಈ) ದ್ವಿಗುಸಮಾಸ

**ಉ:– ಕರ್ಮಧಾರೆಯ**

23. **'ರನ್ನ'** ಪದದ ತತ್ಸಮ ರೂಪ.

ಅ) ರತ್ನ ಆ) ಕಬ್ಬಿಗ ಇ) ಚಿನ್ನ ಈ) ರಂಗ

**ಉ:– ಅ) ರತ್ನ (ರತುನ)**

24. **'ನಿಂತಿರ್ದನು'** ಪದವು ಈ ಸಂಧಿಗೆ ಉದಾಹರಣೆ

ಅ) ಲೋಪಸಂಧಿ ಆ) ಆಗಮಸಂಧಿ ಇ) ಗುಣಸಂಧಿ ಈ) ವೃದ್ಧಿಸಂಧಿ

**ಉ:– ಅ) ಲೋಪಸಂಧಿ**

25. ಪಸುರು–ಹಸುರು–ಪದದ ವ್ಯಾಕರಣ ವಿಶೇಷ.

ಅ) ದ್ವಿರುಕ್ತಿ ಆ) ಜೋಡಿನುಡಿ ಇ) ನಾಣ್ಣುಡಿ ಈ) ನುಡಿಗಟ್ಟು.

**ಉ:– ಆ) ಜೋಡಿನುಡಿ.**

# ಘಟಕ ಪರೀಕ್ಷೆ – 1

ಅಂಕಗಳು : 20

**ಅ) ಬಹು ಆಯ್ಕೆಯ ಪ್ರಶ್ನೆಗಳು:** **1x3=3**

1. 'ಊರ್ವಿಯೊಳ್' ಪದದಲ್ಲಿರುವ ವಿಭಕ್ತಿ.
   ಅ) ಚತುರ್ಥಿ ಆ) ಪಂಚಮಿ ಇ) ಷಷ್ಠಿ ಈ) ಸಪ್ತಮಿ
2. 'ಪೊದೋಟ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ?
   ಅ) ತತ್ಪುರುಷಸಮಾಸ ಆ) ಕರ್ಮಧಾರೆಯಸಮಾಸ ಇ) ದ್ವಿಗುಸಮಾಸ ಈ) ದ್ವಂದ್ವಸಮಾಸ
3. 'ಗಿರೀಶ' ಪದದಲ್ಲಿ ಆಗಿರುವ ಸಂಧಿ
   ಅ) ಆದೇಶಸಮಾಸ ಆ) ಗುಣಸಮಾಸ ಇ) ಸವರ್ಣದೀರ್ಘಸಮಾಸ ಈ) ಯಣ್‌ಸಂಧಿ

**ಆ) ಮೊದಲೆರಡು ಪದಗಳಿಗಿರುವಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.** **1x3=3**

1. ಊರ್ವಿ : ಭೂಮಿ :: ವಾಜಿ ..........................
2. ಭಾಮಿನಿ ಷಟ್ಪದಿ: ಮಾತ್ರಗಣ :: ಉತ್ಪಲ ಮಾಲ ವೃತ್ತ :..............
3. ಬಂಜೆ : ವಂದ್ಯಾ :: ಯಜ್ಞ :...........................

**ಇ) ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x3=3**

1. ಮುನಿಸುತರು ಹೆದರಲು ಕಾರಣವೇನು?
2. ಕುದುರೆಯನ್ನು ಲವನು ಯಾವುದಕ್ಕೆ ಕಟ್ಟಿದನು?
3. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ** **2x3=6**

1. ಕವಿ ಲಕ್ಷ್ಮೀಶ ಅವರ ಪರಿಚಯ ಮಾಡಿಕೊಡಿ.
2. 0ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
3. ವಾಲ್ಮೀಕಿ ಆಶ್ರಮಕ್ಕೆ 0ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
4. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ. **1x2=2**
   ಊರ್ವಿಯೊಳ್..............................................ಲವನುರಿದೆದ್ದನು.
5. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. **1x3=3**
   1. " ತನ್ನ ಮಾತೆಯಂ ಸರ್ವಜನಮುಂ ಬಂಜೆಯನ್ನುದಿರ್ದುಪುದೆ"

# ಘಟಕ ಪರೀಕ್ಷೆ – 2

**ಅ) ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **1x4=4**

1. ವಾಲ್ಮೀಕಿ ಋಷಿಗಳು ಎಲ್ಲಿಗೆ ಹೋಗಿದ್ದರು?
2. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
3. ಯಜ್ಞಾಶ್ವವನ್ನು ಕಟ್ಟಿದವರು ಯಾರು?
4. ವೀರಲವನ ತಾಯಿಯ ಹೆಸರೇನು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.** **2x3=6**

1. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ?
2. ನಾಮ ಫಲಕ ಓದಿದ ಲವ ಕೋಪಗೊಳ್ಳಲು ಕಾರಣವೇನು?
3. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ?

**ಇ) ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ.** **2x3=6**

1. "ಅರಸುಗಳ ವಾಜಿಯಂ ಬಿಡು?"
2. "ಜಾನಕಿಯ ಮಗನಿದಕೆ ಬೆದರುವನೆ?

**ಈ) 8–10 ವಾಕ್ಯಗಳಲ್ಲಿ ಉತ್ತರಿಸಿ.** **1x4=4**

1. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

2. ಲವನ ನಡವಳಿಕೆ ಮೆಚ್ಚುಗೆ ಯಾಯಿತೇ? ಏಕೆ?

********

# ಗದ್ಯ ಪಾಠ 08
# ಸುಕುಮಾರ ಸ್ವಾಮಿಯ ಕಥೆ

**ಲೇಖಕರು – ಶಿವ ಕೋಟ್ಯಾಚಾರ್ಯರು**
**ಆಕರ ಗ್ರಂಥ – ವಡ್ಡಾರಾಧನೆ.**

**ಲೇಖಕರ ಪರಿಚಯ:** ಶಿವಕೋಟ್ಯಾಚಾರ್ಯರು ಸುಮಾರು 10ನೆಯ ಶತಮಾನದಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಕೋಗಳಿ ನಾಡಿನಲ್ಲಿ ಜನಿಸಿದರು. ಕನ್ನಡ ಪ್ರಥಮ ಗದ್ಯ ಕೃತಿ 'ವಡ್ಡಾರಾಧನೆ' ಎಂಬ ಕೃತಿ0ಯನ್ನು ಬರೆದಿದ್ದಾರೆ. ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ ಇದರಲ್ಲಿ 19 ಕಥೆಗಳಿವೆ. ಅದರಲ್ಲಿ ಸುಕುಮಾರ ಸ್ವಾಮಿ ಕತೆ ಎಂಬುದು ಒಂದು ಉತ್ತಮ ಕತೆಯಾಗಿದೆ.
ಪ್ರಸ್ತುತ ಈ ಗದ್ಯಭಾಗವನ್ನು ಶಿವಕೋಟ್ಯಾಚಾರ್ಯರು ಬರೆದಿರುವ ವಡ್ಡಾರಾಧನೆ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಹೊಸಗನ್ನಡ ಸಾರಾಂಶ ರೂಪ**

ಈ ಜಂಬೂದ್ವೀಪದ ದಕ್ಷಿಣ ಭಾರತ ಭೂಮಿಯಲ್ಲಿ ಆವಂತಿ ಎಂಬ ನಾಡಿದೆ. ಆ ನಾಡಿನಲ್ಲಿ ಉಜ್ಜಯಿನಿ ಎಂಬ ಪಟ್ಟಣವಿತ್ತು. ಅಲ್ಲಿ ಇಂದ್ರದತ್ತನೆಂಬ ವ್ಯಾಪಾರಿ ಇದ್ದನು. ಅವನ ಹೆಂಡತಿ ಗುಣಮತಿ ಎಂಬುವಳು. ಆ ಇಬ್ಬರಿಗೂ ಸೂರದತ್ತನೆಂಬ ಮಗನಾಗಿ (ಸೋಮಶರ್ಮನಾಗಿದ್ದ ದೇವನು) ಹುಟ್ಟಿದನು. ಅದಲ್ಲದೆ ಆ ಪಟ್ಟಣದಲ್ಲಿ ಮೂವತ್ತೆರಡು ಕೋಟಿಹೊನ್ನನ್ನುಳ್ಳ ಸುಭದ್ರನೆಂಬ ವ್ಯಾಪಾರಿ ಇದ್ದನು. ಅವನ ಹೆಂಡತಿ ಸರ್ವಯಶಿಯೆಂಬುವಳು. ಆ ಇಬ್ಬರಿಗೆ ತ್ರಿವೇದಿಯಾಗಿದ್ದ ದೇವನ ಜೀವದಿಂದ ಯಶೋಭದ್ರೆ0ಯೆಂಬ ಮಗಳು ಜನಿಸಿದಳು. ಆ ತ್ರಿವೇದಿ ತನ್ನ ತಪಸ್ಸಿನ ಆಚರಣೆಯ ಫಲದಿಂದ ದೈವತ್ವವನ್ನು ಪಡೆದರೂ ತನ್ನ ಸಂಕಲ್ಪದ ಕಾರಣದಿಂದ ಮಿಥ್ಯತ್ವಕ್ಕೆ ಒಳಗಾಗಿ ಹೆಣ್ಣು ತನವನ್ನು ಹೊಂದಿದ್ದಳು. ಆ ಯಶೋಭದ್ರೆಯನ್ನು ಸೂರದತ್ತನಿಗೆ ಕೊಟ್ಟರು. ಆ ಇಬ್ಬರಿಗೂ ನಾಗ ಶ್ರೀಯಾಗಿದ್ದ ದೇವನು ಬಂದು ಸುಕುಮಾರ ಸ್ವಾಮಿಯೆಂಬ ಮಗನಾಗಿ ಹುಟ್ಟಿದನು. ಅವನು ಹುಟ್ಟಿದ ದಿನವೇ ವೈರಾಗ್ಯವುಂಟಾಗಿ ಸೂರದತ್ತ ವ್ಯಾಪಾರಿಯು ಸುಕುಮಾರ ಸ್ವಾಮಿಗೆ ಸೆಟ್ಟಿ ಪಟ್ಟವನ್ನು ವಹಿಸಿಕೊಟ್ಟು ತಪಸ್ಸಿಗೆ ತೆರಳಿದನು. ಸುಕುಮಾರ ಸ್ವಾಮಿಯು ಯೌವ್ವನವಾಗಿ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ ಕಾಂತಿಯಿಂದ ಕೂಡಿದವನಾಗಿದ್ದು, ಆತನಿಗೆ ಮೂವತ್ತೆರಡು ಲತಾ ಗೃಹಗಳು, ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ ಕಾಂತಿ ಹಾವಭಾವ ವಿಲಾಸ
ಸೌಂದರ್ಯಗಳಿಂದ ಕೂಡಿದ ದೇವತಾ ಸ್ತ್ರೀಯನ್ನು ಹೋಲುವ ಮೂವತ್ತೆರೆಡು ಮಂದಿ ದಿವ್ಯರಾದ ಸ್ತ್ರೀಯರು ಇದ್ದರು. ಮೂವತ್ತೆರೆಡು ಬಗೆಯ ನಾಟ್ಯ ಶಾಲೆಗಳು, ಮೂವತ್ತೆರಡು ಕೋಟಿ ಹೊನ್ನು, ಐದು ಬಗೆಯ ರತ್ನಗಳಿದ್ದವು. ಇವುಗಳೊಂದಿಗೆ ಸುಕುಮಾರಸ್ವಾಮಿ ಎಲ್ಲಾ ರೀತಿಯ ಸುಖಭೋಗಗಳನ್ನು ಅನುಭವಿಸುತ್ತಿರಲು.

ಒಂದು ದಿನ ಒಬ್ಬ ಜೋಯಿಸನು ಬಂದು ಈ ರೀತಿಯಾಗಿ ಭವಿಷ್ಯವನ್ನು ಹೇಳಿದನು. ಈ "ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು. ಹೀಗೆಂದ ಮಾತನ್ನು ತಾಯಿ ಯಶೋಭದ್ರೆ ಕೇಳಿ ತನ್ನ ಮನೆಗೆ ಋಷಿಗಳನ್ನು ಪ್ರವೇಶಿಸಲು ಬಿಡದ ಹಾಗೆ ಬಾಗಿಲು ಕಾಯುವವರಿಗೂ ಆಜ್ಞೆ ಮಾಡಿದಳು. ಹಾಗೆಯೇ ಕಾಲ ಕಳೆಯಿತು.

ಮತ್ತೊಂದು ದಿವಸ ರತ್ನದ್ವೀಪದಿಂದ ಒಬ್ಬ ವರ್ತಕನು ಲಕ್ಷದೀನಾರ (ಚಿನ್ನದ ನಾಣ್ಯ)ಗಳ ಬೆಲೆ ಬಾಳುವ ಎಲ್ಲಾ ರತ್ನಗಳಿಂದ ಕೂಡಿದ ಕಂಬಗಳಿಗಳನ್ನು ಮಾರಲು ಉಜ್ಜಯಿನಿಗೆ ತೆಗೆದು ಕೊಂಡು ಬಂದನು. ಆ ಪಟ್ಟಣವನ್ನು ಆಳುತ್ತಿದ್ದ ವೃಷಭಾಂಕನೆಂಬ ರಾಜನಿಗೂ ಜ್ಯೋತಿರ್ಮಾಲೆಯೆಂಬ ಮಹಾರಾಣಿಗೂ ಇಬ್ಬರಿಗೂ ರತ್ನ ಕಂಬಳಿಗಳನ್ನು ತೋರಿಸಲು, ಅದರ ಬೆಲೆಯೇನೆಂದು ಕೇಳಿದಾಗ ಲಕ್ಷದೀನಾರಗಳೆಂದು ಹೇಳಿದನು. ರಾಜನು ಅವನು ಕ್ರಯಕ್ಕೆ ಕೊಳ್ಳಲಾರದೆ ಆ ವರ್ತಕನನ್ನು ಹೋಗಲು ಹೇಳಿದನು.
ಈ ರೀತಿಯಾಗಿ ಉಜ್ಜಯಿನಿ ಪಟ್ಟಣದೊಳಗೆ ಎಲ್ಲರಿಗೂ ತೋರಿಸಿದಾಗ ಯಾರು ಕೊಳ್ಳಲಾರದೆ ಇದ್ದಾಗ ಆ ರತ್ನ ಕಂಬಳಿಗಳನ್ನು ತೆಗೆದು ಕೊಂಡು ಹೋಗಿ ಯಶೋಭದ್ರೆಗೆ ತೋರಿಸಿದನು. ಆಕೆ0ಯು ಲಕ್ಷದೀನಾರಗಳನ್ನು ಕೊಟ್ಟು ರತ್ನಗಂಬಳಿಗಳನ್ನು ತೆದುಕೊಂಡು ಒಂದೊಂದರಲ್ಲಿ ನಾಲ್ಕು ತುಂಡುಗಳಾಗುವಂತೆ ಮುವತ್ತೆರಡು ತುಂಡುಗಳನ್ನಾಗಿ

ಮಾಡಿ ಮುವತ್ತೆರಡು ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವರು ಆ ರತ್ನ ಕಂಬಳಿಯ ತುಂಡುಗಳನ್ನು ತಮ್ಮ ತಮ್ಮ ಚಪ್ಪಲಿಗಳಲ್ಲಿ ಸೇರಿಸಿಕೊಂಡರು. ಈ ಸಂಗತಿಯನ್ನು ರಾಜನಾದ ವೃಷಭಾಂಕನು ಕೇಳಿ ಆಶ್ಚರ್ಯಗೊಂಡನು ಅವರ ಐಶ್ವರ್ಯವನ್ನು ನೋಡುವೆನೆಂದು ಮನೆಗೆ ಬರುವುದನ್ನು...

ಯಶೋಭದ್ರೆ ಕೇಳಿ ರಾಜರು ಬರುವ ದಾರಿಯಲ್ಲಿ ನೀಲ, ವಜ್ರ, ಪದ್ಮರಾಗ ಮುತ್ತು, ಹವಳ ಎಂಬ ಬಗೆ ಬಗೆಯ ರೇಷ್ಮೆಯ ದಿವ್ಯವಾದ ಬಟ್ಟೆಗಳನ್ನು ಹಾಕಿಸಿದಳು. ರತ್ನಗಳಿಂದ ಚೆಲುವಾದ ಚಿನ್ನದ ಮುತ್ತಿನ ಸರಗಳಿಂದ ತೋರಣ ಕಟ್ಟಿದಳು. ರಾಜನ ಆಗಮನವನ್ನು ಎದುರು ನೋಡುತ್ತಿರಲು ರಾಜನು ಬಂದು ಇಂದ್ರನ ಅರಮನೆಯಲ್ಲಿ ಹೋಲುವ ಉಪ್ಪರಿಗೆ ಮನೆಯನ್ನು ಪ್ರವೇಶಿಸಿದನು. ಆಗ ರಾಜನು ಅಚ್ಚರಿ ಗೊಂಡವನಾಗಿ ದೇವಲೋಕವನ್ನು ಪ್ರವೇಶಿಸಿ ಪುಣ್ಯಶಾಲಿಯಂತೆ ಮಹಾವೈಭವದಿಂದ ಹಾಸಿಗೆ ಮೇಲೆ ಕುಳಿತು 'ಸುಕುಮಾರನು ಎಲ್ಲಿದ್ದಾನೆ" ಎಂದು ಕೇಳಿದನು. ಅದಕ್ಕೆ ಉತ್ತರವಾಗಿ "ಸ್ವಾಮಿ ಅವನು ಬಹಳ ಸಾದು ನೀವು ಬಂದುದ್ದನ್ನು ಅವನು ತಿಳಿದಿಲ್ಲ. ಉಪ್ಪರಿಗೆಯ ಮೇಲೆ ಇದ್ದಾನೆ", ಎಂದು ಹೇಳಲು ದೂತರೊಡನೆ ಹೇಳಿ ಕಳುಹಿಸಿ ಅವರನ್ನು ಬರಮಾಡಿ ಎಂದನು. ಆಗ ತಾಯಿ ಯಶೋಭದ್ರೆ ಹೋಗಿ" ಮಗನೇ ರಾಜರು ಬಂದಿದ್ದಾರೆ ಬಾ ಹೋಗೋಣ" ಎಂದಳು ಆಗ ಸುಕುಮಾರನು "ರಾಜರೆಂದರೆ ಯಾರು? ಎಂದು ಕೇಳಲು ತಾಯಿಯು "ನಮ್ಮನ್ನು ಆಳುವವರು ಎಂದಾಗ ಸುಕುಮಾರನು "ನಮ್ಮನ್ನು ಆಳುವವರೂ ಇರುವವರೆ!" ಎನ್ನುತ್ತ ಆಶ್ಚರ್ಯ ಪಟ್ಟೂ....

ತಾಯಿಯ ಮಾತನ್ನು ವಿರೋಧಿಸಲಾರದೆ ಬಂದನು. ಅವನನ್ನು ರಾಜನು ಕಂಡು" ನಾನು ಕಣ್ಣನ್ನು ಪಡೆದದ್ದು ಇಂದು ಸಾರ್ಥಕವಾಯಿತು ಎಂದುಕೊಂಡನು. ಪ್ರತ್ಯಕ್ಷವಾಗಿ ಮನ್ಮಥನನ್ನೆ ಅಪ್ಪಿಕೊಳ್ಳುವಂತೆ ಅವನನ್ನು ಅಪ್ಪಿಕೊಂಡು ಶ್ರೇಷ್ಟವಾದ ಆ ಹಾಸಿಗೆಯ ಮೇಲೆ ತನ್ನ ಜೊತೆಯಲ್ಲಿ ಕುಳ್ಳಿರಿಸಿದನು, ಆಗ ಸ್ವಜನರೂ, ಸೇವಕರ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸುವೆ ಕಾಳುಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸೊಂಟವನ್ನು, ಅತ್ತಿತ್ತ ಹೊರಳಾಡಿಸುತ್ತಿದ್ದು ದೀಪ ನೋಡಿದಾಗ

ಕಣ್ಣೀರು ಸುರಿಯುವುದನ್ನೂ ಕಂಡು ಈತನಿಗೆ ರೋಗಗಳಿವೆಯೆಂದು ಭಾವಿಸಿಕೊಂಡಿದ್ದನು. ಅಷ್ಟರಲ್ಲಿ 'ಸ್ನಾನಕ್ಕೆ ಏಳಿ ಬನ್ನಿ" ಎನ್ನಲು "ಹಾಗೇಯೆ ಮಾಡುವೆವು ಎಂದು "ಸ್ನಾನ ಮಾಡಲು ಉದ್ಯುಕ್ತನಾಗಿ ದೇವ ಲೋಕಕ್ಕೆ ಸಮಾನವಾದ ರತ್ನ ಮಯವಾದ ನೆಲಗಟ್ಟುಳ್ಳ ಬಾವಿಗೆ (ಕೆರೆಗೆ) ಹೋಗಿ ಸ್ನಾನ ಮಾಡಿದಾಗ. ತನ್ನ ಬೆರಳಿನಲ್ಲಿದ್ದ ಅಮೂಲ್ಯವಾದ ಉಂಗುರ ಬಿದ್ದು ಹೋಗಲು ಅದನ್ನು ಹುಡುಕುವುದಕ್ಕಾಗಿ ಆ ಕೆರೆಯ ಎದುರಿನ ತೂಬನ್ನು ತೆಗೆದು ನೀರನ್ನು ಬಿಟ್ಟನು. ಆಗ ಅಲ್ಲಿ.

ದೇವೇಂದ್ರನ ಖಜಾನೆಯನ್ನೆ ತೆರೆದ ರೀತಿಯಲ್ಲಿ ಶ್ರೇಷ್ಠವಾದ ಬಗೆಬಗೆಯ ರತ್ನಗಳ ವಿಚಿತ್ರವಾದ ಹಲವು ಆಭರಣಗಳನ್ನು ಕಂಡು ಬಹಳ ಆಶ್ಚರ್ಯಪಟ್ಟವನಾಗಿ ನೋಡುತ್ತಿರುವಷ್ಟರಲ್ಲಿ....

ರಾಜನನ್ನೂ ಸುಕುಮಾರನನ್ನೂ "ಊಟಕ್ಕೆ ಬನ್ನಿರಿ" ಎಂದು ಕರೆಯಲು ರಾಜನು ಸುಕುಮಾರನೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿಧದ ಸವಿಯಾದ ಆಹಾರವನ್ನು ಊಟ ಮಾಡುತ್ತಿರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು. ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ "ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು' ಎಂದು ಭಾವಿಸಿ ಕೊಂಡನು. ಊಟವಾದ ನಂತರ ಗಂಧ, ತಾಂಬೂಲ, ಹೂಮಾಲೆ, ಉಡುಗೆ, ತೊಡುಗೆಗಳನ್ನು ತಂದು ಕೊಡಲು ಅವನ್ನು ತೊಟ್ಟು ಉಟ್ಟು ಅಲಂಕಾರ ಮಾಡಿಕೊಂಡು ಸಂತೋಷದ ಮಾತುಗಳನ್ನಾಡುತ್ತಾ ವಿನೋದದಿಂದ ಇದ್ದಾಗ...

ಅರಸನು ಯಶೋಭದ್ರೆಯನ್ನು ಕುರಿತು ಹೀಗೆ ಪ್ರಶ್ನಿಸಿದನು. "ಅಮ್ಮಾ ತಮ್ಮ ಮಗನಾದ ಸುಕುಮಾರನಿಗೆ ಸೊಂಟದ ಭಾಗಕ್ಕೂ ಕಣ್ಣೀರು ಸುರಿಯುವುದಕ್ಕೂ, ಊಟ ಸೇರದಿರುವುದಕ್ಕೂ ಏಕೆ ಔಷಧ ಮಾಡಿಸಿಲ್ಲ? ಎಂದು ಕೇಳಿದಾಗ ಆಕೆ ಒಡೆಯರೆ "ಅವನಿಗೆ ಇವು ರೋಗಗಳಲ್ಲ. ಮಂತ್ರಾಕ್ಷತೆಯಾಗಿ ಹಾಕಿದ ಬಿಳಿ ಸಾಸಿವೆಗಳು ಒತ್ತಿದುದರಿಂದ ಸಹಿಸದಾದನು. ಅಲ್ಲದೆ ಯಾವಾಗಲೂ ಮಾಣಿಕ್ಯ ರತ್ನದ ಬೆಳಕಿನಲ್ಲಿ ಅವನು ಇರುವುದರಿಂದ ದೀಪದ ಬೆಳಕಿಗೆ ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತದೆ. ಅದೂ ಅಲ್ಲದೆ ನೀವು ಬಂದ ಸಂದರ್ಭದಲ್ಲಿ ತಾವರೆ ನೈದಿಲೆ

ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರ ಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು. ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದುದರಿಂದಲೇ ಇವನಿಗೆ ಈ ಅವಸ್ಥೆಗಳಾಗಿವೆ "ಎಂದು ಹೇಳಿದಳು.

ಅದನ್ನು ಕೇಳಿ ಅರಸನು ಆಶ್ಚರ್ಯಪಟ್ಟನು. "ಈತನ ಒಂದು ಕ್ಷಣದ ಸುಖ-ಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗ ಉಪಭೋಗಗಳು ಸಮಾನವಾಗುವುದಿಲ್ಲ. ಆದುದರಿಂದ " ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ" ಎಂದು ಪ್ರೀತಿಗೊಂಡವನಾಗಿ ಅರಸನು ಅವನಿಗೆ 'ಅವಂತಿ ಸುಕುಮಾರ ಎಂದು ಹೆಸರಿಟ್ಟನು'.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಸುಕುಮಾರಸ್ವಾಮಿಯ ತಂದೆ-ತಾಯಿಗಳ ಹೆಸರೇನು?**

ಉ:- ಸುಕುಮಾರಸ್ವಾಮಿಯ ತಂದೆ-ತಾಯಿಗಳ ಹೆಸರು ಸೂರದತ್ತ-ಯಶೋಭದ್ರೆ

**2. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?**

ಉ:- ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು.

**3. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?**

ಉ:- ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ "ಈತನು ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು" ಎಂದು ಹೇಳಿದನು.

**4. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೂ ಕೊಟ್ಟಳು?**

ಉ:- ಯಶೋಭದ್ರೆಯು ರತ್ನ ಕಂಬಳಿಗಳನ್ನು ತನ್ನ ಮೂವತ್ತೆರಡು ಸೊಸೆಯಂದಿರಿಗೆ ಕೊಟ್ಟಳು.

**5. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಗೆ ಬಿದ್ದಿತು?**

ಉ:- ಅರಸ ವೃಷಭಾಂಕನ ಉಂಗುರವು ಸ್ನಾನ ಮಾಡುವಾಗ ಕೆಳಗೆ ಬಿದ್ದಿತು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

**1. ಸುಕುಮಾರಸ್ವಾಮಿಯು ಹೇಗೆ ಸುಖ ಭೋಗಗಳನ್ನು ಅನುಭವಿಸುತ್ತಿದ್ದನು?**

ಉ:- ಸುಕುಮಾರಸ್ವಾಮಿಯು ೦ಯುವಕನಾಗಿ ಅತ್ಯಂತ ರೂಪ ಲಾವಣ್ಯ-ಸೌಭಾಗ್ಯ ಕಾಂತಿಯಿಂದ ಕೂಡಿದವನಾಗಿದ್ದು ಈತನಿಗೆ ಮೂವತ್ತೆರೆಡು ಲತಾ ಗೃಹಗಳು, ಅತ್ಯಂತ ರೂಪ ಲಾವಣ್ಯ, ಸೌಭಾಗ್ಯ, ಕಾಂತಿ, ಹಾವಭಾವ ವಿಲಾಸದಿಂದ ಸೌಂದರ್ಯಗಳ ಒಡತಿಯರಾದ ದೇವಲೋಕದ ಅಪ್ಸರೆ ಸ್ತ್ರೀಯರನ್ನೇ ಹೋಲುವಂತಹ ಮೂವತ್ತೆರೆಡು ದಿವ್ಯಸ್ತ್ರೀ೦ಯರು ಇದ್ದರು. ಮೂವತ್ತೆರಡು ನಾಟ್ಯ ಶಾಲೆಗಳು ಮೂವತ್ತೆರಡು ಕೋಟಿ ಸಂಪತ್ತು ಪಂಚರತ್ನಗಳು ಇದ್ದವು. ಇವುಗಳೊಂದಿಗೆ ಕೂಡಿ ಸುಖಗಳನ್ನು ಅನುಭವಿಸುತ್ತಿದ್ದನು.

**2. ಅರಸ ವೃಷ ಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?**

ಉ:- ರತ್ನ ದ್ವೀಪದಿಂದ ಬಂದ ವರ್ತಕನೊಬ್ಬನು ಲಕ್ಷದೀನಾರ ಬೆಲೆ ಬಾಳತಕ್ಕ ಎಲ್ಲಾ ರತ್ನಗಳಿಂದ ಕೂಡಿದ ಕಂಬಳಿಗಳನ್ನು ಮಾರಲು ಉಜ್ಜಯಿನಿಗೆ ತಂದಾಗ ಅವುಗಳ ಬೆಲೆಯನ್ನು ಕೇಳಿದ ರಾಜ ವೃಷಭಾಂಕ ಮತ್ತು ಜ್ಯೋತಿಮಾಲೆ ಅದನ್ನು ಕೊಳ್ಳದೇ ವರ್ತಕನನ್ನು ಕಳಿಸಿ ಬಿಟ್ಟರು. ಆಗ ವರ್ತಕನು ಯಶೋಭದ್ರೆಯ ಬಳಿ ಬಂದು ತೋರಿಸಲು ಅವಳು ಅದನ್ನು ಕೊಂಡು ಪ್ರತಿಯೊಂದನ್ನು ನಾಲ್ಕು ತುಂಡು ತುಂಡು ಮಾಡಿ ಒಟ್ಟು ಮೂವತ್ತೆರಡು ತುಂಡುಗಳನ್ನು ತನ್ನ ಮೂವತ್ತೆರೆಡು ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವರು ಆ ತುಂಡುಗಳನ್ನು ತಮ್ಮತಮ್ಮ ಚಪ್ಪಲಿಗಳಿಗೆ ಸಿಕ್ಕಿಸಿಕೊಂಡರು. ಈ ಸಂಗತಿಯನ್ನು ಕೇಳಿ ಅರಸ ವೃಷಭಾಂಕನು ಆಶ್ಚರ್ಯಪಟ್ಟನು.

**3. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದು ಕೊಳ್ಳಲು ಕಾರಣವೇನು?**

ಉ:- ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದಾಗ ಸ್ವಜನರೂ ಸೇವಕರೂ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆ೦ಯನ್ನು ಹಾಕಿದರು. ಆ ಬಿಳಿ ಸಾಸುವೆಕಾಳುಗಳು

ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸೊಂಟವನ್ನು ಅತ್ತಿತ್ತ ಹೊರಳಾಡಿಸುತ್ತಿದ್ದುದನ್ನು, ದೀಪ ನೋಡಿದಾಗ ಕಣ್ಣೀರು ಸುರಿಸುತ್ತಿದ್ದನು ಊಟಮಾಡುವಾಗ ಅರ್ಧ ಆಹಾರ ನುಂಗುತ್ತಾ ಇನ್ನುಳಿದ ಅರ್ಧ ಆಹಾರವನ್ನು ಉಗುಳುತ್ತಿದ್ದನು. ಇದನ್ನು ನೋಡಿ ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದು ಭಾವಿಸಿಕೊಂಡನು.

**4. ಸುಕುಮಾರ ಸ್ವಾಮಿಯ ವ್ಯಾಧಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು?**

ಉ: "ದೇವಾ, ಆತನಿಗೆ ಇವು ರೋಗಗಳಲ್ಲ, ಮಂತ್ರಾಕ್ಷತೆ ಹಾಕಿದ್ದರಿಂದ ಬಿಳಿ ಸಾಸಿವೆಗಳು ಒತ್ತಲು ಸಹಿಸಿದೆ ಸೊಂಟವನ್ನು ಅಲುಗಾಡಿಸಿದನು. ಮತ್ತೆ ಆತನೂ ಎಲ್ಲಾ ಕಾಲದಲ್ಲೂ ಮಾಣಿಕ್ಯದ ಬೆಳಕಿನಲ್ಲಿ ಇರುವುದರಿಂದ ದೀಪದ ಬೆಳಕಿಗೆ ಸಹಿಸದೇ ಕಣ್ಣೀರು ಬರುತ್ತದೆ. ಮತ್ತೆ ನೀವು ಬಂದಿದ್ದರಿಂದ ತಾವರೆ, ನೈದಿಲೆ ಹೂಗಳ ಸುವಾಸನೆ ಭರಿಸಿದ ಅಕ್ಕಿಯಲ್ಲಿ ಬೇರೆ ಅಕ್ಕಿಯನ್ನು ಬೆರೆಸಿ ಅನ್ನವನ್ನು ಮಾಡಿದ್ದರಿಂದ ಸುವಾಸನೆ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು. ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದ್ದರಿಂದ ಇವು ವ್ಯಾಧಿಗಳಲ್ಲ" ಎಂದು ಯಶೋಭದ್ರೆಯು ಅರಸ ವೃಷಭಾಂಕನಿಗೆ ಹೇಳಿದಳು.

**ಈ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ**

**1. "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂ ಬುಡುಗುಮ್"**

ಉ:– **ಆಯ್ಕೆ:** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ "ವಡ್ಡಾರಾಧನೆ" ಕೃತಿಯಿಂದ ಆಯ್ದ 'ಸುಕುಮಾರಸ್ವಾಮಿ ಕಥೆ' ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:–** ಉಜ್ಜಯಿನಿಯ ಯಶೋಭದ್ರೆ ಮತ್ತು ಸೂರದತ್ತ ದಂಪತಿಗಳಿಗೆ ಸುಕುಮಾರಸ್ವಾಮಿಯು ಮಗನಾಗಿ ಜನಿಸಿದನು. ಅವನು ಹುಟ್ಟಿದಾಗಲೇ ಅವನ ತಂದೆಯು ವೈರಾಗ್ಯ ಹೊಂದಿ ತನ್ನ ಮಗನಿಗೆ ಸೆಟ್ಟಿ ಪಟ್ಟವನ್ನು ಕಟ್ಟಿ ತಪಸ್ಸಿಗೆ ನಡೆದನು. ಒಂದು ದಿನ ಅವರ ಮನೆಗೆ ಬಂದ ಜೋಯಿಸನೊಬ್ಬನು ಸುಕುಮಾರಸ್ವಾಮಿಯನ್ನು ನೋಡಿ ಯಾವ ಸಮಯದಲ್ಲಿ ಇವನು ಋಷಿಗಳನ್ನು ನೋಡುತ್ತಾನೋ ಅಂದೇ ಇವನು ತಪಸ್ಸಿಗೆ ಹೋಗುತ್ತಾನೆ" ಎಂದು ಭವಿಷ್ಯ ನುಡಿದನು.

**ಸ್ವಾರಸ್ಯ:–** ಸುಕುಮಾರಸ್ವಾಮಿ ವೈರಾಗ್ಯ ಹೊಂದಿ, ತಪಸ್ಸಿಗೆ ಹೋಗುವುದರ ಮುನ್ಸೂಚನೆಯು ನೈಮಿತ್ತಿಕನ ಮಾತುಗಳಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

**2.. "ನಮ್ಮ ನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು"**

ಉ: **ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ "ವಡ್ಡಾರಾಧನೆ" ಕೃತಿಯಿಂದ ಆಯ್ದ 'ಸುಕುಮಾರಸ್ವಾಮಿ ಕಥೆ' ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :–** ರಾಜ ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದು ಸುಕುಮಾರ ಎಲ್ಲಿದ್ದಾನೆ? ಎಂದು ವಿಚಾರಿಸಿದಾಗ ಯಶೋಭದ್ರೆ "ಸ್ವಾಮಿ ಅವನು ಬಹಳ ಸಾಧು ನೀವು ಬರುವುದನ್ನು ಅವನು ತಿಳಿಯನು ಎಂದಾಗ ಅರಸನು ಆತನನ್ನು ಬರುವಂತೆ ದೂತರೊಡನೆ ಹೇಳಿ ಕಳುಹಿಸಿ ಎಂದಾಗ ಯಶೋಭದ್ರೆ ತಾನೆ ಸುಕುಮಾರನಲ್ಲಿಗೆ ಹೋಗಿ "ಮಗನೇ, ಅರಸರು ಬಂದರು ಬಾ ಎಂದಾಗ ಸುಕುಮಾರನು "ನಮ್ಮನ್ನು ಆಳುವವರು ಇರುವರೆ ಎಂದು ಆಶ್ಚರ್ಯ ಪಟ್ಟು "ಬಂದ ಸಂದರ್ಭವಾಗಿದೆ.

**ಸ್ವಾರಸ್ಯ:–** ಸುಕುಮಾರಸ್ವಾಮಿಗೆ ನಮ್ಮನ್ನು ಆಳುವವರೂ ಇದ್ದಾರೆ ಎಂಬುದು ತಿಳಿಯದಿರುವ, ವಿಸ್ಮಯಗೊಳ್ಳುವ, ವಿಷಯ ಇಲ್ಲಿ ಸ್ವಾರಸ್ಯವಾಗಿದೆ.

**3. "ಅರ್ಧಾಹಾರಮಂ ನುಂಗುಗುಮರ್ಧಾ ಹಾರಮನುಗುಳ್ಗುಮಿದಂ ನೋಡಿ"**

ಉ: **ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ "ವಡ್ಡಾರಾಧನೆ" ಕೃತಿಯಿಂದ ಆಯ್ದ 'ಸುಕುಮಾರಸ್ವಾಮಿ ಕಥೆ' ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:–** ರಾಜನಾದ ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದು ಅವರನ್ನು ಅಪ್ಪಿಕೊಂಡು ಶ್ರೇಷ್ಠವಾದ ಆ ಹಾಸಿಗೆಯ ಮೇಲೆ ತನ್ನ ಜೊತೆಯಲ್ಲಿ ಕುಳಿತುಕೊಂಡು, ನಂತರ ರಾಜನು ಸುಕುಮಾರನೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿವಿಧ ಸವಿಯಾದ ಆಹಾರವನ್ನು ಊಟಮಾಡುತ್ತಿರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು. ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ 'ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು ಎಂದು ಭಾವಿಸಿ ಕೊಂಡನು.

**ಸ್ವಾರಸ್ಯ:–** ಸುಕುಮಾರಸ್ವಾಮಿಯು ಬೆಳೆದ ರೀತಿ ಗೊತ್ತಿರದ ರಾಜನು ಅವನ ನಡೆಯನ್ನು ನೋಡಿ ಅವನಿಗೆ ರೋಗವಿದೆ ಎಂದು ಭಾವಿಸುವುದು ಸ್ವಾರಸ್ಯವಾಗಿದೆ.

4. **"ಆವಂತಿ ಸುಕುಮಾರನೆಂದು ಪೆಸರಟ್ಟಿಂ"**

**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ "ವಡ್ಡಾರಾಧನೆ" ಕೃತಿಯಿಂದ ಆಯ್ದ 'ಸುಕುಮಾರಸ್ವಾಮಿ ಕಥೆ' ಪಾಠದಿಂದ ಆ0ಯ್ದುಕೊಳ್ಳಲಾಗಿದೆ.

ಉ:– **ಸಂದರ್ಭ:–** ಸುಕುಮಾರಸ್ವಾಮಿಯ ಮನೆಗೆ ಬಂದ ರಾಜನು ಸುಕುಮಾರಸ್ವಾಮಿಯ ಕೆಲವು ವರ್ತನೆಗಳನ್ನು ನೋಡಿ ಅವನಿಗೆ ಯಾವುದೋ ರೋಗ ಇದೆ ಎಂದು ಭಾವಿಸಿ ಅವನ ತಾಯಿ ಯಶೋಭದ್ರೆಯನ್ನು ವಿಚಾರಿಸಿದನು. ಆಗ ಅವಳು ಸುಕುಮಾರಸ್ವಾಮಿಯು ಸುಖಭೋಗಗಳಲ್ಲಿ ಬೆಳೆದುದರಿಂದ ಹಾಗೆ ವರ್ತಿಸಿದನು ಎಂದು ವಾಸ್ತವವನ್ನು ವಿವರಿಸಿದಳು. "ಈತನ ಒಂದು ಕ್ಷಣದ ಸುಖಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗಗಳು ಸಮಾನವಾಗುವುದಿಲ್ಲ. ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ" ಎಂದು ಅರಸನು ಅವನಿಗೆ "ಅವಂತಿ ಸುಕುಮಾರ" ಎಂದು ಹೆಸರಿಟ್ಟನು.

**ಸ್ವಾರಸ್ಯ:–** ರಾಜನು ಸುಕುಮಾರಸ್ವಾಮಿಯ ವೈಭವವನ್ನು ನೋಡಿ ಅವನ ವೈಭವದ ಮುಂದೆ ತನ್ನ ವೈಭವ ಏನೂ ಇಲ್ಲ ಎಂದು ಹೇಳುವುದು ಸ್ವಾರಸ್ಯವಾಗಿದೆ.

**ಈ) 8–10 ವಾಕ್ಯಗಳಲ್ಲಿ ಉತ್ತರಿಸಿ.**

1. **ಸುಕುಮಾರಸ್ವಾಮಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಉ:– ಉಜ್ಜಯಿನಿಯ ಯಶೋಭದ್ರೆ ಮತ್ತು ಸೂರದತ್ತ ದಂಪತಿಗಳಿಗೆ ಸುಕುಮಾರಸ್ವಾಮಿ ಮಗನಾಗಿ ಜನಿಸಿದನು. ಅವನು ಹುಟ್ಟಿದಾಗಲೇ ಅವನ ತಂದೆಯು ವೈರಾಗ್ಯ ಹೊಂದಿ ತನ್ನ ಮಗನಾದ ಸುಕುಮಾರಸ್ವಾಮಿಗೆ ಸೆಟ್ಟಿ ಪಟ್ಟವನ್ನು ಕಟ್ಟಿ ತಪಸ್ಸಿಗೆ ನಡೆದನು. ಒಂದು ದಿನ ಅವರ ಮನೆಗೆ ಬಂದ ಜೋಯಿಸನೊಬ್ಬನು ಸುಕುಮಾರಸ್ವಾಮಿಯನ್ನು ನೋಡಿ ಯಾವ ಸಮಯದಲ್ಲಿ ಇವನು ಋಷಿಗಳನ್ನು ನೋಡುತ್ತಾನೋ ಅಂದೇ ಇವನು ತಪಸ್ಸಿಗೆ ಹೋಗುತ್ತಾನೆ ಎಂದು ಹೇಳಿದನು. ಆಗ ಯಶೋಭದ್ರೆಯು ಅವನ ಮನೆಗೆ ಋಷಿಗಳು ಬರದಂತೆ ಕಾವಲಿರಿಸಿದಳು.

ರತ್ನ ದ್ವೀಪದಿಂದ ಬಂದ ವರ್ತಕನೊಬ್ಬನು ತಾನು ತಂದ ಬೆಲೆಬಾಳುವ ರತ್ನ ಕಂಬಳಿಗಳನ್ನು ಮೊದಲು ಉಜ್ಜಯಿನಿಯ ರಾಜ ವೃಶಭಾಂಕನ ಬಳಿ ಹೋದಾಗ ಅದರ ಬೆಲೆ ಜಾಸ್ತಿಯಾಯಿತೆಂದು ರಾಜ ರಾಣಿಯರು ಖರೀದಿಸದೇ ಹೋದಾಗ ಅಂತಹ ಬೆಲೆಬಾಳುವ ರತ್ನಗಂಬಳಿಗಳನ್ನು ಯಶೋಭದ್ರೆಯು ಕೊಂಡು ಅದನ್ನು ತನ್ನ ಮೂವತ್ತೆರಡು ಸೊಸೆಯಂದಿರಿಗೆ ಮುವತ್ತೆರೆಡು ತುಂಡುಗಳಾಗಿ ಮಾಡಿ ಅವರ ಚಪ್ಪಲಿಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು. ಅದನ್ನು ಕೇಳಿ ಅವರ ವೈಭವದ ವಿಷಯ ತಿಳಿದ ರಾಜನು ಬೆರಗಾಗಿ ಅವರ ಮನೆಗೆ ಬಂದನು. ಅಲ್ಲಿ ಸುಕುಮಾರಸ್ವಾಮಿಯನ್ನು ನೋಡಿ ಸಂತಸಗೊಂಡ ರಾಜನು ಅವನನ್ನು ಬರಸೆಳೆದು ತಬ್ಬಿಕೊಂಡು ಆಸನದ ಮೇಲೆ ಕೂರಿಸಿಕೊಂಡನು. ಆ ಸಂದರ್ಭದಲ್ಲಿ ಮಂಗಳಕರವೆಂದು ಅವರ ಮೇಲೆ ಬಿಳಿಸಾಸಿವೆ ಮಂತ್ರಾಕ್ಷತೆಗಳನ್ನು ಹಾಕಿದಾಗ ಆಸನದಲ್ಲಿ ಕುಳಿತಿದ್ದ ಸುಕುಮಾರಸ್ವಾಮಿಗೆ ಸಾಸುವೆಗಳು ಒತ್ತುತ್ತಿದ್ದು ಅವನು ಅತ್ತಿತ್ತ ಹೊರಳಾಡುತ್ತಿದ್ದನು. ಅವನು ದೀಪವನ್ನು ನೋಡಿ ಕಣ್ಣೀರು ಸುರಿಸುತ್ತಿದ್ದನ್ನು ಊಟ ಮಾಡುವಾಗ ಅರ್ಧ ಅಗುಳನ್ನು ಉಗಿಯುತ್ತಿದ್ದುದರಿಂದಲೂ ರಾಜನು ಇವನಿಗೆ ಏನೋ ರೋಗ ಎಂದು ಭಾವಿಸಿಕೊಂಡು ಯಶೋಭದ್ರೆಯನ್ನು ವಿಚಾರಿಸಿದನು. ಆಗ ಯಶೋಭದ್ರೆ0ಯು ಸಾಸುವೆಗಳು

ಒತ್ತುತ್ತಿದ್ದುದರಿಂದ ಅವನು ಹೊರಳಾಡುತ್ತಿದ್ದನೆಂದು, ದೀಪದ ಬೆಳಕನ್ನು ಸಹಿಸದೇ ಕಣ್ಣಿನಲ್ಲಿ ನೀರು ಬಂದಿತೆಂದೂ, ಅಷ್ಟೇ ಅಲ್ಲದೇ ಅವನು ತಾವರೆ ನೈದಿಲೆ ಸುಗಂಧಗಳಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನ ಬಡಿಸಿದ್ದರಿಂದ ಅವನು ಸುಗಂಧದಿಂದ ಕೂಡಿದ ಅನ್ನವನ್ನು ನುಂಗಿ ಉಳಿದುದ್ದನ್ನು ಉಗುಳುತ್ತಿದ್ದನು ಎಂದು ವಿವರಿಸಿದಳು.

ಅದನ್ನು ಕೇಳಿ ಅರಸನು ಅಶ್ಚರ್ಯ ಪಟ್ಟನು. "ಈತನ ಒಂದು ಕ್ಷಣದ ಸುಖ–ಭೋಗಗಳಿಗೆ ನನ್ನ ಇಡೀ ಆರಸುತನದ ಕಾಲದಲ್ಲಿ ಅನುಭವಿಸಿದ ಭೋಗಗಳು ಸಮಾನವಾಗುವುದಿಲ್ಲ" ಆದುದರಿಂದ ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ ಎಂದು ಅರಸನು ಅವನಿಗೆ ಆವಂತಿ ಸುಕುಮಾರ ಎಂದು ಹೆಸರನಿಟ್ಟನು.

**2. 'ಸುಕುಮಾರ' ಎಂಬ ಹೆಸರು ಸುಕುಮಾರ ಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ. ವಿವರಿಸಿ?**

**ಉ:–** ಸುಕುಮಾರಸ್ವಾಮಿ 0ಯೌವನದಲ್ಲಿ ಅತ್ಯಂತ ರೂಪ–ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವನಾಗಿದ್ದು, ಆತನಿಗೆ ಮೂವತ್ತೆರಡು ಲತಾ ಗೃಹಗಳು, ಸೌಂದರ್ಯಗಳ ಒಡತಿಯರಾದ ದೇವಲೋಕದ ಅಪ್ಸರ ಸ್ತ್ರೀಯರನ್ನೇ ಹೋಲುವಂತಹ ಮೂವತ್ತೆರಡು ದಿವ್ಯ ಸ್ತ್ರೀಯರು (ಹೆಂಡತಿಯರು) ಇದ್ದರು. ಮೂವತ್ತೆರೆಡು ನಾಟ್ಯಶಾಲೆಗಳು ಮೂವತ್ತೆರಡು ಕೋಟಿ ಸಂಪತ್ತು, ಪಂಚರತ್ನಗಳು ಇದ್ದವು. ಇವುಗಳೊಂದಿಗೆ ಸುಖ–ಭೋಗಗಳನ್ನು ಅನುಭವಿಸುತ್ತಿದ್ದನು. ವೃಷಭಾಂಕ ಅರಸನು ಸುಕುಮಾರಸ್ವಾಮಿಯ ಕೋಮಲವಾದ ಶರೀರವನ್ನು ನೋಡಿ ಮನ್ಮಥನನ್ನು ಅಪ್ಪಿಕೊಳ್ಳುವಂತೆ ಅಪ್ಪಿಕೊಂಡನು. ಸ್ವಜನ ಪರಿಜನೆರಲ್ಲರು ಮಂಗಳಕರವಾದುದು ಎಂದು ಬಿಳಿಸಾಸಿವೆಗಳನ್ನು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದಾಗ ಬಿಳಿಸಾಸಿವೆಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದಾಗ ಸೊಂಟ ಅಲುಗಾಡಿಸಿದ್ದನ್ನು ಗಮನಿಸಿದಾಗ ಆತ ಮೃದು ಶರೀರವುಳ್ಳನಾಗಿದ್ದನೆಂದು ತಿಳಿ0ಯಬಹುದು. ನೋಡಿದಾಗ ಯಾವಾಗಲೂ ಮಾಣಿಕ್ಯದ ಬೆಳಕಿನಲ್ಲಿ ಇರುತ್ತದ್ದನು ಎಂಬ ಆತನ ಸೂಕ್ಷ್ಮ ದೃಷ್ಟಿಯನ್ನು ಅರಿಯಬಹುದು. ಊಟ ಮಾಡುತ್ತಿರುವಾಗ ಸುಕುಮಾರಸ್ವಾಮಿಯು ಕಮಲ ನೈದಿಲೆಯ ಸುವಾಸನೆ ಭರಿಸಿದ ಅಕ್ಕಿಯಲ್ಲಿ ಬೇರೆ ಅಕ್ಕಿಯನ್ನು ಬೆರೆಸಿ ಅನ್ನವನ್ನು ಮಾಡಿದ್ದರೂ ಸುವಾಸನೆಯ ಅಕ್ಕಿಯ ಅನ್ನವನ್ನು ಮಾತ್ರ ನುಂಗುತ್ತಿದ್ದನು. ಉಳಿದ ಅನ್ನವನ್ನು ಉಗುಳುತ್ತಿದ್ದನು. ಎಂಬುದನ್ನು ಗಮನಿಸಿದರೆ ಆತನ ಆಹಾರದ ವಿಚಾರ ತಿಳಿಯುತ್ತದೆ. ಇಂತಹ ವಿಚಾರಗಳನ್ನು ತಿಳಿದ ಅರಸ ಅಶ್ಚರ್ಯಗೊಂಡು ಈತನ ಕ್ಷಣ ಮಾತ್ರದ ಭೋಗಕ್ಕೆ ನನ್ನ ಎಲ್ಲಾ ಕಾಲದಲ್ಲೂ ಅರಸುತನವನ್ನು ಮಾಡಿದ ಸುಖ ಭೋಗಗಳು ಸಮಾನವಲ್ಲ. ಅದ್ದರಿಂದ ಲೋಕದಲ್ಲಿ ಈತನೇ ಶ್ರೇಷ್ಠನಾದ ಸುಖಿ ಎಂದು ಹೇಳಿ ಅರಸನು 'ಆವಂತಿ ಸುಕುಮಾರ' ಎಂದು ಹೆಸರನ್ನು ಇಟ್ಟದ್ದು ಆತನ ಹೆಸರಿಗೆ ಸುಕುಮಾರ ಎಂಬ ಹೆಸರು ಅನ್ವರ್ಥವಾಗುತ್ತದೆ.

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ನಾಮಪದ ಎಂದರೇನು? ಉದಾಹರಿಸಿರಿ.**

**ಉ:–** ನಾಮ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ಆಗುವ ಪದವೇ ನಾಮಪದ. ಅಂದರೆ ಯಾವುದೇ ಒಬ್ಬ ವ್ಯಕ್ತಿ, ವಸ್ತು, ಸ್ಥಳ ಇತ್ಯಾದಿ ಹೆಸರುಗಳನ್ನು ಸೂಚಿಸುವ ಪದಗಳೇ ನಾಮಪದಗಳು. ಅವುಗಳು ವಿಭಕ್ತಿ ಪ್ರತ್ಯಯ ಸಹಿತವಾಗಿರುತ್ತದೆ.

ಭೀಮ ಎನ್ನುವುದು ನಾಮ ಪ್ರಕೃತಿ. ಅನ್ನು ಎನ್ನುವುದು ವಿಭಕ್ತಿ ಪ್ರತ್ಯಯ ಸೇರಿ ಭೀಮನನ್ನು ಎನ್ನುವುದು ನಾಮಪದ.

**2. ನಾಮವಾಚಕಗಳ ವಿಧಗಳನ್ನು ಪಟ್ಟಿ ಮಾಡಿರಿ.**

**ಉ:–** ನಾಮವಾಚಕಗಳು:– !ವಸ್ತುವಾಚಕ 2.ಗುಣವಾಚಕ 3.ಸಂಖ್ಯೇ0ಯವಾಚಕ 4.ಸಂಖ್ಯಾವಾಚಕ
5. ಭಾವನಾಮ 6. ಪರಿಮಾಣವಾಚಕ 7. ದಿಗ್ವಾಚಕ 8. ಸರ್ವನಾಮ

**3. ಕೃದಂತ ಎಂದರೇನು? ಉದಾಹರಣೆಗಳನ್ನು ಬರೆಯಿರಿ.**

ಉ:– ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುತ್ತವೆ.
ಕೃದಂತ ನಾಮ : ಮಾಡಿದ,ತಿನ್ನುವ, ನಡೆಯುವ, ಓಡಿದ
ಕೃದಂತ ಭಾವನಾಮ : ಮಾಟ, ತಿನ್ನುವಿಕೆ, ನಡೆತ, ಓಟ
ಕೃದಂತವ್ಯಯ : ಮಾಡಿ, ತಿಂದು, ನಡೆಯುತ್ತ ಓಡಿ.

**4. ಕೊಟ್ಟಿರುವ ಪದಗಳನ್ನು ಕೃದಂತನಾಮ, ಕೃದಂತ ಭಾವನಾಮ,ಕೃದಂತಾವ್ಯಯಗಳಾಗಿ ವಿಂಗಡಿಸಿ ಬರೆಯಿರಿ.**

ಉ:– ಕೃದಂತನಾಮ : ಓಡಿದ, ನೋಡಿದ
ಕೃದಂತ ಭಾವನಾಮ : ಮಾಟ, ಆಟ
ಕೃದಂತವ್ಯಯ : ನೋಡಿ, ತಿಂದು

**ಅ) ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.**

1. ವರ್ತಮಾನ ಕೃದಂತನಾಮಕ್ಕೆ ಈ ಪದವು ಉದಾಹರಣೆಯಾಗಿದೆ.
ಅ) ಬರೆಯುವ ಆ) ಬರೆದ ಇ) ಬರೆಯದ ಈ) ಬರಹ

ಉ: **ಅ) ಬರೆಯುವ**

2. **'ನೋಟ'** ಎಂಬುದು ಈ ವ್ಯಾಕರಣಾಂಶವಾಗಿದೆ

ಉ: **ಕೃದಂತಭಾವನಾಮ**

3) 'ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ.
ಅ) ತೊಡುಗೆ ಆ) ತಿನ್ನುವಿಕೆ ಇ) ನಡೆಯುವ ಈ) ಮಾಡಲಿಕ್ಕೆ

ಉ: **ಮಾಡಲಿಕ್ಕೆ**

4) **'ಲೋಕದೊಳ್'** ಎಂಬುದು ಈ ವಿಭಕ್ತಿಯಲ್ಲಿದೆ.
ಅ) ಪ್ರಥಮಾ ಆ) ತೃತೀಯಾ ಇ) ಪಂಚಮೀ ಈ) ಸಪ್ತಮೀ

ಉ: **ಸಪ್ತಮೀ**

**ಇ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ**

1. ನದಿ, ಪರ್ವತ : ರೂಢನಾಮ :: ವ್ಯಾಪಾರಿ, ವಿಜ್ಞಾನಿ :........................
ಉ:– ಅನ್ವರ್ಥನಾಮ
2. ನಾನು, ನೀನು :ಪುರುಷಾರ್ಥಕ ಸರ್ವನಾಮ :: ಯಾರು? ಏನು :................
ಉ:– ಪ್ರಶ್ನಾರ್ಥಕ ಸರ್ವನಾಮ.
3. ಅಷ್ಟು : ಪರಿಮಾಣವಾಚಕ :: ಹನ್ನೆರಡು :–...........................
ಉ:– ಸಂಖ್ಯಾವಾಚಕ.
4. ಪೊವಿಲ್ ; ಪಟ್ಟಣ :: ಕಸವರ :...................
ಉ:–ಚಿನ್ನ.

# ಬಹು ಆಯ್ಕೆಯ ಪ್ರಶ್ನೆಗಳು.

1. **'ಯೋಧ'** ಪದದ ಕನ್ನಡ ರೂಪ

ಅ) ವೀರ ಆ) ಸೈನಿಕ ಇ) ಜೋದ ಈ) ಜುದ

**ಉ: ಇ) ಜೋದ**

2. **'ಆಚೆ-ಈಚೆ'** ಪದದ ವ್ಯಾಕರಣ ವಿಶೇಷ.

ಅ) ದ್ವಿರುಕ್ತಿ ಆ) ಜೋಡಿಪದ ಇ) ನುಡಿಗಟ್ಟು ಈ) ಅನುಕರಣಾವ್ಯಯ

**ಉ: ಆ) ಜೋಡಿಪದ**

3. **'ಲವನು'** ಪದದಲ್ಲಿರುವ ವಿಭಕ್ತಿ

ಅ) ಪ್ರಥಮ ಆ) ದ್ವಿತೀಯ ಇ) ನುಡಿಗಟ್ಟು ಈ) ಚತುರ್ಥಿ

**ಉ: ಅ) ಪ್ರಥಮ**

4. **'ಕಾದಾಟದಾಟ'** ಪದವು ಈ ಸಂಧಿಗೆ ಉದಾಹರಣೆ

ಅ) ಲೋಪಸಂಧಿ ಆ) ಆಗಮ ಇ) ಸಂಧಿ ಈ) ಸವರ್ಣದೀರ್ಘ

**ಉ: ಈ) ಸವರ್ಣದೀರ್ಘ**

5. **'ಮತ್ತು'** ಪದದ ಅರ್ಥ

ಅ) ಜೊತೆಗೆ ಆ) ಮುತ್ತು ಇ) ಅಮಲು ಈ) ಆಮೇಲೆ

**ಉ: ಇ) ಅಮಲು**

6. **'ಮ್ಯಾಜಿಕ್'** ಪದವು ಈ ಭಾಷೆಯ ಪದ

ಅ) ಹಿಂದೂಸ್ಥಾನಿ ಆ) ಇಂಗ್ಲೀಷ್ ಇ) ಉರ್ದು ಈ) ಹಿಂದಿ

**ಉ: ಆ) ಇಂಗ್ಲೀಷ್**

7. **'ವೀರಯೋಧ'** ಇಲ್ಲಿರುವ ಅಲಂಕಾರ

ಅ) ಉಪಮಾ ಆ) ರೂಪಕ ಇ)ಶ್ಲೇಷಾ ಈ) ಅರ್ಥಾಂತರನ್ಯಾಸ

**ಉ: ಆ) ರೂಪಕ**

8. **'ಭೋಗೋಪಭೋಗ'** ಈ ಪದದಲ್ಲಿನ ಸಂಧಿ

ಅ)ಸವರ್ಣ ದೀರ್ಘಸಂಧಿ ಆ) ವೃದ್ಧಿಸಂಧಿ ಇ) ಗುಣಸಂಧಿ ಈ) ಆದೇಶಸಂಧಿ

**ಉ:- ಇ) ಗುಣಸಂಧಿ**

9. **'ತಾಂಬೂಲ'** ಪದದ ತದ್ಭವ ರೂಪ

ಅ) ತಂಡುಲ ಆ) ತಾಂಬಲ ಇ) ಎಲೆ-ಅಡಿಕೆ ಈ) ಬೀಡ

**ಉ:- ಅ) ತಂಡುಲ**

10 **'ಅನ್ನೆಗಂ'** ಈ ಪದದ ಹೊಸಗನ್ನಡ ರೂಪ

ಅ) ಅನ್ಯರು ಆ) ಅಷ್ಟರಲ್ಲಿ ಇ) ಹಾಗೆ ಈ) ಆನೇಕ

**ಉ:- ಅಷ್ಟರಲ್ಲಿ**

11. **'ಹಳತು'** ಎಂಬುದರ ವ್ಯಾಕರಣ ವಿಶೇಷ

ಅ) ಪರಿಮಾಣ ವಾಚಕ ಆ) ಗುಣವಾಚಕ ಇ) ಅನ್ವರ್ಥನಾಮ ಈ) ರೂಢನಾಮ.

**ಉ:- ಆ) ಗುಣವಾಚಕ**

12. **'ದೇಶ'** ಪದವು

ಅ)ರೂಢನಾಮ ಆ)ಅಂಕಿತನಾಮ ಇ)ಅನ್ವರ್ಥನಾಮ ಈ)ದ್ವೇಷ

**ಉ:- ಅ) ರೂಢನಾಮ**

13. **'ಅನಿತು'** ಈ ಪದದ ವ್ಯಾಕರಣಾಂಶ ವಿಶೇಷ

ಅ)ಗುಣವಾಚಕ ಆ)ಪರಿಮಾಣವಾಚಕ ಇ)ರೂಢನಾಮ
ಈ)ಅನ್ವರ್ಥನಾಮ
**ಉ:– ಆ) ಪರಿಮಾಣವಾಚಕ**

14. **'ಕೆಪ್ಪು'** ಪದದ ಅರ್ಥ
ಅ) ಕೆಂಪು ಆ) ಕಪ್ಪು ಇ) ಚಪ್ಪಲಿ ಈ) ಅಕ್ಕಿ
**ಉ:– ಇ) ಚಪ್ಪಲಿ**

15. **'ಭಾಗ್ಯ'** ಪದದ ಅರ್ಥ
ಅ)ಬಾಲೆ ಆ) ಬೇರೆ ಇ)ಹೆಂಡತಿ ಈ) ಭಾಗ
**ಉ:– ಇ) ಹೆಂಡತಿ (ಸತಿ)**

16. **'ಹತ್ತನೆಯ'** ಪದದ ವ್ಯಾಕರಣಾಂಶ
ಅ) ಸಂಖ್ಯಾವಾಚಕ ಆ) ಸಂಖ್ಯೇಯವಾಚಕ ಇ)ಭಾವನಾಮ ಈ) ದಿಗ್ವಾಚಕ
**ಉ:– ಆ) ಸಂಖ್ಯೇಯ ವಾಚಕ**

17. ತಾನು, ತಾವು, ತನ್ನಿ, ತಮ್ಮ –ಇವು ಈ ವ್ಯಾಕರಣಾಂಶಕ್ಕೆ ಸೇರಿದೆ.
ಅ) ಸರ್ವನಾಮ ಆ) ಪ್ರಶ್ನಾರ್ಥಕ ಇ) ಆತ್ಮಾರ್ಥಕ ಈ) ಉತ್ತಮಪುರುಷ
**ಉ:– ಇ) ಆತ್ಮಾರ್ಥಕ ಸರ್ವನಾಮ**

18. ಅವನು, ಅವಳು, ಅದು, ಇವು
ಅ)ಪ್ರಥಮಪುರುಷ ಆ) ಮಧ್ಯಮ ಪುರುಷ ಇ) ಉತ್ತಮಪುರುಷ ಈ) ಪುರುಷ
**ಉ:– ಅ) ಪ್ರಥಮ ಪುರುಷ**

19. ಧಾತುಗಳಿಗೆ **'ಕೃತ್'** ಪ್ರತ್ಯಯಗಳು ಸೇರಿದಾಗ ಅದು
ಅ) ತದ್ಧಿತಾಂತ ಆ) ಕ್ರಿಯಾಪದ ಇ)ಸಮಾಸ ಈ) ಕೃದಂತ
**ಉ:– ಈ) ಕೃದಂತ**

20. **'ನಡೆಯುತ್ತ'** ಪದವು ಇದಕ್ಕೆ ಉದಾಹರಣೆಯಾಗಿದೆ.
ಅ) ಕೃದಂತನಾಮ ಆ) ಕೃದಂತ ಭಾವನಾಮ ಇ) ಕೃದಂತಾವ್ಯಯ ಈ) ನಿಷೇಧ ಕೃದಂತ.
**ಉ:– ಇ) ಕೃದಂತಾವ್ಯಯ**

21. **'ತಿನ್ನುವಿಕೆ'** ಬಾಳುವಿಕೆ ಅಂಜಿಕೆ ಎಂಬುದು.
ಅ) ಕೃದಂತ ನಾಮ ಆ)ಕೃದಂತಭಾವನಾಮ ಇ) ಕೃದಂತಾವ್ಯಯ ಈ) ಭೂತಕೃದಂತ
**ಉ:– ಆ) ಕೃದಂತ ಭಾವನಾಮ**

22. **'ಓಡಿದ'** ಪದವು ಈ ಕೃದಂತಕ್ಕೆ ಉದಾಹರಣೆಯಾಗಿದೆ
ಅ) ಕೃದಂತನಾಮ ಆ) ಕೃದಂತಾವ್ಯಯ ಇ) ಕೃದಂತ ವರ್ತಮಾನ ಈ) ಕೃದಂತಭಾವನಾಮ.
**ಉ:– ಅ) ಕೃದಂತನಾಮ**

23. **'ಬರೆಯುವ'** ಪದದ ವ್ಯಾಕರಣಾಂಶ
ಅ) ಭೂತಕೃದಂತ ಆ) ವರ್ತಮಾನಕೃದಂತ ಇ) ನಿಷೇಧಕೃದಂತ ಈ) ಭವಿಷ್ಯಕೃದಂತ.
**ಉ:– ಆ) ವರ್ತಮಾನ ಕೃದಂತ**

24. **'ಇವರು'** ಎಂಬುದರ ವ್ಯಾಕರಣಾಂಶ
ಅ)ಪ್ರಥಮ ಪುರುಷ ಏಕವಚನ ಆ)ಅನ್ಯಪುರುಷ ಬಹುವಚನ
ಇ)ಮಧ್ಯಮ ಪುರುಷ ಬಹುವಚನ ಈ)ಉತ್ತಮ ಪುರುಷ ಬಹುವಚನ
**ಉ:– ಆ) ಅನ್ಯಪುರುಷ ಬಹುವಚನ**

25. **'ನೆತ್ತರೊಂದೆ'** ಪದವನ್ನು ಬಿಡಿಸಿ ಬರೆದಾಗ
ಅ) ನೆತ್ತರೂ+ಒಂದೆ ಆ)ನೆತ್ತರು+ಅಂದೆ ಇ)ನೆತ್ತ+ರೊಂದೆ ಈ) ನೆತ್ತರು+ಒಂದೆ
**ಉ:– ಈ) ನೆತ್ತರು+ಒಂದೆ**

# ಘಟಕ ಪರೀಕ್ಷೆ–1

**ಅಂಕಗಳು : 20**

**ಅ) ಬಹು ಆಯ್ಕೆಯ ಪ್ರಶ್ನೆಗಳು.** **1x3=3**

1. 'ದಿವ್ಯ ವಸ್ತ್ರಗಳು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಅ)ತತ್ಪುರುಷಸಮಾಸ ಆ) ಕರ್ಮಧಾರೆಯಸಮಾಸ ಇ)ದ್ವಿಗುಸಮಾಸ ಈ)ದ್ವಂದ್ವಸಮಾಸ
2. 'ವೀರಲವಗೆ' ಪದದಲ್ಲಿರುವ ವಿಭಕ್ತಿ ಹೆಸರು.
   ಅ)ಪ್ರಥಮ ಆ)ದ್ವಿತೀಯ ಇ) ತೃತೀಯ ಈ) ಚತುರ್ಥಿ
3. 'ವಸ್ತ್ರಾಭರಣ' ಪದದಲ್ಲಿ ಆಗಿರುವ ಸಂಧಿ
   ಅ)ಗುಣಸಂಧಿ ಆ)ವೃದ್ಧಿಸಂಧಿ ಇ)ಸವರ್ಣದೀರ್ಘಸಂಧಿ ಈ)ಜಶ್ತ್ವಸಂಧಿ

**ಆ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

**1x3=3**

1. ಮೂಡಲಿಕ್ಕೆ : ಕೃದಂತಾವ್ಯಯ :: ನೋಟ :.................
2. ಅಷ್ಟು : ಪರಿಮಾಣವಾಚಕ :: ಹನ್ನೆರಡು :.........................
3. ನಾನು : ಪುರುಷಾರ್ಥಕ ಸರ್ವನಾಮ :: ತಾನು :.....................

**ಇ) ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x3=3**

1. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?
2. ರತ್ನಗಂಬಳಿಯ ಬೆಲೆ ಎಷ್ಟಾಗಿತ್ತು?
3. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಗೆ ಬಿದ್ದಿತು?

**ಈ) ಕೊಟ್ಟಿರುವ ಪ್ರತಿ ಪ್ರಶ್ನೆಗೂ 3–4 ವಾಕ್ಯಗಳಲ್ಲಿ ಉತ್ತರಿಸಿ.** **2x4=8**

1. ಕಂಠಿ ಶಿವಕೋಟ್ಯಾಚಾರ್ಯ ಅವರ ಪರಿಚಯ ಮಾಡಿಕೊಡಿ.?
2. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?
3. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?
4. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದು ಕೊಳ್ಳಲು ಕಾರಣವೇನು?

**ಉ) ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ.** **1x3=3**

1. "ನಮ್ಮ ನಾಳ್ವರು ಮೊಳರೆ ಎಂದು ವಿಸ್ಮಯಂಬಟ್ಟು"

## ಘಟಕ ಪರೀಕ್ಷೆ – 2

**ಅಂಕಗಳು : 20**

**ಅ) ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.** **1x4=4**

1. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?
2. ಸುಕುಮಾರಸ್ವಾಮಿ ಅರ್ಧ ಆಹಾರವನ್ನು ಏಕೆ ಉಗುಳುತ್ತಿದ್ದನು?
3. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?
4. ಸುಕುಮಾರಸ್ವಾಮಿಯ ತಂದೆ ತಾಯಿಗಳ ಹೆಸರೇನು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.** **2x3=6**

1. ಸುಕುಮಾರಸ್ವಾಮಿಯ ವ್ಯಾಧಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು?
2. ವೃಷಭಾಂಕ ರಾಜನ ಸ್ವಾಗತಕ್ಕಾಗಿ ಯಶೋಭದ್ರೆ ಯಾವ ಯಾವ ಸಿದ್ಧತೆ ಮಾಡಿದ್ದಳು?
3. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?

**ಇ) ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ:** **2x3=6**

1. "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಮ್"
2. "ಆವಂತಿ ಸುಕುಮಾರನೆಂದು ಪೆಸರನಿಟ್ಟಂ"

**ಈ) 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

1. ಸುಕುಮಾರಸ್ವಾಮಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

   **ಅಥವಾ**

2. ಸುಕುಮಾರ ಎಂಬ ಹೆಸರು ಸುಕುಮಾರಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ? ವಿವರಿಸಿ.

# ಪದ್ಯ ಪಾಠ – 08
# ಕೆಮ್ಮನೆ ಮೀಸೆವೊತ್ತನ

**ಕವಿ – ಪಂಪ**

**ಆಕರ ಗ್ರಂಥ – ವಿಕ್ರಮಾರ್ಜುನ ವಿಜಯಂ**

**ಕವಿ ಪರಿಚಯ:** ಕನ್ನಡದ ಆದಿಕವಿ ಪಂಪನು ಕ್ರಿ.ಶ. ಸುಮಾರು 902 ರಲ್ಲಿ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಚಾಲುಕ್ಯರ ದೊರೆ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನು ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಎಂಬ ಮಹಾ ಕಾವ್ಯಗಳನ್ನು ಬರೆದಿದ್ದಾನೆ. ಈತನಿಗೆ ಸರಸ್ವತಿ ಮಣಿಹಾರ ಸಂಸಾರ ಸಾರೋದಯ, ಕವಿತಾ ಗುಣಾರ್ಣವ' ಎಂಬ ಬಿರುದುಗಳಿವೆ. ಪಂಪನು ಕನ್ನಡ ರತ್ನತ್ರಯರಲ್ಲಿ ಒಬ್ಬರಾಗಿದ್ದಾರೆ.

ಪ್ರಸ್ತುತ ಪದ್ಯಭಾಗವನ್ನು 'ಪಂಪ' ಕವಿಯ ವಿಕ್ರಮಾರ್ಜುನ ವಿಜಯ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತನೆ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

**ಪದ್ಯದ ಹೊಸಗನ್ನಡ ಸಾರಾಂಶ ವಿವರಣೆ.**

**ವಚನ:–** ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನನ್ನೂ ಜೊತೆಯಲ್ಲಿ ಕರೆದುಕೊಂಡು ದೇಶ ದೇಶಗಳನ್ನೆಲ್ಲ ಸುತ್ತಾಡಿ ಪರಶುರಾಮನ ಬಳಿಗೆ ಬಂದನು. ಆಗ ನಾರುಮಡಿಯಿಂದ ಸುತ್ತುವರಿದ ನಡುವುಳ್ಳವನಾಗಿದ್ದ, ಜಟಾ ಸಮೂಹದಿಂದ ಕೂಡಿದವನೂ ಆಗಿದ್ದ, ತಪೋವನಕ್ಕೆ ಹೊರಟಾಗ ಪರಶುರಾಮನು ದ್ರವ್ಯವನ್ನು (ಹಣ) ಬೇಡುವುದಕ್ಕಾಗಿ ಬಂದ ದ್ರೋಣನನ್ನು ಕಂಡು ಚಿನ್ನದ ಪಾತ್ರೆ ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

॥ ಚಂಪಕ ಮಾಲ ವೃತ್ತ ॥ ನಂತರ ಪರಶುರಾಮನು ದ್ರೋಣಾಚಾರ್ಯರನ್ನು ಕುರಿತು "ಸಂಪತ್ತನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ (ಕಶ್ಯಪಮುನಿಗಳಿಗೆ) ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಿಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೊಷ ಪಡಿಸಲಿ! ಎಂದು ಮನದಲ್ಲಿ ಯೋಚಿಸುತ್ತಾ ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು ಎಂದು ಹೇಳಿದನು.

ವಚನ॥ ಎಂಬುದಾಗಿ ಹೇಳಲು ದ್ರೋಣನು ನನಗೆ ವಿದ್ಯಾಧನವೇ ಧನವು ಆದುದರಿಂದ ಆ ದಿವ್ಯಾಸ್ತ್ರಗಳನ್ನು ದ0ಯುಪಾಲಿಸು ಎನ್ನಲು ವರುಣ, ವಾ0ಯುವ್ಯ, ಆಗ್ನೇ0ಯ, ಇಂದ್ರಾಸ್ತ್ರವೇ ಮೊದಲಾದ ಪ್ರಧಾನವಾದ ಅಸ್ತ್ರಗಳನ್ನು ಕೊಡಲು, ಅದನ್ನು ತೆಗೆದುಕೊಂಡು ಪರಶುರಾಮನಿಂದ ಬೀಳ್ಕೊಂಡು, ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ, ಎಂದು ಕೇಳಿ ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು ದ್ವಾರಪಾಲಕನನ್ನು ಕರೆದು "ನಿಮ್ಮ ಜೊತೆಯಲ್ಲಾಟ ವಾಡಿದ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯ ಪಡಿಸು' ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಆಗ ದ್ರುಪದನು ರಾಜ್ಯ ಎಂಬ ಸುರಪಾನದಿಂದ ಸೊಕ್ಕಿದವನೂ ಅಹಂಕಾರವೆಂಬ ಗ್ರಹದಿಂದ ಪೀಡಿತನಾದ ಮನಸ್ಸುಳ್ಳವನೂ ಆಗಿ ಒಳ್ಳೆಯ ತನವಿಲ್ಲದೇ ಹೀಗೆ ನುಡಿದನು.

॥ ಕಂದ ಪದ್ಯ ॥ ದ್ರುಪದನು ದ್ವಾರ ಪಾಲಕನೊಡನೆ " ಹಾಗೆ ಹೇಳುತ್ತಿರುವ ಅವನು ಯಾರು? ಇದು ಹಿರಿದಾದ ಭ್ರಮೆಯಲ್ಲವೇ? ದ್ರೋಣ ಎಂಬುವವನು ಬ್ರಾಹ್ಮಣನೇ?

ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು ಅವನನ್ನು ಹೊರಗೆ ನೂಕು "ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು.

॥ ವಚನ ॥ ದ್ರುಪದನು ಹೀಗೆ ಹೇಳಿದುದನ್ನು ದ್ವಾರಪಾಲಕನು ಬಂದು ಆ ರೀತಿಯಲ್ಲಿಯೇ ತಿಳಿಸಲು ದ್ರೋಣನು ಒತ್ತಾಯದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ.

॥ ಚಂಪಕ ಮಾಲಾ ವೃತ್ತ ॥ ದ್ರೋಣನು ದ್ರುಪದನನ್ನು ದ್ವಾರಪಾಲಕನು "ಅಣ್ಣಾ, ನೀವೂ, ನಾವು ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ. ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು, ಎನ್ನನ್ನು ನೀನು ಅದೆಲ್ಲಿ

ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣ ವಂಶದವನಿಗೂ ಯಾವ ವಿದದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲದವರಾಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮ ಭೇಧಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು.

॥ ವಚನ ॥ ಹಾಗೆ ಮಾಡಿದುದು ಅಲ್ಲದೆ " ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ಹಾಕಿರಿ" ಎಂದು ಹೇಳಿದನು. ಆಗ ದ್ರೋಣನು ಹೀಗೆ ನುಡಿದನು.

॥ ಚಂಪಕ ಮಾಲಾ ವೃತ್ತ ॥ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು. ಮುಖದಲ್ಲಿ ವಕ್ರ ಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುದು: ಭಾಂಧವ್ಯವನ್ನು ಮರೆಯುವಂತೆ ಮಾಡುವುದು: ಆದುದರಿಂದ ಸಂದೇಹ ಪಡದೆ ಸ್ಪಷ್ಟವಾಗಿ ಐಶ್ವರ್ಯವು (ಲಕ್ಷ್ಮಿ0ಯೂ) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತ್ತು ಎಂಬುದನ್ನು ಥಟ್ಟನೆ ಈಗ ತಿಳಿದೆನು" ಎಂದು ತನ್ನನ್ನು ಹೀಯಾಳಿಸಿದ ದ್ರುಪದನಿಗೆ ಹೇಳಿದನು.

॥ ಚಂಪಕ ಮಾಲಾ ವೃತ್ತ ॥ ದ್ರೋಣನು ದ್ರುಪದನನ್ನು ಕುರಿತು ಎಲೈ ದುಷ್ಟನೇ ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದೆವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾ ವಲಯದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ ( ಮೀಸೆ ಹೊತ್ತಿರುವುದು ವ್ಯರ್ಥವಲ್ಲದೇ) ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?**

ಉ:– ದ್ರೋಣನು ತನಗೆ ಬಡತನ ಉಂಟಾಗಲು ದ್ರವ್ಯವನ್ನು (ಹಣವನ್ನು) ಬೇಡುವುದಕ್ಕಾಗಿ ಪರಶುರಾಮನ ಬಳಿಗೆ ಬಂದನು.

**2. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?**

ಉ:– ದ್ರೋಣನು ತನ್ನ ಮಗನಾದ ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು.

**3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?**

ಉ:– ಪರಶುರಾಮನು ವರುಣ, ವಾಯುವ್ಯ, ಆಗ್ನೇಯ, ಇಂದ್ರಾದಿ ಅಸ್ತ್ರಗಳನ್ನು ದ್ರೋಣನಿಗೆ ಕೊಟ್ಟನು.

**4. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು?**

ಉ:– ದ್ರುಪದನು ಪಡಿಯರಿಗೆ ಅವನು ಯಾರು? ಇದು ಹಿರಿದಾದ ಭ್ರಮೆಯಲ್ಲವೆ ನಾನು ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು. ಎಂದು ಹೇಳಿದನು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ**

**1) ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?**

ಉ:– ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶ ದೇಶಗಳನ್ನೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದನು. ಈಗ ನಾರು ಮಡಿಯಿಂದ ಕೂಡಿದ ನಡುವನ್ನುಳ್ಳವನೂ, ಜಟಾ ಸಮೂಹದಿಂದ ಕೂಡಿದವನೂ ಆದ ಆ ಪರಶುರಾಮನು ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

**2. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?**

ಉ:– ದ್ರುಪದನು "ನಿನ್ನನ್ನು ನಾನು ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದೆ0ಯಾ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೆ? ಎಂಬ ಮಾತುಗಳಿಂದ ತೀವ್ರ ನಾಚಿಕೆಯಾಗುವಂತೆ ದ್ರೋಣರನ್ನು ಹೀಯಾಳಿಸಿದನು.

**3. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?**

ಉ:– ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು ಎನ್ನುವ ಹಾಗೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದೆವೆಂಬ ಒಂದು ಕಾರಣದಿಂದ ನಿನ್ನನ್ನು ನನ್ನಶಿಷ್ಯರಿಂದ ನಿರಾ0ಯಾಸವಾಗಿ ಗಾಬರಿಯಾಗುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ? ಎಂದು ಹೇಳುತ್ತಾನೆ.

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

**1. "ಈಗಳೊಂದಡಕೆಯುಮಿಲ್ಲ ಕೈಯೊಳ್"**

**ಆಯ್ಕೆ:–** ಈ ವಾಕ್ಯವನ್ನು ಪಂಪ ಕವಿಯ 'ವಿಕ್ರಮಾರ್ಜುನ ವಿಜಯ ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ದ್ರೋಣನು ತನಗೆ ಬಡತನ ಬಂದಾಗ ಸಹಾಯ ಕೇಳಲು ಪರಶುರಾಮನ ಬಳಿ ಬಂದಾಗ ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಿಕೆಯೂ ಇಲ್ಲ ಬೇಡುವವನಾದರೂ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಸಲಿ ಎಂದು ಪರಶುರಾಮನು ಮರುಗುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:–** ಪರಶುರಾಮನ ದಾನಗುಣದಿಂದಾಗಿ ಆತನ ಬಳಿ ಯಾವುದೇ ಸಂಪತ್ತು ಉಳಿದಿರಲಿಲ್ಲ. ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

**2. "ವಿದ್ಯಧನಮೆ ಧನಮಪ್ಪುದು"**

**ಆ0ಯ್ಕೆ:–** ಈ ವಾಕ್ಯವನ್ನು ಪಂಪ ಕವಿಯ 'ವಿಕ್ರಮಾರ್ಜುನ ವಿಜಯ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ತನಗೆ ಬಡತನ ಉಂಟಾದಾಗ ಪರಶುರಾಮರ ಬಳಿ ಬಂದು ಸಹಾಯ ಕೇಳಿದನು. ಆಗ ಪರಶುರಾಮರು "ದ್ರೋಣನೇ ಈಗ ಇದೊಂದು ಬಿಲ್ಲು ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ, ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು "ಎಂದು ಹೇಳಿದಾಗ ದ್ರೋಣರು ನನಗೆ ವಿದ್ಯಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯ ಪಾಲಿಸಬೇಕು ಎನ್ನುತ್ತಾರೆ.

**ಸ್ವಾರಸ್ಯ:–** ವಿದ್ಯೆಯೇ ನಿಜವಾದ ಸಂಪತ್ತು. ಈ ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಸ್ವಾರಸ್ಯ ಪೂರ್ಣವಾಗಿದೆ.

**3. "ಎಂತು ನಾಣಿಲಿಗರಪ್ಪರೆ ಮಾನಸರ್"**

**ಆಯ್ಕೆ:–** ಈ ವಾಕ್ಯವನ್ನು ಪಂಪ ಕವಿಯ 'ವಿಕ್ರಮಾರ್ಜುನ ವಿಜಯ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ದ್ರೋಣನು ದ್ರುಪದನ ಬಳಿಗೆ ಬಂದು "ಅಣ್ಣಾ ನೀನೂ ನಾನು ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದದ್ದನ್ನು ತಿಳಿದಿಲ್ಲವೇ? ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ, ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯಾ? ರಾಜನಿಗೂ ಬ್ರಾಹ್ಮನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಹೀಯ್ಯಾಳಿಸಿದನು.

**ಸ್ವಾರಸ್ಯ:–** ದ್ರುಪದನ ಅಹಂಕಾರ, ರಾಜನ ಪ್ರತಿಷ್ಠೆ, ಬಡ ಸ್ನೇಹಿತನ ಬಗೆಗಿನ ತಿರಸ್ಕಾರ ಎಲ್ಲವು ಬಹು ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

**4. “ಜಲಕ್ಕನೀಗಳವೆಂದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ”**

**ಆಯ್ಕೆ:–** ಈ ವಾಕ್ಯವನ್ನು ಪಂಪ ಕವಿಯ ‘ವಿಕ್ರಮಾರ್ಜುನ ವಿಜಯ ಕೃತಿಯಿಂದ ಆಯ್ದ ‘ಕೆಮ್ಮನೆ ಮೀಸೆವೊತ್ತನೇ’ ಎಂಬ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ :–** ದ್ರೋಣನಿಗೆ ಬಡತನವುಂಟಾದಾಗ ತನ್ನ ಗೆಳೆಯ ದ್ರುಪದನ ಬಳಿ ಸಹಾಯವನ್ನು ಯಾಚಿಸಿ ಬರಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ. ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂದು ಹೀಯ್ಯಾಳಿಸಿ ಮಾತನಾಡಿದಾಗ ದ್ರೋಣನು “ಐಶ್ವರ್ಯ ಬರಲು ಮಧ್ಯಪಾನ ಮಾಡಿದವರಂತೆ ಮಾತು ತೊದಲುವುದು. ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು. ಮಾತುಗಳು ನಾಚಿಕೆಯಿಲ್ಲದಾಗುವುವು ಸಂಬಂಧವನ್ನು ಮರೆಯುವಂತೆ ಮಾಡುವುದು. ಆದುದರಿಂದ ಐಶ್ವರ್ಯವು ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು” ಎಂಬುದನ್ನು ಹೇಳುತ್ತಾರೆ.

**ಸ್ವಾರಸ್ಯ:–** ಐಶ್ವರ್ಯ ಮತ್ತು ಕಳ್ಳು (ಹೆಂಡ) ಇವೆರಡೂ ಕೂಡ ಮದ (ಅಹಂಕಾರ) ಕ್ಕೆ ಅನ್ವಯ ಮಾಡಿ ಹೇಳಿರುವುದು ಬಹು ಸ್ವಾರಸ್ಯ ಪೂರ್ಣವಾಗಿದೆ.

**5. “ನೊಳವಿಂಗೆ ತಪ್ಪೆವರಂ”**

**ಆಯ್ಕೆ:–** ಈ ವಾಕ್ಯವನ್ನು ಪಂಪ ಕವಿಯ ‘ವಿಕ್ರಮಾರ್ಜುನ ವಿಜಯ ಕೃತಿಯಿಂದ ಆಯ್ದ ‘ಕೆಮ್ಮನೆ ಮೀಸೆವೊತ್ತನೇ’ ಎಂಬ ಪದ್ಯದಿಂದ ಆಯ್ದು ಕೊಳ್ಳಲಾಗಿದೆ.

**ಸಂದರ್ಭ:–** ದ್ರೋಣನು ಬಡತನದಿಂದಾಗಿ ಸಹಾಯ ಯಾಚಿಸಿ ಬಂದಾಗ ದ್ರುಪದನು ಮನ ಬಂದಂತೆ ಹೀಯಾಳಿಸಿ ಅವಮಾನ ಮಾಡುತ್ತಾನೆ. ಇದನ್ನು ಸಹಿಸದ ದ್ರೋಣನು ನೊಣಕ್ಕೆ ಕಸವೇ ಶ್ರೇಷ್ಠ ವಾದುದು ಎನ್ನುವ ಗಾದೆ ಮಾತಿನಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆನೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾ ಮಂಡಲದಲ್ಲಿ ನನ್ನನ್ನು ಹೀ೦ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನಿನ್ನನ್ನು ಕಟ್ಟಿಸದೆ ಬಿಟ್ಟರೆ ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ? ಎನ್ನುತ್ತಾನೆ.

**ಸ್ವಾರಸ್ಯ:–** ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಅವರವರ ಗುಣ–ನಡತೆ–ಅಭಿರುಚಿಗಳು ಇರುತ್ತದೆ. ಎಂಬುದನ್ನು ಬಹು ಸ್ವಾರಸ್ಯವಾಗಿ ಹೇಳಲಾಗಿದೆ.

**ಉ). ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

**1. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?**

ಉ:– ದ್ರೋಣನು ತನಗೆ ಬಡತನ ಬಂದಾಗ ಸಹಾಯಕ್ಕಾಗಿ ಬಾಲ್ಯದ ಗೆಳೆಯನಾದ ದ್ರುಪದ ರಾಜನ ಬಳಿಗೆ ಬಂದನು. ದ್ರೋಣನು ದ್ರುಪದನ ಅರಮನೆಯ ದ್ವಾರಪಾಲಕನ ಬಳಿ “ನಿನ್ನ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ. ಎಂದು ನಿಮ್ಮ ರಾಜನಿಗೆ ತಿಳಿಯ ಪಡಿಸು” ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯ? ಅವನನ್ನು ಹೊರಗೆ ನೂಕು ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು. ಆಗ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು “ಅಣ್ಣಾ ನೀವೂ ನಾವು ಜೊತೆಗೆ ಓದಿದ್ದೆವೆಂಬುದು ತಿಳಿದಿಲ್ಲವೇ? ಎಂದು ಹೇಳಲು ದ್ರುಪದನು “ನಿನ್ನನ್ನು ನಾನು ತಿಳಿಯನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣ ವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಹೀಯಾಳಿಸಿದಾಗ, ದ್ರೋಣನು “ಐಶ್ವರ್ಯ ಬರಲು ಮಧ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು: ಮುಖದಲ್ಲಿ ವಕ್ರ ಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುದು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು: ಆದುದರಿಂದ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು. ಎಂಬುದನ್ನು ಹೇಳುತ್ತಾರೆ. ಮುಂದುವರೆದು ದ್ರೋಣನು ದ್ರುಪದನನ್ನು ಕುರಿತು ‘ಎಲೈ ದುಷ್ಟನೇ ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಟವಾದುದು’ ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ?

ಜೊತೆಯಲ್ಲಿ ವಿದ್ಯಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾ ಮಂಡಲದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಸುಮ್ಮನೆ ಮೀಸೆ ಹೊತ್ತಿರುವುದು ವ್ಯರ್ಥವಲ್ಲ·ವೆ? 'ಎಂದು ದ್ರೋಣನು ದ್ರುಪದನಿಗೆ ಹೇಳಿದನು.

**2. ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?**

ಉ:– ದ್ರೋಣ ಮತ್ತು ದ್ರುಪದರಿಬ್ಬರೂ ಸಹಪಾಠಿಗಳು. ಯಜ್ಞಸೇನನೆಂಬ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿದರು. ದ್ರುಪದನು ತಾನು ದೊರೆಯಾದಾಗ ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ದ್ರೋಣನಿಗೆ ಹೇಳಿದನು, ದ್ರೋಣನಿಗೆ ಬಡತನ ಬಂದಿತು. ಈ ವೇಳೆಗೆ ದ್ರುಪದನು ರಾಜನಾಗಿದ್ದನು. ದ್ರುಪದನು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಂಡು ಸಹಾಯವನ್ನು ನಿರೀಕ್ಷಿಸಿ ದ್ರುಪದನಲ್ಲಿಗೆ ಬಂದನು, ಆದರೆ ದ್ರುಪದನಿಗೆ ಅಧಿಕಾರ ಮದ ಆವರಿಸಿತ್ತು. ದ್ರೋಣ ತನ್ನ ಸಹಪಾಠಿ ಎಂದು ಗುರುತಿಸದಾದನು. ದ್ರೋಣನು ಬಾಲ್ಯದ ದಿನಗಳನ್ನು ನೆನಪಿಸಲು ಪ್ರಯತ್ನಿಸಿದಾಗ ದ್ರುಪದ ರಾಜನು "ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ?" ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂದು ತಿರಸ್ಕಾರದ ಮಾತುಗಳನ್ನಾಡಿದನು. ಇದರಿಂದ ಕೋಪಗೊಂಡ ದ್ರೋಣನು ಐಶ್ವರ್ಯದಿಂದ ಮದೋನ್ಮತ್ತನಾಗಿ ಸಂಬಂಧವನ್ನು ಮರೆತ ನಿನ್ನನ್ನು ನೋಡಿದರೆ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು ಎಂಬ ಮಾತು ಇಂದಿಗೆ ನನಗೆ ಸ್ಪಷ್ಟವಾಯಿತು. ಆದರೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ ಈ ಸಭಾಮಂಡಲದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೇ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ? ಎಂದು ದ್ರೋಣನು ತುಂಬಿದ ಸಭೆಯಲ್ಲಿ ದ್ರುಪದನ ವಿರುದ್ಧ ಶಪಥ ಮಾಡಿದನು.

## ಭಾಷಾ ಚಟುವಟಿಕೆ

**ಅ. ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿಯ ಹೆಸರಿಸಿ.**

ವಲ್ಕಲ + ಆವೃತ = ವಲ್ಕಲಾವೃತ = ಸವರ್ಣದೀರ್ಘಸಂಧಿ
ದ್ರವ್ಯ + ಅರ್ಥಿ = ದ್ರವ್ಯಾರ್ಥಿ = ಸವರ್ಣದೀರ್ಘಸಂಧಿ
ನಿಮ್ಮ + ಅರಸ = ನಿಮ್ಮರಸ = ಲೋಪಸಂಧಿ
ಮದ + ಉನ್ನತ = ಮದೋನ್ಮತ್ತ = ಗುಣಸಂಧಿ
ಕಳ್ + ಕುಡಿ = ಕಳ್ಗುಡಿ = ಆದೇಶಸಂಧಿ

**ಆ. ಕೊಟ್ಟಿರುವ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

ದಿವ್ಯವಾದ + ಶರಾಳಿ = ದಿವ್ಯಶರಾಳಿ = ಕರ್ಮಧಾರೆಯ ಸಮಾಸ
ಕಳ್ಳನ್ನು + ಕುಡಿದ = ಕಳ್ಗುಡಿದ = ಕ್ರಿಯಾ ಸಮಾಸ
ನಾಣ್ + ಇಲ್ಲದವನು ಯರೋ ಅವನು = ನಾಣಿಲಿ(ನಾಚಿಕೆ ಇಲ್ಲದವ)= ಬಹುವ್ರೀಹಿ ಸಮಾಸ
ಮಹಿಗೆ + ಪತಿ ಆವನೋ ಅವನು = ಮಹೀಪತಿ(ರಾಜ) = ಬಹುವ್ರೀಹಿ ಸಮಾಸ

**ಇ. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ.**

**"ನೊಳವಿಂಗೆ ತಪ್ಪೆ ವರಮೆಂಬೊಲಾಂಬರಮುಂಟೆ ನಿನ್ನ ದೊಂದಳವು?"**

**ಅಲಂಕಾರ: ಉಪಮಾಲಂಕಾರ**

**ಲಕ್ಷಣ:** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ:** ದ್ರುಪದನ ಅಳವು (ಯೋಗ್ಯತೆ/ಪರಾಕ್ರಮ)

**ಉಪಮಾನ:** ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದ ನೊಳ(ನೊಣ)

**ಉಪಮಾ ವಾಚಕ:** ವೊಲ್

**ಸಮನ್ವಯ:** ಇಲ್ಲಿ ಉಪಮೇಯವಾಫಿರುವ ದ್ರುಪದನ ಯೋಗ್ಯತೆಯನ್ನು ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದ ನೊಳ(ನೊಣ)ಕ್ಕೆ ಹೋಲಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಈ. ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

**1. ಅಂತೆಂಬನಾರ್ಗೆ ಪಿರಿದುಂ**

**ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ**

**- - | U-U | UU-**
**ಅಂತೆಂ । ಬನಾರ್ಗೆ । ಪಿರಿದುಂ**

**- U U |- - | U – U |- - | UU-**
**ಭ್ರಾಂತು ದ।ಲೇಂ ದ್ರೋ।ಣನೆಂಬ। ನೇಂ ಪಾ।ರ್ವನೆ ಪೇ**
**=ಈ ಮೇಲಿನ ಪದ್ಯವು ಮಾತ್ರಾಗಣದ 'ಕಂದ ಪದ್ಯ'ದಲ್ಲಿ ರಚಿತವಾಗಿದೆ.**

**2. ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ**

**- U U | U – U| – U U | U – U | U – U | U – U | - U -**
ಖಳನೊ । ಳವಿಂಗೆ। ಕುಪ್ಪೆ ವ ।ರಮೆಂಬ ।ವೊಲಾಂಬ ।ರಮುಂಟೆ। ನಿನ್ನದೊಂ
**= ಈ ಮೇಲಿನ ಪದ್ಯವು ಅಕ್ಷರ ಗಣದ 'ಚಂಪಕಮಾಲಾ ವೃತ್ತ'ದಲ್ಲಿ ರಚಿತವಾಗಿದೆ.**

**ಉ ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

ಒಡವೆಯನರ್ಥಿಗಿತ್ತೆನವನೀ ತಳಮಂ ಗುರುಗಿತ್ತೆನಿಗಳೊಂ
ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತ ತಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುಮಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇವಿವರೊಳಾವುದನೀವುದೊ ಕುಂಭ ಸಂಭವ॥

ಅಂತೆಂಬನಾರ್ಗೆ ಪಿರಿದುಂ
ಬ್ರಾಂತುದಲೇಂ ದ್ರೋಣನೆಂಬನೇಂ ಪಾರ್ವನೇ ಪೇ
ವಂತೆನಗೆ ಕಳೆಯನೇ ನೂಂ
ಕಂತಪ್ಪನನವಿಯೆನೆಂದು ಸಭೆಯೊಳ್ ನುಡಿದಂ.

## ಬಹು ಆಯ್ಕೆಯ ಪ್ರಶ್ನೆಗಳು.

1. **'ಭಾರ್ಗವ'** ಎಂದರೆ ಇವರು

ಅ)ದ್ರುಪದ ಆ)ಪರಶುರಾಮ ಇ)ಅಶ್ವತ್ಥಾಮ ಈ)ಕೃಷ್ಣ

ಉ: **ಆ)ಪರಶುರಾಮ**

2. **'ಮೃತ್ಪಾತ್ರೆ'** ಈ ಪದದ ಅರ್ಥ

ಅ) 'ತಾಮ್ರದ ಪಾತ್ರೆ' ಆ) ಚಿನ್ನದ ಪಾತ್ರೆ ಇ) ಮಣ್ಣಿನ ಪಾತ್ರೆ ಈ) ಕಂಚಿನ ಪಾತ್ರೆ

ಉ: **ಇ) ಮಣ್ಣಿನ ಪಾತ್ರೆ**

3. **'ದಿವ್ಯಾಸ್ತ್ರ'** ಈ ಪದದಲ್ಲಿರುವ ಸಂಧಿ

ಅ)ಸವರ್ಣದೀರ್ಘ ಆ)ಗುಣ ಸಂಧಿ ಇ)ಯಣ್‌ಸಂಧಿ ಈ)ವೃದ್ಧಿಸಂಧಿ

ಉ: **ಅ)ಸವರ್ಣದೀರ್ಘ**

4. **'ಕಳೆಯಂ'** ಈ ಪದದಲ್ಲಿನ ವಿಭಕ್ತಿ ಪ್ರತ್ಯಯ ಇದು

ಅ)ಪ್ರಥಮ ಆ)ದ್ವಿತೀಯ ಇ)ತೃತೀಯ ಈ)ಪಂಚಮೀ

ಉ: **ಆ)ದ್ವಿತೀಯ**

5. **'ಪ್ರತೀಹಾರಿ'** ಪದದ ತದ್ಭವ ರೂಪ

ಅ)ಆಕಾಶ ಆ)ಭೂಮಿ ಇ)ಸೈನಿಕ ಈ)ಪಡಿಯುವ

ಉ: **ಈ)ಪಡಿಯುವ**

6. **'ಅಂಬರಂ'** ಎಂದರೆ

ಅ)ಆಕಾಶ ಆ)ಶತ್ರು ಇ)ನನ್ನವರೆಗೂ ಈ)ನಿನ್ನವರಗೂ

ಉ: **ಇ)ನನ್ನವರೆಗೂ**

7. **'ಅರ್ಥಿ'** ಪದದ ಅರ್ಥ

ಅ)ವಿದ್ಯಾರ್ಥಿ ಆ) ಬೇಡುವವನು ಇ)ಕಾಡುವವನು ಈ)ಅರ್ಥ

ಉ: **ಆ) ಬೇಡುವವನು**

8. **'ಸಂದೇಹ'** ಪದದ ಕನ್ನಡ ರೂಪ

ಅ)ಅನುಮಾನ ಆ)ದೇಹ ಇ)ಸಂದೆಯ ಈ)ದಯೆ

ಉ: **ಇ)ಸಂದೆಯ**

9. **'ಪೌರಂದರ'** ಎಂದರೆ ಇವರು

ಅ)ವರುಣ ಆ)ಪರಶುರಾಮ ಇ)ದ್ರುಪದ ಈ)ಇಂದ್ರ

ಉ: **ಈ)ಇಂದ್ರ**

10. ಸ್ರಗ್ಧರಾವೃತ್ತದಲ್ಲಿ ಪ್ರತಿ ಪಾದದಲ್ಲಿರುವ ಅಕ್ಷರಗಳು

ಅ)21 ಆ)20 ಇ)22 ಈ)19

ಉ: **ಅ)21**

11. **'ಸತತಂನಂಸಂರರಂಗಂ'** ಲಕ್ಷಣ ಬರುವ ವೃತ್ತ

ಅ) ಸ್ರಗ್ಧರಾ ಆ)ಮಹಾಸ್ರಗ್ಧರಾ ಇ)ಚಂಪಕಮಾಲ ಈ)ಉತ್ಪಲಮಾಲ

ಉ: **ಆ)ಮಹಾಸ್ರಗ್ಧರಾ**

12. 'ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ? ಇಲ್ಲಿರುವ ಅಲಂಕಾರ

ಅ)ರೂಪಕ ಆ)ಉಪಮಾ ಇ)ಅರ್ಥಾಂತರನ್ಯಾಸ ಈ)ಶ್ಲೇಷಾ

ಉ: **ಇ)ಅರ್ಥಾಂತರನ್ಯಾಸ**

13. **'ಕಳ್ಗುಡಿ'** ಪದವನ್ನು ಬಿಡಿಸಿ ಬರೆದಾಗ

ಅ)ಕಳ್+ಕುಡಿ ಆ)ಕಳ್ಳು+ಕುಡಿ ಇ)ಕಳ್+ಗುಡಿ ಈ) ಕಲ್ಲಿ+ಗುಡಿ

ಉ: **ಅ)ಕಳ್+ಕುಡಿ**

14. **'ನಾಣಿಲಿ'** ಪದವು ಈ ಸಮಾಸಕ್ಕೆ ಸೇರಿದೆ.

ಅ)ದ್ವಿಗುಸಮಾಸ ಆ)ಅಂಶಿಸಮಾಸ ಇ)ಕರ್ಮಧಾರೆಯಸಮಾಸ ಈ)ಬಹುವ್ರೀಹಿ ಸಮಾಸ

ಉ: **ಈ)ಬಹುವ್ರೀಹಿ ಸಮಾಸ**

15. **"**ನೊಳವಿಂಗೆ ತಿಪ್ಪೆ ವರವೆಂಬವೋಲಾಂಬರ ಮುಂಟೆ ನನ್ನದೊಂದಳು ಇಲ್ಲಿರುವ ಅಲಂಕಾರ

ಅ)ರೂಪಕ ಆ)ಆಗಮ ಇ)ಶ್ಲೇಷಾ ಈ)ದೃಷ್ಟಾಂತ.

ಉ: **ಉಪಮಾ**

16. **'ನಿಮ್ಮರಸ'** ಪದವು ಈ ಸಂಧಿಗೆ ಉದಾಹರಣೆ

ಅ)ಲೋಪ ಸಂಧಿ ಆ)ಆಗಮ ಸಂಧಿ ಇ)ಗುಣ ಸಂಧಿ ಈ)ಯಣ್ ಸಂಧಿ

ಉ: **ಅ)ಲೋಪ ಸಂಧಿ**

17. **'ದಿವ್ಯಶರಾಳಿ'** ಪದವು ಈ ಸಮಾಸಕ್ಕೆ ಸೇರಿದೆ.

ಅ) ತತ್ಪುರುಷ ಸಮಾಸ ಆ)ಕ್ರಿಯಾಸಮಾಸ ಸಮಾಸ ಇ)ಕರ್ಮಧಾರೆಯ ಸಮಾಸ ಈ)ದ್ವಂದ್ವ ಸಮಾಸ

ಉ: **ಇ)ಕರ್ಮಧಾರೆಯ**

18. **'ದ್ವಿಜವಂಶಜಂ'** ಎಂದರೆ

ಅ)ಅಶ್ವತ್ಥಾಮ ಆ)ಪರಶುರಾಮ ಇ)ದ್ರೋಣ ಈ)ಬ್ರಾಹ್ಮಣ.

ಉ: **ಈ)ಬ್ರಾಹ್ಮಣ.**

19. **'ಮದಿರಾ'** ಪದದ ಅರ್ಥ

ಅ)ಮಂದಿರ ಆ)ಅರಮನೆ ಇ)ಸುರಪಾನ ಈ)ದೇವಲೋಕ

ಉ: **ಇ)ಸುರಪಾನ**

20. ಖ್ಯಾತ ಕರ್ನಾಟಕಗಳಲ್ಲಿ ಅತಿ ದೊಡ್ಡ ವೃತ್ತ ಇದಾಗಿದೆ.

ಅ)ಸ್ರಗ್ಧರಾ ಆ)ಮಹಾಸ್ರಗ್ಧರಾ ಇ)ಶಾರ್ದೂಲ ಈ)ಚಂಪಕಮಾಲ

ಉ: **ಆ)ಮಹಾಸ್ರಗ್ಧರಾ**

21. **'ಬಾಗಿಲೊಳ್'** ಈ ಪದದಲ್ಲಿರುವ ವಿಭಕ್ತಿ

ಅ)ಪಂಚಮೀ ಆ)ಷಷ್ಠೀ ಇ)ಸಪ್ತಮೀ ಈ)ಸಂಭೋಧನಾ

ಉ: **ಇ)ಸಪ್ತಮೀ**

22. **'ಅತ್ಯಂತ'** ಪದದ ಸಂಧಿ.

ಅ)ಆಗಮ ಸಂಧಿ ಆ)ಯಣ್ ಸಂಧಿ ಇ)ವೃದ್ಧಿ ಸಂಧಿ ಈ)ಲೋಪ ಸಂಧಿ

ಉ: **ಆ)ಯಣ್ ಸಂಧಿ**

23. **'ಸಮಂತು'** ಎಂದರೆ

ಅ)ಸಮ ಆ)ಸಮವಾಗಿ ಇ)ಸ್ವರ್ಗ ಈ)ಚೆನ್ನಾಗಿ.

ಉ: **ಈ)ಚೆನ್ನಾಗಿ.**

24. **'ಸಿಗ್ಗು'** ಪದದ ಅರ್ಥ

ಅ)ಸಿಟ್ಟು ಆ)ಸಿಕ್ಕು ಇ)ಬೆಗುರು ಈ)ನಾಚಿಕೆ

ಉ: **ಈ)ನಾಚಿಕೆ**

25. **'ವಿಕ್ರಮಾರ್ಜುನ'** ಪದವು ಈ ಸಂಧಿಗೆ ಉದಾಹರಣೆ

ಅ)ಸವರ್ಣದೀರ್ಘಸಂಧಿ ಆ)ಗುಣಸಂಧಿ ಇ)ವೃದ್ಧಿಸಂಧಿ ಈ)ಯಣ್ಸಂಧಿಸಂಧಿ

ಉ: **ಅ)ಸವರ್ಣದೀರ್ಘ**

# ಘಟಕ ಪರೀಕ್ಷೆ – 1

**ಅಂಕಗಳು – 20**

**ಅ) ಬಹು ಆಯ್ಕೆಯ ಪ್ರಶ್ನೆಗಳು.** **1X3=3**

1. ದ್ರೋಣಂ ಪದದಲ್ಲಿರುವ ವಿಭಕ್ತಿ ಹೆಸರು.
   ಅ)ಪ್ರಥಮ ಆ)ದ್ವಿತೀಯ ಇ) ತೃತೀ೦ಯ ಈ)ಚತುರ್ಥಿ
2. 'ಮಹೀಪತಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಅ)ತತ್ಪುರುಷ ಆ)ಗಮಕ ಇ)ಬಹುವ್ರೀಹಿ ಈ)ಕರ್ಮಧಾರೆಯ.
3. 'ಕಳ್ಗುಡಿ' ಪದದಲ್ಲಿ ಆಗಿರುವ ಸಂಧಿ
   ಅ)ಲೋಪ ಆ)ಆದೇಶ ಇ)ಆಗಮ ಈ)ಯಣ್

**ಆ). ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.** **1X3=3**

1. ಸಯ್ಯನೆ : ಅನುಕರಣಾವ್ಯಯ :: ಕೆಮ್ಮನೆ :....................
2. ಗುರು ಮೂರಿರೆ : ಮಗಣ :: ಲಘು ಮೂರಿರೆ :.............
3. ಭಾರ್ಗವ : ಪರಶುರಾಮ :: ಕುಂಭಸಂಭವ :.................

**ಇ). ಕೊಟ್ಟಿರುವ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಬರೆಯಿರಿ.** **1X3=3**

1. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?
2. ಸಿರಿ ಯಾವುದರೊಡನೆ ಹುಟ್ಟಿತು?
3. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು?

**ಈ). ಕೊಟ್ಟಿರುವ ಪ್ರಶ್ನೆಗಳಿಗೆ 3–4. ವಾಕ್ಯಗಳಲ್ಲಿ ಉತ್ತರಿಸಿ.** **4X2=8**

1. ಆದಿಕವಿ ಪಂಪನ ಪರಿಚಯ ಮಾಡಿಕೊಡಿ.
2. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?
3. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
4. ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ. ಅಂತೆಂಬನಾರ್ಗೆ.................................
   .............................................ನುಡಿದಂ

**ಉ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **1X3=3**

1. "ವಿದ್ಯಾಧನಮೆ ಧನಮಪ್ಪುದು"

# ಘಟಕ ಪರೀಕ್ಷೆ – 2

**ಅಂಕಗಳು – 20**

**ಅ) ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1X4=4**

1. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?
2. ನೊಣಕ್ಕೆ ಯಾವುದು ಶ್ರೇಷ್ಠ?
3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?
4. ಪರಶುರಾಮರು ಭೂಮಿಯನ್ನು ಯಾರಿಗೆ ಕೊಟ್ಟಿದ್ದರು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.** **2X3=6**

1. ದ್ರುಪದನು ದ್ರೋಣನಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?
2. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
3. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?

**ಇ) ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **3X2=6**

1. “ಜಲಕ್ಕ ನೀಗಳಲೆದೆಂ ಸಿರಿ ಕಳ್ಳೊಡವುಟ್ಟಿತೆಂಬುದು”
2. “ಎಂತು ನಾಣಿಲಿಗರಪ್ಪರೆ ಮಾನಪರ್”

**ಈ) ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

1. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ

**ಅಥವಾ**

2. ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

*********

# ಪಠ್ಯ ಪೋಷಕ ಅಧ್ಯಯನ – 4
# ಮೃಗ ಮತ್ತು ಸುಂದರಿ

**ಪಿ. ಲಂಕೇಶ್**

ಕವಿ ಪರಿಚಯ: ಪಿ.ಲಂಕೇಶ್ ಅವರು 08–03–1935ರಲ್ಲಿ ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿ ಗ್ರಾಮದಲ್ಲಿ ಜನಿಸಿದರು. ಸಂಕ್ರಾಂತಿ ಈಡಿಪಸ್ ಮತ್ತು ಅಂತಿಗೊನೆ ಮೊದಲಾದ ನಾಟಕಗಳನ್ನು, ಕಲ್ಲು ಕರಗುವ ಸಮಯ, ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ಉಲ್ಲಂಘನೆ ಮಂಜು ಕವಿದ ಸಂಜೆ, ಮೊದಲಾದ ಕಥಾ ಸಂಗ್ರಹಗಳನ್ನು, ಮುಸ್ಸಂಜೆಯ ಕಥಾ ಪ್ರಸಂಗ ಅಕ್ಕ. ಕಾದಂಬರಿಗಳನ್ನು ಹುಳಿಮಾವಿನ ಮರ ಎಂಬ ಆತ್ಮ ಕಥನವನ್ನು ಬರೆದಿದ್ದಾರೆ. ಪ್ರಸ್ತುತ ಕಥೆಯನ್ನು ಲಂಕೇಶರ 'ಕಲ್ಲು ಕರಗುವ ಸಮಯ' ಎಂಬ ಕಥಾ ಸಂಕಲನದಿಂದ ಆರಿಸಿ ಕೊಳ್ಳಲಾಗಿದೆ.

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ ?**

ಉ:– ಸುಂದರಿ ಮತ್ತು ಅವಳ ತಂದೆ ಸರಳ ಜೀವನ ನಡೆಸುತ್ತಿದ್ದರಿಂದ ಬಡತನ ಅವರಿಗೆ ಕಷ್ಟವಾಗಲಿಲ್ಲ.

**2. ಮೃಗದ ಬಾಹ್ಯ ಆಕಾರ ಹೇಗಿತ್ತು?**

ಉ:– ಮೃಗ ನೋಡಲು ಭೀಕರವಾಗಿತ್ತು. ಕೋರೆಹಲ್ಲು, ಹಂದಿಯ ದೇಹ ತೋಳದ ಚಲನೆಯನ್ನು ಪಡೆದಿದ್ದ ಮೃಗದ ಧ್ವನಿ ಗೊಗ್ಗರು ಮತ್ತು ಕರ್ಕಶವಾಗಿತ್ತು.

**3. ಯಾರು ಶಾಪಗೊಂಡ ಮೃಗವಾಗಿದ್ದರು?**

ಉ:– ಸುಂದರ ರಾಜಕುಮಾರ ಶಾಪಗೊಂಡ ಮೃಗವಾಗಿದ್ದನು.

**4. ದೇವತೆ ಕೊಟ್ಟ ಶಾಪವೇನು?**

ಉ:– ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ರಾಜಕುಮಾರನು ಮೃಗವಾಗಿಯೇ ಇರುವಂತೆ ದೇವತೆ ಶಾಪ ಕೊಟ್ಟಿದ್ದಳು.

**5. ಶಾಪ ವಿಮೋಚನೆಯ ಫಲವೇನು?**

ಉ:– ಸುಂದರಿಯು ಮೃಗದ ರೂಪದಲ್ಲಿ ರಾಜಕುಮಾರನನ್ನು ಮನಸಾರೆ ಒಪ್ಪಿದ್ದರಿಂದ ರಾಜಕುಮಾರನ ಮೃಗತ್ವ ಕರಗಿತು. ರಾಜಕುಮಾರನು ತನ್ನ ಮಂತ್ರ ದಂಡದಿಂದ ಪ್ರಜೆಗಳನ್ನೆಲ್ಲ ಕರೆದನು. ಅರಮನೆ ಮೋಹಕವಾಗಿ ಝಗ ಝಗಿಸ ತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

**6. ಮೃಗದ ಬಗೆಗೆ ಸುಂದರಿ0ು ಮನ ಕರಗುತ್ತಿತ್ತು ಏಕೆ ?**

ಸುಂದರಿಗೆ ಮೃಗದ ಬಗ್ಗೆ ಕುತೂಹಲವಾಗುತ್ತಿತ್ತು. ಒಮ್ಮೊಮ್ಮೆ ನೋಡಲು ಇಷ್ಟವಾಗುತ್ತಿತ್ತು. ಅವನ ಒರಟು ಮಾತು ತಿಕ್ಕಲು ನಡವಳಿಕೆ ಮನಸಿನಲ್ಲೆ ನಗು ತರುತ್ತಿದ್ದವು. ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

# ಪಠ್ಯ ಪೋಷಕ ಅಧ್ಯಯನ – 5
## ಜನಪದ ಒಗಟುಗಳು

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**1. ಅಂಗಿ ಎಂಬ ಅರ್ಥ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ?**

ಉ:– ಕೈಯುಂಟು ಕಾಲಿಲ್ಲ, ಶಿರ ಹರಿದ ಮುಂಡ ಮೈಯೊಳಗೆ ನವಗಾಯ ಒಂಬತ್ತು ತುಂಡು ಒಯ್ಯ ನೊಯ್ಯನೇ ಬಂದು ಹೆಗಲೇರಿ ಕೊಂಡು ರಾಯರಾಯರಿಗೆಲ್ಲ ತಾನೇ ಪ್ರಚಂಡ.

**2. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?**

ಉ:– ಉಪ್ಪು ನೀರಿನಲ್ಲಿಯೇ ಹುಟ್ಟುವುದು ನೀರಲ್ಲಿಯೇ ಬೆಳೆಯುವುದು ಆದರೆ ನೀರು ಸೋಕಿದರೆ ಮತ್ತೆ ಕರಗಿ ಹೋಗುವುದು.

**3. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?**

ಉ:– ಕೇಸರಿನಲ್ಲಿಯೇ ಕಮಲವು ಹುಟ್ಟುವುದು. ಕೆಸರಿನಲ್ಲಿಯೇ ಅದು ಬೆಳೆ0ಯುವುದು (ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು ಅದು ಒಂದು ಗಿಡದ ಪರಿಕರ.)

**4. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

ಉ:– ಉತ್ತರಾಣಿ ಗಿಡವು ದಾರಿಯ ಬದಿಯಲ್ಲಿ ಹುಟ್ಟುವುದು, ದಾರಿಯ ಬದಿಯಲ್ಲಿ ಬೆಳೆಯುವುದು. ದಾರಿಯಲ್ಲಿ ಓಡಾಡುವವರ ಮುಂಜೆರಗನ್ನು ಹಿಡಿದು ತೊಂದರೆ ಕೊಡುವುದು. ಅದೇ ರೀತಿ ಗರಿಕೆಯ ಹುಲ್ಲು ಹೊಲದಲ್ಲಿ ಹುಟ್ಟಿ, ಹೊಲದಲ್ಲಿ ಬೆಳೆದು ಬೆಳೆಯ ಬೆಳೆಯಲು ತೊಂದರೆ ಕೊಡುವುದು.

**5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

ಉ:– ಒಗಟುಗಳಿಂದ ಚಿಂತನಾ ಶಕ್ತಿ ಹೆಚ್ಚುತ್ತದೆ. ಆಲೋಚನಾಶಕ್ತಿ, ತಾರ್ಕಿಕ ಶಕ್ತಿ ಹೆಚ್ಚುತ್ತದೆ, ಮನರಂಜನೆ ಸಿಗುತ್ತದೆ, ವರ್ಣನೆಗಳನ್ನು ಅರ್ಥೈಸುವ ಸಾಮರ್ಥ್ಯ ವೃದ್ಧಿಸುತ್ತದೆ.

# ಮಾದರಿ ಪ್ರಶ್ನೆ ಪತ್ರಿಕೆ – 1 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 4 ) (FA-4)

## ವಿಭಾಗ – ಎ

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. ದ್ರೋಣನು 0ಯಾರೊಡನೆ ಪರಶುರಾಮರಲ್ಲಿಗೆ ಬಂದನು?
2. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?
3. ದುಷ್ಟಬುದ್ಧಿ0ಯು ಧರ್ಮಬುದ್ಧಿ0ಯ ಮೇಲೆ 0ಯಾವ ಆರೋಪವನ್ನು ಹೊರಿಸಿದನು?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ:**

4. 0ಯಜ್ಞಾಶ್ವದ ಹಣೆ0ಯಲ್ಲಿದ್ದ ಪಟ್ಟ0ಯಲ್ಲಿ ಏನೆಂದು ಬರೆ0ಯಲಾಗಿದೆ?
5. ದೇವತೆ ಕೊಟ್ಟ ಶಾಪವೇನು?ಶಾಪ ವಿಮೋಚನೆ0ಯ ಫಲವೇನು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ:**

6. "ಪೊನ್ನನೆಲ್ಲಮಂ ನೀನೆ ಕೊಂಡೆ"

**ಈ) ಕೊಟ್ಟಿರುವ ಪ್ರಶ್ನೆಗೆ ಎಂಟು– ಹತ್ತು ವಾಕ್ಯದಲ್ಲಿ ಉತ್ತರಿಸಿ:**

7. ಸುಕುಮಾರ' ಎಂಬ ಹೆಸರು ಸುಕುಮಾರಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ?ವಿವರಿಸಿ

ಅಥವಾ

8. ಸುಕುಮಾರಸ್ವಾಮಿ0ಯ ಕಥೆ0ಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ವಿಭಾಗ –ಬಿ ( ವ್ಯಾಕರಣ)

**ಊ) ಕೆಳಗಿನ ಹೇಳಿಕೆಗಳಿಗೆ ಸರಿ0ಯಾದ ಉತಾರವನ್ನು ಆರಿಸಿ ಬರೆಯಿರಿ:**

9. ವರ್ತಮಾನ ಕೃದಂತನಾಮಕ್ಕೆ ಈ ಪದವು ಉದಾಹರಣೆ0ಯಾಗಿದೆ
   ಎ) ಬರೆ0ಯುವ  ಬಿ) ಬರೆದ  ಸಿ) ಬರೆ0ಯದ  ಡಿ)ಬರಹ
10. ಮದೋನ್ಮತ್ತ' ಪದವನ್ನು ಸಂಧಿ ಹೆಸರಿಸಿದಾಗ ಇದಾಗುತ್ತದೆ.
   ಎ) ಸವರ್ಣದೀರ್ಘಸಂಧಿ ಬಿ) ಲೋಪ ಸಂಧಿ  ಸಿ) ಆಗಮ ಸಂಧಿ  ಡಿ) ಗುಣ ಸಂಧಿ

**ಊ) ಕೊಟ್ಟಿರುವ ವಿಷ0ಯಗಳಲ್ಲಿ 0ಯಾವುದಾದರೂ ಒಂದನ್ನು ಕುರಿತು ಪ್ರಬಂಧ ರಚಿಸಿರಿ.**

11. ಖಳಾನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

ಅಥವಾ

ಅಂತೆಂಬನಾರ್ಗೆ ಪಿರಿದುಂ
ಭ್ರಾಂತುದಲೇಂ ದ್ರೋಣನೆಂಬನೇಂ ಪಾರ್ವನೆ ಪೇ

## ವಿಭಾಗ–ಸಿ

**ಋ) ಕೊಟ್ಟಿರುವ ಗಾದೆಗಳಲ್ಲಿ 0ಯಾವುದಾದರು ಒಂದನ್ನು ಕುರಿತು ಬರೆಯಿರಿ.**

12. **ಅ)** ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.
   ಆ) ಆಳಾಗಬಲ್ಲವನು; ಅರಸನಾಗಬಲ್ಲನು.

********

10ನೇ ತರಗತಿ ಪ್ರಥಮ ಭಾಷೆ ಸಿರಿಕನ್ನಡ ಗರಿಷ್ಠ ಅಂಕಗಳು–20

## ಮಾದರಿ ಪ್ರಶ್ನೆ ಪತ್ರಿಕೆ – 2 (ರೂಪಣಾತ್ಮಕ ಮೌಲ್ಯಮಾಪನ ಪರೀಕ್ಷೆ – 4 ) (FA-4)

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** 1x2=2

1. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?
2. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು ?

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** 2x4=8

3. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು ?
4. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದುಕೊಳ್ಳಲು ಕಾರಣವೇನು?
5. ವರ್ತಕ ಗುಲಾಬಿ ಹೂವನ್ನು ಕಿತ್ತುಕೊಂಡಾಗ ಮೃಗ ಏನು ಹೇಳಿತು ?
6. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?

**ಉ) ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದಾದರೂ ಒಂದಕ್ಕೆ ಸಂದರ್ಭದೊಡನೆ ಸ್ವಾರಸ್ಯ ವಿವರಿಸಿ.** 1x3=3

7. ಅ) **"ಪೊನ್ನನೆಲ್ಲಮಂ ನೀನೆ ಕೊಂಡೆ"**
   ಆ) "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"

**ಊ) ಈ ಕೆಳಗಿನ ಕವಿಯ ಸ್ಥಳ, ಕಾಲ, ಕೃತಿಗಳು, ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** 1x3=3

8. ಲಕ್ಷ್ಮೀಶ

**ಋ) ಕೊಟ್ಟಿರುವ ಪ್ರಶ್ನೆಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರ ಆರಿಸಿ, ಕ್ರಮಾಕ್ಷರ ದೊಡನೆ ಬರೆಯಿರಿ.**

1x1=1

**9.** ಪಾರಿಭಾಷಿಕ ಪದಗಳನ್ನು, ಅನ್ಯಭಾಷೆಯ ಪದಗಳನ್ನು ಬಳಸುವಾಗ ಉಪಯೋಗಿಸುವ ಲೇಖನ ಚಿಹ್ನೆ
ಅ) ಅಲ್ಪವಿರಾಮ ಚಿಹ್ನೆ ಆ) ಉದ್ಧರಣ ಚಿಹ್ನೆ ಇ) ಆವರಣ ಚಿಹ್ನೆ ಈ) ವಾಕ್ಯವೇಷ್ಟನ ಚಿಹ್ನೆ

**10 ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ ಸಮನ್ವಯಗೊಳಿಸಿ ಬರೆಯಿರಿ.** 1x3=3

ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ

**ಅಥವಾ**

ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆ ಯೊಂದು ಲೆಕ್ಕವೇ?

******